ಕರ್ನಾಟಕ ವಿಧಾನ ಪರಿಷತ್ತು
KARNATAKA LEGISLATIVE COUNCIL

ಶನಿವಾರ 2ನೇ ಮಾರ್ಚ್ 1996 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (**ಶ್ರೀ ರಮೇಶ್ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾಪ
(ಮುಂದುವರೆದ ಚರ್ಚೆ)

ಅಧ್ಯಕ್ಷರು : "1996ನೇ ಫೆಬ್ರವರಿ, 19ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ಶ್ರೀ ಕೆ.ಎನ್. ನಾಗೇಗೌಡ ಅವರು ದಿನಾಂಕ 22.02.1996ರಂದು ಸೂಚಿಸಿದ ಪ್ರಸ್ತಾವದ ಮೇಲಿನ ಚರ್ಚೆಯನ್ನು ಈಗ ಮುಂದುವರೆಸೋಣ. ಈಗ ಮಾನ್ಯ ಸದಸ್ಯರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಸದರಿ ಪ್ರಸ್ತಾಪದ ಮೇಲೆ ಮಾತನಾಡುತ್ತಾರೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊಟ್ಟಮೊದಲಿಗೆ ನಾನು ತಮ್ಮನ್ನು ವಂದಿಸುತ್ತೇನೆ. ಕರ್ನಾಟಕ ವಿಧಾನ ಸಭೆಯಲ್ಲಿ ಮಾನ್ಯ ರಾಜ್ಯಪಾಲರು ಮಾಡಿದಂತಹ ಕಳೆದ ಮೂರು ಭಾಷಣಗಳನ್ನೂ ನಾನು ಓದಿದ್ದೇನೆ ಮತ್ತು ಕೇಳಿದ್ದೇನೆ. 28ನೇ ಡಿಸೆಂಬರ್ 1994ರಂದು ಮಾಡಿದ ಭಾಷಣ, ಎರಡನೆಯದಾಗಿ 20ನೇ ಮಾರ್ಚ 1995ರಂದು ಮಾಡಿದ ಭಾಷಣ ಮತ್ತು ಕಳೆದ ತಿಂಗಳು 19ನೇ ಫೆಬ್ರವರಿ 1996ರಂದು ಮಾಡಿದಂತಹ ಭಾಷಣ, ಈ ಮೂರು ಭಾಷಣಗಳು ಈಗ ನನ್ನ ಮುಂದೆ ಇವೆ. ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಮಾಡತಕ್ಕ ಭಾಷಣದಲ್ಲಿ ಸರ್ಕಾರದ ಮುಂದಿನ ನೀತಿ ನಿರೂಪಣೆಗಳು, ಧೋರಣೆಗಳು, ಹಾಗೂ ಸರ್ಕಾರದ ಮುಂದಿನ ಕಾರ್ಯಕ್ರಮಗಳು ಹೇಗಿರುತ್ತವೆ ಎಂಬುದನ್ನು ಸೂಚಿಸಲಾಗಿರುತ್ತದೆ. ಬಹುಶಃ ಈ ಸರ್ಕಾರಕ್ಕೆ ರಾಜ್ಯಪಾಲರ ಕಳೆದ ಮೂರು ಭಾಷಣಗಳನ್ನು ನೋಡತಕ್ಕ ವ್ಯವಧಿ ಇಲ್ಲವೆಂದು ನನಗನಿಸುತ್ತದೆ. ಡಿಸೆಂಬರ್ 28 ರಂದು ಮಾಡಿದ ರಾಜ್ಯಪಾಲರ ಭಾಷಣದಲ್ಲಿ ನಾವೇನು ಹೇಳಿದ್ದೆವು, ಮಾರ್ಚ 20 ರಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಾವು ಏನು ಹೇಳಿದ್ದೆವು, ಈಗಿನ ರಾಜ್ಯಪಾಲರ ಭಾಷಣದಲ್ಲಿ ನಾವೇನು

ಹೇಳುತ್ತಿದ್ದೇವೆ ಎಂಬುದನ್ನು ಸರ್ಕಾರ ಯೋಚಿಸಿಲ್ಲ. ಕಳೆದ 14 ತಿಂಗಳುಗಳಿಂದಲೂ ರಾಜ್ಯದಲ್ಲಿ ಒಂದೇ ಸರ್ಕಾರ ಇದೆ, 2-3 ಕಳೆದ 14 ತಿಂಗಳುಗಳ ಅವಧಿಯಲ್ಲಿ ಆಗಲಿಲ್ಲ, ಸರ್ಕಾರದ ನಿರಂತರವಾಗಿ ಅಧಿಕಾರ ನಡೆಸುತ್ತಿದೆ. ಕಳೆದ 14 ತಿಂಗಳುಗಳ ಅವಧಿಯಲ್ಲಿ ರಾಜ್ಯಪಾಲರು ಮೂರು ಭಾಷಣಗಳನ್ನು ಮಾಡಿದ್ದಾರೆ. ಯಾವ ರಾಜ್ಯಪಾಲರ ಭಾಷಣದಲ್ಲಿ ನಾವು ಏನು ಹೇಳಿದ್ದೇವೆ, ಅದನ್ನು ಏನು ಮಾಡಿದ್ದೇವೆ, ಮುಂದಿನ ರಾಜ್ಯಪಾಲರ ಭಾಷಣದಲ್ಲಿ ಹಿಂದಿನ ರಾಜ್ಯಪಾಲರ ಭಾಷಣಗಳಲ್ಲಿ ಕೊಟ್ಟಂಥ ಭರವಸೆಗಳ ಬಗ್ಗೆ ಪ್ರಸ್ತಾಪವೇ ಇಲ್ಲ. ಈಗ ಮಾಡಿರತಕ್ಕ ರಾಜ್ಯಪಾಲರ ಭಾಷಣದಲ್ಲೂ ಹಿಂದಿನ ಭಾಷಣಗಳಲ್ಲಿ ನಾವೇನು ಮಾಡುತ್ತೇವೆ ಎಂದು ಹೇಳಿದ್ದೇವೆ, ಈಗೇನು ಮಾಡಿದ್ದೇವೆ ಮುಂದೆ ನಾವು ಏನು ಮಾಡಬೇಕು ಎನ್ನುವುದರ ಬಗ್ಗೆ ಕನಿಷ್ಠವಾದಂತಹ ಒಂದು ಪರ್ಯಾಲೋಚನೆ ಮಾಡತಕ್ಕ ಪ್ರಜ್ಞೆಯಾದರೂ ಈ ಸರ್ಕಾರಕ್ಕೆ ಇರಬೇಕಾಗಿತ್ತು. ಆದರೆ ಅದೂ ಕೂಡ ಇಲ್ಲಿ ಕಾಣುತ್ತಿಲ್ಲ. ರಾಜ್ಯಪಾಲರ ಭಾಷಣಗಳಿಗೆ ಒಂದಕ್ಕೊಂದು ತಾಳೆ ಇಲ್ಲ. ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ನಾವೇನು ಹೇಳಿದ್ದೇವೆ, ಈಗಿನ ರಾಜ್ಯಪಾಲರ ಭಾಷಣದಲ್ಲಿ ನಾವೇನು ಹೇಳುತ್ತಿದ್ದೇವೆ, ಮುಂದೆ ನಾವೇನು ಮಾಡುತ್ತೇವೆ ಎನ್ನತಕ್ಕಂಥದ್ದರ ಬಗ್ಗೆಯೂ ಕೂಡ ಇದರಲ್ಲಿ ಯಾವುದೇ ರೀತಿಯಾದಂತಹ ಪ್ರಸ್ತಾಪ ಇಲ್ಲ. ರಾಜ್ಯಪಾಲರ ಭಾಷಣಗಳಿಗೆ ಒಂದಕ್ಕೊಂದು ಸಂಬಂಧ ಇಲ್ಲ. ಈಗಿನ ರಾಜ್ಯಪಾಲರ ಭಾಷಣದಲ್ಲಿ ಹಲವಾರು ಅಂಶಗಳನ್ನು ಪ್ರಸ್ತಾಪ ಮಾಡಿದ್ದರೂ ಹಿಂದೆ ಹೇಳಿದ ಅಂಶಗಳನ್ನು ಪ್ರಸ್ತಾಪ ಮಾಡಿಲ್ಲ. ಇದಕ್ಕೆ ಕೆಲವು ಉದಾಹರಣೆಗಳನ್ನು ನಾನು ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸಲಿಕ್ಕೆ ಇಷ್ಟ ಪಡುತ್ತೇನೆ. ಕೃಷಿ ರಂಗಕ್ಕೆ ಸಂಬಂಧಪಟ್ಟಂತೆ 1993-94ನೇ ಸಾಲಿನ ಹಿಂದಿನ ರಾಜ್ಯಪಾಲರ ಭಾಷಣದ 3ನೇ ಪುಟದ 2ನೇ ಪ್ಯಾರಾದಲ್ಲಿ ಪ್ರಸ್ತಾಪಿಸುತ್ತಾ " ನಮ್ಮ ರಾಜ್ಯದಲ್ಲಿ ಆಹಾರ ಉತ್ಪಾದನೆ ಪರಿಸ್ಥಿತಿ ಯಾವ ರೀತಿ ಇರಬೇಕಾಗಿತ್ತು, ಈಗ ಏನು ಪರಿಸ್ಥಿತಿ ಇದೆ ಎಂಬ ಬಗ್ಗೆ ಹೇಳಿದ್ದಾರೆ. ಆದರೆ ಈಗ ಮಂಡಿಸಿರತಕ್ಕಂಥ ರಾಜ್ಯಪಾಲರ ಭಾಷಣದಲ್ಲಿ ಅದಕ್ಕೆ ಯಾವ ರೀತಿಯಾದಂತಹ ಪ್ರಸ್ತಾಪವೂ ಕೂಡ ಇಲ್ಲ. ಯಾವ ರೀತಿ ಕೃಷಿ ಉತ್ಪನ್ನ ಆಗಿದೆ ಎಂಬ ಬಗ್ಗೆ ಏನೂ ಹೇಳಿಲ್ಲ. ಹಿಂದಿನ ರಾಜ್ಯಪಾಲರ ಭಾಷಣದಲ್ಲಿ 1995-96ನೇ ಇಸವಿಗೆ ಸಂಬಂಧಪಟ್ಟಂತೆ, ಆಹಾರ ಉತ್ಪಾದನೆಯನ್ನು 86 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿಸಬೇಕೆಂದು ಆಶಿಸಲಾಗಿದೆ ಎಂದು ಸರ್ಕಾರ ಹೇಳಿತ್ತು. ಆದರೆ ಇವತ್ತಿನ ಭಾಷಣದಲ್ಲಿ 3ನೇ ಪುಟದಲ್ಲೇ ಕೃಷಿ ವಲಯದ ಬಗ್ಗೆ ಮಾತ್ರ ಹೇಳಲಾಗಿದೆ, ಆಹಾರ ಉತ್ಪಾದನೆಯ ಬಗ್ಗೆ ಇದರಲ್ಲಿ ಪ್ರಸ್ತಾಪವೇ ಇಲ್ಲ. ಅಂದರೆ ಆಹಾರ ಉತ್ಪಾದನೆಯನ್ನು ಸರ್ಕಾರದವರು ಕೈಬಿಟ್ಟಿದ್ದಾರೆಯೇ ಅಥವಾ ಕರ್ನಾಟಕ ರಾಜ್ಯಕ್ಕೆ ಎಷ್ಟು ಆಹಾರ ಉತ್ಪಾದನೆ ಆಗಬೇಕು ಎಂಬುದರ ಬಗ್ಗೆ ಸರ್ಕಾರದವರು ಏನು ಯೋಚನೆ ಮಾಡಿಲ್ಲವೇ ಎನ್ನತಕ್ಕ ಪ್ರಶ್ನೆಯನ್ನು ನಾನು ಇವತ್ತು ಕೇಳುತ್ತಿದ್ದೇನೆ. ಇದೇ ರೀತಿಯ ಇನ್ನೊಂದು ಉದಾಹರಣೆಯನ್ನು ಕೊಡುವುದಾದರೆ, ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ಗ್ರಾಮ ಪಂಚಾಯಿತಿಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ, ಗ್ರಾಮ ಪಂಚಾಯಿತಿಗಳಿಗೆ ನಾವು ಸಂಪೂರ್ಣವಾದಂತಹ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳಲಾಗಿತ್ತು. ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ನೀಡುವಲ್ಲಿಯೇ ಅಧಿಕಾರ

ವಿಕೇಂದ್ರಿಕರಣದ ಮೂಲತತ್ವ ಅಡಕವಾಗಿದೆ. ಆದರೆ ಈಗಿನ ರಾಜ್ಯಪಾಲರ ಭಾಷಣದಲ್ಲಿ ಗ್ರಾಮ ಪಂಚಾಯಿತಿಗಳನ್ನು ಮರೆತು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರುಗಳಿಗೆ ಮಾತ್ರ ಅಧಿಕಾರ ಕೊಡಬೇಕು ಎಂಬುದನ್ನಷ್ಟೇ ತಾವು ಈ ಭಾಷಣದಲ್ಲಿ ಹೇಳಿದ್ದೀರಿ. ಗ್ರಾಮ ಪಂಚಾಯಿತಿಗಳ ಬಗ್ಗೆ ಪ್ರಸ್ತಾಪವೇ ಇಲ್ಲ. ಹಾಗಾಗಿ ಈ ಸರ್ಕಾರಕ್ಕೆ ಒಂದು ನಿರ್ದಿಷ್ಟವಾದಂತಹ ಕಾರ್ಯಕ್ರಮವನ್ನು ರೂಪಿಸಿ, ಅದನ್ನು ನಿರ್ದಿಷ್ಟವಾದಂತಹ ಸಮಯದಲ್ಲಿ ಜಾರಿಗೊಳಿಸಬೇಕು ಎಂಬುದಿಲ್ಲ. ಯಾವ ಅಂಶಗಳನ್ನು ಆದ್ಯತೆಯ ಮೇರೆಗೆ ಜಾರಿಗೊಳಿಸಬೇಕು ಎಂಬ ಕಾರ್ಯಕ್ರಮವೂ ಕೂಡ ಖಂಡಿತ, ಇದ್ದಹಾಗೆ ಇದರಲ್ಲಿ ಕಾಣುತ್ತಿಲ್ಲ. ಇನ್ನು ಕೆಲವು ಮುಖ್ಯವಾದ ಅಂಶಗಳ ಬಗ್ಗೆ ನಾನು ಪ್ರಸ್ತಾಪಿಸ ಬಯಸುತ್ತೇನೆ. ಮೊದಲನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಇರತಕ್ಕ ಕಾನೂನು ವ್ಯವಸ್ಥೆಯ ವಿಷಯಕ್ಕೆ ಕುರಿತಂತೆ ಮಾತನಾಡಬಯಸುತ್ತೇನೆ. ಕಾನೂನು ವ್ಯವಸ್ಥೆ ಬಗ್ಗೆ ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದರು ಎಂದರೆ, ನಾವು ಹುಬ್ಬಳ್ಳಿಯಲ್ಲಿರತಕ್ಕ ಈದ್ಗಾ ಮೈದಾನದಲ್ಲಿ ಧ್ವಜಾರೋಹಣದ ಸಮಸ್ಯೆಯನ್ನು ಪರಿಹಾರ ಮಾಡಿದ್ದೇವೆ ಮತ್ತು ಯಾವುದೇ ರೀತಿಯಾದಂತಹ ಕಾನೂನಿನ ಅವ್ಯವಸ್ಥೆಗೆ ಅವಕಾಶ ಕೊಡುವುದಿಲ್ಲ, ಎಲ್ಲವನ್ನೂ ಸೌಹಾರ್ದಯುತವಾಗಿ ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಸರ್ಕಾರ ಹೇಳಿತ್ತು. ನಾನು ಇವತ್ತಿನ ಕರ್ನಾಟಕ ರಾಜ್ಯದ ಕಾನೂನಿನ ಪರಿಸ್ಥಿತಿ ಬಗ್ಗೆ ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಬದಲು ಒಂದು ಪ್ರಶ್ನೆಯನ್ನು ತಮ್ಮ ಮುಂದೆ ತರುತ್ತಿದ್ದೇನೆ. ನಮ್ಮ ಕರ್ನಾಟಕ್ಕೆ ರಾಜ್ಯದ ಉಚ್ಛನ್ಯಾಯಾಲಯದ ನ್ಯಾಯಮೂರ್ತಿಗಳಾದ ಎಂ.ಎಫ್. ಸಲ್ಡಾನ ಅವರು ಕರ್ನಾಟಕ ರಾಜ್ಯದ ಕಾನೂನಿನ ವ್ಯವಸ್ಥೆ ಬಗ್ಗೆ ವ್ಯಕ್ತಪಡಿಸಿರತಕ್ಕಂತಹ ಅಭಿಪ್ರಾಯವನ್ನು ನಾನು ಸಭೆಯ ಮುಂದೆ ಓದಲಿಚ್ಛಿಸುತ್ತೇನೆ. ಈಗ ನಾನು ಹೇಳಲಿರುವ ಅವರ ಅಭಿಪ್ರಾಯಗಳನ್ನು ನ್ಯಾಯಮೂರ್ತಿಗಳು ಯಾವುದೇ ತೀರ್ಪು ಅನ್ನು ನೀಡುವಾಗ ವ್ಯಕ್ತಪಡಿಸಿರುವುದಿಲ್ಲ. ಆದರೆ ಅವರು ಒಂದು ಕಡೆ ಭಾಷಣ ಮಾಡುವಾಗ ಹೇಳಿದ್ದಾರೆ. ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕ ಒಬ್ಬ ನ್ಯಾಯಾಧೀಶರು ಭಾಷಣ ಮಾಡತಕ್ಕ ಸಂದರ್ಭದಲ್ಲಿ ಈ ರೀತಿ ಹೇಳಿದ್ದಾರೆ.

"ರಾಜ್ಯದ ರಾಜಧಾನಿಯಾದ ಬೆಂಗಳೂರುನಗರದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದ್ದು ನಾಗರೀಕರು ಸದಾ ಭಯದ ನೆರಳನಲ್ಲೇ ಬದುಕುವಂತಾಗಿದೆ ಎಂದು ಹೈಕೋರ್ಟಿನ ನ್ಯಾಯಾಧೀಶರಾದ ಎಂ.ಎಫ್. ಸಲ್ಡಾನ ಅವರು ಇಂದು ಇಲ್ಲಿ ಆತಂಕ ವ್ಯಕ್ತಪಡಿಸಿದರು. ಪತ್ರಿಕೆಗಳಲ್ಲಿ ಕೊಲೆ ಮತ್ತು ಅತ್ಯಾಚಾರದ ಸುದ್ದಿಗಳು ಪ್ರಕಟವಾಗದಿರುವ ದಿನಗಳೇ ಇಲ್ಲ. ಇತ್ತೀಚೆಗೆ ಶ್ರೀಗಂಧದ ಮರಗಳನ್ನು ಕದ್ದು ಸಾಗಿಸುವ ದೊಡ್ಡ ತಂಡವೇ ನಗರದಲ್ಲಿ ಕಾರ್ಯೋನ್ಮುಖವಾಗಿದೆ ಎಂದು ಅವರು ತಿಳಿಸಿದರು. ಸಾರ್ವಜನಿಕರಿಗೆ ಬೆದರಿಕೆ ಹುಟ್ಟಿಸಿ ಮನೆಗಳ ಆವರಣದಲ್ಲಿ ಬೆಳೆದು ನಿಂತ ಬೆಲೆ ಬಾಳುವ ಶ್ರೀಗಂಧದ ಮರಗಳನ್ನು ತಾಸುಗಟ್ಟಲೆ ಕತ್ತರಿಸಿ ವ್ಯವಸ್ಥಿತವಾಗಿ ಸಾಗಿಸುವವರೆಗೂ ಪೊಲೀಸರು ಏನು ಮಾಡುತ್ತಿರುವರೋ ತಿಳಿಯದು ಎಂದು ನ್ಯಾಯಮೂರ್ತಿಗಳು ಮಾರ್ಮಿಕವಾಗಿ ಪ್ರಶ್ನಿಸಿದರು. ಬೆಂಗಳೂರು ವಕೀಲರ ಸಂಘದ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಅವರು ಕಳೆದ ಒಂದು ವರ್ಷದ ಅವಧಿಯಲ್ಲಿ ಸರಗಳ್ಳರ ಹಾವಳಿ,

ರಸ್ತೆ ದರೋಡೆ, ಡಕಾಯಿತಿ ಇತ್ಯಾದಿ ಅಪರಾಧಗಳು ಹೆಚ್ಚಾಗಿದ್ದು, ಸಂಚಾರ ವ್ಯವಸ್ಥೆಯಂತೂ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ ಎಂದು ತಿಳಿಸಿದರು. ಮಹಾ ನಗರದಲ್ಲಿ ಮಹಿಳೆಯರು ನಕಲಿ ಆಭರಣಗಳನ್ನು ಧರಿಸಿಯೂ ರಸ್ತೆಗಳಲ್ಲಿ ನಿರ್ಭೀತಿಯಿಂದ ಓಡಾಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ನ್ಯಾಯಮೂರ್ತಿಗಳು ತಮ್ಮ ತೀವ್ರ ಕಳವಳ ವ್ಯಕ್ತಪಡಿಸಿದರು. ಇದನ್ನು ನೋಡಿದರೆ ಶ್ರೀಗಂಧದ ದರೋಡೆಕೋರರ ಜೊತೆ ಆಡಳಿತ ಯಂತ್ರವು ಶಾಮೀಲಾಗಿರಬಹುದೇ ಎಂಬ ಸಂಶಯವು ಸಾರ್ವಜನಿಕರಲ್ಲಿ ಮೂಡಿದರೆ ಆಶ್ಚರ್ಯವಿಲ್ಲ ಎಂದು ಅವರು ಹೇಳಿದರು. ಇನ್ನು ಸಂಚಾರ ವ್ಯವಸ್ಥೆಯ ಬಗ್ಗೆ ಹೆಚ್ಚು ಮಾತನಾಡದಿರುವುದೇ ಒಳ್ಳೆಯದು. ನಗರದಲ್ಲಿ ವಾಸ್ತವವಾಗಿ ಸಂಚಾರ ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಲಾಗಿದ್ದು ರಸ್ತೆಗಳಲ್ಲಿ ಸುರಕ್ಷಿತವಾಗಿ ಸಂಚರಿಸುವುದೇ ಕಷ್ಟವಾಗಿದೆ ಎಂದು ಅವರು ವಿವರಿಸಿದರು. ಸಂಚಾರ ನಿಯಮ ನಿರ್ವಹಣೆಯ ಕರ್ತವ್ಯದಲ್ಲಿ ಪೊಲೀಸರು ಸಂಪೂರ್ಣವಾಗಿ ವಿಫಲರಾಗಿದ್ದು, ಇದರಿಂದಾಗಿ ನೂರಾರು ಜನ ಸಾವು-ನೋವುಗಳಿಗೆ ಗುರಿಯಾಗಬೇಕಾದ ಪರಿಸ್ಥಿತಿಯು ಬಂದೊದಗಿದೆ ಎಂದು ನ್ಯಾಯಮೂರ್ತಿಗಳು ನುಡಿದರು.

ಅಪರಾಧಿಗಳನ್ನು ಪತ್ತೆ ಹಚ್ಚುವುದು ಪೋಲಿಸರ ಕರ್ತವ್ಯಗಳಲ್ಲಿ ಒಂದಾಗಿದ್ದರೂ ಅಪರಾಧಗಳನ್ನು ತಡೆಗಟ್ಟುವುದು ಮತ್ತು ಕಾನೂನು ಪಾಲನೆ ಅದಕ್ಕಿಂತಲೂ ಮುಖ್ಯವಾದ ಕರ್ತವ್ಯವಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು. ನ್ಯಾಯಾಲಯಗಳ ಆದೇಶಗಳನ್ನು ತಕ್ಷಣ ಜಾರಿಗೊಳಿಸುವಲ್ಲಿ ಪೋಲಿಸರು ತೋರುತ್ತಾ ಇರುವ ತಾತ್ಸಾರ ಮತ್ತು ಅವಿಧೇಯ ಮನೋಭಾವನೆಯ ಬಗ್ಗೆಯೂ ನ್ಯಾಯಮೂರ್ತಿಗಳು ತಮ್ಮ ತೀವ್ರ ಅಸಮಧಾನ ವ್ಯಕ್ತಪಡಿಸಿದರು. ಏನಾದರೂ ಒಂದು ಕುಂಟು ನೆಪ ಒಡ್ಡಿ ನ್ಯಾಯಾಲಯಗಳ ಆದೇಶಗಳ ಜಾರಿಯನ್ನು ತಡೆಹಿಡಿಯುವಂಥದ್ದು, ಪೋಲಿಸರು ನ್ಯಾಯಾಲಯದ ಆದೇಶಗಳನ್ನು ತಮಗೆ ಬೇಕಾದಂತೆ ತಿರುಚಿ ವ್ಯಾಖ್ಯಾನಿಸುವುದನ್ನು ನಾವು ನೋಡುತ್ತಿದ್ದೇವೆ. ಅಂದು ಅವರು ತಿಳಿಸಿದರು. ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದ ವ್ಯಕ್ತಿಗಳನ್ನು ಬಂಧಿಸುವುದು, ನ್ಯಾಯಾಲಯದ ಮಧ್ಯಂತರ ಆದೇಶ ಜಾರಿ ಸಂದರ್ಭದಲ್ಲಿ ಪೋಲಿಸರು ವಕೀಲರೊಂದಿಗೆ ವಾಗ್ವಾದಕ್ಕಿಳಿಯುವ ಪ್ರಸಂಗ ವರದಿಯಾಗಿದೆ ಎಂದು ಅವರು ಹೇಳಿದರು. ಕಾನೂನು ಆಡಳಿತವನ್ನು ಬುಡಮೇಲೆ ಮಾಡುವ ಇಂತಹ ಪೋಲಿಸರ ವರ್ತನೆಗಿಂತ ಗುರುತರವಾದ ಅಪರಾಧ ಮತ್ತೊಂದು ಇರಲಾರದು ಎಂದು ಅಂದ ಅವರು ನ್ಯಾಯಾಲಯದ ಆದೇಶಗಳ ಬಗ್ಗೆ ಅವಿಧೇಯತೆ ತೋರಿದ ಪೋಲಿಸ್ ಅಧಿಕಾರಿಗಳ ಬಗ್ಗೆ ಸಂಬಂಧಪಟ್ಟ ಸಂಬಂಧಪಟ್ಟ ನ್ಯಾಯಾಧೀಶರು ಕ್ರಮ ಜರುಗಿಸಬೇಕೆಂದು ತಿಳಿಸಿದರು. ನ್ಯಾಯಾಲಯಗಳ ಆದೇಶ ಉಲ್ಲಂಘನೆ ಪ್ರವೃತ್ತಿ ಇತರ ಎಲ್ಲಾ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಹೆಚ್ಚಾಗಿತ್ತು, ನ್ಯಾಯಾಲಯ ನಿಂದನೆ ಮೊಕ್ಕದ್ದಮೆಗಳ ಸಂಖ್ಯೆಯಲ್ಲಿ ರಾಜ್ಯ ಹೈಕೋರ್ಟ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಪಡೆದಿದೆ ಎಂದು ಹೇಳಿದರು. ಸನ್ಮಾನ್ಯ ಅಧ್ಯಕ್ಷರೆ, ಇದು ಇಡೀ ಕರ್ನಾಟಕ ರಾಜ್ಯದ ಕಾನೂನು ವ್ಯವಸ್ಥೆ ಬಗ್ಗೆ ಒಬ್ಬ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ನ್ಯಾಯಾಧೀಶರು ಹೇಳಿರತಕ್ಕಂಥದ್ದು. ಇದು ವಸ್ತು ಸ್ಥಿತಿಗೆ ಖಂಡಿತವಾಗಿ ಭಿನ್ನವಾಗಿಲ್ಲ. ಮೊನ್ನೆ ತಾನೆ ನಾನು ನಿಮಗೆ ಒಂದು ವಿಷಯದ ಪ್ರಸ್ತಾಪ

ಮಾಡಬೇಕೆಂದು ಅನುಮತಿ ಕೋರಿದೆ, ಆದರೆ ಸಾಧ್ಯವಾಗಲಿಲ್ಲ. ಮೊನ್ನೆ ಗಂಗಾವತಿಯಲ್ಲಿ ಕಳೆದ ನಾಲ್ಕು ದಿವಸಗಳ ಹಿಂದೆ ಕೃಷಿ ಕಾರ್ಮಿಕರು ತಮ್ಮ ಸಮಸ್ಯೆ-ಗಳಿಗೋಸ್ಕರ ತಮ್ಮ ಬೇಡಿಕೆಗಳಿಗೋಸ್ಕರ ತಹಸೀಲ್ದಾರರ ಕಛೇರಿಯ ಮುಂದೆ ಶಾಂತಿಯುತವಾಗಿ ಧರಣಿ ನಡೆಸುವುದಕ್ಕೆ ಹೋದಾಗ ಅವರು ಹಾಕಿದ್ದ ಟೆಂಟನ್ನು ಕೂಡ ಕಿತ್ತು ಹಾಕಿ, 8 ಜನರನ್ನು ಹೊಡೆದು ಪೋಲಿಸರು ಕೇಸನ್ನು ದಾಖಲು ಮಾಡಿದರು. ಇದು ಪ್ರಜಾಪ್ರಭುತ್ವಕ್ಕೆ ಈ ರಾಜ್ಯದಲ್ಲಿ ಜನತೆ ಹಕ್ಕಿಗೋಸ್ಕರ ಸಾಮಾನ್ಯ ಜನರು ಮಾಡತಕ್ಕಂತಹ ಹೋರಾಟಕ್ಕೆ ಸಿಗತಕ್ಕಂಥ ಬೆಲೆ. ಕಾನೂನು ವ್ಯವಸ್ಥೆಯನ್ನು ಕಾಪಾಡಬೇಕಾಗಿರತಕ್ಕದ್ದು ಗೃಹ ಇಲಾಖೆ ಇಡೀ ರಾಜ್ಯದ ಕಾನೂನು ವ್ಯವಸ್ಥೆ ಇವತ್ತು ಇಷ್ಟು ಹದಗೆಟ್ಟಿದೆ. ಪ್ರತಿ ದಿವಸ ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ. ಅದೇ ರೀತಿಯಲ್ಲಿ ಕೆಲವು ಪೋಲಿಸ್ ಠಾಣೆಗಳಲ್ಲಿ ಸಬ ಇನಸ್ಪೆಕ್ಟರ್ ಇರುವುದಿಲ್ಲ, ಪೋಲಿಸಿನವರು ಇದ್ದರೆ ಸಬ್ ಇನ್‌ಸ್ಪೆಕ್ಟರ್ ಇರುವುದಿಲ್ಲ, ಸಬ್ ಇನಸ್ಪೆಕ್ಟರ್ ಇದ್ದರೆ ಪೋಲೀಸಿನವರು ಇರುವುದಿಲ್ಲ. ಕೆಲವು ಪೋಲಿಸ್ ಠಾಣೆಗಳಿಗೆ ಜನ ದೂರು ಕೊಡುವುದಕ್ಕೆ ಹೋದರೆ ಕುಳಿತುಕೊಳ್ಳುವುದಕ್ಕೆ ಒಂದು ಚೇರ್ ಕೂಡ ಇಲ್ಲ, ಬೆಂಚ್ ಕೂಡ ಇಲ್ಲ. ಪೋಲೀಸಿನವರ ಎದುರಿಗೆ ಯಾರೂ ಕೂಡ ಕುಳಿತುಕೊಂಡು ಅರ್ಜಿ ಸಲ್ಲಿಸಬಾರದು ಎಂದು, ಅದಕೋಸ್ಕರ ಬೆಂಚು ಕುರ್ಚಿ ತೆಗದಿರಬಹುದು ಎಂದು ನನಗನ್ನಿಸುತ್ತದೆ. ಬಹುಶಃ ಅದೇ ಕಾರಣ ಇರಬಹುದು. ಏಕೆಂದರೆ ಪೋಲಿಸ್ ಅಧಿಕಾರಿಗಳಿಗೆ ಸಾಮಾನ್ಯ ಜನರು ಹೋಗಿ ತಮ್ಮ ಮುಂದೆ ಕುಳಿತುಕೊಳ್ಳತಕ್ಕಂಥ ಧೈರ್ಯ ತೋರಿಸಬಾರದು. ಈ ರೀತಿ ಏನಾದರೂ ಆಗಿದೆಯೇ? ನಮ್ಮ ಆ ಪೋಲಿಸ್ ಇಲಾಖೆ ವ್ಯವಸ್ಥೆನೇ ಹಾಗೆ ಇದೆ.

ಇನ್ನು ಗಡಿಭಾಗಗಳಲ್ಲಿ ಇರತಕ್ಕಂಥ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಎರಡು ಕಾರಣಗಳಿಗೋಸ್ಕರ ಒಂದು ಈ ಸಾರಾಯಿ ಅಕ್ರಮ ಮಾರಾಟ ಗಡಿ ಪ್ರದೇಶದಲ್ಲಿ ಹೋಗತಕ್ಕಂಥ ಕಾರಣಕೋಸ್ಕರ, ಇನ್ನೊಂದು ಕೆಲವು ಭಾಗಗಳಲ್ಲಿ ಆಂಧ್ರದ ನಕ್ಸಲೀಯರ ಹಾವಳಿ, ಗಡಿ ಭಾಗಗಳಲ್ಲಿ ಸೂಕ್ಷ್ಮವಾದ ಪರಿಸ್ಥಿತಿ ಇದೆ. ಅಂತಹ ಪರಿಸ್ಥಿತಿಯನ್ನು ಹಲವಾರು ಸಂದರ್ಭದಲ್ಲಿ ಸರ್ಕಾರದಗಮನಕ್ಕೆ ತಂದಿವೆ. ನನ್ನ ಕ್ಷೇತ್ರದಲ್ಲಿ ಒಂದು ಭಾಗದಲ್ಲಿ ಆಂಧ್ರದವರು ಸಾರಾಯಿ ವ್ಯಾಪಾರಕ್ಕೆ ಮತ್ತು ಕುಡಿಯಲಿಕ್ಕೆ ಬಂದು ಒಂದು ದಿವಸ ಮಾನ್ಯ ನಮ್ಮ ಶಾಸಕಿ ಶ್ರೀಮತಿ ಜ್ಯೋತಿರೆಡ್ಡಿಯವರೂ ಕೂಡ ಕಾರ್ಯಕ್ರಮದಲ್ಲಿ ಬಂದಿದ್ದರು. ನಾವು ಹೋಗುವುದಕ್ಕೆ ಮೊದಲು ಊರಿನಲ್ಲಿ ದೊಡ್ಡ ಗಲಾಟೆ, ಏನೆಂದರೆ ಯಾರೋ ಸಾರಾಯಿ ಕುಡಿದು ಎಲ್ಲಾ ಬೆತ್ತಲೆಯಾಗಿ ಊರಿನಲ್ಲಿ ಓಡಾಡುತ್ತಿದ್ದರು ಎಂದು ಹೆಂಗಸರು ಎಲ್ಲಾ ಮನೆ ಸೇರಿಕೊಂಡರು. ಆಚೆ ಬರುವುದಕ್ಕೆ ಕೂಡ ನಾಚಿಕೆಯಾಗುತ್ತಿತ್ತು. ಅಂತಹ ಒಂದು ಪರಿಸ್ಥಿತಿಯನ್ನು ಸುಧಾರಣೆ ಮಾಡತಕ್ಕಂತಹ ಪರಿಸ್ಥಿತಿ, ಇನ್ನು ಹಲವಾರು ಪೋಲಿಸ್ ಠಾಣೆಗಳಲ್ಲಿ ಸಬ್-ಇನ್‌ಸ್ಪೆಕ್ಟರ್‌ಗಳ ಇಲ್ಲ, ಗೃಹ ಇಲಾಖೆಯಲ್ಲಿ ಹೇಳುತ್ತಿದ್ದಾರೆ, ನಾವು 180 ಜನರನ್ನು, 120 ಜನರನ್ನು 200 ಜನರನ್ನು ರಿಕ್ರೂಟ್ ಮಾಡುತ್ತಿದ್ದೇವೆ, ಕಳುಹಿಸುತ್ತೇವೆ ಎಂದು. ನನಗೆ ಒಂದು ಸುದ್ದಿ ಬಂದಿದೆ. ಮೊನ್ನೆ ಟ್ರೈನಿಂಗ್ ಕಳುಹಿಸಿ ಆರು ತಿಂಗಳು ಆದಮೇಲೆ ಕೆಲವು ಸಬ್‌ಇನ್‌ಸ್ಪೆಕ್ಟರಗಳನ್ನು ವಿತಡ್ರಾ ಮಾಡಿಕೊಂಡಿದ್ದಾರೆ. ವಿತಡ್ರಾ 13 ಜನರನ್ನು, ಅಥವಾ 16 ಜನರನ್ನು ಮಾಡಿದ್ದಾರೆ, ಕರೆಕ್ಟಾಗಿ ನಾನು ಮಾಹಿತಿ ತಂದಿಲ್ಲ. ಒಟ್ಟಿಗೆ ವಿತಡ್ರಾ ಮಾಡಿದ್ದಾರೆ. ವಿತಡ್ರಾ ಮಾಡಿದ ಲೀಸ್ಟ್‌ನಲ್ಲಿ ಒಬ್ಬರಿಗೆ ಮಾತ್ರ ಮತ್ತೆ ಪುನರ್

ಆದೇಶವನ್ನು ಕೊಟ್ಟಿದ್ದಾರೆ. ಪ್ರಭಾಕರ ಸಿಂಧೆ ಎನ್ನುವವರನ್ನು ಪುನರ್ ನೇಮಿಸಿದ್ದಾರೆ ಅವರಿಗೆ ಮತ್ತೆ ಪುನರ್ ಆದೇಶ ನೀಡಿ ನೀವು ಕೆಲಸಕ್ಕೆ ಹೋಗಬಹುದು ಎಂದು ಆದೇಶ ಕೊಟ್ಟಿದ್ದಾರೆ. ಉಳಿದವರನ್ನೆಲ್ಲಾ ವಾಪಸ್ ತೆಗೆದು ಅವರೊಬ್ಬರಿಗೆ ಮಾತ್ರ ಕೊಟ್ಟಿದ್ದಾರೆ. ಇದು ಏಕೆ ಎಂದು ಅರ್ಥವಾಗುತ್ತಿಲ್ಲ. ಏನು ನಡೆದಿದೆ, ಏಕೆ ಹೀಗೆ ಆಯಿತು, ಅವರಿಗೆ ಟ್ರೈನಿಂಗ್ ಕೊಡಲಿಕ್ಕೆ ಸರ್ಕಾರ ಇವತ್ತು ಲಕ್ಷಾಂತರ ರೂಪಾಯಿ ಖರ್ಚು ಮಾಡಿದೆ, ಅವರು ಟ್ರೈನಿಂಗ್‌ನಲ್ಲಿ ಅರ್ಧದಲ್ಲಿರುವಾಗ ಅವರನ್ನು ವಾಪಸ್ ತೆಗೆಯುವುದು ಅಂದರೆ ಇದರಲ್ಲಿ ಏನೋ ಒಂದು ನಿಗೂಢವಾದ ಪರಿಸ್ಥಿತಿ ಇರಬಹುದು ಎಂದು ಹೇಳತಕ್ಕಂತಹ ಗುಮಾನಿ ಕೂಡ ಬರುವುದಕ್ಕೆ ಖಂಡಿತವಾಗಿ ಕೂಡ ಸಾಧ್ಯವಾಗುತ್ತದೆ. ಸನ್ಮಾನ್ಯ ಸಭಾಧ್ಯಕ್ಷರೆ, ಕಾನೂನಿನ ಪರಿಸ್ಥಿತಿ ಈ ರೀತಿಯಾಗಿ ಆದಾಗ ಮೊದಲೇ ನಮ್ಮ ಬೆಂಗಳೂರು ನಗರಕ್ಕೆ ಒಂದು ಅಪವಾದ ಇದೆ. ಇಡೀ ದೇಶದಲ್ಲಿರತಕ್ಕಂತಹ ಎಲ್ಲಾ ಭಯೋತ್ಪಾದಕರಿಗೂ ಇದು ಒಂದು ತಂಗುದಾಣವಾಗಿದೆ. ಎಂದು ಎಲ್.ಟಿ.ಟಿ.ಇ.ಯಿಂದ ಪ್ರಾರಂಭವಾಗಿ ಕಾಶ್ಮೀರದ ಉಗ್ರಗಾಮಿಯವರೆಗೂ ಇವತ್ತು ಎಲ್ಲಾ ರೀತಿಯಾದ ಭೂ ಗತ ಚಟುವಟಿಕೆಯ ದೊರೆಗಳಿಗೂ ಕೂಡ ಬೆಂಗಳೂರು ತಂಗುದಾಣವಾಗಿದೆ ಎಂದು ಹೇಳಿ, ಪುರುಲಿಯಾದಿಂದ ಶಸ್ತ್ರಾಸ್ತ್ರಗಳನ್ನು ವಿಮಾನದಿಂದ ಕೆಳಗಡೆ ಹಾಕಿದಂತಹ ಒಬ್ಬ ಮನುಷ್ಯ ಗೌಡ ಆದವನೂ ಕೂಡ ಬೆಂಗಳೂರಿನಿಂದ ಹೋಗಿದ್ದಾನೆಂದು ಮಾಹಿತಿ ಇದೆ. ಇಂತಹ ಪರಿಸ್ಥಿತಿಯಲ್ಲಿ ಇಡೀ ದೇಶದಲ್ಲಿ ನೆಮ್ಮದಿಯ ರಾಜ್ಯ ಎಂದು ಹೆಸರು ಗಳಿಸಿರತಕ್ಕಂತಹ ಕರ್ನಾಟಕ ರಾಜ್ಯದಲ್ಲಿ ಕಾನೂನು ಪರಿಸ್ಥಿತಿ ಈ ರೀತಿ ಆದರೆ ಖಂಡಿತವಾಗಿ ಇದು ಸುಧಾರಣೆ ಆಗದೆ ಹೋಗದೆ ಖಂಡಿತವಾಗಿ ಎಲ್ಲರೂ ಕೂಡ ಆತಂಕ ಪಡತಕ್ಕಂತಹ ಪರಿಸ್ಥಿತಿ ಇದೆ.

ಸನ್ಮಾನ್ಯ ಸಭಾಧ್ಯಕ್ಷರೆ, ಕೃಷಿ ಪರಿಸ್ಥಿತಿ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ನಾನು ಆಗಲೇ ಒಂದು ಉದಾಹರಣೆ ಕೂಡ ಕೊಟ್ಟಿದ್ದೇನೆ, ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ಕೃಷಿ ಉತ್ಪಾದನೆಯಲ್ಲಿ ಎಷ್ಟು ನಾವು ಸಾಧಿಸಬಹುದು, ಎನ್ನುವುದರ ಬಗ್ಗೆ ಮುಖ್ಯವಾಗಿ ಒಂದು ಅಂಶ ಇದೆ. ಆದರೆ ಆ ಅಂಶವನ್ನೇ ಇದರಲ್ಲಿ ಸಂಪೂರ್ಣವಾಗಿ ಕೈಬಿಡಲಾಗಿದೆ. ಅಂದರೆ ಅದರ ಜೊತೆಯಲ್ಲಿ ಕೃಷಿಯಲ್ಲಿ ಹೊಸ ತಂತ್ರ ಜ್ಞಾನವನ್ನು ಅಳವಡಿಸುವುದಕ್ಕೆ ಒತ್ತನ್ನು ಕೊಟ್ಟಿದ್ದಾರೆ. ನಿಜ ಕೃಷಿಯಲ್ಲಿ ಹೊಸ ತಂತ್ರ ಜ್ಞಾನವನ್ನು ಅಳವಡಿಸದೆ ಹೋದರೆ ಕೃಷಿ ಉತ್ಪಾದನೆ ಹೆಚ್ಚು ಆಗುವುದಕ್ಕೆ ಖಂಡಿತ ಸಾಧ್ಯವಿಲ್ಲ. ಆದರೆ ಕೃಷಿ ಉತ್ಪಾದನೆಯಲ್ಲಿ ಕೃಷಿಯಲ್ಲಿ ಉತ್ಪಾದನೆ ಹೆಚ್ಚಾಗಬೇಕು ಎನ್ನತಕ್ಕಂತಹ ಕಾರಣಕೋಸ್ಕರ ಯಾವುದೋ ಒಂದು ದೇಶವನ್ನು ಮಾದರಿಯಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇಸ್ರೇಲನ ತಂತ್ರಜ್ಞಾನವನ್ನು ನಾವು ಇಲ್ಲಿ ಅಳವಡಿಸಬಹುದು ಎಂದು ಹೇಳತಕ್ಕಂಥದ್ದು. ಇಸ್ರೇಲ್ ತಂತ್ರಜ್ಞಾನವನ್ನು ನಾವು ಕರ್ನಾಟಕ ರಾಜ್ಯದಲ್ಲಿ ಅಳವಡಿಸಬೇಕಾದರೆ ಎರಡು ಪ್ರಮುಖವಾದ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಒಂದು ಇಸ್ರೇಲ್ ರಾಜ್ಯದ ಭೌಗೋಳಿಕ ಪರಿಸ್ಥಿತಿ ಏನು, ನಮ್ಮ ರಾಜ್ಯದಲ್ಲಿರತಕ್ಕಂತಹ ಭೌಗೋಳಿಕ ಪರಿಸ್ಥಿತಿ ಏನು ಇಸ್ರೇಲ್‌ನಲ್ಲಿರುತಕ್ಕಂತಹ ಆರ್ಥಿಕ ಪರಿಸ್ಥಿತಿ ಏನು, ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಏನು? ಇಸ್ರೇಲ್ ದೇಶವಲ್ಲಿರತಕ್ಕಂಥ ನೀರಿನ ಅಂಶ, ಭೂಮಿ ಒಳಗಡೆ

ಇರತಕ್ಕಂತಹ ಅಂಡರಗ್ರೌಂಡ್ ವಾಟರ್ ಪರಿಸ್ಥಿತಿ ಏನು? ನಮ್ಮ ಪರಿಸ್ಥಿತಿ ಏನು? ಮಳೆಯ ಪರಿಸ್ಥಿತಿ ಏನು? ನಮ್ಮ ರಾಜ್ಯದ ಪರಿಸ್ಥಿತಿಯ ಏನು? ಇದು ಯಾವುದನ್ನು ಗಮನಕ್ಕೆ ತೆಗೆದುಕೊಂಡಂತೆ ಕಾಣಲಿಲ್ಲ. ಇಸ್ರೇಲ್ ಡ್ರಿಪ್ ಇರಿಗೇಷನ್ ಭಾರಿ ಪ್ರಸಿದ್ಧಿಯಾಗಿದೆ, ಅಲ್ಲಿ ತರಕಾರಿಗಳನ್ನು ಬೆಳೆಸಿ ಎಕ್ಸಪೋರ್ಟ ಮಾಡಿ ರೈತರು ಹೆಚ್ಚು ಹಣವನ್ನು ಸಂಪಾದನೆ ಮಾಡುತ್ತದ್ದಾರೆ, ಅದನ್ನು ನಾವು ಕಾಪಿ ಮಾಡಬೇಕು ಎಂದು ಹೇಳತಕ್ಕಂತಹ ರೀತಿಯಲ್ಲಿ ಇಲ್ಲಿ ಪ್ರಸ್ತಾವನೆ ಆಗಿದೆ. ಇದು ಎಷ್ಟು ಅಪಾಯವಾದಂತಹ ಅಂಶ ಎಂದರೆ ಕರ್ನಾಟಕ ರಾಜ್ಯದ ಭೌಗೋಳಿಕ ಪರಿಸ್ಥಿತಿ ಕೃಷಿಗೆ ಸಂಬಂಧಪಟ್ಟ ಹಾಗೆ ಸಂಪೂರ್ಣ ಭಿನ್ನವಾಗಿದೆ. ಇಸ್ರೇಲ್ ರಾಜ್ಯದಲ್ಲಿ ಸಂಪೂರ್ಣವಾಗಿ ಮರಳು ಗಾಡು. ಕರ್ನಾಟಕ ರಾಜ್ಯದ ಕೃಷ್ಣ ರಾಜಸಾಗರದಲ್ಲಿರತಕ್ಕಂತಹ ನೀರು ಆದರೆ ಇಡೀ ಇಸ್ರೇಲ್ ದೇಶಕ್ಕೆ ವ್ಯವಸಾಯಕ್ಕೆ ಉಪಯೋಗವಾಗುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಪರಿಸ್ಥಿತಿ ಹಾಗಿಲ್ಲ. ಕೃಷಿಗೆ ಸಂಬಂಧಪಟ್ಟ ಹಾಗೆ ನಮ್ಮ ರಾಜ್ಯದಲ್ಲಿ ವಿಭಿನ್ನವಾದ ಮಣ್ಣಿನ ಗುಣ ಇದೆ, ವಿಭಿನ್ನವಾದ ನೀರಿನ ಸಮಸ್ಯೆ ಇದೆ, ಕೆಲವು ಕಡೆ ನಮಗೆ ನೀರಾವರಿ ಯೋಜನೆಗಳಿವೆ, ಕೆಲವು ಕಡೆ ನೀರಾವರಿ ಯೋಜನೆಗಳಿಲ್ಲ, ಇನ್ನು ಕೆಲವು ಕಡೆ ಸಂಪೂರ್ಣವಾಗಿ ನಾವು ಅಂತರ್ಜಲದ ಮೇಲೆ ಆಧಾರ ಬೀಳಬೇಕಾಗಿರತಕ್ಕಂತಹ ಪರಿಸ್ಥಿತಿ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿರುವಾಗ ನಾವು ಯಾವುದೋ ಒಂದು ದೇಶದ ತಂತ್ರಜ್ಞಾನವನ್ನು ಸಾರಾಸಗಟಾಗಿ ಏಕ-ಮುಖವಾದ ನಾವು ಇಲ್ಲಿ ಅಳವಡಿಸಬೇಕು ಎಂದು ಹೇಳತಕ್ಕಂಥದ್ದು ಕೃಷಿಗೆ ಸಂಪೂರ್ಣವಾಗಿ ಹೊಡೆತ ಬೀಳುತ್ತದೆ. ಇಲ್ಲಿರತಕ್ಕಂತಹ ಭೂ ಸಂಬಂಧಗಳು ಬೇರೆ, ಅಲ್ಲಿರತಕ್ಕಂತಹ ಭೂ ಸಂಬಂಧಗಳು ಬೇರೆ. ಇನ್ನು ಅರ್ಥಿಕವಾಗಿ ಹೇಳುವುದಾದರೆ ಬರೀ ತರಕಾರಿ ಹಣ್ಣು ಹಂಪಲು ಮಾತ್ರ ಉತ್ಪಾದನೆ ಮಾತ್ರ ನಾವು ವಿದೇಶಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವುದಕ್ಕೆ ಪ್ರಾಯೋಜನವಾಗುತ್ತದೆ ಅಂದರೆ ಇದು ಖಂಡಿತವಾಗಿ ಸಾಧ್ಯವಿಲ್ಲ. ಇದರಲ್ಲಿ ಸಣ್ಣ ಬೆಳೆಗಾರರು, ಸಣ್ಣ ರೈತರು, ಮಧ್ಯಮ ವರ್ಗದ ರೈತರು ಈ ವ್ಯವಸಾಯದಲ್ಲಿ ತೊಡಗುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಏಕೆಂದರೆ ವಿದೇಶಿ ಮಾರುಕಟ್ಟೆಗೆ ಹೋಗಬೇಕೆಂದರೆ ಏರೋಪ್ಲೇನಗಳ ಮುಖಾಂತರ ಹೋಗಬೇಕು. ಏರೋಪ್ಲೇನನಲ್ಲಿ ಹೋಗತಕ್ಕಂತಹ ಸರಕುಗಳು ಸಣ್ಣ ಪ್ರಮಾಣದಲ್ಲಿರತ್ಕಕಂತಹ ಸರಕುಗಳನ್ನು ಕಳುಹಿಸುವುದಕ್ಕೆ ಆಗುವುದಿಲ್ಲ. ಹೆಚ್ಚಿನ ಪ್ರಮಾಣದಲ್ಲಿ ರಫ್ತು ಆಗಬೇಕು. ಹೆಚ್ಚಿನ ಪ್ರಮಾಣದಲ್ಲಿ ರಫ್ತು ಆಗಬೇಕಾದರೆ ಹೆಚ್ಚು ಉತ್ಪಾದನೆ ಆಗಬೇಕು. ಆದ್ದರಿಂದ ಈ ತಂತ್ರಜ್ಞಾನವನ್ನು ಯಾವುದೇ ರೀತಿಯಲ್ಲಿ ನಮ್ಮ ದೇಶದಲ್ಲಿ, ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಅಳವಡಿಸುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಆ ರೀತಿ ಏನಾದರೂ ಅಳವಡಿಸಿದ್ದೇ ಆದರೆ, ನಾವು ನಿಜವಾಗಿಯೂ ಕೂಡ ಅದರ ವ್ಯತಿರಿಕ್ತವಾದ ಪರಿಣಾಮಗಳನ್ನು ನೋಡಬೇಕಾಗುತ್ತದೆ. ಮತ್ತೆ ಕೃಷಿಗೆ ಸಂಬಂಧಪಟ್ಟಹಾಗೆ ತಿಳಿಸಿದ ಸಂದರ್ಭದಲ್ಲಿ ಈ ವಿಷಯದಲ್ಲಿ ಭೂಮಿಯ ಪ್ರಶ್ನೆಯೇ ಇಲ್ಲ. ಅಂದರೆ ಇವರು ಭೂಮಿ ಬಿಟ್ಟು ಕೃಷಿ ಮಾಡಬಹುದು ಎನ್ನುವಂತಹ ಆಲೋಚನೆ ಏನಾದರೂ ಇರಬಹುದು. ಭೂಮಿಯನ್ನು ಬಿಟ್ಟು ಕೃಷಿಯನ್ನು ಅಭಿವೃದ್ಧಿ ಪಡಿಸಬಹುದು ಎಂದು. ಭೂಮಿ ಇಲ್ಲದೆ ಕೃಷಿ ಇಲ್ಲ. ಆದರೆ ಭೂ ಸಂಬಂಧಗಳ ಬದಲಾವಣೆ ಬಗ್ಗೆ ಇಲ್ಲ ಯಾವುದೇ ರೀತಿ ಪ್ರಸ್ತಾಪ ಇಲ್ಲ. ಅದರ ಜೊತೆ ಈಗಾಗಲೇ ಭೂ ಮಸೂದೆ ಕಾಯಿದೆ ತಿದ್ದುಪಡಿ ಆಗಿದೆ.

ಇದರಲ್ಲಿ ಮುಖ್ಯವಾಗಿರತಕ್ಕಂಥದ್ದು ಸುಮಾರು 4-5 ವರ್ಷಗಳಿಂದ ಬಗರ್‌ಹುಕುಂ ಸಾಗುವಳಿಯಲ್ಲಿ ಭೂಮಿಯನ್ನು ವಿತರಣೆ ಮಾಡತಕ್ಕಂತಹ ಕಾರ್ಯಕ್ರಮ ಇದು ಸರ್ಕಾರ ಮುಂದೆ ಇದ್ದರೂ ಕೂಡ, ಇವತ್ತಿಗೂ ಕೂಡ ಕರ್ನಾಟಕ ರಾಜ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿರತಕ್ಕಂತಹ ಭೂಮಿಯಲ್ಲಿ ಶೇಕಡ 70 ಭಾಗ ಭೂಮಿ ಯಾರು ಬಗರ್‌ಹುಕುಂ ಆಗಿ ಉಳುತ್ತಿದ್ದಾರೆ, ಅವರಿಗೆ ವಿತರಣೆ ಆಗಿಲ್ಲ. ಅದಕ್ಕೆ ನೇಮಕಾತಿ ಸಮಿತಿಗಳನ್ನು ಮಾಡಿದ್ದಾರೆ. ಸನ್ಮಾನ್ಯ ಸಭಾಧ್ಯಕ್ಷರೆ, ಈ ಸರ್ಕಾರ ಆಡಳಿತ ನಡೆಸುತ್ತಿದೆ. ಬಹಳ ಸಣ್ಣ ವಿಷಯಗಳು ಇವೆಲ್ಲಾ ಆಡಳಿತಾತ್ಮಕವಾಗಿರತಕ್ಕಂಥ ಬಹಳ ಸಣ್ಣ ವಿಷಯ. ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ನೇಮಕ ಮಾಡತಕ್ಕಂಥದ್ದು ಅದರ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡತಕ್ಕಂಥದ್ದು ಬಹಳ ಸಾಮಾನ್ಯವಾದ ಸಣ್ಣ ವಿಷಯ.

ಅಂದರೆ ಇಂತಹ ಸಣ್ಣ ಆಡಳಿತಾತ್ಮಕ ವಿಷಯಗಳ ಬಗ್ಗೆ ಸರ್ಕಾರ ಹದಿನಾಲ್ಕು ತಿಂಗಳಿಂದ ಅದನ್ನು ಪೂರ್ತಿ ಮಾಡುವುದಕ್ಕೆ ಆಗಲಿಲ್ಲ. ತಾಲ್ಲೂಕು ಕೇಂದ್ರಗಳಿಗೆ ಭೂ ವಿತರಣೆ ಮಾಡತಕ್ಕಂಥ ಸಮಿತಿಗಳನ್ನು ಇದುವರೆಗೂ ಕರ್ನಾಟಕ ಪೂರ್ತಿ ಮಾಡಲಿಲ್ಲ. ಈಗಾಗಲೇ ಹದಿನಾಲ್ಕು ತಿಂಗಳು ಹೋಗಿದೆ. ಇನ್ನು ಇರತಕ್ಕಂಥದ್ದು ಮೂರು ವರ್ಷ ಹತ್ತು ತಿಂಗಳು ಮಾತ್ರ. ಈ ಮೂರು ವರ್ಷ ಹತ್ತು ತಿಂಗಳಲ್ಲಿ ಕರ್ನಾಟಕದಲ್ಲಿ ಬಗರ್ ಹುಕುಂ ಸಾಗುವಳಿ ಮಾಡತಕ್ಕಂಥ ಜಮೀನು ವಿತರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಸಾಧ್ಯವಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಏಕೆಂದರೆ ಸಾಧ್ಯವಾಗುತ್ತದೆಯೇ? ಸಾಧ್ಯವಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಏಕೆಂದರೆ ಅದರ ಸರ್ವೆ ಮಾಡತಕ್ಕಂಥ ಕೆಲಸ ಇನ್ನೂ ಪೂರ್ತಿ ಆಗಿಲ್ಲ. ಸರ್ವೆ ಮಾಡದೇ ಅದು ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಮುಂದೆ ಬರದೇ ಭೂಮಿ ವಿತರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದಕಾರಣ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ನೀವು ಒಂದು ಆರ್ಡಿನನ್ಸನ್ನು ತನ್ನಿ ಎಂದು. ಆರ್ಡಿನನ್ಸನ್ನು ತಂದು ಬಗರ್ ಹುಕುಂ ಸಾಗುವಳಿ ಮಾಡತಕ್ಕಂಥ ಜಮೀನನ್ನು ವಿತರಣೆ ಮಾಡಲಿಕ್ಕೆ ನೀವು ತಕ್ಷಣ ಕ್ರಮ ತೆಗೆದುಕೊಳ್ಳದೇಹೋದರೆ ನಾವು ಕೃಷಿ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಸನ್ಮಾನ್ಯ ಸಭಾಧ್ಯಕ್ಷರೇ, ಒಂದು ವಿಷಯದಲ್ಲಿ ಸರ್ಕಾರವನ್ನು ನಾನು ಖಂಡಿತವಾಗಿ ಅಭಿನಂದಿಸಬೇಕಾಗಿದೆ. ಅದೇನೆಂದರೆ ಕಾವೇರಿ ನದಿ ನೀರಿನ ಸಮಸ್ಯೆ. ಇಲ್ಲಿ ನೀರಾವರಿ ಪ್ರಶ್ನೆ ಬಂದಾಗ ಕಾವೇರಿ ಪ್ರಶ್ನೆ ಕೂಡ ಇದರಲ್ಲಿ ಪ್ರಸ್ತಾಪವಾಗಿದೆ. ಕಾವೇರಿ ನದಿ ನೀರಿನ ಸಮಸ್ಯೆಯನ್ನು ಪರಿಹಾರ ಮಾಡತಕ್ಕಂಥ ದಿಕ್ಕಿನಲ್ಲಿ ಮೊಟ್ಟ ಮೊದಲ ಬಾರಿಗೆ ರಾಜ್ಯ ಸರ್ಕಾರ ಕಾವೇರಿ ನದಿ ನೀರಿನ ಸಮಸ್ಯೆಗಳನ್ನು ಬಗ್ಗೆ ವಿವರವಾದಂಥ ವಿಷಯಗಳ ಬಗ್ಗೆ ಸಾಕ್ಷಾಧಾರಗಳು ಇಡೀ ದೇಶದ ಜನತೆಗೆ ಗೊತ್ತಾಗುವ ರೀತಿಯಲ್ಲಿ ಪ್ರಾಮಾಣಿಕವಾದಂಥ ಪ್ರಯತ್ನ ಪಟ್ಟಿದೆ. ಅದರಿಂದಾಗಿ ಇವೊತ್ತು ಕಾವೇರಿ ಜಲವಿವಾದಗಳ ಬಗ್ಗೆ ಇಡೀ ದೇಶದಲ್ಲೇ ಕರ್ನಾಟಕ ರಾಜ್ಯದ ಬಗ್ಗೆ ಇದ್ದಂಥ ಅಪ ನಂಬಿಕೆ, ಗುಮಾನಿಗಳಿಗೆ ಅದು ಬರೆ ಎಳೆದಂತಾಗಿದೆ. ಆ ದೃಷ್ಟಿಯಲ್ಲಿ ನಾನು ರಾಜ್ಯ ಸರ್ಕಾರವನ್ನು ಖಂಡಿತವಾಗಿ ಅಭಿನಂದಿಸುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಕೃಷ್ಣಾ ನದಿ ನೀರಿನ ಹಂಚಿಕೆಯ ಬಗ್ಗೆ ನನಗೆ ಖಂಡಿತ

ನಂಬಿಕೆ ಇಲ್ಲ. ಏಕೆಂದರೆ ಎರಡು ಸಾವಿರ ಇಸವಿಯೊಳಗೆ ನಮ್ಮ ಹಕ್ಕನ್ನು ನಾವು ಕಾಪಾಡಿಕೊಳ್ಳಬೇಕಾದರೆ ಕೃಷ್ಣಾ ಯೋಜನೆ ಪೂರ್ತಿ ಆಗಬೇಕಾದರೆ ಈ ಯೋಜನೆ ಪೂರ್ತಿ ಆಗಬೇಕಾದರೆ ಈಗ ಹೋಗುತ್ತ ಇರತಕ್ಕಂಥ ಕಾಲಮಿತಿಯಲ್ಲಿ, ಈಗ ನಡೆಯುತ್ತಿರತಕ್ಕಂಥ ರೀತಿಯಲ್ಲಿ ಸರ್ಕಾರ ಮುಂದುವರಿದರೆ ಖಂಡಿತವಾಗಿ ಕೃಷ್ಣಾ ನದಿ ನೀರಿನ ವಿಷಯದಲ್ಲಿ ನಮಗೆ ಇರತಕ್ಕಂಥ ಹಕ್ಕನ್ನು ನಾವು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹತ್ತು ಸಾವಿರ ಕೋಟಿಯವರೆಗೆ ನಾವು ಕೃಷ್ಣಾ ನದಿ ಯೋಜನೆಗೆ ಖರ್ಚು ಮಾಡಬೇಕಾಗಿರುತ್ತದೆ. ಹಿಂದೆ ರಾಜ್ಯಪಾಲರ ಭಾಷಣದಲ್ಲಿ ಅವರು ಇದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸುತ್ತೇವೆಂದು ಹೇಳಿದ್ದರು.

ಆದರೆ ಇವೊತ್ತು ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಪ್ರಸ್ತಾಪವೇ ಇಲ್ಲ, ಕಡಿಮೆಯಾಗಿದೆ. ಈ ಯೋಜನಗೆ ಬೇಕಾದ ಹಣವನ್ನು ಮುಖ್ಯವಾಗಿ ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕವಾಗಿ ಸಂಗ್ರಹಿಸಲಾಗುತ್ತಿದೆ. ಜಲ ನಿಗಮವು ಈಗಾಗಲೇ ಖಾಸಗೀ ವಲಯದಿಂದ180ಕೋಟಿ ರೂಪಾಯಿಗಳ ಮೊಬಲಗನ್ನು ಪಡೆದುಕೊಳ್ಳುವಲ್ಲಿ ಸಫಲವಾಗಿದೆ. 250 ಕೋಟಿ ರೂಪಾಯಿಗಳಷ್ಟಾಗುವ ಎರಡನೇ ಹಂತದ ನಿಧಿ ಸಂಗ್ರಹಣೆಯನ್ನು ಅತಿ ಶೀಘ್ರದಲ್ಲಿಯೇ ಪಬ್ಲಿಕ್ ಇಷ್ಯೂ ಮೂಲಕ ಸಂಗ್ರಹಿಸಲು ನಿಗಮವು ಉದ್ದೇಶಿಸಿದೆ. ಪುನರ್ವಸತಿ ಹಾಗೂ ಪುನವ್ಯವಸ್ಥೆ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಒಬ್ಬ ಹಿರಿಯರನ್ನು ನೇಮಿಸುವ ಬಗ್ಗೆ ಹೇಳಿದ್ದೀರಿ. ನೀವು600ಕೋಟಿ ಖರ್ಚು ಮಾಡಬೇಕೆಂದು ಹೇಳಿದ್ದಿರಿ. ಇವೊತ್ತು 800 ಕೋಟಿ ಎಂದು ಹೇಳುತ್ತಿದ್ದೀರಿ, ಈಗ 100 ಕೋಟಿ ರೂಪಾಯಿ, ಇಷ್ಟಕ್ಕೇ ಸೀಮಿತವಾಗಿದೆ. ಆದರೆ ಈ ಹಣದ ಮೂಲಗಳ ಬಗ್ಗೆ ಹೇಗೆ ಅದನ್ನು ಸಂಗ್ರಹಣೆ ಮಾಡಬೇಕೆಂದು ತ್ವರಿತ ಪ್ರಯತ್ನ ಮಾಡುತ್ತೇವೆಂದು ಹೇಳಿತ್ತು. ಆ ತ್ವರಿತ ಪ್ರಯತ್ನ ಅದರಲ್ಲಿ ನಡೆಯುತ್ತಿಲ್ಲ. ಹೀಗಾದರೆ ಕೃಷ್ಣಾ ಯೋಜನೆಯನ್ನು ನಾವು ಎರಡು ಸಾವಿರ ಇಸವಿಯೊಳಗೆ ಪೂರ್ತಿ ಮಾಡುತ್ತೇವೆ, ಸಂಪೂರ್ಣ ಮಾಡುತ್ತೇನೆ ಎನ್ನತಕ್ಕಂಥ ಏನು ಗುಮಾನಿ ಇದೆ ಇಂತಹ ಪರಿಸ್ಥಿತಿ ಮುಂದುವರಿದರೆ ಅದು ಖಂಡಿತ ಸಾಧ್ಯವಿಲ್ಲ. ಅದಕ್ಕೆ ಬೇರೆ ಏನಾದರೊಂದು ಕ್ರಮವನ್ನು ತೆಗೆದುಕೊಳ್ಳಬೇಕು. ಮುಖ್ಯವಾಗಿ ನನ್ನ ಮುಖ್ಯ ಅಭಿಪ್ರಾಯವೇನೆಂದರೆ ಇದು ಎರಡು ಸಾವಿರ ಇಸವಿಯೊಳಗೆ ಪೂರ್ತಿ ಆಗದೇ ಇರತಕ್ಕಂಥ ಪರಿಸ್ಥಿತಿಯನ್ನು ಮನಗಂಡು ನಾವು ಸಂಬಂಧಪಟ್ಟ ಕೇಂದ್ರ ಸರ್ಕಾರ ಮತ್ತು ನದಿ ನೀರಿನ ಹಂಚಿಕೆ ಟ್ರಿಬ್ಯೂನಲ್ ಮುಂದೆ ನಮ್ಮ ಅವಧಿಯನ್ನಾದರೂ ನಾಲ್ಕೈದು ವರ್ಷ ಮುಂದಕ್ಕೆ ಹಾಕಿ ಎಂದು ಹೇಳಿ ನಾವು ಏನಾದರೂ ಅದನ್ನು ಪುನರ್ ವಿಮರ್ಶೆ ಮಾಡಲಿಕ್ಕೆ ಸಾಧ್ಯವಿದ್ದರೆ ಅದನ್ನು ಮಾಡತಕ್ಕಂಥದ್ದು ಒಳ್ಳೆಯದು.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ, ನಾನು ವಿದ್ಯುಚ್ಛಕ್ತಿಯ ಬಗ್ಗೆ ಬಹುಶಃ ಕಡಿಮೆ ಮಾತನಾಡಿದರೆ ಬಹಳ ಒಳ್ಳೆಯದೆಂದು ನನಗನಿಸುತ್ತದೆ. ತಮಗೂ ಗೊತ್ತಿದೆ ಕರ್ನಾಟಕದಿಂದ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇದನ್ನು ಯಾರೂ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಈ ಸರ್ಕಾರ ಮಾತ್ರವೇ ಕಾರಣವೆಂಬ ಮಾತು ನಾನು ಒಪ್ಪುವುದಿಲ್ಲ. ಈ ಸರ್ಕಾರ ಒಂದೇ ಈ ವಿದ್ಯುಚ್ಛಕ್ತಿ ಸಮಸ್ಯೆಯನ್ನು ಹುಟ್ಟಿಹಾಕಿದೆ ಎಂದು ಹೇಳತಕ್ಕಂಥದ್ದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಕಳೆದ 20-25 ವರ್ಷದಿಂದ ಅಧಿಕಾರ ನಡೆಸಿದಂಥ ಯಾವುದೇ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಬೇಕಾಗಿರತಕ್ಕಂಥ

ಯಾವುದೇ ಪೂರ್ವ ಯೋಜನೆಗಳನ್ನು ಮಾಡದೇ ಇರತಕ್ಕಂಥ ಕಾರಣಗೋಸ್ಕರ ಇವೊತ್ತು ವಿದ್ಯುಚ್ಛಕ್ತಿಯ ಉತ್ಪಾದನೆ ಇಷ್ಟು ಗಂಭೀರವಾದಂಥ ಪರಿಸ್ಥಿತಿಗೆ ಬಂದಿದೆ. ಅದಕ್ಕೆ ಯಾರಾದರೊಬ್ಬರನ್ನು ಹೊಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನು ಎರಡನೇಯದು ಇವೊತ್ತು ಕರ್ನಾಟಕ ರಾಜ್ಯ ಸರ್ಕಾರ ವಿದ್ಯುಚ್ಛಕ್ತಿ ಕಡಿತವನ್ನು ಘೋಷಣೆ ಮಾಡಿದೆ. ಇದು ಅನಿವಾರ್ಯ ಪರಿಸ್ಥಿತಿ. ಇದನ್ನು ಯಾರೂ ಏನೂ ಮಾಡುವುದಕ್ಕೆ ಬರುವುದಿಲ್ಲ. ಇದು ಕಡಿತಗೊಳಿಸಲೇ ಬೇಕಾದಂಥ ಪರಿಸ್ಥಿತಿ. ಆದರೆ ಈ ಸರ್ಕಾರ ಕಡಿತವನ್ನು ಘೋಷಣೆ ಮಾಡಿದಮೇಲೆ ದಿನ ಬಿಟ್ಟು ದಿನ 24 ಗಂಟೆಗಳ ಕಾಲ ನಾವು ಸತತವಾಗಿ ಪಂಪುಸೆಟ್ಟಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಕರ್ನಾಟಕ ರಾಜ್ಯದ ಜನತೆಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಕಡಿತದ ಬಗ್ಗೆ ರೈತರು ಯಾರೂ ವಿರೋಧ ಮಾಡಿಲ್ಲ. ಆದರೆ ನೀವು ಏನು ಕರ್ನಾಟಕದ ಜನತೆಗೆ 21 ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದರಿ ಅದನ್ನು, ನೀವು ಖಂಡಿತ ಕೊಡುತ್ತಲ್ಲ. ನಾನು ಇವೊತ್ತು ಸರ್ಕಾರಕ್ಕೆ ಹೇಳುತ್ತಿದ್ದೇನೆ. ನೀವೇನು ದಿನ ಬಿಟ್ಟು ದಿನ 24 ಗಂಟೆಗಳ ಕಾಲ ಕೆಲಸಕ್ಕೆ ಬಾರದ ವಿದ್ಯುಚ್ಛಕ್ತಿಯನ್ನು ಪಂಪ್ ಸೆಟ್ಟ ರನ್ನ ಆಗದೇ ಇರತಕ್ಕಂಥ ವಿದ್ಯುಚ್ಛಕ್ತಿಯ್ನು ಕೊಡುತ್ತೀರೆಂದು ಹೇಳಿದ್ದೀರಲ್ಲಾ ಅದರ ಬದಲು ನೀವು ಪ್ರತಿ ದಿವಸ ವೋಲ್ಟೇಜ್ ಇರುವ ಕರೆಂಟನ್ನು ಕೇವಲ ಆರು ಗಂಟೆ ಸಮಯ ಕೊಡಿ ಸಾಕು. ಪ್ರತಿ ದಿವಸ ನೀವು ಸಂಪೂರ್ಣವಾಗಿ ವೋಲ್ಟೇಜ್ ಇರತಕ್ಕಂಥ ಕರೆಂಟನ್ನು ಆರು ಗಂಟೆಗಳ ಸಮಯ ಕೊಟ್ಟರೆ 12 ಗಂಟೆಗಳ ಕಾಲ ಕೊಟ್ಟಹಾಗೆ ಆಗುತ್ತದೆ ಮತ್ತು ಇನ್ನೂ 12 ಗಂಟೆಗಳ ಕಾಲ ಉಳಿತಾಯ ಮಾಡಲು ಸಾಧ್ಯವಾಗುತ್ತದೆ. ಇಷ್ಟೊಂದು ಮಾತ್ರ ಇವೊತ್ತು ರಾಜ್ಯದ ರೈತರು ಕೇಳುತ್ತಿದ್ದಾರೆ. ನೀವು ದಿನ ಬಿಟ್ಟು ದಿನ 24 ಗಂಟೆಗಳ ಕಾಲ ಕರೆಂಟ್ ಕೊಡುತ್ತೇವೆಂದು ಹೇಳಿ 2 ಗಂಟೆಗಳ ಕಾಲ ಕೂಡ ಕರೆಂಟನ್ನು ಸರಿಯಾಗಿ ಕೊಡದಿರುವುದರಿಂದ ಬೆಳೆಗಳು ನಾಶವಾಗುತ್ತಿವೆ. ಹಾಗೂ ರೈತ ಸಂಪೂರ್ಣವಾಗಿ ಮುಳುಗಿ ಹೋಗಿಬಿಟ್ಟಿದ್ದಾನೆ. ಅವನು ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ ಇವೊತ್ತು ಅರ್ಧ ಗಂಟೆ, ಒಂದು ಗಂಟೆ ಕೂಡ ವಿದ್ಯುಚ್ಛಕ್ತಿ ಸರಿಯಾಗಿ ಸಿಗುತ್ತಿಲ್ಲ. ನಾನು ಸರ್ಕಾರವನ್ನು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ನೀವು ಏನು ದಿನ ಬಿಟ್ಟು ದಿನ 24 ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ಕೊಡಬೇಕು ಎಂದು ಹೇಳುತ್ತಿದ್ದೀರಿ ಅದು ಇವೊತ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಇದು ಪ್ರಾಮಾಣಿಕವಾದ ವಸ್ತುಸ್ಥಿತಿ. ಇದು ಇನ್ನೂ ಪ್ರಾರಂಭ. ಇನ್ನು ಏಪ್ರಿಲ್ ಮೇ ತಿಂಗಳಲ್ಲಿ ತ್ವರಿತವಾದ ವಿದ್ಯುಚ್ಛಕ್ತಿ ಬರವನ್ನು ಕರ್ನಾಟಕ ರಾಜ್ಯ ಎದುರಿಸಬೇಕಾಗಿದೆ. ಅದಕೋಸ್ಕರ ಇವೊತ್ತಿನಿಂದ ಕನಿಷ್ಟಪಕ್ಷ ಆರು ಗಂಟೆ ಹೊತ್ತಾದರೂ ಸರಿಯಾದ ರೀತಿಯಲ್ಲಿ ಕರೆಂಟನ್ನು ಕೊಡಿ. ರೈತರು ಬದುಕಿಕೊಳ್ಳಲು ಸಾಧ್ಯವಾಗುತ್ತದೆ. ನೀವು ಇನ್ನಾವುದಾದರೂ ಪ್ರಯತ್ನ ಮಾಡಿದರೆ ಅದು ಖಂಡಿತ ಸಾಧ್ಯವಾಗುವುದಿಲ್ಲ.

ಇನ್ನು ಎರಡನೇ ಅಂಶ ಸನ್ಮಾನ್ಯ ಸಭಾಧ್ಯಕ್ಷರೇ, ಒಂದು ವರ್ಷದಿಂದ ವಿದ್ಯುಚ್ಛಕ್ತಿ ಉತ್ಪಾದನೆಯ ಬಗ್ಗೆ ಮಾತನಾಡುತ್ತಿದ್ದೇವೆ. ಈ ಕ್ರಮ ತೆಗೆದುಕೊಂಡಿದ್ದೇವೆ, ಇಲ್ಲಿ ಉತ್ಪಾದನೆ ಮಾಡುತ್ತಿದ್ದೇವೆ, ಅಲ್ಲಿ ಉತ್ಪಾದನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೇವೆಯೇ ಹೊರತು ಏನೂ ಮಾಡುವುದಕ್ಕಾಗುತ್ತಿಲ್ಲ. ಉತ್ಪಾದನೆಯ ಯಾವುದೇ ರೀತಿಯ ಕಾರ್ಯ ಅನುಷ್ಠಾನಕ್ಕೆ ಬರಲಿಲ್ಲ. ಬರೀ ಮಾತಿನಲ್ಲೇ ಉಳಿದಿದ್ದೇವೆ. ವಿದ್ಯುಚ್ಛಕ್ತಿಯ ಉತ್ಪಾದನೆಯ ಬಗ್ಗೆ ಅನುಷ್ಠಾನಕ್ಕೆ ಬರಲಿಲ್ಲ. ರಾಯಚೂರಿನಲ್ಲಿರುವ

ಥರ್ಮಲ್ ಪ್ಲಾಂಟ್ ಬಗ್ಗೆ ಸರ್ಕಾರ ಒಂದೊಂದು ದಿವಸ ಒಂದೊಂದು ರೀತಿಯ ಹೇಳಿಕೆಯನ್ನು ಕೊಡುತ್ತಿದೆ. ನಾಲ್ಕನೇ ಜನರೇಟರ್, ಐದಸೇದು, ಮೂರಸೇದು ಎಂದು ಹೇಳುತ್ತಿದ್ದಾರೆ. ಆದರೆ ಇವರೂ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಕೋಲ್ ಅಥಾರಿಟಿ ಆಫ್ ಇಂಡಿಯಾಕ್ಕೆ ರಾಯಚೂರು ಥರ್ಮಲ್ ಪ್ಲಾಂಟದಿಂದ ಎಷ್ಟು ಹಣ ಬಾಕಿ ಇದೆ. ಏತಕ್ಕೆ ಅಲ್ಲಿ ಕಲ್ಲಿದ್ದಲು ಸಪ್ಲೈ ಆಗುತ್ತಿಲ್ಲ. ಕಾರಣ ಏನು ? ಕೋಲ್ ಅಥಾರಿಟಿ ಆಫ್ ಇಂಡಿಯದವರು ಹೇಳುತ್ತಿದ್ದಾರೆ ನಮಗೆ ರಾಯಚೂರು ಥರ್ಮಲ್ ಪ್ಲಾಂಟದಿಂದ ಸುಮಾರು 500 ಕೋಟಿ ರೂಪಾಯಿಯ ಬಾಕಿ ಇದೆ ಎಂದು. ಹೋದಸಲ ಐವತ್ತು ಕೋಟಿ ರೂಪಾಯಿ ಬಾಕಿ ಕಳುಹಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ವರ್ಷ ಕೊಟ್ಟಿದ್ದು ಗೊತ್ತಿಲ್ಲ. ಈಗ ಏನಾದರೂ ಅವರು ಹೇಳಿದರೆ ಗೊತ್ತಾಗಬಹುದು. ಆದ್ದರಿಂದ ಇವೊತ್ತು ವಿದ್ಯುಚ್ಛಕ್ತಿಗೆ ಬೇಕಾಗಿರತಕ್ಕಂಥ ಪ್ರಾಥಮಿಕ ಪ್ರಯತ್ನಗಳೂ ಕೂಡ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ವಿದ್ಯುಚ್ಛಕ್ತಿ ಅದಷ್ಟಕ್ಕೆ ಆದಷ್ಟು ಅದು ಸುಧಾರಣೆ ಆಗಲು ಖಂಡಿತ ಸಾಧ್ಯವಿಲ್ಲ. ಅದೇ ರೀತಿ ನಮಗೆ ಇವೊತ್ತು ಸೆಂಟ್ರಲ್ ಗ್ರಿಡದಿಂದ ಏನು ವಿದ್ಯುಚ್ಛಕ್ತಿ ಬರಬೇಕಾಗಿತ್ತೋ ಅದು ನಮಗೆ ಶೇಕಡಾ 16 ನಿಗದಿ ಪಡಿಸಿದ್ದಾರೆ. ಈ ಶೇಕಡಾ 16 ಯಾವತ್ತೂ ಕೂಡ ನಮಗೆ ಬರಲೇ ಇಲ್ಲ. ಅದು 8-10 ಪಾಯಿಂಟ್ ಮೇಲೆ ಹೋಗಲೇ ಇಲ್ಲ. ಕಳೆದ ಅಧಿವೇಶನ ನಡೆಯತಕ್ಕಂಥ ಸಂದರ್ಭದಲ್ಲಿ ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಿದ್ದೆ ಕೇಂದ್ರದಿಂದ ನಮ್ಮ ಭಾಗಕ್ಕೆ ಎಷ್ಟು ಬರಬೇಕಾಗಿತ್ತೋ ಅದು ಸಂಪೂರ್ಣವಾಗಿ ಬರಬೇಕು ಅದಕ್ಕಿಂತ ಹೆಚ್ಚು ಕೊಡಬೇಕು ಇವೊತ್ತು ನಾವು ಕಷ್ಟದ ಪರಿಸ್ಥಿತಿಯಲ್ಲಿದ್ದೇವೆ ಎಂದು. ಆದರೆ ಮೊನ್ನೆ ಸೆಂಟ್ರಲ್ ಗ್ರಿಡನಿಂದ ಹೆಚ್ಚಿಗೆ ಬಂದಿದೆ ಎಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದನ್ನು ಎಷ್ಟರ ಮಟ್ಟಿಗೆ ಕೊಟ್ಟಿದ್ದಾರೆ ಎಂಬುದನ್ನು ನಾನು ಸರ್ಕಾರದಿಂದ ನಿರೀಕ್ಷೆ ಮಾಡುತ್ತಿದ್ದೇನೆ. ಎಷ್ಟು ಹೆಚ್ಚಾಗಿದೆ ಎನ್ನತಕ್ಕಂಥದ್ದನ್ನು.

10.30 ಎ.ಎಂ

ಮಾನ್ಯ ಅಧ್ಯಕ್ಷರೇ, ಇನ್ನು ಗ್ರಾಮ ಪಂಚಾಯಿತಿ ಬಗ್ಗೆ ಹೇಳಬೇಕೆಂದರೆ ಇದು ಈ ಸರ್ಕಾರದ ಒಂದು ಹೆಮ್ಮೆಯ ಸಾಧನೆ ಎಂದು ಹೇಳಬೇಕಾಗಿದೆ. ಮತ್ತು ಇವೊತ್ತಿನ ಕಾನೂನು ಇವೆರಡನ್ನೂ ಹೋಲಿಸಿ ನೋಡಬೇಕಾಗುತ್ತದೆ. ಇವೆರಡನ್ನೂ ಹೋಲಿಕೆ ಮಾಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಮುಖ್ಯವಾಗಿರತಕ್ಕಂಥ ಅಂಶವೆಂದರೆ ವಿಕೇಂದ್ರಿಕರಣದ ಬಗ್ಗೆ ಇವರಿಗಿರುವ ತಪ್ಪು ಕಲ್ಪನೆ, ಉದಾಹರಣೆಗೆ ಹೇಳಬೇಕೆಂದರೆ ಇವೊತ್ತು ಆಶ್ರಯ, 'ಅಂಬೇಡ್ಕರ್' ಮತ್ತು 'ಇಂದಿರಾ ಆವಾಸ್' ಯೋಜನೆಗಳಲ್ಲಿ ಮನೆಗಳನ್ನು ಹಂಚುವುದಕ್ಕೆ ಇವರು ಯಾರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಗ್ರಾಮ ಪಂಚಾಯತಿ ಕಾನೂನಿನಲ್ಲಿರತಕ್ಕಂಥದ್ದು ಏನೆಂದರೆ ಗ್ರಾಮ ಪಂಚಾಯತಿಗಳೇ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು, ಆ ಕಾರ್ಯ ಗ್ರಾಮ ಸಭೆಗಳಲ್ಲಿಯೇ ಆಗಬೇಕೆಂದು ಪಂಚಾಯತಿ ಕಾನೂನಿನಲ್ಲಿ ಇದ್ದರೆ ಇವರು ತಾಲ್ಲೂಕು ಪಂಚಾಯತಿಗಳಲ್ಲಿ ಅಧಿಕಾರವನ್ನು ಕೊಟ್ಟಿದ್ದಾರೆ. ಇದರಿಂದ ಏನಾಗಿದೆಯೆಂದರೆ ಸರ್ಕಾರ ಒಂದು ಸುತ್ತೋಲೆಯನ್ನು ಕಳುಹಿಸಿದೆ, 1995ನ್ನು ಇಸವಿಯ ಅಕ್ಟೋಬರ್ ತಿಂಗಳಲ್ಲಿ ಸರ್ವೇ ಮಾಡಿದಂಥ ಪಟ್ಟಿಯಲ್ಲಿರುವ ಜನರನ್ನು ಆಯ್ಕೆ ಮಾಡಬೇಕೆಂದು ಸುತ್ತೋಲೆಯನ್ನು ಕಳುಹಿಸಿದೆ.

ಆದರೆ ಆ ತಾಲ್ಲೂಕು ಪಂಚಾಯಿತಿಗಳು ಆ ಪಟ್ಟಿಯನ್ನೂ ಗಾಳಿಗೆ ಬಿಟ್ಟು ಮತ್ತು ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿದ್ದಾರೆ. ಇದು ಗ್ರಾಮ ಪಂಚಾಯಿತಿಯ ಆಕ್ಟಗೆ ವಿರುದ್ಧವಾದುದು, ಗ್ರಾಮ ಪಂಚಾಯತಿಗಳಿಗೆ ಇರುವ ಅಧಿಕಾರವನ್ನು ಕಸಿದುಕೊಂಡು ತಾಲ್ಲೂಕು ಪಂಚಾಯಿತಿಗೆ ಕೊಟ್ಟಿದ್ದಾರೆ. ಕಾನೂನಿನಲ್ಲಿ ಹೇಳಿರುವ ಪ್ರಕಾರ ಗ್ರಾಮಾ ಸಭೆಯನ್ನು ನಡೆಸಿಯೇ ಫಲಾನುಭವಿಗಳನ್ನು ಗುರುತಿಸಬೇಕು. ಆದ್ದರಿಂದ ಗ್ರಾಮ ಪಂಚಾಯಿತಿಗಳು ಈ ಕಾರ್ಯವನ್ನು ಮಾಡಬೇಕು, ಆದರೆ ಇವರು ತಾಲ್ಲೂಕು ಪಂಚಾಯಿತಿಗಳಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಇದರಿಂದ ಅಲ್ಲಿ ಅನಾಹುತ ಏನಾಗಿದೆಯೆಂದರೆ ಹಲವಾರು ಕಡೆ ನಾನಾರೀತಿಯ ದುರುಪಯೋಗವಾಗುತ್ತಿದೆ. ಕೆಲವು ಕಡೆ ಮನೆಗಳು ಮಾರಾಟವಾಗುತ್ತಿದೆ, ಕೆಲವು ಕಡೆ ಮನೆ ಕಟ್ಟದೆಯೇ ಬಿಲ್ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಇದೆ, ತಾಲ್ಲೂಕು ಪಂಚಾಯತಿ ಸದಸ್ಯರು ತಮಗೆ ಬೇಕಾಗಿರತಕ್ಕಂಥವರಿಗೆ ಮನೆ ಕೊಡುತಕ್ಕಂಥ ಪ್ರಕರಣಗಳನ್ನು ನಾವು ನೋಡುತ್ತಿದ್ದೇವೆ. ಒಂದು ಕಡೆ ಫಲಾನುಭವಗಳಿಗೆ ಮನೆಗಳನ್ನು ನಿರಾಕರಣೆ ಮಾಡುವುದಾದರೆ ಇನ್ನೊದು ಕಡೆ ಗ್ರಾಮ ಪಂಚಾಯಿತಿ ಕಾನೂನು ವ್ಯವಸ್ಥೆಗೆ, ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಗೆ ಸಂಪೂರ್ಣವಾಗಿ ವಿರೋಧವಾಗಿದೆ. ಆದುದರಿಂದ ಇದರ ಬಗ್ಗೆ ಸದನದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಗ್ರಾಮ ಪಂಚಾಯಿತಿಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ಹಕ್ಕನ್ನು ಸರ್ಕಾರ ಕೊಡಬೇಕು. ಇವೊತ್ತು ಗ್ರಾಮ ಪಂಚಾಯತಿಗಳನ್ನು ಯಾವ ಮಟ್ಟಕ್ಕೆ ಇಳಿಸಿದ್ದಾರೆಂಧರೆ, ಭಾಗ್ಯಜ್ಯೋತಿ ಫಲಾನುಭವಿಗಳನ್ನು ಆಯ್ಕೆ ಮಾಡುವುದರಲ್ಲಿಯೂ ಕೂಡ ತಾಲ್ಲೂಕು ಪಂಚಾಯತಿಗೆ ಅಧಿಕಾರವನ್ನು ಕೊಟ್ಟಿದ್ದಾರೆ.

ಈ ರೀತಿಯಾದರೆ ಗ್ರಾಮ ಪಂಚಾಯತಿಗಳಿಗೆ ಏನು ಕೆಲಸ? ರೀ ಚರಂಡಿ ಗುಡಿಸಿಕೊಡು ಲೈಟ್ ಹಾಕಿಕೊಂಡಿರುವುದು ಗ್ರಾಮ ಪಂಚಾಯತಿಯ ಕೆಲಸವೇ? ಗ್ರಾಮ ಪಂಚಾಯತಿಗೆ ಇರಬೇಕಾದ ಮೂಲಭೂತ ಅಧಿಕಾರಗಳು ಇವೊತ್ತು ಇಲ್ಲ, ಅವು ಲೈಟ್ ಹಾಕುವುದು ಮತ್ತು ಚರಂಡಿ ಗುಡಿಸತಕ್ಕಂಥದ್ದು, ಹೋಗಲಿ ಚರಂಡಿ ಗುಡಿಸಲಿಕ್ಕಾದರೂ ಏನಾದರೂ ಹಣದ ವ್ಯವಸ್ಥೆ ಇದೆಯೇ ಎಂದರೆ ಚರಂಡಿಯನ್ನು ಗುಡಿಸಲಿಕ್ಕೂ ಹಣಕಾಸಿನ ವ್ಯವಸ್ಥೆ ಇಲ್ಲ ಮತ್ತು ಚರಂಡಿಗಳನ್ನು ಹಾಕಲಿಕ್ಕೂ ಹಣಕಾಸಿನ ವ್ಯವಸ್ಥೆ ಇಲ್ಲ. ಆ ರೀತಿ ಇವೊತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ವಿಕೃತಗೊಳಿಸಲಾಗಿದೆ. ಇದರ ಜೊತೆಗೆ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಮತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಎಕ್ಸಿಕ್ಯೂಟಿವ್ ಪವರ್ ಕೊಡುತ್ತೇವೆಂದು ಹೇಳಿ ಆಲೋಚನೆಯನ್ನು ಮಾಡುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ತಾನೇ ನನ್ನ ಕ್ಷೇತ್ರವಾದ ಗುಡಿಬಂಡೆ ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಒಂದು ಕ್ರಮವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಬಿ.ಡಿ.ಓ. ಮತ್ತು ಎ.ಇ.ಓ. ಇಬ್ಬರೂ ಕಛೇರಿ ಕೆಲಸಕ್ಕೋಸ್ಕರ ಬೇರೆ ಕಡೆಗೆ ಹೋಗಿದ್ದರೆ ಹಾಜರಾತಿ ಪುಸ್ತಕವನ್ನು ತರಿಸಿಬಿಟ್ಟು ಬಿ.ಡಿ.ಓ. ಮತ್ತು ಎ.ಇ.ಓ. ಇಬ್ಬರೂ ಕೂಡ ಹಾಜರಾಗಿಲ್ಲವೆಂದು ಹಾಜರಾತಿ ಪುಸ್ತಕದಲ್ಲಿ ಗುರುತು ಹಾಕಿದ್ದಾರೆ. ಇದು ಎಂಥ ವಿಚಿತ್ರ ಆಲೋಚನೆ. ಬಿ.ಡಿ.ಎ. ಮತ್ತು ಎ.ಇ.ಓ.ರವರು ಕಛೇರಿಗೆ ಬರದಿದ್ದಾಗ ಹಾಜರಾಗಿಲ್ಲ ಎಂದು ಗುರುತು ಹಾಕುವ ಅಧಿಕಾರ ಯಾರಿಗಿರಬಹುದು, ಯಾರು ಮಾರ್ಕ್ ಮಾಡಬೇಕು ಈ ಹಾಜರಾತಿ ಪುಸ್ತಕದಲ್ಲಿ ? ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಇವೊತ್ತು ಅಪ್ರಬದ್ಧವಾದಂಥ

ಬೆಳವಣಿಗೆಯಿಂದ ಇವೊತ್ತು ನಾವು ಯಾವ ಸ್ಥಿತೆಗ ಹೋಗುತ್ತಿದ್ದೇವೆ ಎನ್ನತಕ್ಕಂಥದ್ದು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನೀವು ನಿಜವಾಗಿಯೂ ಕೂಡ 1985 ರಲ್ಲಿದ್ದಂಥ ವಿಕೇಂದ್ರೀಕರಣ ತತ್ವಕ್ಕೆ ಬದ್ಧರಾಗಿದ್ದರೆ ಗ್ರಾಮ ಪಂಚಾಯತಿಗಳಿಗೆ ಅಧಿಕಾರವನ್ನು ಕೊಡಿ. ಅವಶ್ಯಕತೆಯಿಂದ ಮೂರು ಹಂತದ ವಿಕೇಂದ್ರೀಕರಣವನ್ನು ತಾವು ತಂದಿದ್ದೀರಿ. ಆದರೆ ಇವೊತ್ತು ತಾಲ್ಲೂಕು ಪಂಚಾಯಿತಿಗಳು ಸೂಪರವೈಸಿಂಗ್ ಮಿತಿಯಲ್ಲಿರಬೇಕೇ ಹೊರತು ಯಾವುದೇ ರೀತಿಯಾದ ಎಕ್ಸಿಕ್ಯುಟಿವ್ ಅಥಾರಿಟಿ ಅದರಲ್ಲಿ ಇರುವುದಕ್ಕೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಗ್ರಾಮ ಪಂಚಾಯತಿ...

ಶ್ರೀ ಎಲ್. ಆರ್. ಶಿವರಾಮೇಗೌಡ : ಈಗ ಗ್ರಾಮ ಪಂಚಾಯಿತಿ ಮತ್ತು ಪಂಚಾಯತ್ ರಾಜಬಿಲನ್ನು ವಿಕೃತಗೊಳಿಸಿದರು ಎನ್ನತಕ್ಕಂಥ ಮಾತನ್ನು ತಾವು ಹೇಳಿದರಲ್ಲಾ, ಅದನ್ನು ಈ ಸರ್ಕಾರದವರು ವಿಕೃತಗೊಳಿಸಲಿಲ್ಲ, ಹಿಂದೆ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಯವರಿದ್ದಾಗ ಅವರು ವಿಕೃತಗೊಳಿಸಿದರು ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತಂದೆ ಅಷ್ಟೆ. ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಾಗ ಈ ರಾಜ್ಯಕ್ಕೆ ಕೊಟ್ಟ ಕೆಟ್ಟ ಕೊಡುಗೆ ಅದು ಎನ್ನತಕ್ಕಂಥ ಮಾತನ್ನು ಹೇಳಿದೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಶಿವರಾಮೇಗೌಡರು ನಾನು ಹೇಳಿದ್ದನ್ನು ಸರಿಯಾಗಿ ಗಮನಿಸಲಿಲ್ಲ. ನಾನು ಹೇಳಿದ್ದೇನೆಂದರೆ ತಾಲ್ಲೂಕು ಪಂಚಾಯತಿಗಳಿಗೆ ಮನೆಯನ್ನು ಹಂಚತಕ್ಕಂಥದ್ದರ ಬಗ್ಗೆ ಅಧಿಕಾರವನ್ನು ಈ ಸರ್ಕಾರ ಸುತ್ತೋಲೆಯನ್ನು ಕೊಟ್ಟಿರತಕ್ಕಂಥದ್ದು. 'ಆಶ್ರಯ' ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವುದಕ್ಕೆ ತಾಲ್ಲೂಕು ಪಂಚಾಯತಿಗಳಿಗೆ ಅಧಿಕಾರವನ್ನು ಈ ಸರ್ಕಾರ ಕೊಟ್ಟಿರತಕ್ಕಂಥದ್ದು. ಈ ಸರ್ಕಾರ ಅದನ್ನು ಕೊಟ್ಟಿರುವುದು ಆ ಸರ್ಕಾರವಲ್ಲ, ಅದು ಸ್ಪಷ್ಟವಾಗಿ ತಿಳಿದಿರಬೇಕು.

ಡಾ|| ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ಈ 'ಆಶ್ರಯ' ಯೋಜನೆಯಡಿಯಲ್ಲಿ ಮನೆಯನ್ನು ಹಂಚತಕ್ಕಂಥ ವಿಷಯದಲ್ಲಿ ಇದುವರೆಗೆ ಏನೇನು ಸುತ್ತೋಲೆಗಳು ಹೊರಟಿದೆ ಎನ್ನುವುದರ ಬಗ್ಗೆ ಯಾರಾದರೂ ಹಿರಿಯ ಸಚಿವರು ಸಂಪೂರ್ಣವಾಗಿ ಅಧ್ಯಯನ ಮಾಡಿದರೆ ಒಳ್ಳೆಯದು, ಏಕೆಂದರೆ ಹಿರಿಯರಾದಂಥ ಜಾಲಪ್ಪನವರು ಇದ್ದಾರೆ. ಇವರು ಸಂಪೂರ್ಣವಾದ ಅಧ್ಯಯನ ಮಾಡಿದರೆ ಅವರು ಖಂಡಿತ ಅದನ್ನು ಸರಿಪಡಿಸುತ್ತಾರೆ. ನಾನು ಸುತ್ತೋಲೆಗಳನ್ನು ಮೊದಲಿನಿಂದ ಹಿಡಿದು ಕಡೆಯವರೆಗೂ ನೋಡಿದ್ದೇನೆ. ಮೊದಲನೆಯದಾಗಿ ಲಾಟರಿ ಮೂಲಕ ಮಾಡಲಾಯಿತು, ಆಮೇಲೆ ಸನ್ಮಾನ್ಯ ಪ್ರಕಾಶರವರು ಪಂಚಾಯತ್ ಆಕ್ಟ ಇಂಥ ನಂಬರ್ ಪ್ರಕಾರ ಗ್ರಾಮ ಪಂಚಾಯತಿಗಳಿಗೆ ಅಧಿಕಾರ ಹೋಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಈ ಮಧ್ಯದಲ್ಲಿ ಸರ್ಕಾರದಿಂದ ಒಂದು ಸುತ್ತೋಲೆ ಹೋಯಿತು. ಇದರಲ್ಲಿ ತಾಲ್ಲೂಕು ಪಂಚಾಯಿತಿಗಳು ಮಾಡಬೇಕು ಎಂದು ಹೇಳಿ, ಅದರಲ್ಲಿ ಸೂಕ್ತವಾದಂಥ ಸ್ಪಷ್ಟೀಕರಣವಿಲ್ಲ, ಬೇಕಾದರೆ ಅಧ್ಯಕ್ಷರೇ ತಾವು ಆ ಸುತ್ತೋಲೆಯನ್ನು ತರಿಸಿಕೊಂಡು ನೋಡಬಹುದು. ತಾಲ್ಲೂಕು ಪಂಚಾಯತಿಗಳು ಇವರನ್ನು ಆರಿಸಬೇಕು ಎಂದು ಇದೆ ಆದರೆ ಆ ಸುತ್ತೋಲೆಯಲ್ಲಿ ಯಾವ ಯಾವ ನಿಯಮಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ಏನೂ ಸ್ಪಷ್ಟೀಕರಣವಿಲ್ಲ ಎಲ್ಲಾ ಕಡೆಗಳಲ್ಲಿಯೂ ಇದರ ಬಗ್ಗೆ ಸಾಕಷ್ಟು ಗೊಂದಲಗಳಾಗಿವೆ.

ಆದಕಾರಣ ಹಿರಿಯ ಮಂತ್ರಿಗಳಲ್ಲಿಯಾರಾದರೂ ಆ ಸುತ್ತೋಲೆಗಳೆಲ್ಲವನ್ನೂ ಅಧ್ಯಯನ ಮಾಡಿ ಒಂದು ಖಚಿತವಾದಂಥ, ನಿರ್ಧಿಷ್ಟವಾದಂಥ ನಿರ್ಧಾರವನ್ನು ಕೊಟ್ಟರೆ ಬಹಳ ಒಳ್ಳೆಯದು. ನಮ್ಮ ಹೊನ್ನಾವರ ತಾಲ್ಲೂಕು ಪಂಚಾಯತಿ ದಳದವರ ಕೈಯಲ್ಲಿದೆ, ಏಳೆಂಟು ಪಂಚಾಯತಿಗಳು ಕಾಂಗ್ರೆಸನವರ ಕೈಯಲ್ಲಿದೆ, ಈ ಪಂಚಾಯಿತಿ ಅಧ್ಯಕ್ಷರು ಕಾಂಗ್ರೆಸನವರು ಮತ್ತು ದಳದವರು ಪರಸ್ಪರ ಹೊಡೆದಾಡುವಂಥ ಪರಿಸ್ಥಿತಿ ಬಂದಿದೇ ಹೊರತು ಬಡವನಿಗೆ ಮನೆ ಸಿಕ್ಕುವಂಥ ಕೆಲಸ ಆಗುತ್ತಿಲ್ಲ. ಆದ್ದರಿಂದ ತಮ್ಮಲ್ಲಿ ನನ್ನ ಪ್ರಾಮಾಣಿಕವಾದ ವಿನಂತಿ ಏನೆಂದರೆ ಇದನ್ನು ಸರಿಯಾಗಿ ಅಭ್ಯಾಸ ಮಾಡಿ ಇನ್ನಾದರೂ ಇದಕ್ಕೆ ಒಂದು ಹೊಸದಾದ ಮತ್ತು ನಿರ್ಧಿಷ್ಟವಾದ ನಿಯಮಗಳನ್ನು ಮಾಡಿ ಕಳುಹಿಸುವುದು ಒಳ್ಳೆಯದು. ನಾನು ಎಂ.ಎಲ್.ಎ.ಗಳಿಗೆ ಅಧಿಕಾರ ಕೊಡಬೇಕು ಎಂದು ಖಂಡಿತವಾಗಿಯೂ ಹೇಳುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಇನ್ನು ಹಸಿರು ಕಾರ್ಡ್‌ಗಳನ್ನು ಹಂಚತಕ್ಕಂಥದ್ದರ ಬಗ್ಗೆ ಹೇಳಬೇಕೆಂದರೆ, ಒಂದು ವರ್ಷದ ಹಿಂದೆ ಪ್ರಾರಂಭವಾದಂಥ ಈ ಕಾರ್ಯಕ್ರಮ ಇದುವರೆವಿಗೂ ಯಾವುದೇ ಹಂತ ಮುಚ್ಚಿಲ್ಲ, ಹಸಿರು ಕಾರ್ಡಗಳ ವಿತರಣೆ ಇನ್ನೂ ಆಗಿಲ್ಲ. ಇದರಿಂದೇನಾಗುತ್ತಿದೆಯೆಂದರೆ ಬಡವರು ನಮಗೆ ಹಸಿರು ಕಾರ್ಡ ಬರುತ್ತದೆ ಇದರಿಂದ ಕಡಿಮೆ ದರದಲ್ಲಿ ಅಕ್ಕಿ ಸಿಗುತ್ತದೆಂದು ಕಾಯ್ದುಕೊಂಡೇ ಇದ್ದಾರೆಯೇ ಹೊರತು ಹಸಿರು ಕಾರ್ಡುಗಳ ವಿತರಣೆ ಇದುವರೆವಿಗೂ ಆಗಲಿಲ್ಲ. ಹೀಗಾಗಿ ಇವರು ಯಾವ ಕಾರ್ಯಕ್ರಮಗಳನ್ನು ರೂಪಿಸುತ್ತಾರೋ ಅವುಗಳನ್ನು ಸಂಪೂರ್ಣವಾಗಿ ಮತ್ತು ಪ್ರಾಮಾಣಿಕವಾಗಿ, ತ್ವರಿತವಾಗಿ ಜಾರಿಗೊಳಿಸುವುದರಲ್ಲಿ ಇವರು ಹಿಂದೆ ಬಿದ್ದಿದ್ದಾರೆ, ನೀವು ಕಾರ್ಯಕ್ರಮಗಳನ್ನು ರೂಪಿಸಿದ್ದೀರಿ ಮತ್ತು ಅದರಿಂದ ಜನಕ್ಕೆ ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತದೆ ಎಂಬುದು ಬೇರೆ ವಿಷಯ. ಆದರೆ ತಾವು ತೆಗೆದುಕೊಂಡಂಥ ತೀರ್ಮಾನವನ್ನು, ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಒಂದು ನಿರ್ಧಿಷ್ಟ ಅವಧಿಯೊಳಗೆ ಜಾರಿಯಾಗಿಲ್ಲ, ಒಂದು ವರ್ಷದಿಂದ ಹಸಿರು ಕಾರ್ಡ ವಿತರಣೆಯಾಗಿಲ್ಲ, ಇವೊತ್ತಿಗೂ ಕೂಡ ಹಸಿರು ಕಾರ್ಡ್ ಸಿಗುತ್ತಿಲ್ಲ. ಇದೇ ರೀತಿಯಾಗಿ ಶಿಕ್ಷಣದ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿ ಮಾತನಾಡುತ್ತ ಹಲವಾರು ದಾಖಲೆಗಳ ಸಮೇತ ಯಾವ ರೀತಿಯಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಮಿಡ್‌ಡೇ ಮೀಲ್ಸ್ ಸ್ಕೀಮ್ ಮತ್ತು ಲ್ಯಾಬೋರೇಟರಿಗಳ ದುರುಪಯೋಗವಾಗುತ್ತಿದೆಯೆಂದು ಹೇಳಿದೆ. ಆಗ ನೀವೇ ಆಶ್ವಾಸನೆಯನ್ನು ಕೊಟ್ಟು ಇದರ ಬಗ್ಗೆ ತನಿಖೆಯನ್ನು ಮಾಡಿಸುತ್ತೇನೆಂದು ಹೇಳಿದ್ದಿರಿ, ಆದರೆ ಇದುವರೆಗೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇನ್ನು ಮುಖ್ಯವಾಗಿರುವ ಒಂದೇ ಒಂದು ವಿಷಯವೆಂದರೆ ಈ 7ನೇ ತರಗತಿ ಪಬ್ಲಿಕ್ ಪರೀಕ್ಷೆಗೆ ಸಂಬಂಧಪಟ್ಟ ಹಾಗೆ ಹೈಕೋರ್ಟ್ ಆದೇಶ ಕೊಟ್ಟರೆ 7ನೇ ತರಗತಿ ಪಬ್ಲಿಕ್ ಪರೀಕ್ಷೆ ಇಲ್ಲ ಎಂದು. ನಾನು ಈ ವಿಚಾರದಲ್ಲಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದಿಷ್ಟೆ. ತಾವು ಯಾವುದಾದರೂ ಒಂದು ಕಾರ್ಯಕ್ರಮವನ್ನು, ಕಾನೂನನ್ನು ಜಾರಿ ಮಾಡತಕ್ಕಂಥ ಸಂದರ್ಭದಲ್ಲಿ ಹಿಂದು-ಮುಂದು ಆಲೋಚನೆಯನ್ನು ಮಾಡಬೇಕು. ಧಿಡೀರ್ ಎಂದು 7ನೇ ತರಗತಿಗೆ ಪಬ್ಲಿಕ್ ತರುತ್ತೇವೆಂದರೆ ಹೇಗೆ? ಅದಕ್ಕೆ ಬೇಕಾಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರಲ್ ಇಲ್ಲ, ಸ್ಕೂಲ್ ಇದ್ದರೆ ಮಾಸ್ಟರ್ ಇಲ್ಲ, ಮಾಸ್ಟರ್ ಇದ್ದರೆ ಸ್ಕೂಲ್ ಇಲ್ಲ, 100-120 ವಿದ್ಯಾರ್ಥಿಗಳಿಗೆ ಒಬ್ಬನೇ ಶಿಕ್ಷಕನಿರತಕ್ಕಂಥ ಸಂದರ್ಭದಲ್ಲಿ ಪಬ್ಲಿಕ್ ಪರೀಕ್ಷೆಯನ್ನು ಮಾಡಿದರೆ ಹೇಗೆ? ಇದರಿಂದ ಸಾಮಾನ್ಯ ಜನರಿಗೆ

ವಿದ್ಯಾಭ್ಯಾಸದಲ್ಲಿ ನಿರಾಕರಣೆ ಆಗುವ ಪರಿಸ್ಥಿತಿ ಬಂದಿದೆ, ಹೇಗೂ ಈಗ ಹೈಕೋರ್ಟ್‌ನಲ್ಲಿ ಇದು ತಡೆಯಾಗಿದೆ. ಇನ್ನೊಂದು ವರ್ಷದಲ್ಲಾದರೂ ಇದಕ್ಕೆ ಬೇಕಾಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರಲ್‌ನ್ನು ತಂದು ಅದನ್ನು ಮಾಡಿ.

ಇನ್ನು ಆರೋಗ್ಯ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಹೇಳಬೇಕೆಂದರೆ ವೈದ್ಯರನ್ನು ತಾಲ್ಲೂಕು ಕೇಂದ್ರಗಳಲ್ಲಿ ನೇಮಿಸಬೇಕೆಂದು ಮನವಿ ಪತ್ರವನ್ನು ಕೊಟ್ಟೆ. ಆರೋಗ್ಯಮಂತ್ರಿಗಳು ಇದರ ಬಗ್ಗೆ ಕಾಳಜಿಯನ್ನು ಇನ್ನೂ ತೋರಿಸಿಲ್ಲ ಇರತಕ್ಕಂಥ ಆಸ್ಪತ್ರೆಗಳಲ್ಲಿ ಡಾಕ್ಟರಗಳು ಇಲ್ಲ. ಹಳ್ಳಿಯವರು ಹಳ್ಳಿಗಾಡಿನ ಪ್ರದೇಶಗಳಲ್ಲಿ ಬಸ್ಸಿನ ಸೌಕರ್ಯಗಳು ಇಲ್ಲ, ಬಸಸ್ಸಿನ ಪರಿಸ್ಥಿತಿ ಬಗ್ಗೆ ಸುಮಾರು ಬಾರಿ ಚರ್ಚೆಯಾಗಿದೆ. ಬಸ್ಸುಗಳಲ್ಲಿ ಕುಳಿತುಕೊಂಡು ಹೋಗದೆ ಇರತಕ್ಕಂಥ ಪರಿಸ್ಥಿತಿ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಆಸ್ಪತ್ರೆಗಳಲ್ಲಿ ಡಾಕ್ಟರಗಳು ಇಲ್ಲ, ಡಾಕ್ಟರ್‌ಗಳನ್ನು ಹಾಕಿಕೊಡಿ ಎಂದು ನಾವು ಒಂದು ವರ್ಷದಿಂದ ಸತತವಾಗಿ ಒತ್ತಾಯ ಮಾಡುತ್ತಿದ್ದೇವೆ. ಬಹುಶಃ ಅಧ್ಯಕ್ಷರೆ ನಿಮ್ಮ ಕ್ಷೇತ್ರದಲ್ಲಿ ಇದೇ ಪರಿಸ್ಥಿತಿ ಇರಬಹುದು ಎಂದು ಕಾಣುತ್ತದೆ. ಈ ಸರ್ಕಾರಕ್ಕೆ ಏನು ಹೇಳಬೇಕು. ನಾವು ಧರಣಿ ಮಾಡಬಾರದು, ಟೀಕೆ ಮಾಡಬಾರದು, ಪ್ರತಿಭಟನೆ ಮಾಡಬಾರದು, ಕೊನೆಗೆ ಅವರು ಕೆಲಸವನ್ನು ಮಾಡಬಾರದು. ಡಾಕ್ಟರಗಳನ್ನು ಹಾಕವುದಕ್ಕೆ ಒಂದು ವರ್ಷ ಸಮಯ ಬೇಕು ಎಂದರೆ ಏಕೆ ಈ ಸರ್ಕಾರ ಇರಬೇಕು? ಕನಿಷ್ಟ ಸೌಲಭ್ಯ ಆಸ್ಪತ್ರೆಗೆ ಡಾಕ್ಟರಗಳನ್ನು ಒದಗಿಸುವುದು. ನಾನೇ 3 ಬಾರಿ ಡಾಕ್ಟರನ್ನು ಪೋಸ್ಟ ಮಾಡಿಸಿದೆ. ಆದರೆ ಅವರು ಬಾಗೇಪಲ್ಲಿಗೆ ಬರದೇ ಇಲ್ಲೇ ಟ್ರಾನ್ಸಫರ್ ಆರ್ಡರ್ ಕ್ಯಾನ್ಸಲ್ ಮಾಡಿಕೊಂಡು ಹೋಗಿದ್ದಾರೆ. ಒಂದು ಕಡೆ ಆಸ್ಪತ್ರೆಗೆ ಡಾಕ್ಟರನ್ನು ಹಾಕುತ್ತೇವೆ ಎಂದು ಹಾಕತಕ್ಕಂಥಾದ್ದು ಮತ್ತು ಇದೇ ಸರ್ಕಾರ ವರ್ಗಾವಣೆಯನ್ನು ಇಲ್ಲೇ ರದ್ದು ಮಾಡತಕ್ಕಂಥಾದ್ದು. ಈ ರೀತಿ ಆಗಿಬಿಟ್ಟಿದೆ ಏನು? ನಮ್ಮ ಕ್ಷೇತ್ರದಲ್ಲಿ ಮಹಿಳಾ ವೈದ್ಯರು ಇಲ್ಲ. ಗುಡಿಬಂಡೆ ತಾಲ್ಲೂಕು ಮತ್ತು ಬಾಗೇಪಲ್ಲಿ ತಾಲ್ಲೂಕಿಗೆ ಮಹಿಳಾ ವೈದ್ಯರು ಒಂದು ವರ್ಷದಿಂದ ಸತತವಾಗಿ ಇಲ್ಲ. ಈ ಸರ್ಕಾರಕ್ಕೆ ಏನೂ ಹೇಳಿದರೂ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಇನ್ನಾದರೂ ಡಾಕ್ಟರನ್ನು ಹಾಕುತ್ತದೋ ಅಥವಾ ಇಲ್ಲವೋ ಎಂದು ಹೇಳಬಿಡಲಿ. ಇಲ್ಲ ಎಂದರೆ ಹಣೆಬರಹ ಏನಾದರೂ ಮಾಡಿಕೊಂಡು ಹೋಗಲಿ. ಇಲ್ಲ ಎಂದರೆ ಆಸ್ಪತ್ರೆಗಳನ್ನು ಮುಚ್ಚಿಕೊಂಡು ಬಿಡಿ. ಹಳ್ಳಿಗಾಡಿನ ಪ್ರದೇಶಗಳಲ್ಲಿ ಇರತಕ್ಕಂಥ ಆಸ್ಪತ್ರೆಗೆ ವೈದ್ಯರುಗಳನ್ನು ಹಾಕದೇ, ಬೇಕಾದಂಥ ಮುಚ್ಚಿಬಿಟ್ಟರೆ ನಾವು ಡಾಕ್ಟರ್‌ಗಳನ್ನು ಕೇಳುವುದಿಲ್ಲ. ಆ ಕೆಲಸವನ್ನಾದರೂ ಸರ್ಕಾರ ಬೇಗ ಮಾಡಬೇಕು. ತೊಂದರೆ ಏನು ಇಲ್ಲ. ಹೇಗೋ ಹಳ್ಳಿಗಾಡಿನ ಜನರಿಗೆ ನಿಂಬೇಹಣ್ಣು, ಬೇವಿನಸೊಪ್ಪು ಮಂತ್ರ ಹಾಕಿಸಿಕೊಳ್ಳುವುದು ಬಿಟ್ಟಿಲ್ಲ, ಬೇಕು ಎಂದರೆ ಅಲ್ಲಿಗೆ ಹೋಗುತ್ತಾರೆ, ಏನೂ ಮಾಡುವುದಕ್ಕೆ ಆಗುವುದಿಲ್ಲ. ಇವರಿಗೆ ಏನಾದರೂ ಸ್ವಲ್ಪವಾದರೂ ಪಾಪದ ಪ್ರಜ್ಞೆ ಎಂದು ಇದ್ದರೆ ಹಳ್ಳಿಗಳಿಗೆ ಡಾಕ್ಟರ್ ಗಳನ್ನು ಕೊಡಬೇಕು. ತಕ್ಷಣ ಆ ಕೆಲಸವನ್ನು ಮಾಡಬೇಕು ಎಂದು ಈ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಇನ್ನು ಕೊನೆಯದಾಗಿ ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ಮಹಿಳಾ ಆಯೋಗವನ್ನು ಮಾಡುತ್ತೇವೆಂದು ಹೇಳಿದ್ದರು, ಮಹಿಳೆಯರಿಗೆ 30 ಪರ್ಸೆಂಟ್ ಮೀಸಲಾತಿ ತರುತ್ತೇವೆಂದು ಹೇಳಿರತಕ್ಕಂಥ ಸರ್ಕಾರ ಇವತ್ತು ಆ ಸುದ್ದಿನೇ ಇಲ್ಲ. ಹಾಗಾದರೆ ಕೇವಲ ಘೋಷಣೆ ಮಾಡುವುದಕ್ಕೆ, ಕಾರ್ಯಕ್ರಮಗಳನ್ನು

ರೂಪಿಸುವುದಕ್ಕೆ ಮಾತ್ರ ಈ ಸರ್ಕಾರವಿದೆಯೇ? ಜಾರಿ ಮಾಡುವುದಕ್ಕೆ ಸರ್ಕಾರ ಇಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮತ್ತೊಮ್ಮೆ ನಾನು ತಮ್ಮಲ್ಲಿ ವಿನಂತಿಯನ್ನು ತಮ್ಮ ಮುಖಾಂತರ ಮಾಡುವುದೇನೆಂದರೆ, ಸರ್ಕಾರ ಏನು ಇವತ್ತು ಹೇಳಿ, ನಾಳೆ ಏನು ಮಾಡಬೇಕು, ಇವತ್ತು ಹೇಳಿದ್ದಕ್ಕೂ, ನಾಳೆ ಹೇಳಿದ್ದಕ್ಕೂ ಏನಾದರೂ ಸಂಬಂಧ ಇರಬೇಕೋ, ಬೇಡವೋ ಅಥವಾ ನಾನು ಹಿಂದೆ ಹೇಳತಕ್ಕಂಥ ಜನರಿಗ್ಗೆ ಜ್ಞಾಪಕ ಶಕ್ತಿಯ ಅವಶ್ಯಕತೆ ಬಹಳ ಹೆಚ್ಚಿಗೆ ಇರಬೇಕಾಗುತ್ತದೆ. ಏಕೆಂದರೆ ಏನೇನು ಸುಳ್ಳು ಹೇಳಿದ್ದೇನೆ ಎಂದು ಗೊತ್ತಾಗಬೇಕು.

ನಿಜ ಹೇಳತಕ್ಕಂಥವರಿಗೆ ಜ್ಞಾಪಕ ಶಕ್ತಿಯ ಅವಶ್ಯಕತೆ ಬೇಕಾಗಿಲ್ಲ. ಏಕೆಂದರೆ ಯಾವಾಗಲೂ ಅವರು ನಿಜವನ್ನೇ ಹೇಳುತ್ತಾರೆ, ಎಲ್ಲಿದ್ದರೂ ಅವರು ಒಂದೇ ವಿಷಯವನ್ನು ಹೇಳುತ್ತಾರೆ. ಆದುದರಿಂದ ಕನಿಷ್ಟ ಜ್ಞಾಪಕ ಶಕ್ತಿಯಾದರೂ ಈ ಸರ್ಕಾರಕ್ಕೆ ಇರಲಿ. ಏಕೆಂದರೆ ಸುಳ್ಳು ಹೇಳುವುದಂತೂ ನಿಜ, ಅದರಲ್ಲಿ ಏನೇನು ಸುಳ್ಳು ಹೇಳಿದ್ದೇವೆ ಎನ್ನುವುದಕ್ಕೆ ಜ್ಞಾಪಕಶಕ್ತಿ ಇರಬೇಕು. ನಾನು ತಮ್ಮ ಮುಖಾಂತರ ಏನು ಹೇಳುತ್ತಿದ್ದೇನೆಂದರೆ ನನಗೆ ಈ ಸರ್ಕಾರದವರು ಪ್ರಗತಿ ಪರವಾದಂತಹ ಕಾರ್ಯಕ್ರಮಗಳನ್ನು ಜಾರಿ ಮಾಡುವುದರ ಬಗ್ಗೆ ಇರತಕ್ಕಂಥ ಇತಿಮಿತಿ ನನಗೆ ಸಂಪೂರ್ಣವಾಗಿ ಗೊತ್ತಿದೆ. ಹಿಂದಿನ ಸರ್ಕಾರಕ್ಕೂ ಈ ಸರ್ಕಾರಕ್ಕೂ ಮೂಲಭೂತವಾದಂತಹ ವ್ಯತ್ಯಾಸಗಳು ಇಲ್ಲ. ಆದರೆ ಜನತೆ ದೃಷ್ಟಿಯಲ್ಲಿ ಬೇರೆ ಸರ್ಕಾರ ಬಂದಿದೆ ಎನ್ನುವುದನ್ನು ತೋರಿಸಿಕೊಳ್ಳುವುದಕ್ಕಾದರೂ ಕೂಡ ಕನಿಷ್ಟ ನಾವು ಏನು ಹೇಳಿದ್ದೇವೆ, ಏನು ಮಾಡಬೇಕು ಎಂದು ಇದ್ದೇವೆ ಅದನ್ನು ಪ್ರಾಮಾಣಿಕವಾಗಿ ಜಾರಿ ಮಾಡಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ಮೊದಲು ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಅನೇಕ ವಿಷಯಗಳ ಮೇಲೆ ಮಾನ್ಯ ಹಿರಿಯ ಸದಸ್ಯರುಗಳೆಲ್ಲರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಈ ರಾಜ್ಯದ ವಿಧಾನ ಮಂಡಲದಲ್ಲಿ ರಾಜ್ಯಪಾಲರಿಂದ ಸರ್ಕಾರದ ಉದ್ದೇಶವನ್ನು ಅವರ ಮುಖಾಂತರ ಹೇಳತಕ್ಕಂಥಾದ್ದು ಇದು ಎರಡನೇ ಬಾರಿ. ಮೊದಲನೇ ಬಾರಿ ವಿಧಾನಮಂಡಲದಲ್ಲಿ ಮಂಡನೆ ಮಾಡಿದಾಗ ನಾವು ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಕಾರಣ ಹಿಂದಿನ ಸರ್ಕಾರಗಳು ನಡೆಸಿರತಕ್ಕಂಥವರಲ್ಲಿ ನಾವೂ ಕೂಡ ಭಾಗಿಯಾಗಿರುವುದರಿಂದ ಅದಕ್ಕೆ ಟೀಕೆಟಿಪ್ಪಣಿ ಮಾಡುವುದಕ್ಕೆ ನೈತಿಕ ಹಕ್ಕು ಕೂಡ ನಮಗೆ ಇರಲಿಲ್ಲ. ಇಂದು ವರ್ಷವಾದಮೇಲೆ ಸರ್ಕಾರದ ಹಲವಾರು ನ್ಯೂನತೆಗಳ ಬಗ್ಗೆ ಮಾತನಾಡತಕ್ಕಂಥ ಶಕ್ತಿಯನ್ನು ನಾವು ಪಡೆದಿದ್ದೇವೆ.ಆಡಳಿತವನ್ನು ಕೊಡುತ್ತಾರೆ ಮತ್ತು ಸುಭದ್ರವಾದಂತಹ ಸರ್ಕಾರವನ್ನು ಕೊಡುತ್ತಾರೆ ಮತ್ತು ಜನತೆಯ ಕಲ್ಯಾಣದಲ್ಲಿ ನಮಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಕೆಲಸವನ್ನು ಮಾಡುತ್ತಾರೆ ಎಂಬ ಆಶಯ ಇಟ್ಟುಕೊಂಡವರಲ್ಲಿ ಒಬ್ಬ. ಆ ದೃಷ್ಟಿಯನ್ನು ಇಟ್ಟುಕೊಂಡು ನೋಡಿದಾಗ

ಅವರು ಈ ಭಾಷಣದ ಪ್ರತಿಯೊಂದು ಪುಟದಲ್ಲಿ ನಿಜವಾಗಿ ನೋಡಿದಾಗ ಏನು ಕಳಕಳಿ ಇತ್ತು. ಅದು ಕಡಿಮೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಉದಾಹರಣೆಗೆ ಹೇಳುವುದಾದರೆ ಮೊದಲನೆ ಪುಟದಲ್ಲಿ ಅವರು ಬಹಳ ವಿಶೇಷವಾಗಿ ಹೇಳಿರತಕ್ಕಂಥಾದ್ದು ಏನೆಂದರೆ ಪ್ರತಿ ಜಿಲ್ಲೆಗಳಲ್ಲಿ ಜನತಾ ದರ್ಶನ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರಿಂದ ಸರ್ಕಾರವನ್ನು ಜನರ ಮನೆ ಬಾಗಿಲಿಗೆ ಕೊಂಡೊಯದಂತಾಗಿದೆ, ಅಹವಾಲುಗಳು ಮತ್ತು ಇತರ ಮನವಿಗಳು ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಅನೇಕ ಮೇಲ್ವಿಚಾರಣಾ ಕೆಲಸವಾಗುತ್ತಿದೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಬಹಳ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಅವರು ಇದನ್ನು ಒಂದು ಸಾಧನೆ ಎಂದು ತಿಳಿದುಕೊಂಡಿದ್ದಾರೆ. ನಾನೂ ಕೂಡ ಇದನ್ನು ಒಪ್ಪುತ್ತದೆ. ಅನೇಕ ಸರ್ಕಾರಗಳು ಅಧಿಕಾರ ಪಡೆದಾದನಂತರ ಮಾನ್ಯ ಮುಖ್ಯಮಂತ್ರಿಗಳು ಜನಸಾಮಾನ್ಯರ ಮನೆ ಬಾಗಿಲಿಗೆ ಹೋದಾಗ ಅನೇಕ ಬೇಡಿಕೆಗಳನ್ನು ಜನರು ಸಲ್ಲಿಸತಕ್ಕಂಥದ್ದು ಮಾಮೂಲಾಗಿ ನಡೆಯತಕ್ಕಂಥ ಕೆಲಸ. ಆದರೆ ಇವತ್ತು ಕೂಡ ನಾನು ಅದನ್ನು ಮೆಚ್ಚುತ್ತೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಅನೇಕ ಮಂತ್ರಿ ಮಹೋದಯರು ಸೇರಿಕೊಂಡು ಎಲ್ಲಾ ಜಿಲ್ಲೆಗಳಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ಮಾಡಿದರು. ಆ ಕಾರ್ಯಕ್ರಮದ ಉದ್ದೇಶ ಚೆನ್ನಾಗಿ ಇರಬಹುದು, ಆದರೆ ಆ ಕಾರ್ಯಕ್ರಮದಲ್ಲಿ ಏನು ಹೆಚ್ಚು ನೊಂದಿರತಕ್ಕಂಥ ಜನ ಅಹವಾಲುಗಳನ್ನು ಹಾಗೂ ಅರ್ಜಿಗಳನ್ನು ಕೊಟ್ಟು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆಂಬ ಆಸೆಯಿಂದ ಬಹಳ ದೂರದಿಂದ ಬಂದು ಕೊಟ್ಟಿದ್ದರು. ಅವರೆಲ್ಲರೂ ಕೂಡ ಇವತ್ತು ನಿರಾಶರಾಗಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಪ್ರಜಾವಾಣಿ ಮತ್ತು ಸಂಯುಕ್ತ ಕರ್ನಾಟಕ ಇದರ ಜೊತೆಗೆ ಅನೇಕ ಪತ್ರಿಕೆಗಳು ವರದಿಯನ್ನು ಸಲ್ಲಿಸಿದರು. ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಅರ್ಜಿಗಳು ಬಂದಿದೆ ಯಾವ್ಯಾವ ಅರ್ಜಿಗಳನ್ನು ಜಿಲ್ಲಾಮಟ್ಟದಲ್ಲಿ ಇತ್ಯರ್ಥ ಮಾಡಿದ್ದಾರೆ ಮತ್ತು ಬೆಂಗಳೂರಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧೀನದಲ್ಲಿ ಇರತಕ್ಕಂಥ ಕುಂದುಕೊರತೆ ವಿಭಾಗದಿಂದ ಬಂದಿರತಕ್ಕಂಥ ಅರ್ಜಿಗಳಿಗೆ ಪರಿಹಾರವನ್ನು ಒದಗಿಸಿಕೊಟ್ಟಿದ್ದಾರೆ ಎನ್ನುವಂಥದ್ದರ ಬಗ್ಗೆ ಆಮೂಲಾಗ್ರವಾಗಿ ವರದಿಯನ್ನು ಕೊಟ್ಟರು. ಅದರ ಸತ್ಯಾಂಶವನ್ನು ನೋಡಿದಾಗ ಮಾನ್ಯ ಮುಖ್ಯಮಂತ್ರಿಯಾಗಿರತಕ್ಕಂಥವರು, ಸರ್ಕಾರವನ್ನು ಪ್ರತಿನಿಧಿಸತಕ್ಕಂಥ ಮಂತ್ರಿಗಳೆಲ್ಲರೂ ಕೂಡ ಯಾವ್ಯಾವ ಜಿಲ್ಲೆಗಳಿಗೆ ಹೋಗಿದ್ದರು, ಆ ಎಲ್ಲಾ ಜಿಲ್ಲೆಗಳಲ್ಲಿ ಪರಿವೀಕ್ಷಣೆ ಮಾಡಿದಾಗ, ಇದು ನಿಷ್ಫಲವಾಗಿರತಕ್ಕಂಥ ಕಾರ್ಯಕ್ರಮ ಎಂದು ಹೇಳಬಹುದು.

ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾವುದೇ ಒಂದು ಜನಸಂಪರ್ಕ ಸಭೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಒಳ್ಳೆಯ ಉದ್ದೇಶ ಇಟ್ಟುಕೊಂಡು ಹೋದಾಗ ಅಲ್ಲಿರತಕ್ಕಂಥ ಮೂಲಭೂತವಾಗಿರತಕ್ಕಂಥ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದಕ್ಕೆ ಸರ್ಕಾರ ಮುಂದಾಗಬೇಕಾಗುತ್ತದೆ. ಯಾವುದೇ ಒಂದು ಅರ್ಜಿಯನ್ನು ತೆಗೆದುಕೊಂಡರೆ, ಉದಾಹರಣೆಗೆ ವೃದ್ಧಾಪ್ಯ ವೇತನ, ಅಥವಾ ವಿಧವೆಯರಿಗೆ ಮಾಶಾಸನ ಕೊಡಿಸುವುದಾಗಲಿ ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂಥವರು ಜಿಲ್ಲಾಮಟ್ಟಕ್ಕೆ ಹೋಗಿ ಆ ಅರ್ಜಿಗಳನ್ನು ಸ್ವೀಕರಿಸಿ, ಆ ಅರ್ಜಿ ಮೇಲೆ ಬರೆದರೆ ಸರ್ಕಾರದ ಸಾಧನೆ ಶೂನ್ಯ ಎಂದು ಹೇಳಬೇಕಾಗುತ್ತದೆ. ಆ ಒಂದು ಸಮಸ್ಯೆಯನ್ನು

ಇತ್ಯರ್ಥಪಡಿಸುವುದಕ್ಕೆ ಸರ್ಕಾರ ಅಲ್ಲಿ ಹೋಗುವುದರ ಬದಲಿಗೆ ಅವರು ಇಲ್ಲಿ ಅರ್ಜಿ ಕೊಟ್ಟರೂ ಕೂಡ ತಹಸೀಲ್ದಾರ್ ಡಿ.ಸಿಯವರು ಇರುತ್ತಾರೆ ಆ ಕೆಲಸವನ್ನು ಮಾಡಿಕೊಳ್ಳುತ್ತಾರೆ. ಆದರೆ ನನ್ನ ಅಭಿಲಾಷೆ ಏನೆಂದರೆ ಯಾವ ಮುಖ್ಯಮಂತ್ರಿಗಳು ಹೋಗಿರುತ್ತಾರೋ, ಯಾವಾಗ ಅಧಿಕಾರಿಗಳು ಹೋಗಿರುತ್ತಾರೋ ಹಾಗೆ ಹೋದಾಗ ಜಿಲ್ಲಾಮಟ್ಟದಲ್ಲಿ ಇರತಕ್ಕಂಥ ದೊಡ್ಡ ಸಮಸ್ಯೆಗಳನ್ನು ಇತ್ಯರ್ಥಪಡಿಸಿದ್ದರೆ, ಜನತಾ ದರ್ಶನಕ್ಕೆ ಒಂದು ಸಾರ್ಥಕತೆ ಬರುತ್ತಿತ್ತು. ಈ ದಿಸೆಯೊಳಗೆ ಅವರು ಕರ್ತವ್ಯ ಚ್ಯುತಿ ಮಾಡಿದ್ದಾರೆ ಎಂದು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಅದೂ ಅಲ್ಲದೆ ಇನ್ನೊಂದು ರೀತಿ ಮಾಡಬಹುದಾಗಿತ್ತು, ಒಂದು ಜಿಲ್ಲೆಯಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ಇಟ್ಟುಕೊಂಡಂತಹ ಸಂದರ್ಭದಲ್ಲಿ ಮೊದಲು ಒಂದು ತಿಂಗಳ ಮುಂಚಿತವಾಗಿ ಅಲ್ಲಿರತಕ್ಕಂಥ ಸಮಸ್ಯೆಗಳು ಏನಿವೆ ಎನ್ನುವುದನ್ನು ತಿಳಿದುಕೊಂಡು, ಬೆಂಗಳೂರಿನಲ್ಲಿ ಇರತಕ್ಕಂಥ ಕಮಿಷನರ್ ಆಗಲಿ, ಸೆಕ್ರೆಟರಿಗಳನ್ನಾಗಲಿ ಅಥವಾ ಮುಖ್ಯ ಸ್ಥಾನದಲ್ಲಿ ಇರತಕ್ಕಂಥ ಅಧಿಕಾರಿಗಳು ಒಂದು ತಿಂಗಳ ಮುಂಚೆ ಹೋಗಿ ಪರಿವೀಕ್ಷಣೆ ಮಾಡಿ ಎಲ್ಲಾ ಅರ್ಜಿಗಳನ್ನು ತೆಗೆದುಕೊಂಡು ಯಾವ್ಯಾವ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಮಾಡಿದ್ದರೆ ಅದು ಜನತಾ ದರ್ಶನ ಸಾರ್ಥನ ಸಾರ್ಥಕವಾಗುತ್ತಿತ್ತು. ಏನೋ ಎಲ್ಲಾ ಸೇರಿ 10-12 ಜನ ಮಂತ್ರಿಗಳು ಸೇರಿ ಹೋದರೂ ಕೂಡ ಅದರ ಬಗ್ಗೆ ಖರ್ಚುವೆಚ್ಚ ರಾಜ್ಯದ ಬೊಕ್ಕಸಕ್ಕೆ ಬಿತ್ತೇ ಹೊರತು ಅದರಿಂದ ಯಾವುದೂ ಕೂಡ ಪ್ರತಿಫಲ ಸಿಗಲಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇನ್ನು ಕೃಷಿ ವಲಯದ ಬಗ್ಗೆ ಹೇಳುವುದಾದರೆ ಮಾನ್ಯ ಬೈರೇಗೌಡರೂ ಕೂಡ ಆ ಇಲಾಖೆಯ ಪುನರ್ ಜೀವನಕ್ಕೆ ಬಹಳ ವಿಶೇಷವಾದಂತಹ ಆಸಕ್ತಿಯನ್ನು ವಹಿಸಿದ್ದಾರೆ. ಆದರೆ ಇವತ್ತು ವಿಶೇಷವಾಗಿ ಜಲನಯನ ಪ್ರದೇಶ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕ್ಕೊಂಡು ಯಾವ ಪ್ರದೇಶಗಳಲ್ಲಿ ಮಳೆಯಾಗಿಲ್ಲ, ಬರಗಾಲ ಪೀಡಿತ ಪ್ರದೇಶವಾಗಿರತಕ್ಕಂಥ ಬಿಜಾಪುರ, ರಾಯಚೂರು ಜಿಲ್ಲೆಯಾಗಲಿ ಆ ಪ್ರದೇಶದಲ್ಲಿ ವಿಶೇಷ ಗಮನ ಕೊಟ್ಟು ಆದ್ಯತೆಯ ಮೇಲೆ ಒಕ್ಕಲುತನ ಇಲಾಖೆ ಕೆಲಸಕಾರ್ಯಗಳನ್ನು ಮಾಡತಕ್ಕಂಥ ಕಾರ್ಯವನ್ನು ಮಾಡುವುದಕ್ಕೆ ಹಮ್ಮಿಕ್ಕೊಂಡಿದ್ದಾರೆ. ಇವತ್ತು ಆ ಇಲಾಖೆಯಯಲ್ಲಿ ಅನೇಕ ಬೀಜಗಳ ಸಂಶೋಧನೆ ಮಾಡಿದ್ದಾರೆ ಮತ್ತು ಮಣ್ಣಿನ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಇಲಾಖೆಯನ್ನು ಪುನರ ಜೀವನಗೊಳಿಸತಕ್ಕಂಥ ಸಾಧನೆಯನ್ನು ಮಾಡಿದ್ದಾರೆ. ಆದರೆ ಅಲ್ಲಿರತಕ್ಕಂಥ ಕೃಷಿಗೆ ಸಂಬಂಧಪಟ್ಟಿರತಕ್ಕಂಥ ಇನ್ನು ಹಲವಾರು ಸಮಸ್ಯೆಗಳು ಕಡೆಗೆ ಹೆಚ್ಚು ಗಮನ ಕೊಟ್ಟಿಲ್ಲವೆಂದು ಹೇಳಬಹುದು. ಈಗ ಉದಾಹರಣೆಗೆ ಹೇಳುವುದಾದರೆ ಎಷ್ಟೋ ತಾಲ್ಲೂಕುಗಳಲ್ಲಿ ಸವಳು ಜವಳು ಭೂಮಿ ಇದೆ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲೇ 2-3 ಸಾವಿರ ಹೆಕ್ಟೇರಷ್ಟು ಸವಳು ಭೂಮಿಯಿಂದ ಆವೃತವಾಗಿದೆ. ಇದಕ್ಕೆ ಕಾರಣವನ್ನು ಕಂಡುಹಿಡಿದು ಸಮಸ್ಯೆಯನ್ನು ಯಾವರೀತಿ ನಿವಾರಣೆ ಮಾಡಬೇಕು ಎಂದು ಕೃಷಿ ಇಲಾಖೆಯವರು ಇದುವರೆಗೂ ಪ್ರಯತ್ನ ಮಾಡದೇ ಇರುವುದನ್ನು ಮನನೊಂದು ಹೇಳಬೇಕಾಗಿದೆ.

ಆ ದೃಷ್ಟಿಯಿಂದ ಇವೊತ್ತು ಕೃಷಿ ಇಲಾಖೆಯಲ್ಲಿ ಬೃಹದಾಕಾರವಾಗಿ ಏನು ಸಮಸ್ಯೆಗಳಿಗೆ ಆ ಸಮಸ್ಯೆಗಳ ಕಡೆ ಹೆಚ್ಚು ಗಮನವನ್ನು ಕೃಷಿ ಇಲಾಖೆಯವರು ಕೊಟ್ಟಿದ್ದೇ ಆದರೆ ಬಹುಶಃ ಕೃಷಿ

ಇಲಾಖೆಯಿಂದ ರಾಜ್ಯ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಮತ್ತು ಅವರೂ ಕೂಡ ಅನೇಕ ಸವಲತ್ತುಗಳನ್ನು ಕೊಡತಕ್ಕಂಥ ದೃಷ್ಟಿಯಿಂದ ಈಗ ಸಾಯಿಲ್ ಕನ್ಸರವೇಷನ್ ಏನು ಇತ್ತು ಅವೆಲ್ಲವನ್ನೂ ಒಂದನ್ನಾಗಿ ಮಾಡಿ, ಅನೇಕ ಅಧಿಕಾರಿಗಳ ಮಟ್ಟದಲ್ಲಿ ಕೂಡ ಒಳ್ಳೊಳ್ಳೆಯ ಹುದ್ದೆಗಳನ್ನು ಕೊಟ್ಟು ಕೃಷಿ ಇಲಾಖೆಯಲ್ಲಿ ಮಾತ್ರ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಸರ್ಕಾರದವರು ಮುಂದಾಗಿದ್ದಾರೆ. ಮತ್ತು ನೀರಾವರಿ ವಿಚಾರದಲ್ಲಿ ಹೇಳುವುದಾದರೆ, ಯು,ಕೆ.ಸಿ. ಬಗ್ಗೆ ನಾನು ಮುಂದಿನಸಲ ನಿಯಮ 69ರ ಅಡಿಯಲ್ಲಿ ಮಾತನಾಡುವಾಗ ಇದಕ್ಕೆ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತೇನೆ. ಆದರೆ ನನಗೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕಂಥ ನೀರಾವರಿ ವಿಚಾರದಲ್ಲಿ ಹೇಳುವುದಾದರೆ ನಮ್ಮಲ್ಲಿ ಮಲಪ್ರಭಾ ಯೋಜನೆ ಇದೆ. ಈ ಮಲಪ್ರಭಾ ಯೋಜನೆಗೆ 1960ರಲ್ಲಿ ಅಸ್ತಿಬಾರ ಹಾಕಿದರು. ಈ ಮಲಪ್ರಭಾ ಯೋಜನೆಯಿಂದ ಸವದತ್ತಿ ತಾಲ್ಲೂಕು ಮತ್ತು ಬಾದಾಮಿ ತಾಲ್ಲೂಕಿದೆ ಪೂರ್ತಿಯಾಗಿ ನೀರಾವರಿ ಆಗಬೇಕು, ಮತ್ತು ಆ ಪ್ರದೇಶಗಳಿಂದ ಬಹುಶಃ ಒಳ್ಳೆಯ ನೀರಾವರಿಯನ್ನು ಮಾಡುವುದಕ್ಕೆ ಯೋಜನೆಯನ್ನು ಇಟ್ಟುಕೊಂಡು ಹಿಂದೆ ನೀರಾವರಿ ಕಾರ್ಯದರ್ಶಿಗಳಾಗಿ ನೀರಾವರಿಯ ಒಂದು ಅಧಿಪತ್ಯವನ್ನು ಪಡೆದಂಥ ಬಾಳೆಕುಂದ್ರಿಯವರ ಮುಂದಾಲೋಚನೆಯಿಂದ ಈ ಎಡದಂಡೆ ಕಾಲುವೆಯನ್ನು ಹಮ್ಮಿಕೊಂಡರು. ಅದನ್ನು ಹಮ್ಮಿಕೊಂಡ ಮೇಲೆ ಇವೊತ್ತಿನವರೆಗೂ ಕೂಡ ಸುಮಾರು ಮೂವತ್ತು ವರ್ಷಗಳು ಗತಿಸಿದರೂ ಕೂಡ ಆ ಯೋಜನೆ ಕಾರ್ಯರೂಪಕ್ಕೆ ಬರದಿರುವುದು ಬಹಳ ವಿಷಾದನೀಯ. ಸುಮಾರು 127 ಕಿಲೋಮೀಟರವರಿಗೆ ಆದರೂ ಕೂಡ ಇನ್ನೂ 151 ಕಿಲೋ ಮೀಟರ್‌ವರೆಗೆ ಬರೀ ಮೈನ್ ಕೆನಾಲ್ ಮಾಡತಕ್ಕಂಥ ಉದ್ದೇಶವನ್ನು ಇಟ್ಟುಕೊಂಡು ಕುಳಿತಿದ್ದಾರೆ. ಅದಕ್ಕೆ ನಾನು ಹೇಳುವುದು ಇಷ್ಟೆ, ಇವೆಲ್ಲಾ ಆ ಯೋಜನೆಯಡಿ ಬರುವಂಥ ಕೆಲಸ. ಆದ್ದರಿಂದ ಈ ಕೆಲಸಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಬಹುಶಃ ಒಂದು ವರ್ಷ, ಎರಡು ವರ್ಷಗಳಲ್ಲಿ ಈ ಮಲಪ್ರಭಾ ಎಡದಂಡೆ ಕಾಲುವೆಯನ್ನು ಮುಗಿಸಿದ್ದೇ ಆದರೆ ಬಹುಶಃ ಬದಾಮಿ ತಾಲ್ಲೂಕಿನಲ್ಲಿ ನೀರಾವರಿ ಪ್ರದೇಶ ಹೆಚ್ಚಿಗೆ ಆಗುತ್ತದೆ. ಮತ್ತು ಬರಗಾಲ ಪ್ರದೇಶಗಳ ಬಗ್ಗೆ ಹೇಳಿದರೆ, ಆ ಪ್ರದೇಶಗಳಿಗೆ ನೀರನ್ನು ಒದಗಿಸುವ ಕೆಲಸಕ್ಕೆ ಸರ್ಕಾರದವರು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾದದ್ದು ಬಹಳ ಮುಖ್ಯವಾದ ಕೆಲಸ. ಅದರ ಜೊತೆಗೆ ನಾನು ಸರ್ಕಾರಕ್ಕೆ ಮತ್ತೊಂದು ಒತ್ತಾಯ ಮಾಡುವುದೇನೆಂದರೆ, ಈ ಮಲಪ್ರಭಾ ಜಲಾಶಯದಿಂದ ನೀರು ಕಡಿಮೆಯಾಗತಕ್ಕಂಥದ್ದಕ್ಕೆ ಈ ಹಿಂದೆ ಯೋಜಿಸಲಾಗಿರತಕ್ಕಂಥ ಮಹದಾಯಿ ರಿವೆರ್ ಡೈವರ್ಟ್ ಮಾಡಬೇಕೆನ್ನುವಂಥ ಯೋಜನೆ ಏನು ಇತ್ತು ಅದರಿಂದ ಸುಮಾರು ಹತ್ತು ಟಿ.ಎಂ. ಸಿ. ನೀರನ್ನು ಜಲಾಶಯಕ್ಕೆ ಒದಗಿಸಬೇಕೆಂಬ ಸದುದ್ದೇಶದಿಂದ ಏನು ಯೋಜನೆಯನ್ನು ಮಾಡಿದ್ದರು. ಆ ಯೋಜನೆ ಇನ್ನೂ ಯೋಜನೆಯಾಗಿವೆಯೇ ಉಳಿದಿದೆ, ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರವನ್ನು ನಾನು ಈ ಮೂಲಕ ಒತ್ತಾಯ ಪಡಿಸುತ್ತಿದ್ದೇನೆ. ಮತ್ತು ಇದೇ ರೀತಿ ಇವೊತ್ತು ತಮ್ಮ ರಾಜ್ಯಪಾಲರ ಭಾಷಣದಲ್ಲಿ ಒತ್ತಿ ಹೇಳಿರುವಂಥ ವಿಚಾರ ಏನು ಎಂದು ಹೇಳಿದರೆ, ಗ್ರಾಮಾಂತರ ಪ್ರದೇಶದ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಜಿಸುವ ಪ್ರಯತ್ನವನ್ನು ನಾವು ಮಾಡಿದ್ದೇವೆ ಎಂದು ಹೇಳಿದ್ದಾರೆ. ನಾವು ಬಹಳ ಪರಾಮರ್ಶಿಸಬೇಕಾದಂಥ ವಿಚಾರ.

ನಮ್ಮಲ್ಲಿ ಇರತಕ್ಕಂಥ ಅನೇಕ ಯುವಕರಿಗೆ ಇವೊತ್ತು ಉದ್ಯೋಗ ಸಿಗಲಾರದು ಎನ್ನುವಂತದ್ದನ್ನು ನಾವೆಲ್ಲರೂ ಕೂಡ ಮನಗಂಡಿದ್ದೇವೆ.

ಹಾಗಾದರೆ ಉದ್ಯೋಗವನ್ನು ಕೊಡತಕ್ಕಂಥದ್ದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆಯೇ ಏನೋ ಎಂದು ಹೇಳಿ ನಮ್ಮನ್ನು ನಾವು ಪರೀಕ್ಷೆ ಮಾಡಿಕೊಂಡಾಗ ಅದರೊಳಗೆ ಕಾರ್ಯರೂಪಕ್ಕೆ ತರುವುದಕ್ಕೆ ನಮ್ಮ ಕಡೆಯಿಂದ ಇದುವರೆಗೆ ಸಾಧ್ಯವಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿರಬಹುದು. ಒಂದು ದೃಷ್ಟಿಯಿಂದ ನಾನು ಹೇಳುವುದಾದರೆ, ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಎರಡು ಸಾವಿರದಿಂದ ಮೂರು ಸಾವಿರ ನಿರುದ್ಯೋಗಿ ಯುವಕರಿದ್ದಾರೆ. ಎಸ್.ಎಸ್.ಎಲ್.ಸಿ. ಪಾಸಾಗಿರಬಹುದು, ಪಿ.ಯು.ಸಿ. ಪಾಸಾಗಿರಬಹುದು ಮತ್ತು ಬಿ.ಎ. ಪಾಸಾಗಿರಬಹುದು ಎಂ. ಎ. ಆಗಿರಬಹುದು ಇವರೆಲ್ಲಾ ನಿರುದ್ಯೋಗಿಗಳೂ ಕೂಡ, ಅಲ್ಲಿರತಕ್ಕವರೆಲ್ಲರೂ ಕೂಡ ಒಂದು ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ನೋಡುವುದು ಬಿಟ್ಟರೆ, ಮತ್ತೆ ಯಾವುದೇ ಗೆಜೆಟನ್ನು ನೋಡಲಾರದಂಥ ಪರಿಸ್ಥಿತಿ ಇವೊತ್ತು ಅಲ್ಲಿನ ಯುವಕರಿಗೆ ಇದೆ. ಬಹಳ ಬಡವರು ಇರತಕ್ಕಂಥ ಯುವಕರಿದ್ದಾರೆ. ಅವರೆಲ್ಲರಿಗೂ ಪ್ರತಿಯೊಂದು ತಾಲ್ಲೂಕಿನಲ್ಲಿ ಸರ್ಕಾರದಿಂದ ಎಂಪ್ಲಾಯಮೆಂಟ್ ಬ್ಯೂರೋ ಎಂದು ಸ್ಥಾಪಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಎಂಪ್ಲಾಯಮೆಂಟ್ ಬ್ಯುರೋ ಸ್ಥಾಪಿಸಿ ಅಲ್ಲಿರತಕ್ಕಂಥ ಯುವಕರಿಗೆ ಅನೇಕ ಉದ್ಯೋಗಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನೊಳಗೊಂಡ ಪತ್ರಿಕೆಗಳನ್ನು ಬಹುಶಃ ತರಿಸಿದ್ದೇ ಆದರೆ, ಗೆಜೆಟ್‌ಗಳನ್ನು ತರಿಸಿದ್ದೇ ಆದರೆ, ಗ್ರಾಮಮಟ್ಟದಲ್ಲಿರತಕ್ಕಂಥ ಯುವಕರೂ ಕೂಡ ಬಂದು ನೋಡಿ ಎಲ್ಲಿಲ್ಲಿ ಸಾಧ್ಯವಿದೆಯೋ ಅಲ್ಲಲ್ಲಿ ಉದ್ಯೋಗಕ್ಕಾಗಿ ಅರ್ಜಿ ಹಾಕುವುದಕ್ಕೆ ಸಾಧ್ಯವಾಗುತ್ತದೆ. ನಮ್ಮಲ್ಲಿ ಇರತಕ್ಕಂಥ ಯುವಕರಿಗೆ ಯಾವ ಯಾವ ಉದ್ಯೋಗವಕಾಶಗಳು ಇದ್ದಾವೆ ಎಂಬುದೂ ಸಹಿತ ಗೊತ್ತಾಗುವುದಿಲ್ಲ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಈ ಪೋಲೀಸ್ ಹುದ್ದೆ, ಗ್ರಾಮಸೇವಕರ ಹುದ್ದೆ ಮತ್ತು ಶಿಕ್ಷಕರ ಹುದ್ದೆ, ಈ ಮೂರು ಹುದ್ದೆಗಳಿಗೆ ಬಿಟ್ಟರೆ ಮತ್ತೆ ಯಾವುದಾದರೂ ಹುದ್ದೆಗೆ ಹೋಗಿ ಅರ್ಜಿ ಹಾಕಬೇಕು ಎನ್ನುವಷ್ಟರಮಟ್ಟಿಗೂ ಕೂಡ ಅವರಿಗೆ ನಾಲೆಡ್ಜ್ ಇಲ್ಲ, ಮತ್ತು ಬಡತನದಿಂದಾಗಿ ಆ ಶಕ್ತಿಯೂ ಅವರಿಗೆ ಇಲ್ಲ. ಆ ದೃಷ್ಟಿಯಿಂದ ಸರ್ಕಾರವೇ ಮುಂದೆ ಬಂದು ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಅವರಿಗೆ ಅವಕಾಶ ಕಲ್ಪಿಸಿಕೊಡುವುದಕ್ಕಾಗಿ ಮತ್ತು ಅವರಿಗೆ ತಿಳುವಳಿಕೆ ಕೊಡುವುದಕ್ಕಾಗಿ ಎಂಪ್ಲಾಯಮೆಂಟ್ ಬ್ಯುರೋವನ್ನು ತಾವು ಸ್ಥಾಪಿಸಿದ್ದೇ ಆದರೆ ಅದರ ಮುಖಾಂತರ ಅನೇಕ ಜನ ಬಡವರು ಇರತಕ್ಕಂಥ ಯುವಕರು ಅದನ್ನು ನೋಡಿಕೊಂಡು ಅರ್ಜಿ ಹಾಕತಕ್ಕಂಥದ್ದಕ್ಕೆ ಅವಕಾಶವಾಗುತ್ತದೆ. ಬಹುಶಃ ಆ ದಿಸೆಯೊಳಗೆ ಮನಸ್ಸು ಮಾಡುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದೇ ಅಲ್ಲದೆ ತಾವೆಲ್ಲಾ ನಿರುದ್ಯೋಗಿ ಯುವಕರಿಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳಿಕೊಂಡಿದ್ದೀರಿ. ಈಗ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಹೆಚ್ಚುಕಡಿಮೆ ಎಲ್ಲಾ ನಗರಮಟ್ಟದಲ್ಲಿ ಮತ್ತು ಗ್ರಾಮಮಟ್ಟದೊಳಗೆ ಪ್ರೈವೇಟ್ ಐ.ಟಿ.ಐ. ಕಾಲೇಜುಗಳನ್ನು ಪ್ರಾರಂಭಿಸಿದ್ದಾರೆ. ಈ ಪ್ರೈವೇಟ್ ಐ.ಟಿ.ಐ. ಕಾಲೇಜುಗಳಿಂದ ಸುಮಾರು ಹತ್ತು ಸಾವಿರ ಜನ ಬಡ ವಿದ್ಯಾರ್ಥಿಗಳು ತರಬೇತಿಯನ್ನು ಪಡೆದು ಬರುತ್ತಾರೆ. ಅಲ್ಲಿರತಕ್ಕಂಥವರು

ಸುಮಾರು ಎರಡು ಸಾವಿರದಿಂದ ಮೂರು ಸಾವಿರ ಜನ ಟೀಚರ್ಸ್ ಆಗಲಿ, ಲೆಕ್ಚರರ್ಸ್ ಆಗಿ ಕೆಲಸ ಮಾಡತಕ್ಕಂಥವರು ಇದ್ದಾರೆ. ನಾನು ಸರ್ಕಾರಕ್ಕೆ ಕೇಳುತ್ತೇನೆ, ಈಗ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ನಿರುದ್ಯೋಗಿ ಯುವಕರಿಗೆ ಬಹಳ ದುಡ್ಡು ಖರ್ಚು ಮಾಡಿ ಯಾವುದಾದರೂ ಮೆಡಿಕಲ್ ಕಾಲೇಜ್ ಆಗಲಿ, ಇಂಜಿನಿಯರ್ ಕಾಲೇಜಿಗೆ ಆಗಲಿ ಹೋಗುವುದಕ್ಕೆ ಆಗುತ್ತದೆಯೇ ಬಹಳ ಬಡತನದ ಪರಿಸ್ಥಿತಿಯಲ್ಲಿ ಅವರುಗಳು ಇರತಕ್ಕವರು. ತಮ್ಮ ಕಾಲಮೇಲೆ ತಾವು ನಿಲ್ಲಬೇಕು, ಸ್ವಾವಲಂಬಿಯಾಗಿ ದುಡಿಯಬೇಕು ಎನ್ನುವಂಥ ಉತ್ಸಾಹದಿಂದ ಯುವಕರು ಐ.ಟಿ.ಐ. ಕಾಲೇಜಿಗೆ ಹೋಗುತ್ತಾರೆ. ಐ.ಟಿ.ಐ. ಕಾಲೇಜಿನಲ್ಲಿ ತರಬೇತಿಯನ್ನು ಪಡೆದಂತಹವರು ತಮ್ಮ ಸ್ವಂತ ಉದ್ಯೋಗವನ್ನು ಮಾಡಿಕೊಂಡು ಬದುಕತಕ್ಕಂಥ ಒಂದು ಪರಿಹಾರ ಇದರೊಳಗೆ ಇದೆ.

ಸುಮಾರು 10-12 ವರ್ಷದಿಂದ ಪ್ರೈವೇಟ್ ಐ.ಟಿ.ಐ ಕಾಲೇಜಿನ ಸಿಬ್ಬಂದಿಯವರು ಸರ್ಕಾರಕ್ಕೆ ನಿವೇದನೆ ಮಾಡಿಕೊಂಡರೂ ಕೂಡ ಇದುವರೆಗೂ ಕೂಡ ಸರ್ಕಾರ ಕಣ್ಣು ತೆರೆಯುವುದಕ್ಕೆ ಆಸ್ಪದ ಆಗಿಲ್ಲ. ದಯವಿಟ್ಟು ನಾನು ಸರ್ಕಾರಕ್ಕೆ ಬಹಳ ಕಳಕಳಿಯಿಂದ ಭಿನ್ನಿವಿಸಿಕೊಳ್ಳುತ್ತೇನೆ, ಸರ್ಕಾರದ ಮೂಲಭೂತವಾದಂಥ ಉದ್ದೇಶ ಏನು ಎಂದು ಹೇಳಿದರೆ, ಆ ಸಂದರ್ಭದಲ್ಲಿ ವಿರೋಧಪಕ್ಷದಲ್ಲಿದ್ದಂಥ ದೇಶಪಾಂಡೆಯವರಾಗಲಿ, ಸಿಂಧ್ಯಾರವರಾಗಲಿ, ಜಾಲಪ್ಪನವರಾಗಲಿ ನಾಣಯ್ಯನವರಾಗಲಿ, ಎಲ್ಲರೂ ಕೂಡ ಬಹಳ ಒತ್ತಾಯ ಮಾಡಿದರು. ಪ್ರೈವೇಟ್ ಐ.ಟಿ.ಐ. ಕಾಲೇಜಿನ ಸಿಬ್ಬಂದಿಗೆ ತಾವು ಗ್ರಾಂಟ್ ಇನ್ ಏಡ್ ಕೊಡಿ. ನಾವು ಅಷ್ಟೇ ಮಾಡುತ್ತೇವೆ ಎಂದು ಹೇಳಿದರು. ಇದು ಇಲ್ಲಿಯವರೆಗೂ ಆಗಿಲ್ಲ. ಇವೊತ್ತು ಇನ ಪ್ರಿನ್ಸಿಪಲ್ ಸರ್ಕಾರ ಒಪ್ಪಿಕೊಂಡಿದೆ, ಆದರೆ ತಾತ್ವಿಕವಾಗ ಅವರಿಗೆ ಯಾವರೀತಿ ಕೊಡಬೇಕು ಎಂಬುದರೊಳಗೆ ಜಿಜ್ಞಾಸೆ ಇರಬಹುದು. ಆದರೆ ಒಟ್ಟಾರೆ ಅವರಿಗೆ ಕೊಟ್ಟಿರತಕ್ಕಂಥ ಒಂದು ಪೈಸೆಯೂ ಕೂಡ ಬಹಳ ಸದುಪಯೋಗ ವಾಗತ್ತದೆ ಎನ್ನುವ ಮಾತನ್ನು ಬಹಳ ಧೈರ್ಯದಿಂದ ಹೇಳಬೇಕಾಗಿದೆ. ಕಾರಣ ಏನು ಎಂಬುದನ್ನು ಹೇಳುತ್ತೇನೆ. ಈ ಐ.ಟಿ.ಐ ಸಿಬ್ಬಂದಿಯವರು ಏನು ಇದ್ದಾರೆ ಅವರು ಒಳ್ಳೆಯ ರೀತಿಯಿಂದ ನಡೆಸುತ್ತಾರೆ. ಮತ್ತು ಮೂನ್ನೂರು ನಾಲ್ಲುನೂರು ರೂಪಾಯಿಗಳಿಗೆ ದುಡಿಯತಕ್ಕಂಥ ಈ ಸಿಬ್ಬಂದಿಗೆ ಒಂದು ಮಟ್ಟಿಗೆ ಅವರಿಗೆ ಉಪಜೀವನವನ್ನು ಮಾಡುವಂಥ ಅವಕಾಶವನ್ನು ಬಹುಶಃ ಸರ್ಕಾರವೇ ಕಲ್ಪಿಸಿಕೊಟ್ಟಂತಾಗುತ್ತದೆ. ಇವೊತ್ತು ಆ ಐ.ಟಿ.ಐ ಕಾಲೇಜುನವರನ್ನು ರೆಗ್ಯೂಲರೈಸ್ ಮಾಡುವ ಸಲುವಾಗಿ ಸರ್ಕಾರ ಮುಂದೆ ಬಂದು ಅವರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯವನ್ನು ಮಾಡುತ್ತೀರಿ ಎಂದು ನಾನು ಬಹಳ ಆಸಕ್ತಿಯಿಂದ ತಿಳಿದುಕೊಂಡು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಅದೇ ರೀತಿ ತಾವು ಈ ಸರ್ಕಾರದ ವಿಚಾರಗಳನ್ನು ಹೇಳತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ತಾವು ಬಹಳ ಅಭಿಮಾನದಿಂದ ಹೇಳಿದ್ದೀರಿ. ಹಿಂದುಳಿದ ಸಮಾಜದವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ನಾವು ಬಹಳ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಅವರಿಗೆ ನಾವು ಪೋಷಿಸುತ್ತೇವೆ ಎನ್ನತಕ್ಕಂಥ ಮಾತನ್ನು ಆಡಿದ್ದೀರಿ. ಬಹಳ ಸಂತೋಷ ತಾವು ಆ ರೀತಿ ಹೇಳಿಕೊಂಡಿದ್ದೀರಿ. ಆದರೆ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರದವರು ಚಿಂತನೆಮಾಡಬೇಕಾಗಿದೆ. ಇದನ್ನೆಲ್ಲಾ ನಾವು ನೋಡಿದಾಗ ಬಹಳ ಹಿಂದೆಯೇ ನಮ್ಮ ಇಡೀ ದೇಶದೊಳಗೆ ನಮ್ಮ ಕರ್ನಾಟಕ ಒಂದು ಮಾದರಿಯಾಗಿದೆ. ಹಿಂದುಳಿದ

ಸಮಾಜಕ್ಕೆ ಹೆಚ್ಚು ಆದ್ಯತೆಯನ್ನು ಕೊಡುವುದರಲ್ಲಿ ಬಹುಶಃ ದೇಶಕ್ಕೆ ನಾವು ಮಾದರಿಯಾಗಿದ್ದೇವೆ ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಾರದು. ಉದಾಹರಣೆಗೆ ದಿವಂಗತ: ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಹಾವನೂರು ಕಮಿಷನ್‌ನ ಮುಖಾಂತರ ಈ ಹಿಂದುಳಿದ ಸಮಾಜಕ್ಕೆ ಒಂದು ಬೈಬಲ್‌ನ್ನು ಕೊಟ್ಟು, ಹಿಂದುಳಿದ ಸಮಾಜದ ಪುನರುಜ್ಜೀವನ ಮಾಡತಕ್ಕಂಥ ಸಾಹಸದ ಕೆಲಸಗಳು ಆದವು. ಆದರೆ ಅವತ್ತಿನಿಂದ ಇವೊತ್ತಿನವರೆಗೆ ಏನು ಹಿಂದುಳಿದ ಸಮಾಜದ ಅಭ್ಯುದಯ ಆಗಬೇಕು, ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕು, ಸಾಮಾಜಿಕ ಸುಧಾರಣೆ ಆಗಬೇಕು, ಶೈಕ್ಷಣಿಕ ಸುಧಾರಣೆ ಆಗಬೇಕು ಎನ್ನುವಂಥ ದೂರದೃಷ್ಟಿಯನ್ನು ಇಟ್ಟುಕೊಂಡು ಆಗ ಅನೇಕ ಆಯೋಗಗಳ ಶಿಫಾರಸ್ಸುಗಳ ಮೇಲೆ ವಿಶೇಷವಾಗಿ ಬ್ಯಾಕವರ್ಡ ಕ್ಲಾಸಸ್ ಅಂಡ್ ಮೈನಾರಿಟೀಸ್‌ನ ಪ್ರತ್ಯೇಕವಾಗಿರತಕ್ಕಂಥ ಒಂದು ಡೈರಕ್ಟರೇಟ್‌ನ್ನು ಕೂಡ 1977ರಲ್ಲಿ ಮಾಡಿದರು. 1977 ರಿಂದ 1996ರ ಇಲ್ಲಿಯವರೆಗೆ ಈಗ ಏನೇನು ಕೆಲಸಗಳು ಆಗಿವೆ ಎಂದು ಹೇಳಿದರೆ ಅಲ್ಲಿರತಕ್ಕಂಥ ಬಹಳ ವಿಶೇಷವಾಗಿ ಆಗಿರತಕ್ಕಂಥ ಕೆಲಸಕಾರ್ಯಗಳನ್ನು ನೋಡಿದದರೆ ಬಹುಶಃ ಶೈಕ್ಷಣಿಕವಾಗಿರತಕ್ಕಂಥ ಕಾರ್ಯಕ್ರಮಗಳು ಸ್ವಲ್ಪಮಟ್ಟಿಗೆ ಆಗಿವೆ.

11.00 ಎ.ಎಂ

ಅದೇ ರೀತಿ ತರಬೇತಿ ಕಾರ್ಯಕ್ರಮಗಳು, ಆರ್ಥಿಕ ಸ್ವಾವಲಂಬನೆ ಕಾರ್ಯಕ್ರಮಗಳು, ಮೀಸಲಾತಿ ಕಾರ್ಯಕ್ರಮಗಳು ಆಗಿರಬಹುದು. ಒಟ್ಟಾರೆ ಅವರ ಬದುಕನ್ನು ಒಳ್ಳೆಯ ಮಟ್ಟಕ್ಕೆ ತರುವಷ್ಟರ ಮಟ್ಟಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಬಹುಶಃ ಸಾಧ್ಯವಾಗಿರಲಿಕ್ಕಿಲ್ಲ. ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎಸ್.ಸಿ. ಮತ್ತು ಎಸ್.ಟಿ. ಹಿಂದುಳಿದ ಸಮಾಜದವರಿಗೆ ಸಿಗಬೇಕಾದಂತಹ ಸವಲತ್ತುಗಳಿಗೆ ತಾವು ಆಸಕ್ತಿ ವಹಿಸಿ ದುಡಿಯುತ್ತೀರೆಂದು ತಿಳಿದುಕೊಂಡು ನಾನು ಬಹಳ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ಕಾರಣವೇನೆಂದರೆ ಒಂದು ಉದಾಹರಣೆಯನ್ನು ಬಹಳ ಮನನೊಂದು ತಮಗೆ ಹೇಳಬೇಕಾಗಿದೆ. 1993-94ರಲ್ಲಿ ಮಾನ್ಯ ದೇವರಾಜ ಅರಸ್ ಸಂಶೋಧನಾ ಕೇಂದ್ರವೆಂದು ಸ್ಥಾಪನೆ ಮಾಡಿದರು. ಇದು ಸ್ಥಾಪನೆಯಾದ ಮೇಲೆ ಐದಾರು ವರ್ಷಗಳವರೆಗೆ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆಂಬುದನ್ನು ತಾವು ದಯಮಾಡಿ ಪರಾಮರ್ಶಿಸಬೇಕು. ಅವರನ್ನು ಕರೆದು ಕೇಳಿ, ಯಾವ ಉದ್ದೇಶಕ್ಕಾಗಿ ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದರು ಎಂದರೆ ಇಡೀ ಕರ್ನಾಟಕ ರಾಜ್ಯದಲ್ಲಿರುವಂತಹ ಹಿಂದುಳಿದವರ ಸಮಾಜ ಅಭ್ಯುದಯ ಎಲ್ಲಾ ರೀತಿಯಿಂದ ಸರ್ವತೋಮುಖವಾಗಿ ಆಗಬೇಕೆಂಬ ಮುಂದಾಲೋಚನೆಯನ್ನು ಇಟ್ಟುಕೊಂಡು ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ಆದರೆ ದುರದೃಷ್ಟವಶಾತ್ ಏನಾಗಿದೆ ಎಂದರೆ ಇವತ್ತು ಈ ಸಂಸ್ಥೆ ಕಟ್ಟಡ ಕೋಣೆಯಲ್ಲಿ ಇದೆಯೇ ವಿನಹ ಕಟ್ಟಡದಿಂದ ಹೊರಗೆ ಬರುವುದಕ್ಕೆ ಸಾಧ್ಯವಾಗಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಪ್ರತಿಯೊಂದು ಹಿಂದುಳಿದ ಸಮಾಜಕ್ಕೆ ಸಂಬಂಧಿಸಿರುವಂತಹ ಜನಾಂಗದವರ ಅಭ್ಯುದಯಕ್ಕೆ ಯಾವ ರೀತಿಯಲ್ಲಿ ಆರ್ಥಿಕವಾಗಿ ಸಹಾಯವನ್ನು ಮಾಡಲು ಸರ್ಕಾರಕ್ಕೆ ಸಾಧ್ಯವಿದೆ ಎಂಬುದಕ್ಕೆ ಯಾವುದಾದರೂ ಸರ್ವೆ ಮಾಡಿಸಿದರೆ ಅದನ್ನು ಕಾರ್ಯರೂಪಕ್ಕೆ

ತರಬಹುದು. ಆದರೆ ದುರದೃಷ್ಟವಶಾತ್ ಅದರಿಂದ ಯಾವುದೇ ಕೆಲಸ ಕಾರ್ಯಗಳು ಆಗಿಲ್ಲವೆಂದು ವಿಷಾದಿಂದ ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ಸಂಬಂಧಪಟ್ಟಂತಹ ಮಂತ್ರಿಯವರಿಂದ ಮಾನ್ಯ ರಮೇಶ ಜಿಗಜಿಣಗಿಯವರು ಬಹಳ ಆಸಕ್ತಿ ವಹಿಸಿ ಅದಕ್ಕೆ ಹೆಚ್ಚಿನ ಅನುದಾನವನ್ನು ಕೊಟ್ಟು ಅದನ್ನು ಚಾಲನೆಗೆ ತರಲು ಅವರು ದುಡಿಯುತ್ತಾರೆಂದು ನಾನು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ಇದರ ಜೊತೆಗೆ ಇನ್ನೊಂದು ವಿನಂತಿ ಮಾಡಿಕೊಳ್ಳುವುದೆನೆಂದರೆ ನಮಗೆ ಸ್ವಾತಂತ್ರ್ಯ ಸಿಕ್ಕಮೇಲೆ ಎಸ್.ಸಿ/ ಎಸ್.ಟಿ.ಯವರಿಗಾಗಲಿ ಹಿಂದುಳಿದ ಸಮಾಜದ ಅಭ್ಯುದಯಕ್ಕಾಗಿ ಹತ್ತು ಹಲವಾರು ಯೋಜನೆಗಳನ್ನು ಮಾಡಿ ಅವರ ಅಭ್ಯುದಯಕ್ಕೆ ನಾವು ಅನೇಕ ಸವಲತ್ತುಗಳನ್ನು ಸಹಾಯವನ್ನು ಹಣದ ರೂಪದಲ್ಲಿ ಅಥವಾ ಯಾವುದೇ ರೂಪದಲ್ಲಿ ಕೊಡುತ್ತಿದ್ದೇವೆ. ಆದರೂ ಅದರ ಬಗ್ಗೆ ವಿಮರ್ಶೆ ಮಾಡಬೇಕಾಗುತ್ತದೆ. ತಾವು ಅದನ್ನು ಮಾಡುತ್ತಿರೆಂದು ನಾನು ತಿಳಿದುಕೊಂಡಿದ್ದೇನೆ. ಸುಮಾರು ಇಪ್ಪತ್ತು ವರ್ಷಗಳಲ್ಲಿ ಎಸ್,ಸಿ/ಎಸ್. ಟಿ. ಯವರಿಗೆ ಹಣ ಸಾಲದಲ್ಲಿ ಎಷ್ಟು ಕೊಟ್ಟಿದ್ದೀರಿ, ಸಹಾಯಧನದಲ್ಲಿ ಎಷ್ಟು ಕೊಟ್ಟಿದ್ದೀರಿ. ಅದು ಎಷ್ಟರಮಟ್ಟಿಗೆ ಸದುಪಯೋಗ ಆಗಿದೆ ಎಂಬುದನ್ನು ತಾವು ನೋಡಬೇಕಾಗುತ್ತದೆ. ಇಲ್ಲಿ ಏನಾಗಿದೆ ಎಂದರೆ ಇದು ಒಂದು ರೀತಿಯ ಫ್ಯಾಷನ್ ಆಗಿದೆ. ಎಸ್.ಸಿ/ಎಸ್.ಟಿ. ಗ್ರಾಂಟ್ ಎಂದರೆ ಆ ಜನಾಂಗದ ಅಭ್ಯುದಯವಾಗಬೇಕು ಎಂಬ ನಿರೀಕ್ಷೆ ಏನಿದೆಯೋ ಆ ನಿರೀಕ್ಷೆ ಆ ಮಟ್ಟಕ್ಕೆ ಜನರೂ ಕೂಡ ಸದುಪಯೋಗ ಮಾಡಿಕೊಳ್ಳಲು ಮುಂದಕ್ಕೆ ಬರುತ್ತಾ ಇಲ್ಲ. ಆ ದೃಷ್ಟಿಯಿಂದ ಇವತ್ತು ತಾವು ಮಾಡಿರುವಂತಹ ಸಹಾಯ ನಿಜಕ್ಕೂ ಬಡವರಿಗೆ ಮುಟ್ಟಿದೆಯೋ ಇಲ್ಲವೋ ಅಥವಾ ನಿಜವಾಗಲೂ ಅವರಿಗೆ ಅದು ಸಾರ್ಥಕವಾಗಿದೆಯೋ ಇಲ್ಲವೋ ಎಂಬುದನ್ನು ನೋಡಬೇಕು ಅದು ಸಾರ್ಥಕವಾಗಿರದಿದ್ದರೆ ಅದರಲ್ಲಿ ಏನಾದರೂ ಲೋಪದೋಷಗಳು ಇದೆಯೋ ಏನೋ ಎಂಬುದನ್ನು ತಾವು ಪರೀಕ್ಷೆ ಪ್ರತಿಯೊಂದು ಪರೀಕ್ಷೆ ಮಾಡಿದರೆ ಗೊತ್ತಾಗುತ್ತದೆ. ಆದರೆ ಇದು ಶೇ.50 ರಷ್ಟು ಕೂಡ ಇವತ್ತು ಎಸ್.ಸಿ, ಎಸ್.ಟಿ.ಯವರಿಗೆ ಹಿಂದುಳಿದ ಸಮಾಜದವರಿಗೆ ಯಾರಿಗೆ ಆಸವಲತ್ತುಗಳು ತಲುಪಬೇಕಾಗಿತ್ತೋ ಅವರಿಗೆ ತಲುಪಿಲ್ಲವೆಂದು ಬಹಳ ವಿಷಾದದಿಂದ ನಿರ್ದಾಕ್ಷಿಣ್ಯವಾಗಿ ಮತ್ತು ನೊಂದು ಮನಸ್ಸಿನಿಂದ ಹೇಳಬೇಕಾಗುತ್ತದೆ. ಅದಕ್ಕೆ ಹತ್ತಾರು ಕಾರಣಗಳು ಇರಬಹುದು, ಅದಕ್ಕೆ ಅಧಿಕಾರಿಗಳು, ಬ್ಯಾಂಕಿನ ಸಿಬ್ಬಂದಿಗಳು, ನಾನ್ ಅಫಿಷಿಯಲ್ ಮೆಂಬರಗಳು ಕಾರಣವಿರಬಹುದು. ಒಟ್ಟಾರೆ ಅದಕ್ಕೆ ಯಾರೇ ಕಾರಣವಿರಲಿ ಅವರಿಗೆ ಈ ಯೋಜನೆ ಮುಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲವೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಈ ಯೋಜನೆಯ ಸಫಲತೆ ಆ ಜನರಿಗೆ ಮುಟ್ಟಬೇಕೆಂದರೆ ನಿಜವಾಗಲೂ ಆ ಜನಾಂಗದವರು ಅಭಿವೃದ್ಧಿಯಾಗಬೇಕೆಂದರೆ ಆ ಯೋಜನೆಯ ಮುಖಾಂತರ ಒಳ್ಳೆಯದಾಗಬೇಕಾದರೆ ಇವತ್ತು ಸರ್ಕಾರದಲ್ಲಿರುವಂತಹ ತಾವುಗಳು ಮನಸ್ಸು ಮಾಡಿ ಅವರಿಗೆ ಸಿಗುವಂತಹ ಸಹಾಯವೇನು, ಹಾಗೂ ಏನೇನು ಕಾರ್ಯಕ್ರಮಗಳು ಹಮ್ಮಿಕ್ರೊಂಡರೆ ಅವರಿಗೆ ಸಹಾಯವಾಗುತ್ತದೆ ಎಂಬುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ನಾನು ಕಳಕಳಿಯಿಂದ ತಮ್ಮಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಯವರಾದ ಹೆಚ್.ಡಿ. ದೇವೇಗೌಡರನ್ನು ಅಭಿನಂದಿಸುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪರಿಶಿಷ್ಟಜಾತಿ

ಮತ್ತು ಪರಿಶಿಷ್ಟಪಂಗಡದವರ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಸ್ವಾತಂತ್ರ್ಯ ಸಿಕ್ಕು ಇಷ್ಟು ವರ್ಷಗಳಾದರೂ ಈ ಜನಾಂಗದವರಿಗೆ ಎಷ್ಟರಮಟ್ಟಿಗೆ ಸಹಾಯ ಸವಲತ್ತುಗಳು ಮುಟ್ಟಿದೆ ಎಂಬ ಮಾತನ್ನು ಹೇಳಿದ್ದಾರೆ. ಇದಕ್ಕೆ ಕಾರಣೀಭೂತರು ಅವರು ಎಂದು ಹೇಳುವುದಕ್ಕಾಗುವುದಿಲ್ಲ, ನಾವು ಎಂದೂ ಹೇಳುವುದಕ್ಕಾಗುವುದಿಲ್ಲ. ಆದರೆ ಸರ್ಕಾರದಲ್ಲಿ ಇರುವಂತಹ ಯೋಜನೆ ಏನಿದೆ, ಆ ಯೋಜನೆ ಅಷ್ಟೊಂದು ಸರಿಯಾಗಿಲ್ಲವೆಂದು ಭಾವಿಸಿಕೊಂಡು ಈ ಸದನದಲ್ಲಿ ಸುಮಾರು ಸಲ ಚರ್ಚೆಯಾದ ಮೇಲೆ ಈ ಯೋಜನೆಯಲ್ಲಿ ಬದಲಾವಣೆಯನ್ನು ಮಾಡಲು ಚಿಂತನೆಯನ್ನು ಮಾಡುತ್ತಿದ್ದೇವೆ. ಹಿಂದೆ ಕೊಟ್ಟಿರುವಂತಹ ಸಹಾಯ, ಸವಲತ್ತುಗಳು ಎಷ್ಟರಮಟ್ಟಿಗೆ ಮುಟ್ಟಿದೆ ಎನ್ನುವಂತಹ ಚಿಂತನೆಯಲ್ಲಿ ಇಡೀ ದೇಶದಲ್ಲೇ ಮೊಟ್ಟ ಮೊದಲನೆಯದಾಗಿ ಐತಿಹಾಸಿಕವಾಗಿ ನಿರ್ಣಯ ನಮ್ಮ ಸರ್ಕಾರದಲ್ಲಿ ಆಗಿದೆ. ಸೋಷಿಯಲ್ ಏಕನಾಮಿಕ್ ಸರ್ವೆ ನವೆಂಬರ್ ಒಂದರಿಂದ ಅದನ್ನು ಮಾನ್ಯ ಮುಖ್ಯಮಂತ್ರಿಯವರು ಲಾಂಚ್ ಮಾಡಿದ್ದಾರೆ. ಈಗ ಶೇ. 90ರಷ್ಟು ಸಮೀಕ್ಷೆ ಮುಗಿದಿದೆ ಏಪ್ರಿಲ್ 30ರ ಒಳಗೆ ಈ ಸಮೀಕ್ಷೆ ಮುಗಿಯುವುದು. ಈ ಸಮಾಜದವರಿಗೆ ಎಷ್ಟರಮಟ್ಟಿಗೆ ಸಹಾಯ ಸವಲತ್ತುಗಳು ಮುಟ್ಟಿದೆ ಎಷ್ಟರಮಟ್ಟಿಗೆ ಜನರಿಗೆ ಅನುಕೂಲವಾಗಿದೆ, ಆ ಜನರ ಸ್ಥಿತಿಗತಿಗಳು ಏನು ಎಂಬ ಬಗ್ಗೆ ಸಮಗ್ರವಾದಂತಹ ವರದಿ ಬರುತ್ತದೆ. ಅದು ಬಂದಮೇಲೆ ಪುನಃ ಇಲ್ಲಿ ಎಲ್ಲರೂ ಚಿಂತನೆ ಮಾಡಿ ಈ ಯೋಜನೆಯ ನಿರೂಪಣೆ ಮಾಡಬೇಕೆನ್ನುವ ಬಗ್ಗೆ ನಾವೆಲ್ಲರೂ ಚಿಂತನೆ ಮಾಡೋಣವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಯೋಜನೆಯಲ್ಲಿ ಕೆಲವು ಬದಲಾವಣೆ ಮಾಡುವ ಬಗ್ಗೆ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಕೂಡ ಸಲಹೆ ಏನು ಎಂದರೆ 1980ರಿಂದ ನಾಗರಹೊಳೆ ಅರಣ್ಯದಲ್ಲಿರುವಂತಹ ಗಿರಿಜನರಿಗೆ ಸರ್ಕಾರದ ಯಾವುದೇ ಸೌಲಭ್ಯಗಳು ಸಿಕ್ಕಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಆ ಜನಾಂಗವು ಅಲ್ಲಿದೆ. ಅವರಿಗೆ ಅರಣ್ಯ ಕಾಯಿದೆಯ ಪ್ರಕಾರ ಅವರಿಗೆ ಸೌಲಭ್ಯ ಸಿಗುತ್ತಾ ಇಲ್ಲ. ಅದು ಅಡ್ಡಿಯಾಗುತ್ತಾ ಇದೆ. ಅವರಿಗೆ ಪರ್ಯಾಯವಾಗಿ ಪರಿಹಾರವನ್ನು ಕೊಡಬೇಕೆಂದು ಸರ್ಕಾರ ಚಿಂತನೆ ಮಾಡುತ್ತಾ ಇಲ್ಲ. ಸುಮಾರು 16 ವರ್ಷದಿಂದ ಸರ್ಕಾರದಿಂದ ಯಾವುದೇ ಒಂದು ಸೌಲಭ್ಯವನ್ನು ಆ ಜನಾಂಗದವರು ಪಡೆಯದೆ ಇವತ್ತು ಸಂಪೂರ್ಣವಾಗಿ ಶೋಷಿತರಾಗಿದ್ದಾರೆ. ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುವುದೆನೆಂದರೆ ನಾಗರಹೊಳೆಯ ಅರಣ್ಯ ಪ್ರದೇಶದಲ್ಲಿರುವಂತಹ ಗಿರಿಜನರನ್ನು ಏನಾದರೂ ಸ್ಥಳಾಂತರ ಮಾಡಬೇಕೆಂದು ಇದ್ದರೆ, ಮಾಡಿ, ಬೇಡವೆಂದು ಹೇಳುವುದಿಲ್ಲ. ಆದರೆ ಈ ಸ್ಥಳಾಂತರ ಮಾಡುವಂತಹ ವ್ಯವಸ್ಥೆ ಎಷ್ಟು ವರ್ಷದಿಂದ ಮುಂದೆ ಮುಂದಕ್ಕೆ ಹೋಗುತ್ತಿದೆ ಎಂದರೆ ಅದು ಯಾವಾಗ ಸಂಪೂರ್ಣವಾಗುತ್ತದೆ ಎಂಬ ಬಗ್ಗೆ ಸಮಗೆ ಸರಿಯಾದಂತಹ ಅಂದಾಜು ಸಿಗುತ್ತಾ ಇಲ್ಲ. ಈ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ ಒಂದು ಸಾರಿ ನೀವು ಅಲ್ಲಿಗೆ ಹೋಗಿ ನೋಡಿದರೆ ಆ ಜನಾಂಗದವರು ಎಷ್ಟು ವರ್ಷದಿಂದ ಶೋಷಿತರಾಗಿದ್ದಾರೆ ಎಂಬುದು ಗೊತ್ತಾಗುತ್ತದೆ, ಅವರು ಬಡತನ ರೇಖೆಯಿಂದ ಮೇಲೆ ಬರುವಂತಹ ವ್ಯವಸ್ಥೆಗೆ ನೀವು ಈಗ ಪರಿಷ್ಕಾರ ಮಾಡಿರುವಂತಹ ಸಂದರ್ಭದಲ್ಲಿ ಈ ಅರಣ್ಯ

ಕಾಯಿದೆ ಅಡ್ಡಿಬಂದರೂ ಅವರನ್ನು ಸ್ಥಳಾಂತರ ಮಾಡುವವರೆಗೆ ಆ ಕಾಯಿದೆಯ ಉಪಯೋಗ ಅವರಿಗೆ ಸಿಗುವಂತೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಸಚಿವರಲ್ಲಿ ನಾನು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ 1986ರಲ್ಲಿ ಸರ್ಕಾರದ ಆದೇಶವಾದ ಮೇಲೆ ಹಿಂದುಳಿದ ಸಮಾಜದವರಿಗೆ ನೇಮಕಾತಿಯಾಗಲಿ, ಪ್ರಮೋಷನ್ ಕೊಡುವಂತಹ ವಿಚಾರದಲ್ಲಿ ಸರ್ಕಾರದ ಆಜ್ಞೆಯಾದ ಮೇಲೆ ಇದನ್ನು ನಾನು ತಮ್ಮನ್ನೇ ಕೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಬೋರ್ಡ್, ಎಷ್ಟು ಕಾರ್ಪೋರೇಷನ್ ಇದೆ ಅವೆಲ್ಲವೂ ಎಷ್ಟರಮಟ್ಟಿಗೆ ಕಾಯಿದೆಯನ್ನು ಜಾರಿಗೆ ತಂದಿದ್ದಾರೆ ಎಂಬುದನ್ನು ತಾವು ಎಲ್ಲಾ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿದರೆ ಒಳ್ಳೆಯದು. 1986ರಿಂದ ಆಗಿರುವಂತಹ ಆದೇಶವನ್ನು ಕಾರ್ಪೋರೇಷನ್‌ಗಳು ಮತ್ತು ಬೋರ್ಡ್‌ನವರು ನಿಯಮವನ್ನು ಉಲ್ಲಂಘನೆ ಮಾಡಿರುವಂಥಾದ್ದನ್ನು ಸಂಬಂಧಪಟ್ಟ ಮಂತ್ರಿಗಳಾಗಿ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿದರೆ ಗೊತ್ತಾಗುತ್ತದೆ. ಯಾವ ಒಬ್ಬ ಅಧಿಕಾರಿಯೂ ಕೂಡ ಮನಸ್ಸು ಮಾಡುವುದಿಲ್ಲ. ಇದಕ್ಕೆ ಕಾರಣವೆಂದರೆ ಅವರಿಗೆ ನಿಜವಾಗಿಯೂ ಆಸಕ್ತಿ ಇರಲಾರದಂಥ ಸಂದರ್ಭಗಳು ಅನೇಕ ಇದೆ. ಆ ದೃಷ್ಟಿಯಿಂದ ನಾನು ನಿಮಗೆ ಹೇಳುತ್ತೇನೆ. ಇಲಾಖೆಯ ಕಾರ್ಯದರ್ಶಿಗಳು ಇರುತ್ತಾರೆ. ಅವರು ತಮ್ಮ ಇಲಾಖೆಯಲ್ಲಿರುವ ಅನೇಕ ವಿಷಯಗಳನ್ನು ಚರ್ಚೆ ಮಾಡಬಹುದು. ಅದರ ಜೊತೆಗೆ ಈ ಕಾರ್ಪೋರೇಷನ್ ಬೋರ್ಡ್ಸ ವಿಚಾರದಲ್ಲಿ ಎಷ್ಟು ವಿಚಾರಗಳನ್ನು ಅವರು ಹಮ್ಮಿಕೊಂಡಿದ್ದಾರೆ. ಯಾವ್ಯಾವ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಲ್ಲಿ ಅವರು ವಿಫಲರಾಗಿದ್ದಾರೆ. ಈ ವಿಷಯದಲ್ಲಿ ಯಾರು ವಿಫಲರಾಗಿದ್ದಾರೆ, ಅವರ ಮೇಲೆ ಯೋಗ್ಯವಾದಂತಹ ಕ್ರಮವನ್ನು ತೆಗೆದುಕೊಂಡರೆ ತಾವು ಮಂತ್ರಿಯಾಗಿದ್ದಕ್ಕೂ ಸಾರ್ಥಕವಾಗುತ್ತದೆ. ಆ ದೃಷ್ಟಿಯಿಂದ ತಾವು ವಿಚಾರ ಮಾಡಬೇಕಾಗುತ್ತದೆ. ಇವತ್ತು ಮಾನ್ಯ ದೇವೇಗೌಡರನ್ನು ಪ್ರಶಂಸೆ ಮಾಡುತ್ತೇನೆ. ಯಾವ ವಿಚಾರದಲ್ಲಿ ಎಂದರೆ ಇವತ್ತು ಅವರು ಮುಂದುವರೆದ ಜನಾಂಗದಿಂದ ಬಂದರೂ ಕೂಡ ಹಿಂದುಳಿದ ಹೇಳುವುದಾದರೆ ಮಾನ್ಯ ಜಾಲಪ್ಪನವರು, ಸಿಂಧ್ಯರವರು, ಇವತ್ತು ಹಣಕಾಸಿನ ಮಂತ್ರಿಯಾಗಿರುವ ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ರಮೇಶ್ ಜಿಗಜಿಣಗಿಯವರು ಇವರಿಗೆಲ್ಲಾ ಮಂತ್ರಿಗಳಾಗಿ ಕೊಟ್ಟಿರುವಂಥಾದ್ದು ಯಾವ ದೃಷ್ಟಿಕೋನವನ್ನು ಇಟ್ಟುಕೊಂಡು ಕೊಟ್ಟಿದ್ದಾರೆಂದರೆ ಈ ಹಿಂದುಳಿದ ಜನಾಂಗ, ಆ ಸಮಾಜದವರ ಅಭ್ಯುದಯ ಇವರಿಂದ ಆಗಲಿ ಎಂದು ಕೊಟ್ಟಿದ್ದಾರೆ. ಆ ದೃಷ್ಟಿಯಲ್ಲಿ ಅವರು ಕಾರ್ಯೋನ್ಮುಖರಾಗಿ ಆ ಜನಾಂಗಕ್ಕೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ಅವರು ಮುಂದೆ ಬರುತ್ತಾರೆ ಎಂಬ ಆಶಯವನ್ನು ನಾನು ಇಟ್ಟುಕೊಂಡಿದ್ದೇನೆ. ಆದರೆ ದುರದೃಷ್ಟವಶಾತ್ ದೇವರು ಕೊಟ್ಟರೂ ಪೂಜಾರಿ ಕೊಡ ಎನ್ನುವಂತಹ ರೀತಿಯಲ್ಲಿ ನಡೆದುಕೊಂಡಂತೆ ಆಗುತ್ತದೆ. ಈಗ ಮೇಟಿಯವರು ಹಿಂದುಳಿದ ಸಮಾಜದಿಂದ ಬಂದಿರತಕ್ಕಂಥವರು ಅವರು ಯಾವುದೇ ಹಿತವನ್ನು ಕಾಪಾಡತಕ್ಕಂಥ ವಿಚಾರದಲ್ಲಿ ಅವರು ಮುಂದೆ ಬಂದು ತಮ್ಮ ಇಲಾಖೆಯಮಟ್ಟಿಗೆ ಅವರ ರಕ್ಷಣೆಯ ಜೊತೆಗೆ ಅನೇಕ ಬೇರೆ ಬೇರೆ ಇಲಾಖೆಗಳಲ್ಲೂ

ಕೂಡ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಿದ್ದೇ ಆದರೆ ಬಹುಶಃ ಅವರೂ ಕೂಡ ತಮ್ಮ ಒಂದು ಕರ್ತವ್ಯವನ್ನು ನಿರ್ವಹಿಸಿದ್ದಾರೆಂದು ನಾನು ಅಭಿಮಾನದಿಂದ ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತು ಅನೇಕ ವಿಚಾರಗಳನ್ನು ಹೇಳವುದಕ್ಕೆ ನನಗೆ ಇವತ್ತು ತಾವೇನು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ, ಅದಕ್ಕೆ ತಮ್ಮನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಸುರೇಶ್ ಕುಮಾರ್ ಹಾಗೂ ಶ್ರೀ ಬಿ.ಬಿ. ಶಿವಪ್ಪನವರು ತಮ್ಮಿಬ್ಬರಲ್ಲಿ ಮೊದಲು ಯಾರು ಮಾತನಾಡುತ್ತೀರಿ? ಶಿವಪ್ಪನವರು ಮಾತನಾಡುತ್ತಾರೆಯೇ? ವಾಟಾಳನಾಗರಾಜರವರೇ, ಶಿವಪ್ಪನವರು ಮಾತನಾಡಿದ ಮೇಲೆ ತಾವು ಮಾತನಾಡಬೇಕಾಗುತ್ತದೆ. ನಾನು ಅವಕಾಶ ಕೊಡುತ್ತೇನೆ, I am covering all parties.

ಶ್ರೀ ಎಲ್. ಆರ್. ಶಿವರಾಮೇಗೌಡ : ಸಭಾಧ್ಯಕ್ಷರೆ, ಅಸೋಸಿಯೇಟ್ಸ್ ಮೆಂಬರ್‌ಗಳ ಪೈಕಿ ನಮ್ಮಲ್ಲಿ ಯಾರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ?

ಅಧ್ಯಕ್ಷರು : ನೀವು ಅಸೋಸಿಯೇಟ್ ಅಥವಾ ಮರ್ಜ್ ಆಗಿಬಿಟ್ಟಿದ್ದೀರಾ ಎಂಬುದು ನನಗೆ ಮನದಟ್ಟಾಗಬೇಕಲ್ಲಾ!

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ದಯಮಾಡಿ ಹೇಳಿಬಿಟ್ಟರೆ, ಮಾತನಾಡುವುದಕ್ಕೆ ನಾನು ತಯಾರಾಗುತ್ತೇನೆ.

ಅಧ್ಯಕ್ಷರು : ನನಗೆ ನೀವು ಅಸೋಸಿಯೇಟ್ ಮೆಂಬರ್ ಎಂದು ಅನ್ನಿಸಿದಾಗ ನಿಮ್ಮನ್ನು ಕರೆಯುತ್ತೇನೆ, ಮರ್ಜ ಆಗಿಬಿಟ್ಟಿದ್ದೀರೆಂದರೆ ವರದೇಗೌಡರ ಕೋಟದಲ್ಲಿ ಕೊಡುತ್ತೇನೆ, ನೋಡೋಣ. Let me think over the matter.

+ ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಅನೇಕ ಶಾಸಕರುಗಳು ಮಾತನಾಡುವವರು ಇರುವುದರಿಂದ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿ ನನ್ನ ಮಾತುಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ರಾಜ್ಯಪಾಲರ ಭಾಷಣದ ಪ್ರತಿಯನ್ನು ನಾವು ನೋಡಿದ್ದೇವೆ. ಬಹುತೇಕ ಈ ಪುಸ್ತಕದಲ್ಲಿರತಕ್ಕಂಥ ಅನೇಕ ವಿಚಾರಗಳನ್ನು ಸುಮಾರು ನಲವತ್ತು ನಾಲ್ಕು ಪುಟಗಳಲ್ಲಿ ಮುದ್ರಿಸಿ ಹಾಕಿದ್ದಾರೆ, ಇದರಲ್ಲಿ ಬಹುತೇಕ ಅರ್ಧಕ್ಕಿಂತ ಹೆಚ್ಚಿನ ಭಾಗ ಭರವಸೆಗಳಿಂದ ಕೂಡಿದೆ. ಅರ್ಧಭಾಗ, ಯೋಜಿಸಲಾಗಿದೆ, ಚಿಂತನೆ ಮಾಡುತ್ತಿದ್ದೇವೆ, ಕಾರ್ಯರೂಪಕ್ಕೆ ತರುತ್ತೇವೆ. ಈ ರೀತಿಯ ಭರವಸೆಗಳಿಂದ ಕೂಡಿದ್ದರೆ, ಇನ್ನು ಉಳಿದ ಅರ್ಧ ಭಾಗದಲ್ಲಿ ಒಂದೂವರೆ ವರ್ಷದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಒಂದಲ್ಲ ಒಂದು ಜಾಗದಲ್ಲಿ ಭಾಷಣ ಮಾಡಿರತಕ್ಕಂಥದ್ದು, ಪತ್ರಿಕೆಗಳಲ್ಲಿ ಬಂದಿರತಕ್ಕ ಅನೇಕ ವಿಚಾರಗಳು ಇದರಲ್ಲಿ ಅಡಗಿದೆ. ನಮ್ಮ ರಾಜ್ಯಾಂಗದತ್ತವಾಗಿ ರಾಜ್ಯಪಾಲರ ಭಾಷಣದಲ್ಲಿ ಅಡಕವಾಗಿರತಕ್ಕಂಥದ್ದು, ಬಹಳ ಮುಖ್ಯವಾಗಿ ಸರ್ಕಾರದ ನಿಲುವು ಮತ್ತು ಸರ್ಕಾರ ಹಾಕಿಕೊಳ್ಳತಕ್ಕಂಥ ಯೋಜನೆಗಳ ಬಗ್ಗೆ ಪ್ರಸ್ತಾಪವಾಗತಕ್ಕಂಥದ್ದು. ಇದು ಅತೀ

ಪ್ರಮುಖವಾಗಿರತಕ್ಕ ಒಂದು ಮಾಧ್ಯಮ. ಇದನ್ನು ಅಷ್ಟು ತರಾತುರಿಯಲ್ಲಿ, ಯಾವುದೇ ಇದೊಂದು ನಮ್ಮ ಅಜೆಂಡಾದಲ್ಲಿದೆ, ಇದೊಂದು ಕಾರ್ಯಕ್ರಮವನ್ನು ಮಾಡಲೇಬೇಕು, ವರ್ಷದ ಪ್ರಾರಂಭದಲ್ಲಿ ರಾಜ್ಯಪಾಲರ ಭಾಷಣವನ್ನು ಅವರ ಬಾಯಿಯಲ್ಲಿ ಹೇಳಿಸುವುದು, ಇದೊಂದು ಪದ್ಧತಿ. ಈ ಪದ್ಧತಿಯ ಆಧಾರದ ಮೇಲೆ ಈ ರೀತಿಯ ಭಾಷಣವನ್ನು ರಾಜ್ಯಪಾಲರಿಂದ ಮಾಡಿಸತಕ್ಕಂಥದ್ದು ಬಹುಶಃ ಅಷ್ಟು ಸರಿಯಲ್ಲವೆಂದು ನನ್ನ ಅನಿಸಿಕೆ. ಕಾರಣವೇನೆಂದರೆ, ನಮ್ಮ ರಾಜ್ಯಾಂಗದಲ್ಲಿ ರಾಜ್ಯಪಾಲರಿಗೆ ಉನ್ನತವಾದಂಥ ಸ್ಥಾನಮಾನವನ್ನು ಕಲ್ಪಿಸಿದ್ದಾರೆ. ಅವರು ಮಾಡಿರತಕ್ಕ ಈ ಭಾಷಣ, ಅವರಿಂದ ಮಾಡಿಸಿರತಕ್ಕ ಈ ಭಾಷಣ ಏನಿದೆ ಅದರ ಬಗ್ಗೆ ನಾವು ಇಲ್ಲಿ ನಿಂತು ಚರ್ಚೆ ಮಾಡಿ, ಅದರ ಲೋಪದೋಷಗಳನ್ನು ಎತ್ತಿ ಮಾತನಾಡತಕ್ಕ ಒಂದು ವ್ಯವಸ್ಥೆ ಏನಿದೆ ಅದಕ್ಕೆ ಅನುಗುಣವಾಗಿರತಕ್ಕಂಥ ವಿಚಾರಗಳು ಇದರಲ್ಲಿ ಅಡಗಿರಬೇಕು. ಏನೋ ಅವರು ಸೇರಿಸಿದ್ದಾರೆ, ನಾವು ಅದರ ಬಗ್ಗೆ ಮಾತನಾಡಿದ್ದೇವೆ, ಇದು ಆಗಬಾರದು. ಈ ರೀತಿ ತರಾತುರಿಯಲ್ಲಿ ಈ ರಾಜ್ಯಪಾಲರ ಭಾಷಣದ ಬಗ್ಗೆ ನಾವು ಸದನದಲ್ಲಿ ಕಾರ್ಯಕಲಾಪಗಳನ್ನು ಹಾಕಬಾರದು ಎಂದು ನಾನು ಪ್ರಥಮವಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಾ ಅನೇಕ ವಿಚಾರಗಳನ್ನು ಇದರ ಬಗ್ಗೆ ಭಾರಿ ದಿವಸಗಳಿಂದ ಮಾತನಾಡಬೇಕೆಂದು ಕಾಯುತ್ತಿದ್ದೆ. ಭಾರಿ ವಿಚಾರಗಳನ್ನು ಹಾಕಿಕೊಂಡಿದ್ದೆ, ಸಮಯವಿಲ್ಲ. ಇವತ್ತು ಏನೋ ಅಧ್ಯಕ್ಷರು ದೊಡ್ಡ ಮನಸ್ಸು ಮಾಡಿ ಸದನದ ಕಾರ್ಯಕಲಾಪವನ್ನು ಮತ್ತೊಂದು ದಿವಸ ವಿಸ್ತರಿಸಿರುವುದರಿಂದ ನಮಗೂ ನಾಲ್ಕೈದು ನಿಮಿಷ ಮಾತನಾಡುವುದಕ್ಕೆ ಸಮಯ ಸಿಕ್ಕಿದೆ.

ಅಧ್ಯಕ್ಷರು : ನಮ್ಮದೇನೂ ದೊಡ್ಡ ಮನಸ್ಸು ಇಲ್ಲ. ಸುಮಾರು ಜನ ದೊಡ್ಡವರೆಲ್ಲಾ ಇಲ್ಲದೇ ಇರುವುದರಿಂದ ನಿಮಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ. ನನ್ನದೇನೇ ಇಲ್ಲ, ನನ್ನದು ಯಾವಾಗಲೂ ಒಂದೇ ಮನಸ್ಸು.

ಶ್ರೀ ಬಿ.ಬಿ. ಶಿವಪ್ಪ : ಈ ಸಾಧನೆಗಳಲ್ಲಿ ಒಂದು ಸಾಧನೆಯನ್ನು ತಾವು ಮೊದಲನೆಯ ಪುಟದಲ್ಲಿ ತೋರಿಸುತ್ತಿದ್ದೀರಿ. ಜಿಲ್ಲೆಗಳಲ್ಲಿ ಜನತಾದರ್ಶನ ಕಾರ್ಯಕ್ರಮವನ್ನು ಏರ್ಪಡಿಸಿರುವುದರಿಂದ ಸರ್ಕಾರವನ್ನು ಜನರ ಮನೆಯ ಬಾಗಿಲಿಗೆ ಕೊಂಡೈದಂತಾಗದೆ ಹಾಗೆಯೇ ಜನರಿಂದ ಅತ್ಯುತ್ತಮ ಪ್ರತಿಕ್ರಿಯೆ ಬಂದಿದೆ ಎಂದು ಈ ರೀತಿಯಾಗಿ ಬರುತ್ತಾ ಇದೆ. ಇದರ ಬಗ್ಗೆ ಹಿಂದೆಯೂ ಕೂಡ ಪ್ರಸ್ತಾಪ ಮಾಡಿದ್ದೀರಿ. ಇವತ್ತು ಕೂಡ ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಒಂದೆರಡು ಉದಾಹರಣೆಗಳನ್ನು ನಿಮಗೆ ಕೊಡಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಜಿಲ್ಲೆಗೂ ಕೂಡ ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ಬಂದಿದ್ದರು.

ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶರವರು ಅವರ ಜೊತೆ ಇದ್ದರು, ನಮ್ಮ ಗೃಹ ಮಂತ್ರಿಗಳು ಬಂದಿದ್ದರು, ಅವರು ಇವತ್ತು ಇಲ್ಲಿ ಇಲ್ಲ. ಬಂದ ನಂತರ ಕೆಲವು ಆಶ್ವಾಸನೆಗಳನ್ನು ತಾವು ಕೊಡುತ್ತೀರಿ, ಸಭೆಯಲ್ಲೇ ಹೇಳುತ್ತೀರಿ, ಕೆಲವು ಅರ್ಜಿಗಳಿಗೆ ಅಲ್ಲೇ ಉತ್ತರ ಕೊಡುತ್ತೀರಿ, ಇನ್ನೂ ಕೆಲವು ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಡಲಾಗಿದೆ ಎಂದು ಒಂದು ರಸೀದಿಯನ್ನು

ಕೊಡುತ್ತೀರಿ. ಆಮೇಲೆ ಏನಾಯಿತು ಎನ್ನುವುದರ ಬಗ್ಗೆ ಯಾರೂ ಚಿಂತನೆ ಮಾಡಲಿಲ್ಲ.

ಮಾನ್ಯ ಉಪಾಧ್ಯಕ್ಷರು (ಶ್ರೀ ಎಂ. ಎಸ್. ಪಾಟೀಲ್) ರವರು, ಪೀಠವನ್ನು ಅಲಂಕರಿಸಿದ್ದರು)

ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾನೂರು, ಅಲ್ಲಿಯ ಸಹಾಯಕ ಶಿಕ್ಷಣ ವಿದ್ಯಾಧಿಕಾರಿಯ ಮೇಲೆ ಸುಮಾರು ಪುಕಾರು ಇದೆ. ನೂರಾರು ಪುಕಾರುಗಳು ಆತನ ಮೇಲೆ ಎಲ್ಲಾ ಕಡೆ ಸುತ್ತಿ ಸುತ್ತಿ ಎಲ್ಲಾ ಇಲಾಖೆಗಳ ಹೋಗಿ, ಅವನ ಬಗ್ಗೆ ಈ ಮುಖ್ಯಮಂತ್ರಿಗಳ ಜನತಾದರ್ಶನದಲ್ಲೂ ಕೂಡ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಈ ಅರ್ಜಿಗೆ ಒಂದು ಉತ್ತರ ಬರುತ್ತದೆ. ಏನು ಬರುತ್ತದೆಂದರೆ ನೀವು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿ ಒಂದು ಉತ್ತರ ಬರುತ್ತದೆ. ಏನು ಬರುತ್ತದೆಂದರೆ ನೀವು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿ ದೂರು ಈ ಕಛೇರಿ ತಲುಪಿದೆ. ಇದನ್ನು ಬೆಂಗಳೂರು ಸಾರ್ವಜನಿಕ ಶಿಕ್ಷಣ ಆಯುಕ್ತರಿಗೆ ರವಾನಿಸಲಾಗಿದೆ ಎಂದು ದಿನಾಂಕ: 27-11-1995 ರಲ್ಲಿ ಉತ್ತರ ಬಂತು. ಇದುವರೆಗೆ (2) ಅಲ್ಲಿಗೆ ತಲುಪಿದ ನಂತರ ಅದು ಏನಾಯಿತೋ ಗೊತ್ತಾಗಲಿಲ್ಲ. ಆ ವಿದ್ಯಾಧಿಕಾರಿ ಮಾಡಬಾರದಂತಹ ಅನಾಹುತಗಳನ್ನು ಮಾಡಿ, ಇಡೀ ಆ ಕ್ಷೇತ್ರದಲ್ಲಿ ಆ ವಿದ್ಯಾ ಇಲಾಖೆಯ ಹೆಸರನ್ನೇ ಕೆಡಿಸಿ, ಅದರ ಘನತೆ ಗಾಂಭೀರ್ಯತೆಯನ್ನು ತೆಗೆದು ಹಾಕಿ ಇನ್ನೊಂದು ನಾಲ್ಕೈದು ತಿಂಗಳಲ್ಲಿ ನಿವೃತ್ತನಾಗಲಿದ್ದಾನೆ, ಇಲ್ಲಿಯ ವರೆಗೆ ಆತನ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ. ಇದು ಮುಖ್ಯಮಂತ್ರಿಗಳಿಗೆ ಕೊಟ್ಟಂತಹ ಅರ್ಜಿಗೆ ಬಂದಂಥ ಉತ್ತರ. ಅದಕ್ಕಿಂತ ಹಿಂದೆ ಎಲ್ಲಾ ಇಲಾಖೆಗೆ ಸಾಕಷ್ಟು ಕೊಟ್ಟಾಗಿದೆ. ಮುಖ್ಯಮಂತ್ರಿಗಳಿಗೂ ಬಂದಿದೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಬಂದಿದೆ, ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ.

ಇದೇ ರೀತಿಯ ಮತ್ತೊಂದು ಪತ್ರ ಮಾಜಿ ಮುಖ್ಯಮಂತ್ರಿಗಳಾದ ಮೊಯಿಲಿ ಸಾಹೇಬರು ನನಗೆ ಒಂದು ಪತ್ರ ಬರೆದರು. ಇವತ್ತು ನಾನು ನಿಮ್ಮ ಸರ್ಕಾರದ್ದನ್ನು ಹೇಳುವುದು. ಸರ್ಕಾರದ ಈ ನೀತಿ ಏನಿದೆ, ಮಂತ್ರಿಗಳಿಂದ ಅರ್ಜಿ ಹೋದ ತಕ್ಷಣ ಅಧಿಕಾರಿಗಳು ಏನು ಮಾಡುತ್ತಾರೆ? ಇದರ ಬಗ್ಗೆ ಒಂದು ಗಮನವನ್ನು ಯಾರಾದರೂ ಇಡಬೇಕು ತಾನೇ? ತಾವು ದಿನಾಂಕ: 8-1-1994 ರಂದು ಬರೆದ ಪತ್ರ ತಲುಪಿದೆ ಎಂದು ತಿಳಿಸಲು ಮತ್ತು ಈ ವಿಷಯವನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಕಾರ್ಯದರ್ಶಿಗಳು-1 ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಇವರನ್ನು ಕೋರಲಾಗಿದೆ ಎಂದು ಈ ಪತ್ರವನ್ನು ದಿನಾಂಕ: 23-9-1994 ರಂದು ಬರೆಯಲಾಗಿದೆ. ಅದರ ಮೇಲೆ ಅವರಿಗೆ ಏನಾಯಿತೆಂದು ನಾವು ಮೂರ್ನಾಲ್ಕು ಪತ್ರಗಳನ್ನು ಬರೆದರೂ ಸಹ ಪತ್ರ ತಲುಪಿತು ಎಂದೂ ಕೂಡ ಉತ್ತರ ಬರುವುದಿಲ್ಲ. ಅಂದ ಮೇಲೆ ಅಧಿಕಾರಿಗಳು ಮಂತ್ರಿಗಳಿಂದ ಹೋದಂಥ ಆ ಪತ್ರಗಳಿಗೆ ಯಾವ ರೀತಿ ಸ್ಪಂಧಿಸುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಸಮಯವಿದ್ದರೆ ನೂರಾರು ಉದಾಹರಣೆಗಳನ್ನು ಕೊಡಬಲ್ಲೆ. ಹಿಂದೆ 1962-63 ಆ ಅವಧಿಯಲ್ಲಿ ದಿವಂಗತ ಸನ್ಮಾನ್ಯ ಕಂಠಿಯವರು ವಿದ್ಯಾಮಂತ್ರಿಗಳಾಗಿದ್ದರು. ಒಂದು ಘಟನೆಯನ್ನು ನಾನು ಇಲ್ಲಿ ಜ್ಞಾಪಕಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕೊಡಗಿನಲ್ಲಿ ಈ ಉಪಾಧ್ಯಾಯರುಗಳ ಮಾಸ್ ಟ್ರಾನ್ಸ್‌ಫರ್ಸ್ ಆಯಿತು, ಹೋಲ್‌ಸೇಲ್ ಟ್ರಾನ್ಸ್‌ಫರ್ಸ್ ಆಯಿತು. ದಕ್ಷಿಣ ಕೊಡಗಿನಿಂದ

ಉತ್ತರ ಕೊಡಗಿನಿಂದ ದಕ್ಷಿಣ ಕೊಡಗಿಗೆ ಸುಮಾರು ನೂರಾರು ಜನ ಉಪಧ್ಯಾಯರುಗಳ ವರ್ಗಾವರ್ಗಿಯಾಯಿತು. ಅವತ್ತು ಬಹುತೇಕ ನನ್ನ ಜೊತೆ ವಿದ್ಯಾಭ್ಯಾಸ ಮಾಡುತ್ತಿದ್ದಂಥ ಉಪಧ್ಯಾಯರುಗಳೆಲ್ಲಾ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡರು. ಕಂಠಿಯವರ ಹತ್ತಿರ ನಾವೊಂದು ನಿಯೋಗ ಬಂದೆವು. ಕಂಠಿಯವರ ಹತ್ತಿರ ನಿಯೋಗ ಬಂದಾಗ, ರಾತ್ರಿ ಅವರ ಮನೆಯಲ್ಲಿ ಹೋಗಿ ಭೇಟಿ ಮಾಡಿದಾಗ ಬೆಳಿಗ್ಗೆ ಹನ್ನೊಂದು ಗಂಟೆಗೆ ವಿಧಾನ ಸೌಧದ ಕಛೇರಿಗೆ ಬನ್ನಿ ಎಂದು ಹೇಳಿದರು. ಹನ್ನೊಂದು ಗಂಟೆಗೆ ವಿಧಾನಸೌಧಕ್ಕೆ ನಾನು ಬಂದೆ. ಸುಮಾರು ಒಂದೂವರೆ ಗಂಟೆಯವರೆಗೆ ಕುಳಿತುಕೊಂಡೆವು. ಕಂಠಿಯವರು ದರ್ಶನವಾಗಲಿಲ್ಲ, ಮನಸ್ಸಿಗೆ ನೋವಾಯಿತು. ನಮಗೆ ಬರುವುದಕ್ಕೆ ಹೇಳಿದರು, ನಮ್ಮನ್ನು ಕೂರಿಸಿಬಿಟ್ಟರು, ಏನು ಎಂದು ವಿಚಾರ ಮಾಡಲಿಲ್ಲ ಎಂದು ನಾವು ಅಂದುಕೊಂಡೆವು. ಬಂದ ಮೇಲೆ ಕೆಲಸವಾಗಬೇಕು, ಕಾಯ್ದುಕೊಂಡು ಕುಳಿತೆವು ಎಲ್ಲೋ ಮೀಟಿಂಗಗೆ ಹೋಗದ ಕಂಠಿಯವರು ಒಂದೂವರೆ ಗಂಟೆಗೆ ಬಂದರು, ಶಿವಪ್ಪನವರೇ ನಿಮ್ಮ ಕೆಲಸವಾಗಿದೆ ಹೋಗಿ ಎಂದರು. ಮತ್ತೆ ಇನ್ನೇನೂ ಹೇಳಲಿಲ್ಲ. ಹಾಗೆ ಹೇಳಿದರು ಮತ್ತೆ ಹೊರಟು ಹೋದರು. ನನಗೆ ತುಂಬಾ ನೋವಾಯಿತು, ಜೊತೆಯಲ್ಲಿ ಭಾರಿ ಜನ ಉಪಧ್ಯಾಯರುಗಳಿದ್ದರು, ಏನಪ್ಪ ನಮ್ಮನ್ನು ಈ ತರಹ ಉಪಚರಿಸಿದರು ಜೊತೆಗೆ ಮಂತ್ರಿಗಳು ಪರಿಚಯವೆಂದು ನಾನು ನಮ್ಮ ಸ್ನೇಹಿತರುಗಳನ್ನು ಕರೆದುಕೊಂಡು ಬಂದಿದ್ದೇನೆ. ಇದೊಂದು ತರಹ ಇನ್ಸಲ್ಟ ಆಯಿತಲ್ಲಾ ಎಂದು ಕೊಂಡು, ಸರಿ ಉಪಧ್ಯಾಯರುಗಳನ್ನು ಕರೆದುಕೊಂಡು ವಾಪಸ್ ಊರಿಗೆ ಹೋಗತಕ್ಕಂಥ ಕಾಲದಲ್ಲಿ ನನಗೆ ಆಶ್ಚರ್ಯವಾಗುತ್ತದೆ. ಕೊಡಗಿನ ಬಾರ್ಡರ್‌ನಲ್ಲಿ ಈ ವರ್ಗಾವಾಗಿರತಕ್ಕಂಥ ಉಪಧ್ಯಾಯರುಗಳನ್ನು ರಾತ್ರಿ ಸುಮಾರು ಎಂಟೂವರೆ - ಒಂಭತ್ತು ಗಂಟೆಯಲ್ಲಿ ನೂರಾರು ಜನ ಕಾದುನಿಂತಿದ್ದಾರೆ. ಇಷ್ಟು ಜನ ರಸ್ತೆಯಲ್ಲಿ ಏತಕ್ಕೆ ನಿಂತಿದ್ದಾರೆಂದು ನನಗೆ ಆಶ್ಯರ್ಯ. ನಮ್ಮ ಕಾರು ಹೋದ ತಕ್ಷಣ ವಿದ್ಯಾಮಂತ್ರಿಗೆ ಜೈ, ಬಿ.ಬಿ. ಶಿವಪ್ಪನವರಿಗೆ ಜೈ, ಎಂದು ನನಗೆ ಹಾರ ಹಾಕಿದರು. ಅಲ್ಲಿಗೆ ಅರ್ಡರ್ ತಲುಪಿದೆ.

ಅವರ ಟ್ರಾನ್ಸ್‌ಫರ್‌ಗಳನ್ನು ಕ್ಯಾನ್ಸಲ್ ಮಾಡಿ ಅರ್ಡರ್ ತಲುಪಿದೆ. ಇದು ಕಾರ್ಯ ಮಾಡತಕ್ಕಂಥ ವೈಖರಿ. ಏನೋ ಒಂದು ಪತ್ರವನ್ನು ಬರೆದು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿ ಬಿಟ್ಟಿದ್ದೇವೆ ಎಂದರೆ ಮಂತ್ರಿಗಳ ಜವಾಬ್ದಾರಿಗೂ ತರುವುದಿಲ್ಲ. ನಾವು ಹೇಳಿದಂಥ ಕೆಲಸ ಆಗಬೇಕು. ಅಧಿಕಾರಿಗಳು ಏಕೆ ಮಾಡುವುದಿಲ್ಲ, ಮಾಡಬೇಕು. ಏಕೆಂದರೆ ಸರ್ಕಾರ ಬದಲಾಗುತ್ತದೆ. ಸರ್ಕಾರ ನಡೆತಕ್ಕಂಥ ಪಕ್ಷಗಳು ಬದಲಾಗುವುದು. ಆದರೆ ಅಧಿಕಾರಿಗಳು ಬದಲಾಗಲಿಕ್ಕಿಲ್ಲ. ಅವರು 58ನೇ ವಯಸ್ಸು ಆಗುವವರೆಗೆ ಅಧಿಕಾರ ಮಾಡಲೇ ಬೇಕು. ಅಂದಮೇಲೆ ಆ ರೀತಿಯ ಮುಖ್ಯಮಂತ್ರಿಗಳ ಅರ್ಜಿಗಳು ಏನಿವೆ, ಕೇವಲ ಡೆಪ್ಯುಟಿ ಕಮೀಷನರಿಗೆ, ತಹಶೀಲ್ದಾರರಿಗೆ ಕೊಡತಕ್ಕಂಥ ಅರ್ಜಿಗಳೂ ಕೂಡ ಅನೇಕ ಸಂದರ್ಶನದ ಸಂದರ್ಭದಲ್ಲಿ ಬಂದಿವೆ. ಪುನಃ ಅವರಿಗೇ ಹೋಗಿದೆ. ಇನ್ನೊಂದು ನಮ್ಮ ಜಲ್ಲೆಯಲ್ಲಿ ಬಂದಿರತಕ್ಕಂಥ ಒಂದು ಅರ್ಜಿಯ ಒಂದು ವಿಚಾರವನ್ನು ಹೇಳಿ ಆ ವಿಚಾರವನ್ನು ಬಿಡುತ್ತೇನೆ. ಡೆಪ್ಯುಟಿ ಕಮೀಷನರರು ಅದಕ್ಕೆ ಉತ್ತರ ಬರೆಯುತ್ತಾರೆ. ಏನು ಉತ್ತರ ಬರೆಯುತ್ತಾರೆ ಎಂದರೆ, ಮುಖ್ಯಮಂತ್ರಿಗಳಿಗೆ ಸಂದರ್ಶನದ ಸಮಯದಲ್ಲಿ ಕೊಟ್ಟಂಥ ನಿಮ್ಮ ಈ ಅರ್ಜಿಗೆ

ಈಗಾಗಲೇ ನಿಮಗೆ ಉತ್ತರ ಕಳುಹಿಸಿಲಾಗಿದೆ ಎಂದು. ಅಂದಮೇಲೆ ನಾವು ಮುಖ್ಯಮಂತ್ರಿಗಳನ್ನು ಕಂಡು ಏನು ಪ್ರಯೋಜನ? ನಾನು ಮುಖ್ಯಮಂತ್ರಿಯನ್ನು ಕಾಣತಕ್ಕಂಥ ಉದ್ದೇಶ ನನಗೆ ಬಂದಿರತಕ್ಕಂಥ ಕಷ್ಟ, ಲೋಕಲ್ ಅಧಿಕಾರಿಗಳಲ್ಲಿ ಆಗಲಿಲ್ಲ. ನಿಮ್ಮಲ್ಲಿ ಏನಾದರೂ ತೀರ್ಮಾನ ಆಗಬಹುದೇನೋ ಎನ್ನುವ ಆಸೆಯಿಂದ ಮುಖ್ಯಮಂತ್ರಿಗಳನ್ನು ಕಾಣುತ್ತೇವೆ. ಕಂಡರೆ ನನಗೆ ಬರತಕ್ಕಂಥಾದ್ದು ಇದು. ನಿಮಗೆ ಮೊದಲೇ ತಿಳಿಸಿಬಿಟ್ಟಿದ್ದೇವೆ ಈ ವಿಚಾರ, ಇದು ಆಗುವುದಿಲ್ಲ ಎಂದು ಹೇಳಿ, ಪುನಃ ಏಕೆ ನೀವು ಹೋಗಿ ಮುಖ್ಯಮಂತ್ರಿಯವರನ್ನು ಕಂಡಿರಿ ಎನ್ನುವಂಥ ಭಾವನೆಯಲ್ಲಿ ಉತ್ತರ ಬರುವುದಾದರೆ, ಇದು ಒಂದು ಫಲಕಾರಿಯಾರಿಯಾದಂಥ ಕಾರ್ಯಕ್ರಮ ಎಂದು ಹೇಳಿದರೆ ಬಹುಶಃ ನಾನು ಅದನ್ನು ಒಪ್ಪಕೊಳ್ಳಲಿಕ್ಕೆ ಸಿದ್ಧವಿಲ್ಲ. ಆ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಅಥವಾ ಈ ಕಾರ್ಯಕ್ರಮ ಸಂಪೂರ್ಣ ಯಶಸ್ವಿಯಾಗಬೇಕಾಗಿದ್ದರೆ ಮುಖ್ಯಮಂತ್ರಿಗಳು ತೆಗೆದುಕೊಳ್ಳತಕ್ಕಂಥ ಸಾವಿರಾರು ಅರ್ಜಿಗಳಲ್ಲಿ, ಕೊನೆಯ ಪಕ್ಷ ಒಂದು 50 ಪರ್ಸೆಂಟಾದರೂ ಆ ಕೆಲಸ ತಕ್ಷಣ ಆಗಿದ್ದರೆ ತುಂಬಾ ಸಂತೋಷ ಪಡಬಹುದಿತ್ತು. ಆ ದಿಕ್ಕಿನಲ್ಲಿ ಇದು ಆಗಲಿಲ್ಲ. ಇನ್ನು ಅಧಿಕಾರಿಗಳು ಇದ್ದಾರೆ. ನಮ್ಮ ಜಿಲ್ಲೆಗಳಲ್ಲಿ, ನನ್ನ ಜಿಲ್ಲೆಯದು ಮಾತ್ರ ಹೇಳುತ್ತೇನೆ, ಬೇರೆ ಜಿಲ್ಲೆಗಳ ಬಗ್ಗೆ ನನ್ನ ಹತ್ತಿರ ಅಷ್ಟು ಮಾಹಿತಿ ಇಲ್ಲ. ನನ್ನ ಜಿಲ್ಲೆಯಲ್ಲಿ ಒಬ್ಬರು ಜಿಲ್ಲಾಧ್ಯಕ್ಷರಾಗಿದ್ದಾರೆ. ಅವರ ಬಗ್ಗೆ ತುಂಬಾ ಗೌರವ ಇತ್ತು. ಬಂದ ಶುರುವಿನಲ್ಲಿಲ್ಲ ಅತ್ಯಂತ ಉತ್ತಮವಾದ ದಕ್ಷ ಕೆಲಸವನ್ನು ಮಾಡುತ್ತಾ ಇದ್ದಂಥ ಅಧಿಕಾರಿ. ಸ್ವಲ್ಪ ಗೌರವ ಇಟ್ಟುಕೊಂಡಿದ್ದರು, ಗಂಭೀರ ಇತ್ತು. ಆದರೆ ಆ ಅಧಿಕಾರಿ ಈಗ ಆ ರೀತಿ ಇಲ್ಲ. ಬದಲಾವಣೆಯಾಗಿದೆ. ಕಾರಣ ಏನೋ ನನಗೆ ಗೊತ್ತಿಲ್ಲ. ಯಾವುದೋ ಒಂದು ಸಂದರ್ಭ. ಆ ಅಧಿಕಾರಿಯವರ ಹತ್ತಿರ ನಾನು ಸಣ್ಣ ವಿಚಾರವನ್ನು ಪ್ರಸ್ತಾಪ ಮಾಡಿದೆ. ಒಂದು ನ್ಯಾಯ ಬೆಲೆ ಅಂಗಡಿ ಕೊಡತಕ್ಕಂಥ ಆ ವಿಚಾರದಲ್ಲಿ ಅಧಿಕಾರಿಗಳ ಹತ್ತಿರ ಪ್ರಸ್ತಾಪ ಮಾಡಿದಾಗ ಅವರು ಒಂದು ಮಾತು ಹೇಳಿದರು."ನಾವು ಏನು ಮಾಡುವುದು ಶಿವಪ್ಪನವರೇ, ಮುಖ್ಯಮಂತ್ರಿಗಳು ಮತ್ತು ಆಹಾರ ಮಂತ್ರಿಗಳು ಪತ್ರ ಬರೆಯುತ್ತಾರೆ. ಆ ಪತ್ರಕ್ಕೆ ಗೌರವ ಕೊಡಬೇಕು". ನಿಜ, ಪತ್ರಕ್ಕೆ ಗೌರವ ಕೊಡಬೇಕು. ನಾನು ಅವರಿಗೆ ಒಂದು ಮಾತನ್ನು ಹೇಳಿದೆ, ನಾವು ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥವರು ಶಾಸಕರು ಇರಬಹುದು, ಮಂತ್ರಿಗಳಿರಬಹುದು, ಮುಖ್ಯಮಂತ್ರಿಗಳಿರಬಹುದು, ಬಂದಾಗ ಪತ್ರ ಕೊಡತಕ್ಕಂಥಾದ್ದು ನಮ್ಮ ಕರ್ತವ್ಯ. ಪತ್ರ ಕೊಡಲಿಲ್ಲ ಎಂದು ಹೇಳಿದರೂ ಕೂಡ ನಾವು ತಪ್ಪಿತಸ್ಥರು ಆಗುತ್ತೇವೆ. ಆದರೆ ನಿಮಗೆ ಈ ವ್ಯವಹಾರವನ್ನು ನಡೆಸಲಲಿಕ್ಕೆ ಸರ್ಕಾರ ಕೆಲವು ಗೈಡಲೈನ್ಸ್ ಕೊಟ್ಟಿದೆ. ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಕೊಟ್ಟಿರುವುದನ್ನು, ಅದರಂತೆ ನೀವು ಕಾರ್ಯಕ್ರಮ ಮಾಡಿದರೆ ಏಕೆ ಮಾಡಲಿಲ್ಲ ಎಂದು ಯಾರೂ ಕೇಳಲಿಕ್ಕೆ ಬರುವುದಿಲ್ಲ. ಮಾನ್ಯ ಪ್ರಕಾಶರವರು ಇದನ್ನು ಕೇಳಬೇಕು. ರೆವಿನ್ಯೂ ಮಿನಿಸ್ಟರ್ ಕೇಳಬೇಕಾಗುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳು ಒಂದು ಮಾತು ಹೇಳಿದರು. ಒಂದು ಮಿಲ್ಕ್ ಭೂತ್ ಕಟ್ಟಬೇಕು ಸಕಲೇಶಪುರದಲ್ಲಿ ಮಿಲ್ಕ್ ಭೂತ್ ಕಟ್ಟತಕ್ಕಂಥ ಸ್ಥಳಕ್ಕೆ ಸಂಬಂಧಪಟ್ಟಂಥ ವಿಚಾರ. ಒಂದು ಪರ್ಟಿಕ್ಯುಲರ್ ಪ್ಲೇಸ್, ಇದೇ ಆಗಬೇಕು ಎಂದು ತಿಳಿಸಿ ಅಲ್ಲಿಯ ಕೆಲವವು ರಾಜಕೀಯ ಒತ್ತಡ ಅವರು ಅಡ್ಡ ಬಂದರು. ಅದು ಆಗುವುದಿಲ್ಲ.

ಇವತ್ತು ಅಲ್ಲಿ ಕಟ್ಟಿದ್ದಾರೆ ನಿಜ. ಇವತ್ತಿಗೂ ನೋಡಿ ಅದು ಓಪನ್ ಆಗಲಿಲ್ಲ, ಅದು ಆಗುವುದಿಲ್ಲ. ಸಾರ್ವಜನಿಕರ ವಿರೋಧ ಇದೆ, ಅಸಿಸ್ಟೆಂಟ್ ಕಮೀಷನರ್‌ರವರು ಅದಕ್ಕೆ ವಿರೋಧ ಇದ್ದಾರೆ, ತಹಶೀಲ್ದಾರರು ವಿರೋಧ ಇದ್ದಾರೆ, ಇಷ್ಟೆಲ್ಲಾ ವಿರೋಧ ಇದ್ದರೂ ಕೂಡ ಅಲ್ಲೇ ಕಟ್ಟಬೇಕು, ನೀವು ಪರ್ಮಿಷನ್ ಕೊಡಿ. ಕೊಡದಿದ್ದರೆ ನಾವು ಹೇಗೆ ತೆಗೆದುಕೊಂಡು ಬರುತ್ತೇನೆ ಎಂದು ತಹಶೀಲ್ದಾರರಿಗೆ ಜೋರು ಮಾಡುತ್ತಾನೆ. ಕೊನೆಗೆ ಏನೂ ಪರ್ಮಿಷನ್ ರಾತ್ರೋರಾತ್ರಿ ಪೋಲೀಸ್ ಪಹರೆ ಇಟ್ಟುಕೊಂಡು ಅಲ್ಲಿ ಒಂದು ಬೂತ್ ಕಟ್ಟಿದರು. ನಾನು ಡೆಪ್ಯುಟಿ ಕಮೀಷನರರಿಗೆ ಹೇಳಿದೆ, ಇದಕ್ಕಂತ ಒಳ್ಳೆಯ ಜಾಗ ಸೆಲೆಕ್ಟ ಮಾಡಿದ್ದೇವೆ, ಈ ಒಂದು ಕ್ಷೇತ್ರವನ್ ನೀವು ಮಾಡುತ್ತಿದ್ದೀರಲ್ಲಾ, ಇದು ಏತಕ್ಕೋಸ್ಕರ, ಯಾವ ಉದ್ದೇಶಕ್ಕಾಗಿ ಮಾಡುತ್ತಿದ್ದೀರಿ, ಇದು ಜನಗಳಿಗೂ ತೊಂದರೆ ಮತ್ತು ಯಾರಿಗೂ ಇಚ್ಛೆಯಿಲ್ಲ, ನಿಮ್ಮ ಸರ್ಕಾರ ಕೂಡ ಆ ಜಾಗ ಇಚ್ಛೆ ಪಟ್ಟಿಲ್ಲ, ನಿಮ್ಮ ಅಸಿಸ್ಟೆಂಟ್ ಕಮೀಷನರ್‌ರವರು ಇಚ್ಛೆ ಪಡಲಿಲ್ಲ, ತಹಶೀಲ್ದಾರರು ಇಚ್ಛೆ ಪಡುತ್ತಿಲ್ಲ, ಏಕೆ ಕಟ್ಟುತ್ತಿದ್ದೀರಿ ಅನ್ನುವ ಮಾತನ್ನು ಅವರಿಗೆ ಕೇಳಿದಾಗ ಅವರು ಏನು ಹೇಳುತ್ತಾರೆ ಎಂದರೆ ಶಿವಪ್ಪನವರೇ, ಶಾಸಕರು ಹೇಳಿದ ಹಾಗೆ ಕೇಳಬೇಕು ಎಂದು ಒಂದು ಆರ್ಡಿನೆನ್ಸ್ ಹೊರಡಿಸಿ ಎಂದು ಹೇಳುತ್ತಾರೆ. ಇಲ್ಲೇ ನೀವು ಆರ್ಡಿನೆನ್ಸ್ ಹೊರಡಿಸಬೇಕು ಈಗ. ಶಾಸಕರು ಹೇಳಿದ ಹಾಗೆ ಕೇಳಬೇಕು ಎನ್ನುವ ಆರ್ಡಿನೆನ್ಸ್ ಹೊರಡಿಸಿ. ಶಾಸಕರು ಹೇಳಿದ್ದೆಲ್ಲಾ ಕೇಳುವಂಥ ಆರ್ಡಿನೆನ್ಸ್ ಹೊರಡಿಸಬೇಡಿ. ಸಾರ್ವಜನಿಕರ ಹಿತದೃಷ್ಟಿಯಿಂದ, ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎನ್ನುವ ವಿಚಾರ ಬಂದರೆ, ಅವರು ಹೇಳತಕ್ಕಂಥ ವಿಷಯ ನ್ಯಾಯಯುತವಾಗಿದ್ದರೆ ಅವರು ಹೇಳಿದ ಹಾಗೆ ಮಾಡುವಂಥ ಒಂದು ಆರ್ಡಿನೆನ್ಸ್ ಹೊರಡಿಸಬಹುದಲ್ಲಾ. ಈ ರೀತಿ ಉದ್ಧಟತನದಿಂದ ವರ್ತನೆ ಮಾಡತಕ್ಕಂಥ ಅಧಿಕಾರಿಗಳು ಇತ್ತೀಚೆಗೆ ತುಂಬಾ ಆಗಿದ್ದಾರೆ. ಸಣ್ಣ ಅಧಿಕಾರಿಯಿಂದ. ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡತಕ್ಕಂಥ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಹೇಳುತ್ತಾನೆ, ನಾವು ನೇರವಾಗಿ ಜಿಲ್ಲಾ ಪಂಚಾಯತಿಯ ಅಧ್ಯಕ್ಷರ ಕೈಕೆಳಗೆ ಕೆಲಸ ಮಾಡತಕ್ಕಂಥವರು. ಅವರಿಂದ ಆದೇಶ ಬಂದರೆ ನಾವು ಕೆಲಸ ಮಾಡುತ್ತೇವೆ, ಇಲ್ಲದಿದ್ದರೆ ನೀವು ಹೇಳಿದ್ದೆಲ್ಲಾ ಮಾಡುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಹಾಗಾದರೆ ಶಾಸಕರು ಏಕೆ ಇರಬೇಕು ಇಲ್ಲಿ? ಇದು ತೀರ್ಮಾನ ಆಗಬೇಕಾಗುತ್ತದೆ. ಅಧಿಕಾರವನ್ನು ನೇರವಾಗಿ ಗ್ರಾಮಾಂತರ ಪ್ರದೇಶಕ್ಕೆ ತಲುಪಿಸುವಂಥ ವ್ಯವಸ್ಥೆ ಏನಿದೆ, ಈ ವ್ಯವಸ್ಥೆ ಮಾಡಿದಿರಿ, ಸರಿ. ಆದರೆ ಎಲ್ಲರ ಅಧಿಕಾರಅವಧಿ ಏನು? ಅವರ ಪರಿಮಿತಿ ಏನು ಅನ್ನುವುದನ್ನು ನಿರ್ಧಾರ ಮಾಡಲಿಲ್ಲ. ನಮಗೆ ನನ್ನ ಕ್ಷೇತ್ರದಲ್ಲಿ ಎರಡು ಪಂಚಾಯಿಗಳು ಬರುತ್ತವೆ, ಹಾನೂರು ಮತ್ತು ಸಕಲೇಶಪುರ. ಎರಡು ಪಂಚಾಯಿತಿಯಲ್ಲೂ ಲೇಡೀಸ್ ಛೇರಮೇನ್ಸ ಇದ್ದಾರೆ. ಅದರ ಬಗ್ಗೆ ನನ್ನ ವಿರೋಧ ಇಲ್ಲ. ಇರಲಿ, ಹೆಣ್ಣುಮಕ್ಕಳು ಅಧ್ಯಕ್ಷರಾದರೆ ತಪ್ಪಿಲ್ಲ. ಆದರೆ ಅವರಿಗೆ ಕಾರ್ಯ ಪರಿಮಿತಿಯನ್ನು ನೀವು ಹೇಳಿಕೊಡಲಿಲ್ಲ. ಇವತ್ತು ಮುನಿಸಿಪಾಲಿಟಿ, ಅಲ್ಲಿಗೆ ಒಬ್ಬರು ಹೆಂಗಸರು ಛೇರಮೆನರು ಇದ್ದಾರೆ. ಅಧ್ಯಕ್ಷರನ್ನು ಮಾಡುತ್ತಿದ್ದೀರಿ. ಅಧ್ಯಕ್ಷರಾಗಲಿ ಚಿಂತೆಯಿಲ್ಲ. ಕೆಲಸ ಒಳ್ಳೆಯದು ಆಗುತ್ತದೆ ಎನ್ನುವ ಭಾವನೆ ನಮಗೆ ಇದೆ. ಆದರೆ ಒಬ್ಬ ಅಧ್ಯಕ್ಷಣೆಯವರು ಕೇಳಿದರು ನನಗೆ, ನೀವು ಶಾಸಕರು ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಬೇಕಾದರೆ ಮೊದಲು ನಮಗೆ ತಿಳಿಸಬೇಕು ಎಂದು. ಅವರ

ತಪ್ಪಲ್ಲ ಆದು ಪಾಪ. ಅವರಿಗೆ ಗೊತ್ತಿಲ್ಲ, ನಾನು ಏನು ಮಾಡಬೇಕು ಎಂದು. ಅವರಿಗೆ ತಾನು ತಾಲ್ಲೂಕು ಅಧ್ಯಕ್ಷಿಣಿಯವರು ಎಂದು ಮಾತ್ರ ಗೊತ್ತಿದೆಯೇ ಹೊರತು ಬಾಕಿ ವಿಚಾರ ಗೊತ್ತಿಲ್ಲ. ಅವರು ಕೇಳುತ್ತಾರೆ, ಶಾಸಕರು ನಮ್ಮ ಕ್ಷೇತ್ರದಲ್ಲಿ ಯಾವುದೇ ಕೆಲಸವನ್ನು ನಿಮ್ಮ ಇಚ್ಛೆಯ ಪ್ರಕಾರ ಮಾಡುವುದಕ್ಕೆ ಸಾಧ್ಯವಿಲ್ಲ, ಮಾಡುವುದಕ್ಕಿಂತ ಮೊದಲೇ ನನಗೆ ತಿಳಿಸಬೇಕು. ನಾನು ಅವರಿಗೆ ಹೇಳಿದ್ದೇನೆ, ಆಯಿತು ತಾಯಿ, ನಿಮ್ಮ ಕ್ಷೇತ್ರಕ್ಕೆ ಬರಬೇಕಾದರೂ ಒಂದು ಪತ್ರ ಬರೆಯುತ್ತೇನೆ. ನೀವು ಬಾ ಅಂದರೆ ಬರುತ್ತೇನೆ, ಇಲ್ಲದಿದ್ದರೆ ಬರುವುದೇ ಇಲ್ಲ, ಎಂದು. ಇದು ಇವತ್ತು ಶಾಸಕರ ಪರಿಸ್ಥಿತಿಯನ್ನು ಈ ಮಟಕ್ಕೆ ತಂದು ಇಟ್ಟಿರಲ್ಲಾ, ಯಾವ ಉದ್ದೇಶದಿಂದ ಇನ್ನೊಬ್ಬರು ಅಧ್ಯಕ್ಷಿಣಿ ಕೇಳುತ್ತಾರೆ, ಶಿವಪ್ಪನವರೇ, ಸ್ವಲ್ಪ ಹಳ್ಳಿ ಕಡೆ ಪ್ರವಾಸ ಮಾಡಿಕೊಂಡು ಬನ್ನಿ, ಹಳ್ಳಿ ಜನರ ಕಷ್ಟಸುಖ ನಿಮಗೆ ಗೊತ್ತಿಲ್ಲ, ನೀವು ಶ್ರೀಮಂತರು ಎಂದು ಹೇಳುತ್ತಾರೆ. ಏನೋ ನಾವು ಒಂದು ರೀತಿ ತೆಗೆದುಕೊಳ್ಳುವುದರಿಂದ ಅದು ನಡೆದು ಹೋಗುತ್ತದೆ. ಅಥವಾ ಒಬ್ಬರು ಕೋಪಿಷ್ಟರಾದರೆ ಅಲ್ಲಿ ವ್ಯಾಜ್ಯ ಪ್ರಾರಂಭವಾಗುತ್ತದೆ. ಇಲ್ಲಿಯವರೆಗೆ ನನ್ನ ಕ್ಷೇತ್ರದಲ್ಲಿ ಶಾಸಕರು ಹೇಳಿದಂಥ ಯಾವುದೇ ಕೆಲಸ ಆಗಿಲಿಲ್ಲ. ಆಗದೇ ಇದ್ದರೂ ಕೂಡ ಅವರು ಮಾಡಿದ ಕೆಲಸವನ್ನೇ, ಅವರು ಮಾಡಲಿ, ಇವರು ಮಾಡಲಿ, ಕ್ಷೇತ್ರದ ಕೆಲಸ ಆಯಿತಲ್ಲಾ, ಆಗಲಿ ಬಿಡಿ ಎನ್ನುವ ಭಾವನೆಯಲ್ಲಿ ನಾನು ಬರುತ್ತಿದ್ದೇನೆಯೇ ಹೊರತು ಇವತ್ತು ಅವಕಾಶ ಸಿಕ್ಕಿದ್ದಕ್ಕೆ ತಮಗೆ ಹೇಳುತ್ತಿದ್ದೇನೆ. ಸನ್ಮಾನ್ಯ ಸಚಿವರು ಈ ಕಡೆ ಗಮನ ಕೊಟ್ಟು, ಅಧ್ಯಕ್ಷರು, ಸದಸ್ಯರುಗಳು ಇವರ ಅಧಿಕಾರ ವ್ಯಾಪ್ತಿ ಏನಿದೆ, ಅದಾದರೂ ಒಂದು ಗೈಡಲೈನ್ಸ್ ಕೊಡಿ. ನೀವು ಏನು ಕೆಲಸ ಮಾಡಬಹುದು. ಜಿಲ್ಲಾ ಪರಿಷತ್ ಪರಿಷತ್ ಅಧ್ಯಕ್ಷನೋ, ತಾಲ್ಲೂಕು ಪಂಚಾಯಿತಿ ಸದಸ್ಯನೋ, ಇವತ್ತು ಗ್ರಾಮ ಪಂಚಾಯಿತಿಯಲ್ಲಿ ಎದರು ನಿಂತಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ ಪಕ್ಷ ಇರಲಿಲ್ಲ. ಚುನಾವಣೆಯಾದಾಗ. ಇವತ್ತು ಯಾವು ಏನು ಅಂತ ಗೊತ್ತಿಲ್ಲ, ಯಾವುದೇ ಕೆಲಸ ಗ್ರಾಮ ಪಂಚಾಯಿತಿಗೂ, ತಾಲ್ಲೂಕು ಪಂಚಾಯಿತಿಗೂ ಹೊಂದಾಣಿಕೆಯಾಗುತ್ತಿಲ್ಲ. ಇವತ್ತು ಒಂದೇ ಒಂದು ಪ್ರಗತಿಪರವಾದಂಥ ಕೆಲಸಗಳು ಆಗಲಿಕ್ಕೆ ಸಾಧ್ಯವಿಲ್ಲ. ತಾಲ್ಲೂಕು ಪಂಚಾಯಿತಿಯಲ್ಲಿ ಮಾಡಿದ್ದನ್ನು ಗ್ರಾಮ ಪಂಚಾಯಿತಿಯಲ್ಲಿ ತರುವುದಿಲ್ಲ. ಗ್ರಾಮ ಪಂಚಾಯಿತಿ ಹೇಳಿದ್ದನ್ನು ತಾಲ್ಲೂಕು ಪಂಚಾಯಿತಿ ಮಾಡುವುದಿಲ್ಲ. ಈ ರೀತಿ ಆದರೆ, ನೀವು ಯಾವ ಉದ್ದೇಶ ಇಟ್ಟುಕೊಂಡು ಈ ಅಧಿಕಾರದ ವಿಚಾರವನ್ನು ಗ್ರಾಮಾಂತರ ಪ್ರದೇಶಕ್ಕೆ ತಲುಪಿಸುತ್ತೇವೆ ಎಂದು ತೆಗೆದುಕೊಂಡು ಬಂದಿರಿ, ಅದು ಆಗುವುದಿಲ್ಲ. ಅದು ವಿಫಲವಾಗುತ್ತದೆ. ಇದರ ಬಗ್ಗೆ ತಾವು ಸ್ವಲ್ಪ ಗಮನ ಹರಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಬೀಳಗಿಯವರು ಹೊರಟು ಹೋದರು. ಈ ಬಸ್ಸಿನ ವಿಚಾರವಂತೂ ಅದೇನು ಯಾರು ಏನು ಹೇಳಿದರೂ ಕೇಳುವ ಹಾಗಿಲ್ಲ. ಬಸ್ ನಡೆಸುವುದಕ್ಕೆ ಆಗದಿದ್ದರೆ ನನ್ನದು ಒಂದು ಸಲಹೆ ಇದೆ. ಎಲ್ಲಿ ನಿಮಗೆ ಅವಕಾಶ ಇದೆ ಅಲ್ಲಿ ನಡೆಸಿ, ಜೊತೆಗೆ ಖಾಸಗಿ ಬಸ್‌ಗಳಿಗೂ ಅವಕಾಶ ಕೊಡಿ, ನಡೆಸಲಿ ಅವರು. ಅವರ ಲಾಭ ಅವರಿಗೆ ಸಿಗುತ್ತದೆ, ನಿಮ್ಮ ಲಾಭ ನೀವು ತೆಗೆದುಕೊಳ್ಳುತ್ತೀರಿ. ಅಥವಾ ಮೈನರೋಡ್ಸ್ ಏನಿವೆ, ಅದರಲ್ಲಿ ನೀವು ನಿಮ್ಮ ಬಸ್‌ಗಳನ್ನು ಓಡಿಸಿ ಬೇರೆ ಇಂಟೀರಿಯರ್ ಕಡೆಗೆ ಹೋಗಬೇಕಾದಂಥ, ಒಳಗಡೆ ಹಳ್ಳಿಗಳಿಗೆ ಹೋಗಬೇಕಾದಂಥ

ಜಾಗಗಳಲ್ಲಿ ಖಾಸಗಿ ಬಸಗಳನ್ನು ಅಲ್ಲಿ ಬಿಡಿ. ಬಸ್ಸಿನದು ಕಂಪ್ಲೀಟ್ ಅವ್ಯವಸ್ಥೆ. ಯಾವುದೇ ಇರಲಿ. ನನಗೆ ಯಾವುದೋ ಒಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಅದು ಲಿಖಿತ ಉತ್ತರದಲ್ಲಿ ಬಂದಿದೆ. ನನ್ನ ಕ್ಷೇತ್ರದಲ್ಲಿ ಬಸ್ಸುಗಳ ತೊಂದರೆ ಇರುವುದು ನಿಮ್ಮ ಗಮನಕ್ಕೆನಾದರೂ ಬಂದಿದೆಯೇ ಅಥವಾ ಕೊರತೆ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಬಸ್ ಇದೆಯೇ ಎಂದು ಕೇಳಿದ್ದಕ್ಕೆ ಅದಕ್ಕೂ ಇಲ್ಲ ಅಂತ ಕೊಟ್ಟುಬಿಟ್ಟದ್ದಾರೆ. ಏಕೆಂದರೆ ಇದರ ಹೆಸರೇ ಕೆ.ಎಸ್.ಆರ್.ಟಿ.ಸಿ. ಅಲ್ಲವೇ? ಕೆ.ಎಸ್.ಆರ್.ಟಿ.ಸಿ ಅಂದರೆ ಏನು ಅರ್ಥ? ಕಚಡಾ ಸರ್ವೀಸ್ ರನ್ ಬೈ ತರಲೆ ಅಂಡ್ ಕಂಪನಿ ಅಂತ. ಈ ಪರಿಸ್ಥಿತಿ ಆಗಿಹೋಗಿದೆಯಲ್ಲಾ ನಿಮ್ಮ ಬಸ್ಸಿನ ವ್ಯವಸ್ಥೆ, ಇದನ್ನು ಹೇಗೆ ಮಾಡುತ್ತೀರಿ? ಇದನ್ನು ಹೇಗೆ ನಡೆಸುವುದು? ನಡೆಸುವುದಕ್ಕೆ ಆಗದಿದ್ದರೆ ನೀವು ಏನು ಮಾಡಬೇಕು? ಕಚಡಾ ಸರ್ವೀಸ್ ರನಬೈ ತರಲೆ ಅಂಡ್ ಕಂಪನಿ. ಈ ವ್ಯವಸ್ಥೆ ಅವ್ಯವಸ್ಥೆ ಎಂದು ನಿಮಗೂ ಗೊತ್ತಿದೆ, ನನಗೂ ಗೊತ್ತಿದೆ, ಬಸ್ಸನಿಲ್ಲಿ ತಿರುಗುವವರಿಗೂ ಗೊತ್ತಿದೆ. ಬಸನಲ್ಲಿ ಕೂರಲಿಕ್ಕಾದರೂ ಇದೆಯೇ? ಅದೇ ಪ್ರೈವೇಟ್ ಬಸಗಳಲ್ಲಿ ಎರಡು ರೂಪಾಯಿ ದರ ಕಡಿಮೆ ಇದ್ದರೂ ಕೂಡ ಇನ್ನೂ ಎರಡು ರೂಪಾಯಿ ಜಾಸ್ತಿ ಮಾಡಪ್ಪ, ನಿಮ್ಮ ಬಸ್ಸಿನಲ್ಲಿ ಕುಳಿತುಕೊಂಡು ಹೋಗುತ್ತೇವೆ ಎಂದು ಹೇಳುತ್ತಿರುತ್ತಾರೆ ಜನ. ಅನುಕೂರು ಇರಬೇಕು ನೀವು ಬಸ್ಸನ್ನು ನಡೆಸಲಿಕ್ಕೆ ಹೊರಟ ಮೇಲೆ. ನಿಮಗೂ ಲಾಭವಿಲ್ಲ, ಸರ್ಕಾರಕ್ಕೂ ಲಾಭವಿಲ್ಲ. ನೀವು ಏನು ಸಾರ್ವಜನಿಕರ ಉಪಯೋಗಕ್ಕೋಸ್ಕರ ಬಸಗಳನ್ನು ಇಟ್ಟಿದ್ದೀರಿ. ಅವರಿಗೂ ಅನುಕೂಲ ಇಲ್ಲ. ಹಾಗಿದ್ದಮೇಲೆ ಇಲ್ಲಿ ಯಾರಿಗೋಸ್ಕರ ಬಸ್ ನಡೆಸುತ್ತೀರಿ. ಇದರ ಬಗ್ಗೆ ಸ್ವಲ್ಪ ಎಲ್ಲರೂ ಸಮಗ್ರವಾಗಿ ಚಿಂತೆ ಮಾಡಬೇಕಾಗುತ್ತದೆ. ಬಸಗಳನ್ನು ಏನು ಮಾಡಬೇಕು? ಯಾವ ರೀತಿ ಓಡಿಸಬೇಕು? ಕಾನೂನು ಇದೆ, ಬಸ್ಸನ್ನು ಓವರಲೋಡ ಮಾಡಬಾರದು ಅನ್ನುವುದು ಚೆನ್ನಾಗಿ ಗೊತ್ತಿದೆ.

11.30 ಎ.ಎಂ

ನಾವೆಲ್ಲಾ ಬಸ್ಸಿನಲ್ಲಿ ತಿರುಗಾಡುತ್ತಾ ಇದ್ದಂಥ ಕಾಲದಲ್ಲಿ ಒಬ್ಬರು ಜಾಸ್ತಿ ಆದರೆ ಪೋಲಿಸಿನವರು ಬಸ್ಸನ್ನು ತೆಗೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್ ಹತ್ತಿರ ನಿಲ್ಲಿಸುತ್ತಿದ್ದ. ಇವತ್ತು ಏನಾಗಿದೆಯೆಂದರೆ ಬಸ್ಸಿನ ಒಳಗೆ 50 ಜನ ಕುಳಿತುಕೊಂಡರೆ ಅದರ ಟಾಪ್ ಮೇಲೆ 50 ಜನ ಕುಳಿತುಕೊಳ್ಳುತ್ತಾರೆ. ಇದಕ್ಕೆ ಓಪನ್ ಪರ್ಮಿಷನ್! ಅದರಲ್ಲಿ ಏನು ರಿಸ್ಟ್ರಿಕ್ಷನ ಇಲ್ಲ. ಬಸ್ಸಿನಲ್ಲಿ ಕುಳಿತಿರುವುದಲ್ಲದೆ ಬಸ್ಸಿನ ಹಿಂದೆ ಮುಂದೆ ನಿಂತಿರುತ್ತಾರೆ. ನಿಮಗೇನಾದರೂ ಸ್ವಲ್ಪ ಗೌರವ ಉಳಿದಿದ್ದರೆ ಅದು ಮ್ಯಾಕ್ಸಿಕ್ಯಾಬಗಳಿಂದ. ರಸ್ತೆಗಳಲ್ಲಿ ಎಷ್ಟು ಬಸ್ಸುಗಳು ಓಡಾಡುತ್ತಿವೆ ಅಷ್ಟು ಮ್ಯಾಕ್ಸಿಕ್ಯಾಬ್ ಓಡಾಡುತ್ತಾ ಇವೆ. ಹಾಗಾಗಿ ನಿಮಗೆ ಸ್ವಲ್ಪ ಗೌರವ ಉಳಿದಿದೆ. ಮ್ಯಾಕ್ಸಿಕ್ಯಾಬ್‌ಗಳಲ್ಲಿ ಕೂಡ ಟ್ಯಾಪ್ ಮೇಲೆ ಜನ ಹತ್ತುತ್ತಾ ಇದ್ದಾರೆ. ಈ ರೀತಿಯ ವ್ಯವಸ್ಥೆ ಯಾರಿಗೋಸ್ಕರ? ನೀವು ಬಸ್ಸುಗಳನ್ನು ಓಡಿಸಲಿಕ್ಕೆ ಪ್ರಾರಂಭ ಮಾಡಿದ ಮೇಲೆ ಸಾಕಷ್ಟು ಬಸ್ಸುಗಳನ್ನು ಓಡಿಸಬೇಕು. ಇಲ್ಲದಿದ್ದರೆ ನಿಮ್ಮ ಜೊತೆಯಲ್ಲಿ ಖಾಸಗಿಯವರಿಗೂ ಸಹ ಬಸ್ಸುಗಳನ್ನು ಓಡಿಸಲಿಕ್ಕೆ ಅವಕಾಶ ಕೊಡಬೇಕು. ಇದರ ಬಗ್ಗೆ ಹೆಚ್ಚಿನ

ಗಮನಹರಿಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಮಾನ್ಯ ಜಾಲಪ್ಪನವರ ಕಂದಾಯ ಇಲಾಖೆಗೆ ಬರುತ್ತೇನೆ. ಮಾನ್ಯ ಜಾಲಪ್ಪನವರ ಕಳಕಳಿಯನ್ನು ಅವರು ಮಂತ್ರಿಗಳು ಆದಾಗಿನಿಂದಲೂ ನಾವು ನೋಡುತ್ತಾ ಇದ್ದೇವೆ. ಕಂದಾಯ ಇಲಾಖೆಯನ್ನು ಸಾಕಷ್ಟು ಸರಿಪಡಿಸಬೇಕೆಂದು ತಾವು ಹೊರಟಿದ್ದೀರಿ. ಇದು ಕುಲಗೆಟ್ಟು ಹೋಗಿದೆ. ಅದನ್ನು ಸರಿಪಡಿಸಲಿಕ್ಕೆ, ರಿಪೇರಿ ಮಾಡಲಿಕ್ಕೆ ಸಾಧ್ಯವಿಲ್ಲದಿರುವಷ್ಟರಮಟ್ಟಿಗೆ ಕುಲಗೆಟ್ಟಿದೆ ಎನ್ನುವುದನ್ನು ತಾವು ತಿಳಿದುಕೊಂಡಿದ್ದೀರಿ. ಅದಕ್ಕೋಸ್ಕರ ಕೆಲವು ಸಂದರ್ಭಗಳಲ್ಲಿ ಕಠಿಣವಾದ ಶಬ್ದಗಳನ್ನು ಉಪಯೋಗಿಸಿದ್ದೀರಿ. ಭ್ರಷ್ಟಾಚಾರಿಗಳಿಗೆ ಬಡಿಯಿರಿ, ಚಚ್ಚಿರಿ ಎಂದು ಹೇಳಿದ್ದೀರಿ. ಈ ರೀತಿ ಹೇಳಿಕೊಂಡು ಬಂದರೂ ಕೂಡ ಸರಿಪಡಿಸುವುದಕ್ಕೆ ಆಗುವುದಿಲ್ಲ. ಇಲ್ಲಿ ನಾನು ಸಣ್ಣ ಉದಾಹರಣೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಸಾವಿರಾರು ಎಕರೆ ಒತ್ತುವರಿ ಮಾಡಿರತಕ್ಕಂಥ ಒಂದು ಜಾಗ. ಇದು ಸಕಲೇಶಪುರದಲ್ಲಿ ಇದೆ. ಸರ್ವೆ ನಂಬರ್ 1,2,3,4,5, ಮತ್ತು 6 ಇಲ್ಲಿ ಸುಮಾರು ಒಂದೂವರೆ, 2 ಸಾವಿರ ಎಕರೆಯಷ್ಟು ಎನಕ್ರೋಚಮೆಂಟ್ ಆಗಿದೆ. ಇದನ್ನು ಖಾಲಿ ಮಾಡಬೇಕೆಂದು ಹೇಳಿ 28-5-1991ರಲ್ಲಿ ಅಲ್ಲಿ ಉಪ ವಿಭಾಗಾಧಿಕಾರಿ, ಅಸಿಸ್ಟೆಂಟ್ ಕಮಿಷನರ್ ರವರು ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಇದು ಅನೇಕ ಸಾರಿ ಸದನದಲ್ಲಿ ಚರ್ಚೆಯಾಗಿದೆ, ಪತ್ರಿಕೆಗಳಲ್ಲಿ ಕೂಡ ಬಂದಿದೆ, ನಾನೂ ಕೂಡ ಮಾನ್ಯ ಜಾಲಪ್ಪನವರು ಮಂತ್ರಿಗಳಾದ ತಕ್ಷಣ ಇದನ್ನು ತೆಗೆದುಕೊಂಡು ಹೋಗಿ ಅವರ ಕೈಗೆ ಕೊಟ್ಟಿದ್ದೇನೆ. ಆದರೆ ಇಲ್ಲಿಯವರೆಗೆ ಆ ಜಾಗದಿಂದ ಖಾಲಿ ಮಾಡಿಸಲಿಲ್ಲ. ಆ ಜಾಗದಲ್ಲಿ ಎಸ್ಟೇಟ್ ಇದ್ದು, ಅಲ್ಲಿ ಒಳ್ಳೆಯ ಗೆಸ್ಟ ಹೌಸ್ ಇದೆ. ಖಾಲಿ ಮಾಡಿಸಲಿಕ್ಕೆ ಹೋದಂಥ ಎಲ್ಲಾ ಜನರಿಗೆ ಆ ಗೆಸ್ಟ ಹೌಸನಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿರುತ್ತಾರೆ.

ಅವರು ಒಂದು ರಾತ್ರಿ ಅಲ್ಲಿ ಉಳಿದುಕೊಂಡು ಬೆಳಿಗ್ಗೆ ಎದ್ದು ವಾಪಸ್ಸು ಬಂದುಬಿಡುತ್ತಾರೆ. ಮತ್ತೆ ಆ ಜಾಗ ಏನಾಯಿತೆಂದು ಗೊತ್ತಾಗಲಿಲ್ಲ. ಹೀಗೆ ಒಬ್ಬ ಸರ್ಕಾರಿ ಅಧಿಕಾರಿ, ಅರಣ್ಯಾಧಿಕಾರಿ ಇವರೆಲ್ಲಾ ಖಾಲಿ ಮಾಡಿಸಬೇಕೆಂದು ಹೇಳಿರತಕ್ಕಂಥ ಜಾಗ ಇವತ್ತಿನವರೆಗೂ ಖಾಲಿ ಆಗಲಿಲ್ಲ. ಆದರೆ ಒಬ್ಬ ಬಡವ ಅವನ ಪಕ್ಕದಲ್ಲಿರತಕ್ಕಂಥ 5 ಗುಂಟೆ, 10 ಗುಂಟೆ ಒತ್ತುವರಿ ಮಾಡಿಕೊಂಡರೆ ಬೆಳಗಾಗುವುದರೊಳಗಾಗಿ ಆ ಬೇಲಿಯನ್ನು ಕಿತ್ತುಕೊಂಡು ಬೀಸಿಹಾಕಿಬಿಡುತ್ತಾರೆ. ಅವನು ಗಿಡಹಾಕಿದ್ದರೆ ಆ ಗಿಡವನ್ನು ಬುಡಸಮೇತ ಕಿತ್ತು ಹಾಕಿಬಿಡುತ್ತಾರೆ. ಇದಕ್ಕೆಲ್ಲಾ ಕಾನೂನು ಇದೆ. ಕಾನೂನು ಇದ್ದ ಮೇಲೆ ಬಡವನಿಗೆ ಒಂದು ಶ್ರೀಮಂತನಿಗೊಂದು ಕಾನೂನು ಏಕೆ? ಟೀ, ಕಾಫಿ ಪ್ಲಾಂಟರಗಳು ಯಾರ್‍ಯಾರು ಒತ್ತುವರಿ ಮಾಡಿದ್ದಾರೆ ಅದನ್ನು ರೆಗ್ಯೂಲರೈಸ್ ಮಾಡುತ್ತೇವೆ ಎಂದು ಹೇಳುತ್ತೀರಿ. ಮಾಡಿ, ಸಂತೋಷ ಆದರೆ ರೆಗ್ಯೂಲರೈಸ್ ಮಾಡುವಂಥ ಸಂದರ್ಭದಲ್ಲಿ ಇದರ ಅಳತೆ ತಮ್ಮ ಕೈಗೆ ಸಿಗಬೇಕಲ್ಲಾ, ಎಷ್ಟು ಜಾಗ ಇದೆಯೆಂದು ಅವರು ಹೇಳುವುದನ್ನು ನೀವು ಬರೆದುಕೊಳ್ಳುತ್ತೀರಿ. ನೀವುಗಳು ಆಯಾ ಅಳತೆ ಮಾಡುವುದಿಲ್ಲ. ಅವರು ಸಾವಿರ ಎಕರೆ ಜಾಗವನ್ನು ಒತ್ತುವರಿ ಮಾಡಿದರೆ 100 ಎಕರೆ ಒತ್ತುವರಿ ಮಾಡಿದ್ದೇವೆಂದು ಪ್ರಾಮಾಣಿಕತೆಯಿಂದ ಹೇಳಿದರೆ ಆಯಿತಲ್ಲಾ!

ಶ್ರೀ ಆರ್.ಎಲ್. ಜಾಲಪ್ಪ : ನಾವು ಅಳತೆ ಮಾಡಿಸುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ : ಅಳತೆ ಮಾಡಿದ್ದನ್ನು ನಾನೂ ನೋಡಿದ್ದೇನೆ. ಅಳತೆ ಮಾಡುವ ಜನರನ್ನೂ ನಾನು ನೋಡಿದ್ದೇನೆ. ಯಾರೋ ಬಂದು ಬಿ.ಬಿ. ಶಿವಪ್ಪನವರು ಜಾಗ ಒತ್ತುವರಿ ಮಾಡಿದ್ದಾರೆಂದರೆ ನೀವು ಅಳತೆ ಮಾಡಿಸಿಬಿಡುತ್ತೀರಿ. ದಿವಂಗತ ದೇವರಾಜು ಅರಸ್ ಅವರ ಕಾಲದಿಂದ ನನ್ನ ತೋಟವನ್ನು ಅಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದು ಮೂರನೇ ಸಾರಿ ನನ್ನ ತೋಟವನ್ನು ಅಳೆಯುತ್ತಿರುವುದು. ನೀವು ಎಷ್ಟು ಸಲ ಅಳತೆ ಮಾಡಿದರೂ ಕೂಡ ಅದು ಅಷ್ಟೇ ಇರುತ್ತದೆ. ಏಕೆಂದರೆ ಅದು ಉದ್ದ ಆಗುವುದಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ನೀವು ಅವರನ್ನು ಸರಿಯಾಗಿ ನೋಡಿಕೊಂಡಿದ್ದರೆ ಉದ್ದ ಆಗುತ್ತಿತ್ತು.

ಶ್ರೀ ಬಿ.ಬಿ. ಶಿವಪ್ಪ : ಇಲ್ಲ, ನನ್ನ ತೋಟವನ್ನು ಉದ್ದ ಮಾಡುವುದಕ್ಕಾಗುವುದಿಲ್ಲ. ಅದರ ಸುತ್ತಮುತ್ತ ಐದು ಗ್ರಾಮ ಇದೆ. ಅಕಸ್ಮಾತ್ ಆ ರೀತಿ ಮಾಡುವುದಕ್ಕೆ ಹೋದರೆ ಆ ಗ್ರಾಮದವರು ಬಿಡಬೇಕಲ್ಲ ನನ್ನನ್ನು. ಅಲ್ಲಿ ಗ್ರಾಮ ಇಲ್ಲದೇ ಇದ್ದಿದ್ದರೆ ಅಲ್ಲಿ ಸರ್ಕಾರಿ ಜಾಗ ಇದ್ದಿದ್ದರೆ ಉದ್ದ ಮಾಡಬಹುದಾಗಿತ್ತು ಎಂದು ತೋರುತ್ತದೆ. ಅಲ್ಲಿ ಸರ್ಕಾರಿ ಜಾಗ ಇಲ್ಲ, ಅದೇ ಬಂದಿದ್ದು ನನಗೆ ತಾಪತ್ರಯ. ಆದ್ದರಿಂದ ಈ ವ್ಯವಸ್ಥೆಗೆ ನೀವು ಮಾಡಿರತಕ್ಕಂಥ ಕಾನೂನನ್ನು ನಾನು ಒಪ್ಪಿಕೊಳ್ಳುತ್ತೇನೆ. ಬರುವಷ್ಟು ಹಣ ಬರಲಿ, ಹೋದಷ್ಟು ಹೋಗಲಿ ಎಂದು ಏನು ಒಂದು ನಿರ್ಧಾರ ತೆಗೆದುಕೊಂಡಿದ್ದೀರಿ ಅದು ಒಳ್ಳೆಯ ನಿರ್ಧಾರ. ಆ ಜಾಗ ಹಾಗಿರಲಿ, ಈ ನಿರ್ಧಾರ ತೆಗೆದುಕೊಂಡು ನೀವು ಡಿಲೇ ಮಾಡಿಕೊಂಡು ಬಂದಷ್ಟು ತೊಂದರೆಯಾಗುವಂಥದ್ದಕ್ಕೆ ಇದೊಂದು ಉದಾಹರಣೆ. ಇದರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಿ. ಇದರ ಬಗ್ಗೆ ಅಷ್ಟು ಏಕೆ ನಾನು ವಿಚಾರ ಹೇಳುತ್ತಿದ್ದೇನೆಂದರೆ ಇದರಲ್ಲಿ ಸುಮಾರು 13 ಸಾವಿರ ಎಕರೆ ಜಾಗ ಇದೆ. ಈ 13 ಸಾವಿರ ಎಕರೆ ಜಾಗದಲ್ಲಿ ಎಸ್ಟೇಟ್ ಮಾಲೀಕನಿಗಿರುವ ಜಾಗ 6 ಸಾವಿರ ಎಕರೆ ಮಾತ್ರ. ಇನ್ನು ಉಳಿದಿರತಕ್ಕಂಥ ಆರೂವರೆ ಸಾವಿರ ಎಕರೆ ಜಾಗ ಅದು ಸರ್ಕಾರಿ ಜಾಗವಾಗುತ್ತದೆ. ಒಳ್ಳೆಯ ಬೆಲೆ ಬಾಳುವ ಮರಗಳು ಇರತಕ್ಕಂಥ ಅತ್ಯುತ್ತಮ ಜಾಗ. ಸನ್ಮಾನ್ಯ ಜಾಲಪ್ಪನವರು ಜ್ಞಾಪದಲ್ಲಿಟ್ಟುಕೊಳ್ಳಬೇಕು ಅದು ಏನೆಂದರೆ ಪ್ರತಿ ವರ್ಷ ಇದರಲ್ಲಿ ಇರತಕ್ಕಂಥ ಮರಗಳು ಸುಮಾರು ಒಂದು ಕೋಟಿ ರೂಪಾಯಿ ಬೆಲೆ ಬಾಳುವಷ್ಟು ಈ ಎಸ್ಟೇಟಿನಿಂದ ಹೊರಗೆ ಹೋಗುತ್ತದೆ. ಮತ್ತು ಇಲ್ಲಿ ಇರುವ ಟೀ ಎಸ್ಟೇಟಗೆ ಅದೇ ಕಾಡಿನಿಂದ ಸೌದೆ ಸಿಗುತ್ತದೆ. ಅಸಿಸ್ಟೆಂಟ್ ಕಮಿಷನರ್ ಇಡೀ ಏರಿಯಾ ಜೀಪಿನಲ್ಲಿ ಸುತ್ತಿ ಎಷ್ಟು ಎಕರೆ ಜಾಗದಲ್ಲಿ ಮರ ನಾಶವಾಗಿದೆ ಅದರ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ, ಇದು ಎಲ್ಲರಿಗೂ ಗೊತ್ತಿದೆ. ಆದರೆ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈಗಲಾದರೂ ಈ ವಿಷಯದ ಕಡೆಗೆ ಹೆಚ್ಚು ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ಅರಣ್ಯ ಮಂತ್ರಿಗಳಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಅರಣ್ಯ ಮತ್ತು ಕಂದಾಯ ಎರಡೂ ಕಾಡು ಮತ್ತು ಭೂಮಿಗೆ ಸಂಬಂಧಪಟ್ಟಂಥ ಇಲಾಖೆಗಳು ಆಗಿರುವುದರಿಂದ ಇವೆರಡೂ ಇಲಾಖೆಗಳಲ್ಲಿ ಅನೇಕ ವಿಚಾರಗಳ ಬಗ್ಗೆ ಹೊಂದಾಣಿಕೆ ಇರಬೇಕಾಗುತ್ತದೆ. ಹೊಂದಾಣಿಕೆ ಇಲ್ಲದೆ ಅರಣ್ಯ ಇಲಾಖೆ ಮೇಲೆ ಕಂದಾಯ ಇಲಾಖೆಯವರು, ಕಂದಾಯ

ಇಲ್ಲಾಖೆಯ ಮೇಲೆ ಅರಣ್ಯ ಇಲಾಖೆಯವರು ಹೇಳಿಕೊಂಡಿದ್ದರೆ ಸಾರ್ವಜನಿಕರಿಗೆ ಆಗಬೇಕಾದಂಥ ಕೆಲಸ ಸಮರ್ಪಕವಾಗಿ ಆಗುವುದಿಲ್ಲ. ಒಂದು ಉದಾಹರಣೆಯನ್ನು ಕೊಡುವುದಾದರೆ, ನಿಮ್ಮ ಅರಣ್ಯ ಇಲಾಖೆಯಲ್ಲಿ ಒಬ್ಬ ವ್ಯಕ್ತಿ ಸ್ವಂತ ಉಪಯೋಗಕ್ಕೋಸ್ಕರ ಇವನು ಎಷ್ಟು ಮರ ಕಡಿಯಬಹುದು ಎಂದು ಹೇಳಿ ಫ್ರೀ ಪಾಸ್ ಇದೆ. ನೀವು 300 ಘನ ಅಡಿ ಮರವನ್ನು ಕೊಡುತ್ತೀರಿ. ಕೊನೆಯ ಪಕ್ಷ ಒಬ್ಬ ವ್ಯಕ್ತಿ 50 ಘನ ಅಡಿ ಮರ ಕಡಿಯೇಕಾದರೆ, ಅದಕ್ಕೋಸ್ಕರ ಮಾಫಿ ಪಾಸಗೆ ಅರ್ಜಿ ಸಲ್ಲಿಸಿದರೆ ಕೊನೆಯ ಪಕ್ಷ 5-6 ತಿಂಗಳು ಬೇಕಾಗುತ್ತದೆ. ಅರಣ್ಯ ಇಲಾಖೆ, ಕಂದಾಯ ಇಲಾಖೆಗೆ ಹೀಗೆ ಸುತ್ತಿ ಸುತ್ತಿ ಅವನು ಸುಸ್ತಾಗಿಬಿಡುತ್ತಾನೆ. ಆದ್ದರಿಂದ ಅವನು ಏನು ಮಾಡುತ್ತಾನೆಂದರೆ ನಿಮ್ಮನ್ನು ಕೇಳದೆಯೇ ಅವನು ಮರ ಕಡಿಯುತ್ತಾನೆ. ಆದ್ದರಿಂದ ಈ ಕಾನೂನಿನಲ್ಲಿ ಏನೇನು ತೊಡಕುಗಳು ಇರುತ್ತವೆ ಅವುಗಳನ್ನು ಸರಿಪಡಿಸಬೇಕಾಗುತ್ತದೆ. ಹೇಗಿದ್ದರೂ ನಿಮ್ಮ ಪಾಸ್ ಮರ ಕಡಿಯುವುದಕ್ಕೆ ಕೊಡುತ್ತೀರಿ. ಅವನು ಮರ ಕಡಿಯುವ ಜಾಗ ಅವನ ಜಾಗವೇ ಎಂಬುದನ್ನು ಗೊತ್ತುಮಾಡಿಕೊಳ್ಳಬೇಕಾಗುತ್ತದೆ. ಜಾಗ ಅವನದ್ದೇ ಎಂದು ಗೊತ್ತಾದ ಮೇಲೆ ಮರ ಕಡಿಯುವುದಕ್ಕೆ ತಕರಾರು ಏಕೆ? ಹೀಗಾಗಿ, 6-7 ತಿಂಗಳು ಬರತಕ್ಕಂಥ ಈ ಒಂದು ಕಾರ್ಯಕ್ರಮದಿಂದ ಇವತ್ತು ಮಾಫಿ ಪಾಸ್ ಇರುವಂಥವರು ಕೂಡ ಮರ ಕಡಿಯುವಂಥ ವ್ಯವಸ್ಥೆಗೆ ಸರ್ಕಾರ ಹಚ್ಚಿದಹಾಗೆ ಆಗುತ್ತದೆ. ಇದನ್ನು ಸ್ವಲ್ಪ ಸರಳಗೊಳಿಸಬೇಕು. ಎರಡನೆಯದು ಏನೆಂದರೆ ಆನೇ ತುಳಿದು ಸತ್ತರೆ ಅವನ ಕುಟುಂಬದವರಿಗೆ ಪರಿಹಾರಧನ 25 ಸಾವಿರ ರೂಪಾಯಿ. ಅಂದರೆ ಅವನ ಪ್ರಾಣಕ್ಕೆ ಅಷ್ಟು ಬೆಲೆ ನೀವು ಕಟ್ಟಿದ್ದೀರಿ. ಬೇರೆ ಯಾವುದೇ ಗಲಾಟೆಯಲ್ಲಿ ಸತ್ತರೆ ಅವನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತೀರಿ. ಇದೊಂದು ವಿಚಿತ್ರ ಪರಿಸ್ಥಿತಿ. ಈ ರೀತಿಯ ವ್ಯವಸ್ಥೆ ಹೋಗಬೇಕು. ಆನೆ ತುಳಿದು ಸತ್ತವನು ಅದು ಕೂಡ ಸಾವು. ಪುನಃ ಅವನು ಅರ್ಧ ಜೀವ ಆಗಿ ವಾಪಸ್ಸು ಬರುವುದಿಲ್ಲ. ಬೇರೆ ಕಾರಣಗಳಿಂದ ಸತ್ತವನು ಅದು ಕೂಡ ಸಾವು. ಸತ್ತ ಮೇಲೆಅವರಿಗೆ 1 ಲಕ್ಷ ರೂಪಾಯಿ ಕೊಡಬೇಕಲ್ಲಾ ಆದ್ದರಿಂದ ಇದನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಆನೆ ತುಳಿದು ಸತ್ತವರಿಗೂ ಕೂಡ 1 ಲಕ್ಷ ರೂಪಾಯಿ ಪರಿಹಾರ ಧನವನ್ ಕೊಡಬೇಕು. ಇದು ಬಹಳ ಸುಲಭ. ಯಾವಾಗಲೂ ಆನೆ ತುಳಿಯುವುದಿಲ್ಲ. ಅಪರೂಪಕ್ಕೆ ಒಂದೊಂದು ಸಾರಿ ಆನೆ ತುಳಿತಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಅರಣ್ಯ ಇಲಾಖೆಯ ಒಂದು ವಿಚಿತ್ರವಾದ ಸಮಸ್ಯೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಟಿ. ಬಿ.ಜಯಚಂದ್ರ : ಆನೆ ತುಳಿದು ಸತ್ತರೆ ಪುನರಜನ್ಮ ಸಿಕ್ಕುತ್ತದೆಂದು ಸರ್ಕಾರದ ನಂಬಿಕೆ ಇರಬಹುದು.

ಶ್ರೀ ಬಿ.ಬಿ. ಶಿವಪ್ಪ : ಈ ಅರಣ್ಯ ಇಲಾಖೆಯಲ್ಲಿ ಒಂದು ವಿಚಾರ ನಡೆಯಿತು. ಮಾಲೂರಿನಲ್ಲಿ ಒಬ್ಬ ವ್ಯಕ್ತಿಯನ್ನು ಆನೆ ತುಳಿದುಬಿಟ್ಟಿತು. ಅವನ ಅದೃಷ್ಟ ಗಟ್ಟಿ ಇದ್ದುದರಿಂದ ಅವನು ಬದುಕಿಕೊಂಡ. ಅವನು ಹೇಗೆ ಬದುಕಿದ್ದಾನೆಂದರೆ ಕೈಯಿಲ್ಲ, ಕಾಲಿಲ್ಲ, ಸೊಂಟ ಇಲ್ಲ, ಏನೋ ಉಸಿರಾಡುತ್ತಿದ್ದಾನೆ. ಅಂದರೆ ಅವನ ಜೀವಂತ ಶವ. ಅವನಿಗೆ ಪರಿಹಾರ ಧನ ಕೊಡಬೇಕೆಂದು ಅರ್ಜಿ ಹಾಕಿದರೆ ಅದಕ್ಕೆ

ಸರ್ಕಾರದಿಂದ ಒಂದು ಪತ್ರ ಬಂದಿದೆ. ಅದರಲ್ಲಿ ಏನು ಬರೆದಿದ್ದಾರೆಂದರೆ ಪ್ರಾಣ ಹೋಗದೆ ಇರುವುದರಿಂದ ಅವನಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಇದು ಸರ್ಕಾರದ ಆಜ್ಞೆ. ತಪ್ಪು ಅವನದೋ ಅಥವಾ ಆನೆಯದೋ? ಆನೆ ತುಳಿಯುವಾಗ ಸರಿಯಾಗಿ ತುಳಿಯಬೇಕಾಗಿತ್ತು ಅವನ ಪ್ರಾಣ ಹೋಗುವ ಹಾಗೆ, ಅವನು ಜೀವಂತ ಶವ. ಅವನು ಇದ್ದರೂ ಸತ್ತಹಾಗೆ. ಅವನ ಪರಿಸ್ಥಿತಿ ಏನಿದೆ ಎನ್ನುವುದು ನೋಡಿ ಸಹಾಯ ಮಾಡಬೇಕೇ ವಿನಃ ಸತ್ತವರಿಗೆ 25 ಸಾವಿರ ರೂಪಾಯಿ ಕೊಡುವುದು ಎಂದು ನಿಮ್ಮ ಸರ್ಕಾರದಲ್ಲಿ ಕಾನೂನು ಇದೆ, ಅವನು ಸಾಯಲಿಲ್ಲ ಆದ್ದರಿಂದ ಪರಿಹಾರ ಕೊಡುವುದಿಲ್ಲ, ಎಂದು ಹೇಳುವುದು ಯಾವ ತೀರ್ಮಾನ ? ಕಾನೂನುಗಳಲ್ಲಿರತಕ್ಕಂಥ ಈ ಸಣ್ಣ ಸಣ್ಣ ವ್ಯತ್ಯಾಸಗಳು ಏನಿವೆ ಅವುಗಳನ್ನು ಸರಿಮಾಡಿಕೊಳ್ಳದೇ ಹೋದರೆ ಜನ ಖಂಡಿತ ಸುಮ್ಮನಿರುವುದಿಲ್ಲ. ಈ ಸರ್ಕಾರದಲ್ಲಾದರೂ ಇದನ್ನು ಸರಿಪಡಿಸಬೇಕು.

ಶ್ರೀ ಹೆಚ್. ವೈ.ಮೇಟಿ : ಸನ್ಮಾನ್ಯ ಉಪಾಧ್ಯಕ್ಷರೆ, ಈಗ ಅಂಗವಿಕಲನಾದರೆ 10 ಸಾವಿರ ರೂಪಾಯಿಗಳನ್ನು ಪರಿಹಾರ ಧನವನ್ನಾಗಿ ಕೊಡುತ್ತೇವೆ. ಈಗಾಗಲೇ ಅವನಿಗೆ 10 ಸಾವಿರ ರೂಪಾಯಿ ಪರಿಹಾರ ಧನವನ್ನು ಕೊಟ್ಟಿರಬೇಕು. ಆನೆ ತುಳಿತಕ್ಕೆ ಒಳಗಾದ ವ್ಯಕ್ತಿಗೆ 10 ಸಾವಿರ ರೂಪಾಯಿ ಕೊಟ್ಟಿಲ್ಲವೆಂದರೆ ನನಗೆ ಅರ್ಜಿಯನ್ನು ಕಳುಹಿಸಿ ಕೊಡಿ. ನಾನು ಕೂಡಲೇ ಪರಿಹಾರಧನವನ್ನು ಕೊಡಿಸುತ್ತೇನೆ. ಅವರು 50 ಸಾವಿರ ಪರಿಹಾರ ಧನಕ್ಕೆ ಪ್ರಪೋಸಲ್ ಕಳುಹಿಸಿದ್ದರು.

ಶ್ರೀ ಬಿ.ಬಿ. ಶಿವಪ್ಪ : ಆಯಿತು, ಕಳುಹಿಸಿಕೊಡುತ್ತೇನೆ. ನೀವು 10 ಸಾವಿರ ರೂಪಾಯಿ ಅಲ್ಲ, ಒಂದು ಲಕ್ಷ ರೂಪಾಯಿ ಕೊಟ್ಟರೂ ಸಹ ಸಾಕಾಗುವುದಿಲ್ಲ. ಅವನಿಗೂ ಏನೂ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನೊಂದು ಏನೆಂದರೆ ಪರಿಹಾರ ಕೊಡುವಂಥದ್ದು. ಸತ್ತು ಹೋಗಿದ್ದುದು ಆದರೆ ತೀರ್ಮಾನವಾಗಿರುತ್ತದೆ. ತೀರ್ಮಾನವಾಗದೆ ಅಲ್ಲಿಂದ ಸತ್ತ ಶರೀರವನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಪರಿಹಾರ ಧನ ತಕ್ಷಣ ಸಂಬಂಧಪಟ್ಟಂಥ ಕುಟುಂಬಕ್ಕೆ ಸಿಗಬೇಕು. ಎಕೆಂದರೆ ಆನೆ ತುಳಿತಕ್ಕೆ ಸಿಕ್ಕಿ ಸಾಯುತಕ್ಕಂಥವರು ಶ್ರೀಮಂತರು ಅಲ್ಲ. ಏಕೆಂದರೆ ಶ್ರೀಮಂತರು ಕಾಡಿನೊಳಗೆ ಸೌದೆ ತರುವುದಕ್ಕೆ, ಸೊಪ್ಪು ತರುವುದಕ್ಕೆ ಹೋಗುವುದಿಲ್ಲ. ಆನೆ ತುಳಿಯುವುದು ಕಾಡಿನೊಳಗೆ. ಊರಿನೊಳಗೆ ಬಂದು ಆನೆ ತುಳಿಯುವುದು ಬಹಳ ಅಪರೂಪ. ನಮ್ಮ ಮನೆಯೊಳಗೆ ಬಂದು ಆನೆ ತುಳಿಯುವುದಿಲ್ಲ. ನಮ್ಮ ಮನೆಯ ಹತ್ತಿರ ಆನೆ ಬರುವುದಿಲ್ಲ. ಆದ್ದರಿಂದ ಪರಿಹಾರ ಧನಕ್ಕಾಗಿ ನಾಲ್ಕಾರು ತಿಂಗಳು ಕಾಯುವಂತಹ ಪರಿಸ್ಥಿತಿ ಇರಬಾರದು. ಏನು ಸರ್ಕಾರ ಪರಿಹಾರಧನ ಕೊಡುತ್ತದೆ ಅದನ್ನು ತಕ್ಷಣದಲ್ಲಿಯೇ ಕೊಡುವಂತಾಗಬೇಕು. ಅದೇ ರೀತಿಯಲ್ಲಿ ಆನೆಗಳು ಅನೇಕ ರೈತರ ಹೊಲಗದ್ದೆಗಳಿಗೆ ನುಗ್ಗಿ ಸಾಕಷ್ಟು ನಷ್ಟ ಮಾಡುತ್ತಾ ಇದೆ. ಅದಕ್ಕೆ ಸರ್ಕಾರ ಏನು ಪರಿಹಾರ ನೀಡುತ್ತಾರೆ? ಅವನಿಗೆ ಎಷ್ಟೇ ನಷ್ಟವಾದರೂ ಅಂದಾಜು ಕೊಡುತ್ತದೆ. ಆದ್ದರಿಂದ ಒಬ್ಬ ರೈತನಿಗೆ ಎಷ್ಟು ನಷ್ಟವಾಗಿದಯೆಂದು ಅಂದಾಜು ಮಾಡಲಿಕ್ಕೆ ಹೋಗತಕ್ಕಂಥ ಅಧಿಕಾರಿಗಳು ಎಷ್ಟು ನಷ್ಟವಾಗಿದೆಯೆಂದು ಅಂದಾಜು ಮಾಡಿಕೊಡುತ್ತಾರೋ ಅಷ್ಟು ಹಣವನ್ನು ಸರ್ಕಾರದಿಂದ

ಕೊಡಬೇಕು. ಅಂದರೆ ನಷ್ಟ ಒಂದು ಲಕ್ಷ ರೂಪಾಯಿ ಆಗಿದ್ದರೆ 1 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದ್ದು ಆತನಿಗೆ ಕೇವಲ 1 ಸಾವಿರ ರೂಪಾಯಿ ಪರಿಹಾರಧನವೆಂದು ಕೊಡುವಂಥಾದ್ದು ಆಗಬಾರದು. ಅಂದರೆ ಆ ರೀತಿ ನಷ್ಟ ಮತ್ತು ಪರಿಹಾರಧನದಲ್ಲಿ ವ್ಯತ್ಯಾಸವಿರಬಾರದು.

ಅನ್ಯಾಯವಾಗಿ ಅವನು ಒಂದು ವರ್ಷ ಕಷ್ಟಪಟ್ಟಂತಹ ಆ ಬೆಳೆ ಇನ್ನೊಂದು ವರ್ಷ ಕಷ್ಟಪಟ್ಟು ಬೆಳೆಯಬೇಕಾಗುತ್ತದೆ. ಅದಕ್ಕೆ ಪರಿಹಾರವನ್ನು ಕೊಡತಕ್ಕಂಥಹ ಸಂದರ್ಭದಲ್ಲಿ ಕೇವಲ 100,200 , 500ರೂಪಾಯಿಗಳನ್ನು ಮತ್ತೆ ಈ 500 ರೂಪಾಯಿಗಳನ್ನು ತೆಗೆದುಕೊಳ್ಳಬೇಕಾದರೂ ನಿಮ್ಮ ಇಲಾಖೆಯಲ್ಲಿ 500 ರೂಪಾಯಿಗಳಲ್ಲಿ 350 ರೂಪಾಯಿಗಳು ಖರ್ಚಾಗಿ ಬಿಟ್ಟಿರುತ್ತದೆ. ಇನ್ನು ಉಳಿಯುವುದೇ 150 ರೂಪಾಯಿಗಳು ಇದರ ಬಗ್ಗೆ ನಿಮಗೆ ಗೊತ್ತಿಲ್ಲ. ಆದುದರಿಂದ ಇದರ ಬಗ್ಗೆ ಕೂಡಲೇ ಅಲ್ಲಿಯೇ ಪರಿಹಾರವನ್ನು ಕೊಡತಕ್ಕಂತಹ ವ್ಯವಸ್ಥೆಯಾಗಬೇಕು. ಇನ್ನು ಮೊನ್ನೆ ಇದರ ಪ್ರಸ್ತಾಪವನ್ನು ಸಹ ಮಾಡಿದ್ದಾರೆ. ನಿನ್ನೆ ಇದರ ಬಗ್ಗೆ ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಒಂದನೇ ತಾರೀಖಿನಿಂದ ಸಾರಾಯಿ ಮಾರಾಟ ಮಾಡುವುದನ್ನು ನಿಲ್ಲಿಸುತ್ತೇವೆ ಎನ್ನತಕ್ಕಂಥದ್ದು, ಈ ವಿಷಯವನ್ನು ಸ್ವಾಗತ ಮಾಡತಕ್ಕಂತಹ ವಿಚಾರ. ಇದನ್ನು ನಿಲ್ಲಿಸಲೇ ಬೇಕಾಗುತ್ತದೆ. ಇದನ್ನು ನಿಲ್ಲಸದೇ ಇದ್ದರೆ ನಮಗೆ ತಲೆತಗ್ಗಿಸಿ ನಡೆಯತಕ್ಕಂತಹ ಪರಿಸ್ಥಿತಿ ಬರುತ್ತದೆ. ನಿಮಗೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಮೊನ್ನೆ 15-20 ದಿವಸಗಳ ಹಿಂದೆ ಕೊಡಗಿನಲ್ಲಿ ಒಂದು ಜಾತ್ರೆಯ ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ನಾನು ಭಾಷಣವನ್ನು ಮಾಡುವುದಕ್ಕೆ ನಿಂತಾಗ ನನಗೆ ತಂದು ಕೊಟ್ಟಿತ್ತು. ಕೈಯಲ್ಲಿ ಇಟ್ಟುಕೊಂಡು ಭಾಷಣವೆಲ್ಲಾ ಮುಗಿದ ಮೇಲೆ ನೋಡಿದೆ. ಆ ಚೀಟಿಯಲ್ಲಿ ಹೆಣ್ಣು ಮಗು ಏನು ಬರೆದಿತ್ತು ಎಂದರೆ, ಇವತ್ತು ಬೆಳಿಗ್ಗೆ ಸಾರಾಯಿ ಅಂಗಡಿಯ ಮುಂದೆ ಒಂದು ಹೆಣ ಬಿದ್ದಿತ್ತು ಇದಕ್ಕೆ ನಿಮ್ಮ ಉತ್ತರ ಏನು ಎಂದು. ಯಾರೋ ಒಬ್ಬ ವಿಶೇಷವಾಗಿರತಕ್ಕಂತಹ ಜಾತ್ರೆ ಎಂದು ಹೇಳಿ ಅಲ್ಲಿ ಸ್ಪೇಷನ್ ಪರ್ಮಿಷನ್ ಕೊಟ್ಟು ಸಾರಾಯಿ ಅಂಗಡಿಯು ತೆರೆದಿತ್ತು ರಾತ್ರಿಯಲ್ಲಿ ಯಥೇಚ್ಚವಾಗಿ ಕುಡಿದು ಸತ್ತು ಹೋದ. ಇದಕ್ಕೆ ಆ ಹೆಣ್ಣು ಮಗು ಹೇಳುತ್ತದೆ ಇದಕ್ಕೆ ನಿಮ್ಮ ಉತ್ತರ ಏನು ಎಂದು. ನಾನೇನು ಉತ್ತರವನ್ನು ಕೊಡಬೇಕು? ಇನ್ನೊಬ್ಬ ಹುಡುಗ ಭಾಷಣವನ್ನು ಮಾಡುತ್ತಾ ಇರತಕ್ಕಂತಹ ಸಂದರ್ಭದಲ್ಲಿ ಟೇಬಲ್ ಮುಂದೆ ಹಣ್ಣುಗಳನ್ನು ಇಟ್ಟಿರುತ್ತಾರೆ ಬಂದು ಮುಂದೆ ನಿಂತುಕೊಂಡು ನನ್ನದು ಒಂದು ಒಂದೂವರೆ ಗಂಟೆಗಳ ಕಾಲ ಕಾರ್ಯಕ್ರಮ. ಅಲ್ಲಿಯವರೆಗೆ ಅವನು ಅಲ್ಲಿಯೇ ನಿಂತುಕೊಂಡ. ನಾನು ಏನು ತಿಳಿದುಕೊಂಡಿದ್ದೆ ಎಂದರೆ ಹಣ್ಣುಗಳನ್ನು ನೋಡಿಕೊಂಡು ನಿಂತಿರಬಹುದು ಎಂದು. ಎಲ್ಲಾ ಕಾರ್ಯಕ್ರಮಗಳು ಮುಗಿದ ಮೇಲೆ ಆ ಹುಡುಗನಿಗೆ ಒಂದು ಸೇಬಿನ ಹಣ್ಣನ್ನು ತೆಗೆದು ಆ ಹುಡುಗನಿಗೆ ಕೊಟ್ಟೆ. ಬೇಡ ಸಾರ್ ಎಂದ, ಬೇರೆ ಹಣ್ಣುಗಳನ್ನು ಕೊಟ್ಟೆ. ದ್ರಾಕ್ಷಿ ಕೊಟ್ಟೆ ಏನು ಕೊಟ್ಟರೂ ಬೇಡ ಸಾರ್ ಬೇಡ ಸಾರ್ ಎಂದು. ಅಲ್ಲಪ್ಪ ಒಂದೂವರೆ ಗಂಟೆಗಳ ಕಾಲದಿಂದಲೂ ನಿಂತಿರುತ್ತೀಯ ಏನು ಕೊಟ್ಟರೂ ಬೇಡ ಎನ್ನುತ್ತೀಯಲ್ಲಾ ಎಂದೆ. ಮತ್ತೆ ಏಕೆ ನಿಂತಿದ್ದೀಯಾ ಎಂದೆ. ಸಾರ್ ನಮ್ಮ ಊರಿನಲ್ಲಿ ಒಂದು ಸಾರಾಯಿ ಅಂಗಡಿ ಇದೆ ಸಾರ್ ತೆಗೆಸಿಬಿಡಿ ಸಾರ್ ಎಂದ. ಆ ಸಣ್ಣ ಮಗುವಿನ ಮನಸ್ಸಿನಲ್ಲಿ ಅಷ್ಟರಮಟ್ಟಿಗೆ ಆಗಿರಬೇಕಾದರೆ ನಾಳೆ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರನ್ನು ಕೇಳಬೇಕಾಗುತ್ತದೆ. ಸಣ್ಣ

ಮಕ್ಕಳ ಮನಸ್ಸಿನಲ್ಲಿ ಸಾರಾಯಿ ಅಂಗಡಿ ನಮ್ಮ ಊರಿನಲ್ಲಿ ಬೇಡ ಎಂದು ಎರಡು ವರ್ಷದ ಒಂದು ಹುಡುಗ ಹೇಳುತ್ತಾನೆ. ಸಾರಾಯಿ ಅಂಗಡಿಯ ಮುಂದೆ ಒಂದು ಹೆಣ ಬಿದ್ದಿದೆ. ಇದನ್ನು 7 ವರ್ಷದ ಹುಡುಗಿಯು ಹೇಳುತ್ತಾಳೆ. ಇವರ ಮನಸ್ಸಿನಲ್ಲಿ ನಾಳೆ ದಿವಸ ಏನು ಪರಿಣಾಮ ಬೀರಬಹುದು. ನಾನು ಆಮೇಲೆ ಆ ಹುಡುಗನಿಗೆ ಕೇಳಿದೆ, ಕೊನೆಗೆ ನನ್ನ ಜೊತೆಯಲ್ಲಿ ಇದ್ದವರನ್ನು ಕೇಳಿದೆ ಆ ಹುಡುಗ ಏಕೆ ಆ ರೀತಿಯಾಗಿ ಹೇಳಿದ ಎಂದು. ಅದಕ್ಕೆ ಅವರು ಆ ಹುಡುಗ ತಂದೆ ವಿಪರೀತವಾಗಿ ಕುಡಿಯುತ್ತಾನೆ. ಅವನು ಎಷ್ಟು ಕುಡಿಯುತ್ತಾನೋ ಅವನಿಗೆ ಗೊತ್ತಾಗುವುದಿಲ್ಲ. ತಾಯಿ, ಮನೆಯಲ್ಲಿರತಕ್ಕಂತಹ ಅಣ್ಣ ತಂಗಿ ತುಂಬಾ ಹಿಂಸೆಯನ್ನು ಕೊಡುತ್ತಾನೆಂದು. ಆ ಹಿಂದೆ ಆ ಮಗುವಿನ ಮೇಲೆ ತುಂಬಾ ಪರಿಣಾಮವನ್ನು ಬೀರಿ ನಾಳೆ ಆ ಹುಡುಗ ಕ್ರೂರಿ ಆಗಿಯೇ ಆಗುತ್ತಾನೆ. ಒಂದಲ್ಲ ಒಂದು ದಿವಸ ಆ ತಂದೆಗೆ ಏನಾದರೂ ಮಾಡಿಯೇ ಮಾಡುತ್ತಾನೆ ಅಂದ ಹಾಗೆ ಅವನು ಅಪರಾಧಿಯಾಗುತ್ತಾನೆ. ಈ ಅಪರಾಧ ಸ್ಥಾನಕ್ಕೆ ಕಳುಹಿಸತಕ್ಕಂದ್ದು ಏನಿದೆ, ಅಥವಾ ಕುಡಿಸುವಂಥದ್ದು ಏನು ಒಳ್ಳೆಯ ವಸ್ತುವನ್ನು ಏನು ಕುಡಿಸುತ್ತೀರೋ? ನಮ್ಮ ಹಳ್ಳಿಗಳಲ್ಲಿ ಹಿಂದೆ ಇತ್ತು ಬೆಳಿಗ್ಗೆಯೇ ಒಳ್ಳೆಯ ಸೇಂದಿಯನ್ನು ಕಟ್ಟಿಕೊಡುತ್ತಾರೆಂದು ಇವತ್ತು ಅದು ಇಲ್ಲ.? ಇವತ್ತು ಬರೀ ಕಲಬೆರಕೆಯೂ ಇಲ್ಲ ಬರೀ ವಿಷ. ಆದುದರಿಂದ ಸರ್ಕಾರದವರು ಸಾರಾಯಿಯನ್ನು ಹಂತ ಹಂತವಆಗಿ ತೆಗೆಯುತ್ತೇವೆ ಎಂದು ಹೇಳುತ್ತಿದ್ದಾರೆ, ಅದನ್ನು ನೀವು ಹಂತ ಹಂತವಾಗಿಯೇ ತೆಗೆಯಿರಿ ಅಂತೂ ತೆಗೆಯಬೇಕು ಎಂದು ತೀರ್ಮಾನವನ್ನು ತೆಗೆದುಕೊಳ್ಳಿ. ಇವತ್ತು ಸಾರಾಯಿ ಮಾರಾಟವನ್ನು ಮದ್ರಾಸನಲ್ಲಿ ತೆಗೆದಿದ್ದಾರೆ. ಮದ್ರಾಸನಲ್ಲಿ ಯಾರು ಕುಡಿಯತ್ತಾರೋ ಇಲ್ಲವೋ ಎಂಬುದನ್ನು ಲೆಕ್ಕ ಹಾಕುವುದಕ್ಕೆ ಆಗುವುದಿಲ್ಲ, ಅಂತಹ ಜಾಗದಲ್ಲಿ ಧೈರ್ಯ ಮಾಡಿ ತೆಗೆದಿದ್ದಾರೆ. ಆಂಧ್ರಪ್ರದೇಶದಲ್ಲಿ ಇದನ್ನು ತೆಗೆದಿದ್ದಾರೆ. ಆದರೆ ನಮ್ಮಲ್ಲಿ ಏಕೆ ತೆಗೆದುಹಾಕುವುದಕ್ಕೆ ಆಗುವುದಿಲ್ಲ? ತೆಗೆಯಬಹುದು ನಮ್ಮಲ್ಲಿಯೂ ಅದರ ಬಗ್ಗೆ ಸರ್ಕಾರ ಸ್ವಲ್ಪ ಗಮನವನ್ನು ಕೊಡಬೇಕಾಗುತ್ತದೆ. ಇನ್ನೂ ಸರ್ಕಾರದಲ್ಲಿ ಹಂತ ಹಂತವಾಗಿ ಲೂಟಿಯಾಗುತ್ತಿರತಕ್ಕಂಥದ್ದು ಎಂದರೆ ಗ್ರಾನೈಟ್ ಗ್ರಾನೈಟ್ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಲಾಗಿತ್ತು ಅದರ ಬಗ್ಗೆ ನಾನು ಇಲ್ಲಿ ಏನೂ ಹೇಳುವುದಿಲ್ಲ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಯನ್ನು ಪಡುತ್ತೇನೆ. ಸರ್ಕಾರಕ್ಕೆ ಇದರಿಂದ ಬರತಕ್ಕಂತಹ ಉತ್ಪತ್ತಿ ನೂರಾರು ಕೋಟಿ ರೂಪಾಯಿಗಳು. ಆದರೆ ಗ್ರಾನೈಟ್ ಉದ್ಯಮೆಯನ್ನು ಮಾಡುತ್ತಿರತಕ್ಕಂಥಹ ವ್ಯಕ್ತಿ ಉತ್ಪನ್ನ ಸಾವಿರಾರು ಕೋಟಿ ರೂಪಾಯಿಗಳು. ಸರ್ಕಾರಕ್ಕೆ ಬರುತ್ತಿರತಕ್ಕಂತಹ ಉತ್ಪತ್ತಿ ನೂರಾರು ಕೋಟಿ ರೂಪಾಯಿಗಳು. ಇದು ಎಲ್ಲವನ್ನು ನೋಡಿದಾಗ ಈ ವ್ಯಾಪಾರವೇ ಬೇಡ ಇದನ್ನು ನಿಲ್ಲಿಸಿ. ನಮ್ಮ ಪೂರ್ವಿಕರು ಎಂತಹ ಒಂದು ಬುದ್ಧಿವಂತಿಕೆಯ ಕೆಲಸವನ್ನು ಮಾಡಿದ್ದಾರೆ ಎಂದರೆ ನಮ್ಮ ಕರ್ನಾಟಕದಲ್ಲಿ ಇರತಕ್ಕಂತಹ ಅಷ್ಟು ಕಲ್ಲಿನ ಜಾಗ ಏನಿದೆ. ಅದು ಎಲ್ಲದರ ಮೇಲೆ 'ದೇವರ ಗುಡಿಗಳನ್ನು ಕಟ್ಟಿದ್ದಾರೆ. ಬಹುಶಃ ಅವರ ಮನಸ್ಸಿನಲ್ಲಿ ಗುಡಿಗಳನ್ನು ಕಟ್ಟುವ ಉದ್ದೇಶ ಏನು ಇತ್ತು ಎಂದರೆ, ಅಲ್ಲಿ ದೇವರು ಇದ್ದಾನೆ, ದೇವಸ್ಥಾನ ಇದೆ, ಅಲ್ಲಿ ಏನು ತೊಂದರೆ ಮಾಡಬಾರದು ಎಂದು ಈ ಜನಗಳ ಭಾವನೆಯಲ್ಲಿ ಇರುತ್ತದೆಂದು ಇತ್ತು. ಆದರೆ ಈ ರೀತಿಯಾಗಿ ಕಾಲ ಬದಲಾವಣೆಯಾಗುತ್ತದೆ ಅವರಿಗೆ ಗೊತ್ತಾಗಿರಲಿಲ್ಲ. ಈಗ ದೇವ ವಿಗ್ರಹವನ್ನೇ

ತೆಗೆದುಕೊಂಡು ಹೋಗಿ ವಿದೇಶಕ್ಕೆ ಕಳುಹಿಸಿ, ಕಲ್ಲನ್ನು ಅಡಿಯಿಂದ ತೆಗೆದು ಬಿಡುತ್ತಾರೆ. ಇದರ ಬಗ್ಗೆ ಯಾವುದೇ ಒಂದು ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕಲ್ಲಾ, ಕಲ್ಲಿನಿಂದ ಏನೇನೂ ಸರ್ಕಾರಕ್ಕೆ ಉತ್ಪತ್ತಿಯಾಗುತ್ತಿಲ್ಲ. ಮರವನ್ನು ಕಡಿದರೆ ನೀವು ಕಾಡನ್ನು ಬೆಳೆಯಬಹುದು. 20-25 ವರ್ಷದಲ್ಲಿ ಅಂಥದ್ದೇ ಒಂದು ಕಾಡನ್ನು ಬೆಳೆಯಬಹುದು. ಆದರೆ ಒಂದು ಕಲ್ಲನ್ನು ಹೊರಕ್ಕೆ ತೆಗೆದರೆ ಮತ್ತೆ ಆ ಕಲ್ಲನ್ನು ಈ ಶತಮಾನ ಅಲ್ಲ ಲಕ್ಷಾಂತರ ವರ್ಷಗಳು ಕಳೆದರೂ ಸಹ ಸಾಧ್ಯವಿಲ್ಲ. ಈ ದೇಶದ ಸಂಪತ್ತು ಏನು ಇದೆ ಈ ರಾಜ್ಯದ ಸಂಪತ್ತು ಏನು ಇದೆ ಮುಂದೆ ಬರತಕ್ಕಂಥ ಪೀಳಿಗೆಗಾದರೂ ನೋಡಲಿಕ್ಕೆ ಇದು ಉಳಿದಿರಲಿ. ದಯಮಾಡಿ, ತಾವು ಸಾರಾಯಿಯ ಮಾರಾಟವನ್ನು ತೆಗೆಯಬೇಕೆಂದು ಮಾಡಿದಿರೋ, ಸುಮಾರು 500-600 ಕೋಟಿ ರೂಪಾಯಿಗಳನ್ನು ವರಮಾನ ಬರತಕ್ಕಂತಹ ಸಾರಾಯಿ ಮಾರಾಟವನ್ನು ನಿಲ್ಲಿಸಬೇಕು ಅನ್ನತಕ್ಕಂತಹ ಈ ಯೋಜನೆಯನ್ನು ಮಾಡುತ್ತಾ ಇರತಕ್ಕಂತಹ ಈ ಸರ್ಕಾರ ಕಲ್ಲನ್ನು ತೆಗೆಯುವುದನ್ನು ನಿಲ್ಲಿಸದೇ ಇರುವುದು ಸರಿಯಲ್ಲ. ಆದ್ದರಿಂದ ಗ್ರಾನೈಟ್ ವ್ಯವಹಾರವನ್ನು ನಮ್ಮ ರಾಜ್ಯದಲ್ಲಿ ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಅನುಕೂಲವಾಗಿರತಕ್ಕಂತಹ ಅನೇಕ ಸ್ಥಳ ಇವೆ. ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ನಮ್ಮ ಅರಣ್ಯ ಮಂತ್ರಿಗಳ ಕ್ಷೇತ್ರದಲ್ಲಿ ಸಾಕಷ್ಟು ಇದೆ. ಇವತ್ತು ನಮ್ಮಲ್ಲಿ ಒಬ್ಬರು ಡಿ.ಎಫ್.ಓ.ರವರು ಒಬ್ಬರು ಇದ್ದಾರೆ. ನಾನು ಅವರು ಒಂದು ಸಾರಿ ಪ್ರವಾಸೋದ್ಯಮಕ್ಕೆ ಒಂದು ಜಾಗವನ್ನು ಗುರುತು ಮಾಡಿದೆವು. ಅಲ್ಲಿ ಒಂದು ಪ್ರೇಕ್ಷಣೀಯ ಸ್ಥಳ ಎಂದು 4-5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಪ್ರವಾಸೋದ್ಯಮದ ಜಾಗವನ್ನು ಮಾಡಿದ್ದಾರೆ. ದಿವಸಕ್ಕೆ ಏನು ಇಲ್ಲ ಎಂದರೆ 50-100 ವಾಹನಗಳಲ್ಲಿ ಅಲ್ಲಿಯೇ ಇರತಕ್ಕಂತಹ ಹಳ್ಳಿಯವರೂ ಸಹ ಅಲ್ಲಿಗೆ ನೋಡಲಿಕ್ಕೆ ಹೋಗುತ್ತಿದ್ದಾರೆ. ಡಿ.ಎಫ್.ಓ.ರವರು ಕೂಡ ಹೇಳುತ್ತಿದ್ದಾರೆ ಎಂದರೆ ಇಷ್ಟು ಒಳ್ಳೆಯ ಸೀನ್, ಹಿಮಾಲಯ ಪರ್ವತದ ಹತ್ತಿರವೂ ಸಹ ಸಿಗುವುದಿಲ್ಲವೆಂದು. ಅದರಲ್ಲಿಯೂ ಮಲೆನಾಡು ಪ್ರದೇಶದಲ್ಲಿ ಅಂತೂ ಸಾಕಷ್ಟು ಇದೆ. ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಕೇವಲ ಕೋಟಿಯಾಂತರ ರೂಪಾಯಿಗಳನ್ನು ಕೇಳುವುದಿಲ್ಲ, ನೀವು ಮಾಡಬೇಕಾಗಿರುವಂಥದ್ದು ಆ ಪ್ರದೇಶಕ್ಕೆ ಹೋಗುವುದಕ್ಕೆ ರಸ್ತೆ, ಅಲ್ಲಿ ನಿಂತು ಹೋಗಿ ನೋಡುವುದಕ್ಕೆ ಒಂದು ವ್ಯವಸ್ಥೆ. ಕೆಲವಾರು ಲಕ್ಷ ರೂಪಾಯಿಗಳಲ್ಲಿ ಆಗುವಂತಹ ಈ ವ್ಯವಹಾರಗಳನ್ನು ಜಾಗ ಹುಡುಕಿ ಮಾಡತಕ್ಕದ್ದು ಬಹು ಸೂಕ್ತ. ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆಶ್ರಯ, ಅಂಬೇಡ್ಕರ್ ಅವಾಸ್ ಯೋಜನೆಯ ಈ ಮನೆಗಳು ಏನಿವೆ ಇದರ ಹಂಚಿಕೆಯ ಯೋಜನೆ ಏನಿದೆ ಇದು ಸರಿಯಿಲ್ಲ. ಆದರೆ ಇದರ ಉದ್ದೇಶ ಒಳ್ಳೆಯದು ಇದೆ. ಹಂಚಿಕೆಯ ಸಂಪೂರ್ಣವಾಗಿ ಕಲುಷಿತವಾಗಿದೆ. ಅದನ್ನು ಸರಿಪಡಿಸಬೇಕಾಗುತ್ತದೆ. ಇವತ್ತು ಮನೆ ಹಂಚಿಕೆ ಇರತಕ್ಕದ್ದು ಮನೆ ಇರುವವರಿಗೆ ಮನೆ. ಇದು ಆಗಬಾರದು ಎಂದು ನಿಮ್ಮ ಗೈಡ್‌ಲೈನ್‌ನಲ್ಲಿದೆ. ಇವತ್ತು ಮನೆ ಇರುವವರು ಕೊಟ್ಟಿಗೆಗೋಸ್ಕರ ನಿಮ್ಮ ಮನೆಗಳನ್ನು ತೆಗೆದುಕೊಂಡಿದ್ದಾರೆ. ಅನೇಕ

ಉದಾಹರಣೆಗಳನ್ನು ಬೇಕಾದರೆ ಹೇಳುತ್ತೇನೆ. ಬರೀ ಕೊಟ್ಟಿಗೆಗೋಸ್ಕರವಾಗಿ ಮನೆಗಳನ್ನು ತೆಗೆದುಕೊಂಡಿರತಕ್ಕಂಥದ್ದನ್ನು ಬೇಕಾದರೆ ಯಾರಾದರೂ ಕೇಳಿದರೆ ತೋರಿಸಬಲ್ಲೆ. ಮತ್ತು ಆ ಮನೆಗಳಿಗೆ ನಿಮ್ಮ ಭಾಗ್ಯ ಜ್ಯೋತಿ ಯೋಜನೆಗಳಿಂದ ಲೈಟುಗಳನ್ನು ಸಹ ಹಾಕಿಸಿಕೊಂಡಿದ್ದಾರೆ. ಸರ್ಕಾರದ ಯೋಚನೆ ಏನಿದೆ, ಇದು ಯಾರಿಗೆ ತಲುಪಬೇಕು ಅವರಿಗೆ ತಲುಪುತ್ತಿಲ್ಲ. ಅಂದಮೇಲೆ ಸರಿಯಾದ ಕ್ರಮವನ್ನು ಮಾಡಬೇಕು. ನಾವು ಕಟ್ಟಿ ಬಿಟ್ಟಿದ್ದೇವೆ 2 ಲಕ್ಷ ಮನೆಗಳನ್ನು ಎಂದರೆ ಏನೂ ಪ್ರಯೋಜನವಿಲ್ಲ, ಆ ಮನೆಯ ಗುಣಮಟ್ಟ ಏನಿದೆ ಎಂದರೆ ಇವರು ಕೊಡತಕ್ಕಂತಹ ಮನೆಗಳು ಎರಡು ವರ್ಷಗಳ ಕಾಲ ಬರುವುದಿಲ್ಲ. ಆದರೆ ಸರ್ಕಾರ ಇಂತಹ ಮನೆಗಳಿಗೆ 15-20 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತದೆಯಲ್ಲಾ! ನೀವು ಕಟ್ಟತಕ್ಕಂತಹ ಮನೆಗಳು ಯಾವುದೂ ಎರಡು ವರ್ಷಗಳಿಗಿಂತ ಹೆಚ್ಚಿಗೆ ಬಾಳಿಕೆ ಇರುವುದಿಲ್ಲ. ಯಾವುದಕ್ಕೂ ಕೂಡ ಅದರ ಆಯಸ್ಸು ಬಹಳ ಕಡಿಮೆ ಇದೆ. ಇದನ್ನು ಸರಿಯಾದ ರೀತಿಯಲ್ಲಿ ಮಾಡಬೇಕು ಎಂದರೆ ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಆ ಕಡೆ ಗಮನವನ್ನು ಕೊಡಬೇಕಾಗುತ್ತದೆ. ಮತ್ತು ಸ್ಥಳೀಯ ಆ ಇಲಾಖೆಯಲ್ಲಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳನ್ನು ಸ್ವಲ್ಪ ಎಚ್ಚರಗೊಳಿಸಬೇಕಾಗುತ್ತದೆ. ಎಚ್ಚರಗೊಳಿಸದೇ ಇದ್ದರೆ ಹಾಗೂ ಬಹುತೇಕ ಈ ಕಾರ್ಯಕ್ರಮಗಳನ್ನು ಸರಿಪಡಿಸುತ್ತೇನೆಂದು ಸರ್ಕಾರ ಹೇಳದಿದ್ದರೆ ತಪ್ಪಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಶ್ರೀ ಗೋವಿಂದೇಗೌಡರು ಇದ್ದಾರೆ, ಆದರೆ ಎಲ್ಲರೂ ಇಲ್ಲ. ಗೋವಿಂದೇಗೌಡರನ್ನು ಎದುರಿಗೆ ಕೂರಿಸಿಕೊಂಡು ಹೇಳತಕ್ಕಂತಹ ಮಾತುಗಳು ಇದು ಅಲ್ಲ. ಆ ಇಲಾಖೆಯಲ್ಲಿ ಸುಧಾರಣೆ ಆಗಲ್ಲದಿದ್ದರೂ ಅದರಲ್ಲಿ ಸುಧಾರಣೆಯಾಗುತ್ತದೆಂದು ಸೂಚನೆಯಾದರೂ ಕಾಣುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಆಗಲಿ, ವಿದ್ಯಾ ಇಲಾಖೆಯಲ್ಲಿ ಆಗಲಿ ಏನೋ ಸುಧಾರಣೆಗಳು ಆಗುತ್ತಿವೆ. ಇಷ್ಟೋ ವರ್ಷಗಳಿಂದ ಆಗ ಬಂದಿರತಕ್ಕಂಥದ್ದನ್ನು ಒಂದೇ ಸಾರಿ ಸರಿಪಡಿಸುತ್ತೇನೆಂದು ಯಾರಾದರೂ ಹೇಳಿದರೆ ತಪ್ಪಾಗುತ್ತದೆ. ಮತ್ತು ಸತ್ಯಕ್ಕೆ ದೂರವಾದಂತಹ ಮಾತು ಸಹ ಆಗುತ್ತದೆ. ಆದರೆ ಎಲ್ಲರ ಗಮನಕ್ಕೂ ಬಂದಿರುವುದು ಏನೆಂದರೆ ಈ ಇಲಾಖೆಗಳಲ್ಲಿ ಏನೋ ಒಂದು ಸುಧಾರಣೆ ನಡೆಯುತ್ತಿದೆ ಎಂದು ಆ ಒಂದು ಪ್ರಯತ್ನ ನಡೆಯುತ್ತಿದೆ ಎಂಬ ಒಂದು ಭಾವನೆ ಜನಗಳಲ್ಲಿ ಬರಬೇಕು. ಸರ್ಕಾರ ಅಧಿಕಾರಕ್ಕೆ ಬರಬಹುದು ಅಧಿಕಾರವನ್ನು ಕಳೆದುಕೊಳ್ಳಬಹುದು. ಆದರೆ ಇರುವಷ್ಟು ದಿವಸಗಳ ಕಾಲ ಇಂತಹ ಒಂದು ಸರ್ಕಾರ ಅಧಿಕಾರದಲ್ಲಿ ಇತ್ತಪ್ಪ. ಆ ಕಾಲದಲ್ಲಿ ಇಂತಹ ಕೆಲಸಗಳು ಆಯಿತು ಎನ್ನುವ ಯೋಚನೆಯನ್ನು ಮಾಡಬೇಕೇವಿನಃ ಈ ಸರ್ಕಾರ 50 ವರ್ಷಗಳ ಕಾಲ ಅಧಿಕಾರದಲ್ಲಿತ್ತು ಎನ್ನುವುದು ಮುಖ್ಯವಲ್ಲ. ಈ ಸರ್ಕಾರ 5 ವರ್ಷ ಅಧಿಕಾರದಲ್ಲಿ ಇರಲಿ, ಎರಡೇ ವರ್ಷ ಅಧಿಕಾರದಲ್ಲಿರಲಿ ಅವರು ಏನು ಒಳ್ಳೆಯದನ್ನು ಮಾಡಿದರೂ ನಿಲ್ಲುತ್ತದೆ. ಆದುದರಿಂದ ಈ ಕಡೆ ಸರ್ಕಾರದವರು ಗಮನ ಹರಿಸಿ ಕೆಲವು ಒಳ್ಳೆಯ ಮಂತ್ರಿಗಳು ಈ ಸರ್ಕಾರದಲ್ಲಿ ಇದ್ದೀರಿ. ಶ್ರೀ ಎಂ. ಪಿ. ಪ್ರಕಾಶರವರು ಇದ್ದೀರಿ, ಒಳ್ಳೆಯ ಖಾತೆಯನ್ನು ತೆಗೆದುಕೊಂಡಿದ್ದೀರಿ. ಕರ್ನಾಟಕದ ಗ್ರಾಮಕ್ಕೆ ಅನುಕೂಲವಾಗುವಂತಹ ಕೆಲಸ ಅಂದರೆ ಶೌಚಾಲಯದ ಬಗ್ಗೆ ಮಾತನಾಡುತ್ತೀದ್ದೀರಿ ಲಕ್ಷಾಂತರ ಶೌಚಾಲಯಗಳ ಬಗ್ಗೆ ನಾನು ಮಾತನಾಡಿದರೆ ಅದರ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದ

ಹಾಗೆ ಆಗುತ್ತದೆ. ಎರಡು ಸಾವಿರ ರೂಪಾಯಿಗಳಿಗೆ ಶೌಚಾಲಯ ಇವತ್ತು ನನ್ನ ಜೊತೆಯಲ್ಲಿ ಬನ್ನಿ ಅದನ್ನು ಕಟ್ಟಲು ಹಸಿಯಾದ ಪೈಪುಗಳನ್ನು ಕೊಟ್ಟಿದ್ದಾರೆ. ಹಸಿಯಾದ ಶೌಚಾಲಯಗಳನ್ನು ಕಟ್ಟಿದ್ದಾರೆ. ಇದನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಏನು ಇದು ಎಲ್ಲಾ ತೆಗೆದುಕೊಂಡು ಬರುವಾಗಲೇ ಒಡೆದುಹೋಗಿದೆ ಇದನ್ನು ಯಾವ ರೀತಿಯಲ್ಲಿ ಹಾಕುವುದು ಇದು ಸರಿಯಾಗುವುದಿಲ್ಲ ಎಂದು ಹೇಳಿದರ ಅದು ಬಂದಿರುವುದೇ ಹಾಗೆ ಅದನ್ನು ಬೇಕಾದರೆ ಹಾಕಿ ಬೇಡದಿದ್ದರೆ ಬಿಡಿ ಎಂದು ಅಧಿಕಾರಿಗಳು ಹೇಳುತ್ತಾರೆ. ಅವರು ಏನೂ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೂ ಎಲ್ಲಿಂದಲೋ ಬಂದಿರುವುದು. ಆ ರೀತಿಯಾಗಿ ಕಾರ್ಯಕ್ರಮಗಳನ್ನು ಮಾಡಿದ್ದೇವೆಂದು ಹೇಳುತ್ತೀರಿ. ಆದರೆ ಆ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಆಗುತ್ತಿದೆ ಎನ್ನುವುದರ ಬಗ್ಗೆ ಮೇಲುಸ್ತುವಾರಿ ಏನಿದೆ ಆ ಮೇಲುಸ್ತುವಾರಿ ನೋಡತಕ್ಕಂತಹ ವ್ಯವಸ್ಥೆ ಸರಿಯಾಗಿ ಇಲ್ಲ. ಆದರೆ ಶೌಚಾಲಯಗಳನ್ನು ನೀರು ಮುಖ್ಯವಾದುದು. ಸರಿಯಾದಂತಹ ನೀರಿನ ವ್ಯವಸ್ಥೆ ಇಲ್ಲದಿದ್ದರೆ ನಿಮ್ಮ ಶೌಚಾಲಯದ ವ್ಯವಸ್ಥೆಯಾಗುವುದಿಲ್ಲ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಇನ್ನು ಶೌಚಾಲಯಕ್ಕೆ ಎಲ್ಲಿಂದ ನೀರು ತರುವುದು? ಈ ಪರಿಸ್ಥಿತಿ ಇರುವಾಗ ಯಾವ ಗ್ರಾಮಕ್ಕೆ ಯಾವ ಸರ್ಕಾರ ಇಂದಿನ ಸರ್ಕಾರ ಇರಬಹುದು, ಹಿಂದೆ ಅಧಿಕಾರದಲ್ಲಿದಂತಹ ಸರ್ಕಾರ ಇರಬಹುದು ಮುಂದೆ ಬರತಕ್ಕಂತಹ ಸರ್ಕಾರ ಇರಬಹುದು. ಯಾರೇ ಆದರೂ ಕೂಡ ಗ್ರಾಮಕ್ಕೆ ಹೋಗುವುದಕ್ಕೆ ಒಂದು ಒಳ್ಳೆಯ ರಸ್ತೆ ಆ ಗ್ರಾಮಕ್ಕೆ ಹೆಣ್ಣು ಮಕ್ಕಳಿಗೆ ಬೇಕಾದಂತಹ ಕುಡಿಯುವ ವ್ಯವಸ್ಥೆ ಇವು ಎರಡು ಮಾಡಿದರೆ ಆ ಸರ್ಕಾರವನ್ನು ಯಾವುದೇ ಕಾರಣಕ್ಕೆ ಯಾವುದೇ ಕಾಲಕ್ಕೆ ಜನ ಆ ಸರ್ಕಾರವನ್ನು ಬದಲಾಯಿಸುವುದಿಲ್ಲ. ಈ ಎರಡು ಕೆಲಸವನ್ನು ಮಾಡುವುದಕ್ಕೆ ಆಗುತ್ತಿಲ್ಲ, ಅದು ಸಾಧ್ಯವೂ ಇಲ್ಲ. ಆದ್ದರಿಂದ ಈ ಎರಡು ಕೆಲಸಕ್ಕೆ ಹೆಚ್ಚಿನ ಗಮನ ಹರಿಸಬೇಕೆಂದು ಹೇಳುತ್ತಾ ಈ ಸಂದರ್ಭದಲ್ಲಿ ನನಗೆ ಮಾತಮಾಡುವುದಕ್ಕೆ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯದ ಮೇಲಿನ ಚರ್ಚೆ ಇದು. ನಾನು ಮೂಲಭೂತವಾಗಿ ಮಾನ್ಯ ರಾಜ್ಯಪಾಲರ ಭಾಷಣದ ವ್ಯವಸ್ಥೆಯನ್ನೇ ನಾನು ವಿರೋಧ ಮಾಡಿರುವುದು ತಮಗೆ ಗೊತ್ತಿದೆ. ಆದರೆ ವೈಯಕ್ತಿಕವಾಗಿ ಮಾನ್ಯ ರಾಜ್ಯಪಾಲರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಈಗಿರತಕ್ಕ ಮಾನ್ಯ ಖುರ್ಷಿದ್ ಆಲಂಖಾನರವರ ಬಗ್ಗೆ ಬಹಳ ಅಪಾರವಾದ ಗೌರವ ಇಟ್ಟುಕೊಂಡಿದ್ದೇನೆ. ಯಾವುದೇ ವೈಯುಕ್ತಿಕ ದ್ವೇಷದಿಂದ ಮಾನ್ಯ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ಅದನ್ನು ಹರಿದು ಹಾಕುವಂಥ ಪ್ರಸಂಗ ಅಲ್ಲ. ಒಂದು ಮಹತ್ವದ ತತ್ವದ ದೃಷ್ಟಿಯಿಂದ ನಾನು ಹೇಳಿದ್ದೇನೆ. ಈ ವ್ಯವಸ್ಥೆಯಲ್ಲಿ ಸರ್ಕಾರದವರು ತಯಾರು ಮಾಡಿದಂಥ ಭಾಷಣವನ್ನು ಮಾನ್ಯ ರಾಜ್ಯಪಾಲರು ಓದುವುದು, ಅದೇ ರಾಜ್ಯಪಾಲರು ಅದೇ ಸರ್ಕಾರವನ್ನು ಕಿತ್ತು ಹಾಕತಕ್ಕದ್ದು ಏನಿದೆ ಇದು ಒಂದಕ್ಕೊಂದು ವಿಪರ್ಯಾಸ. ಈ ವಿಪರ್ಯಾಸ ವ್ಯವಸ್ಥೆಯನ್ನು ಕೇವಲ ನಮ್ಮ ಕರ್ನಾಟಕದ ಶಾಸನಸಭೆ ಬದಲಾವಣೆ ಮಾಡಬೇಕೆಂದು ನನ್ನ ವಾದವಲ್ಲ. ಸಮಗ್ರವಾಗಿ ಇಡೀ

ದೇಶದಲ್ಲಿ ಇದರ ಬಗ್ಗೆ ಚಿಂತನೆ ಆಗಬೇಕು. ಆ ಚಿಂತನೆಯಿಂದ ಈ ವ್ಯವಸ್ಥೆ ಬದಲಾವಣೆಯಾಗಬೇಕೆಂಬ ಒಂದುಪ್ರಶ್ನೆಯನ್ನು ಬಿಟ್ಟರೆ, ನಾನು ವೈಯಕ್ತಿಕವಾಗಿ ಮಾನ್ಯ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡಬೇಕೆಂದು ಅಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯ ಇದಾಗಿದೆ. ಇದರ ಹೆಸರೇ ವಂದನೆಯನ್ನು ಅರ್ಪಿಸುವುದು. ವಂದನೆ ಎನ್ನುವ ಪದವೇ ಬಹಳ ಗಾಂಭೀರ್ಯವಾದ ಪದ. ವಂದನೆ ಎಂದರೆ, ಇದರ ವಿರುದ್ಧ ಯಾವುದೇ ಮಾತನ್ನೂ ಆಡುವಂತಿಲ್ಲ. ವಂದನೆ ಎಂದರೆ ಸಾಷ್ಟಾಂಗ ಹಾಕತಕ್ಕದ್ದು, ಕೈ ಮುಗಿಯತಕ್ಕದ್ದು, ಅಥವಾ ನಾಲ್ಕಾರು ಒಳ್ಳೆಯ ಮಾತನಾಡತಕ್ಕದ್ದು. ಇದರಲ್ಲಿ ಟೀಕೆ ಮಾಡತಕ್ಕ ಪ್ರಶ್ನೆ ಬರುವುದಿಲ್ಲ. ಆದರೆ ಇದರಲ್ಲಿ ಬದಲಾವಣೆ ಮಾಡಬೇಕು. ಇದರ ಬಗ್ಗೆ ಸಮಗ್ರವಾದ ಚರ್ಚೆಯನ್ನು ಯಾರು ಯಾವ ದಿಕ್ಕಿನಲ್ಲಿ ಬೇಕಾದರೂ ಮಾಡಬಹುದೆಂಬುದು ಒಂದು. ವಂದನಾ ನಿರ್ಣಯ ಎಂದರೆ ಇದರ ಅರ್ಥ ಬಹಳ ವಿಶಾಲವಾಗಿದೆ. ನಾವೇ ಈ ರಾಜ್ಯಪಾಲರ ಭಾಷಣವನ್ನು ಒಂದು ರೀತಿಯ ವಿಪರ್ಯಾಸಕ್ಕೆ ಈಡುಮಾಡುತ್ತಿದ್ದೇವೆ. ಇದರ ಜೊತೆಗೆ ಭಾಷಣವಾದನಂತರ ಗಾಂಭೀರ್ಯತೆಯಿಂದ ಎಷ್ಟು ಒತ್ತನ್ನು ಇದಕ್ಕೆ ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಇದಕ್ಕೆ ಯಾರೂ ಅಂದರೆ ಸರ್ಕಾರ ಬೆಲೆಯನ್ನು ಕೊಡುತ್ತಿಲ್ಲ. ಕಾರಣವಾದರೂ ಏನು? ಇದಕ್ಕೆ ನೀವು ಉತ್ತರವನ್ನು ಕೊಡುವುದಾದರೂ ಯಾವಾಗ? ಈ ಭಾಷಣದ ಚರ್ಚೆ ಮುಗಿದನಂತರ ತಕ್ಷಣ ಇದಕ್ಕೆ ವಂದನಾ ನಿರ್ಣಯವನ್ನು ಸರ್ಕಾರದ ವತಿಯಿಂದ ಉತ್ತರವನ್ನು ಕೊಡುವ ಮೂಲಕ ಮಾಡಬೇಕು. ತಾವು ಈ ವಂದನಾ ನಿರ್ಣಯಕ್ಕೆ ಯಾವಾಗ ಉತ್ತರವನ್ನು ಕೊಡುತ್ತೀರೆಂದರೆ, ಆಯವ್ಯಯದ ಮಂಡನೆ ಆದಮೇಲೆ ಇದಕ್ಕೆ ಉತ್ತರವನ್ನು ಕೊಡುತ್ತಾರೆಂಬ ಒಂದು ವದಂತಿ ಇದೆ. ನಾವು ಈ ರಾಜ್ಯಪಾಲರ ಭಾಷಣವನ್ನು ಎಷ್ಟು ಹೀನಾಯವಾಗಿ ಕಾಣುತ್ತಿದ್ದೇವೆಂದರೆ, ನಾನು ಈ ಭಾಷಣವನ್ನು ವಿರೋಧ ಮಾಡುವುದಕ್ಕಿಂತ ಹೆಚ್ಚಾಗಿ ಸರ್ಕಾರವೇ ಈ ಭಾಷಣಕ್ಕೆ ಅಗೌರವ, ಅಪಚಾರವನ್ನು ಮಾಡುವುದಕ್ಕೆ ಹೊರಟಿದೆ. ಇದು ಸತ್ಯ. ಮಾನ್ಯ ರಾಜ್ಯಪಾಲರ ಭಾಷಣ ಹೇಗಿರಬೇಕು, ಏನಿರಬೇಕೆಂದು ಲಂಬಿಸುವುದಕ್ಕೆ ಹೋಗುವುದಿಲ್ಲ. ನನ್ನ ಅಭಿಪ್ರಾಯ ಎಂದರೆ ಈ ನೀತಿ ಬದಲಾವನೆ ಆಗಬೇಕು, ಈ ವ್ಯವಸ್ಥೆ ಬದಲಾವಣೆ ಆಗಬೇಕು. ನನ್ನ ಮೂಲಭೂತ ತತ್ವ ಎಂದರೆ, ಪ್ರಜಾತಂತ್ರ, ಪ್ರಜಾ ವ್ಯವಸ್ಥೆ ನಾನು 1967 ರಿಂದ ಈ ಶಾಸನ ಸಭೆಯಲ್ಲಿದ್ದೇನೆ. ಮಾನ್ಯ ನಿಜಲಿಂಗಪ್ಪನವರು, ಮಾನ್ಯ ವೀರೇಂದ್ರಪಾಟೀಲರುಗಳು ಮುಖ್ಯಮಂತ್ರಿಗಳಾಗಿದ್ದಾಗಿನಿಂದ ಕೊನೆಯವರೆಗೆ ಇದ್ದೆ. ಆದರೆ ಆ ಮಧ್ಯೆ ಮಾನ್ಯ ಮೊಯಿಲ್ಲಿಯವರು, ಮಾನ್ಯ ಬಂಗಾರಪ್ಪನವರು, ಮಾನ್ಯ ರಾಮಕೃಷ್ಣ ಹೆಗಡೆಯವರು ಬಂದಾಗ ಕೆಲವು ದಿವಸ ನಾನು ಇರಲಿಲ್ಲ. ನಾನು ಎಲ್ಲವನ್ನೂ ನೋಡಿಕೊಂಡು ಬಂದಿದ್ದೇನೆ. ಈ ಸದನವನ್ನು ನಾವು ಅವತ್ತಿನಿಂದ ಸುವರ್ಣ ಯುಗದಲ್ಲಿ ನೋಡಿದಂಥ ಮನುಷ್ಯ. 1967ರಲ್ಲಿ ಈ ಸದನದಲ್ಲಿ ಒಬ್ಬ ಶಾಸಕರ ಖುರ್ಚಿಯೂ ಖಾಲಿ ಇರುತ್ತಿರಲಿಲ್ಲ. ಒಂದು ಸೌಭಾಗ್ಯ ಎಂದರೆ ಆಗ ಇಲ್ಲಿ ನನ್ನ ಪಕ್ಕದಲ್ಲಿ ಸಾಹುಕಾರ ಚೆನ್ನಯ್ಯನವರು ಇದ್ದರು. ಇದೆಲ್ಲವನ್ನೂ ಕಣ್ಣಾರೆ ಅವತ್ತು ನೋಡಿದಂಥ ನನಗೆ ಇವತ್ತು ಅನಿಸುತ್ತದೆ, ವಿಜಯನಗರದ ಸಾಮ್ರಾಜ್ಯದ ವೈಭವವನ್ನು ನೋಡಿದಂಥ ಕಣ್ಣುಗಳೇ ಇವತ್ತು ಅದರ ಅವಶೇಷವನ್ನು ನೋಡುತ್ತಿರುವಂಥ ಪರಿಸ್ಥಿತಿ ಬಂದಿದೆ ಎನ್ನುವಂಥ ನೋವಾಗುತ್ತಿದೆ. ಅವತ್ತಿನ

ಸರ್ಕಾರಗಳು ಏನಿದುವು ಅವು ವಿರೋಧಪಕ್ಷದವರು ಮಾಡಿದಂಥ ಟೀಕೆಗಳಿಗೆ ಪ್ರಾಮಾಣಿಕವಾಗಿ ಉತ್ತರಗಳನ್ನು ಕೊಡುತ್ತಿದ್ದವು. ಹಿಂದೆಮುಂದೆ ಬೀಳುತ್ತಿರಲಿಲ್ಲ. ಅನ್ಯಾಯವಾಗಿದೆ ಎಂದರೆ ಅದರ ಸತ್ಯಾಂಶವನ್ನು ನೋಡಿ ಮರೆಮಾಚತಕ್ಕ ಒಪ್ಪಿಕೊಳ್ಳತಕ್ಕ ವ್ಯವಸ್ಥೆ ಇತ್ತು. ಇವತ್ತು ತಮಗೇ ಗೊತ್ತಿದೆ, ನಾವು ಪ್ರಶ್ನೆಗಳನ್ನು ಕಳುಹಿಸಿದರೆ ಉತ್ತರಗಳು ಬರುವುದೇ ಕಷ್ಟ. ಸುಮಾರು 250 ಪ್ರಶ್ನೆಗಳಿಗೆ ಉತ್ತರ ಇಲ್ಲ ಮತ್ತು ಈ ಸದನದಲ್ಲಿ ಪ್ರಶ್ನೆ ಬಂದಾಗ ಅದಕ್ಕೆ ಉಪ ಪ್ರಶ್ನೆಗಳನ್ನು ಕೇಳಿದರೆ 'ಪರಿಶೀಲನೆ' ಎಂದು ಹೇಳುತ್ತಾರೆ. ಜೊತೆಗೆ ಸಂಬಂಧಪಟ್ಟ ಸಚಿವರೂ ಇರುವುದಿಲ್ಲ, ಮತ್ತು ಪ್ರಶ್ನೆಯನ್ನು ಕೇಳಿದಂಥ ಸದಸ್ಯರೂ ಇರುವುದಿಲ್ಲ. ಇಂಥ ಒಂದು ವಾತಾವರಣ ಈ ಸಭೆಯಲ್ಲಿ ನಿರ್ಮಾಣವಾಗಿದೆ. ಇದರ ಜೊತೆಗೆ ಮುಕ್ತ ಚರ್ಚೆಗೆ ಗ್ರಹಣ ಹಿಡಿದಿದೆ. ಮುಕ್ತ ಚರ್ಚೆ ಎಂದರೆ, ಸರ್ಕಾರದ ವಿರುದ್ಧ, ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ, ಮಾನ್ಯ ಮಂತ್ರಿಗಳ ವಿರುದ್ಧ, ಪ್ರಾಮಾಣಿಕವಾಗಿ ನಾವು ಇಲ್ಲಿ ಚರ್ಚೆಯನ್ನು ಆರಂಭಿಸಿ ಟೀಕೆಯನ್ನು ಮಾಡಬೇಕಾದರೆ ಪ್ರಾಮಾಣಿಕ ವ್ಯವಸ್ಥೆ ಇದ್ದರೂ ಸರ್ಕಾರದ ಧೋರಣೆಯಿಂದ, ಅವರ ಸರ್ವಾಧಿಕಾರದ ಮನೋಭಾವನೆಯಿಂದ ನಾವು ಮಾತನಾಡತಕ್ಕ ಮಾತು ಈ ಸದನದಲ್ಲಿ ಪ್ರಾಮಾಣಿಕವಾಗಿ ಮಾತನಾಡಬೇಕೇ, ಬಿಡಬೇಕೇ, ಎನ್ನತಕ್ಕ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣವೂ ಉಂಟು. ನಾವು ಸರ್ಕಾರದವರೇ ನೇರವಾಗಿ ಪಕ್ಷಭೇದ ಮರೆತು ಟೀಕೆ ಮಾಡಿದರೆ ಆ ಕ್ಷೇತ್ರದ ಅಭಿವೃದ್ಧಿಗೆ ನೇರವಾಗಿ ಈ ಸರ್ಕಾರದವರೇ ಇವರು ಸರ್ಕಾರವನ್ನು ಬೈಯುತ್ತಿರುವ ಸದಸ್ಯರು, ಆ ಕ್ಷೇತ್ರದ ಅಭಿವೃದ್ಧಿಗೆ ಯಾವ ಯಾವ ರೀತಿಯಲ್ಲಿ ತೊಂದರೆ ಕೊಡಬೇಕು, ಇದರ ವಿರುದ್ಧವಾದ ಯಾವ ಯಾವ ಅಧಿಕಾರಿಗಳನ್ನು ಹಾಕಬೇಕು, ಏನೇನು ತೊಂದರೆ ಮಾಡಬೇಕೆಂಬ ಈ ತಂತ್ರಗಾರಿಕೆಯಿಂದ ಪ್ರಜಾತಂತ್ರದ ವ್ಯವಸ್ಥೆಗೆ, ಪ್ರಜಾಪ್ರಭುತ್ವದ ಮಹತ್ತರವಾದ ಅಂಗವಾದ ಶಾಸಕಾಂಗಕ್ಕೆ ಒಂದು ರೀತಿಯ ಗ್ರಹಣ ಹಿಡಿದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಮುಕ್ತ ಚರ್ಚೆಗೆ ಒಂದು ರೀತಿಯ ಅಪಾಯ. ಭಯೋತ್ಪಾದನೆಯನ್ನು ಹುಟ್ಟಿಸುವ ವ್ಯವಸ್ಥೆ ಆಗಬಾರದು. ನಾನು ವೈಯುಕ್ತಿಕವಾಗಿ ಯಾರಬಗ್ಗೆಯೂ ಮಾತನಾಡುತ್ತಿಲ್ಲ. ಈ ಸಂದರ್ಭದಲ್ಲಿ ತಮಗೆ ಒಂದು ಮಾತನ್ನು ಹೇಳವುದಾದರೆ, ನಿನ್ನೆ ಇಲ್ಲಿ ನಾನು ಮಾತನಾಡುವಾಗ ಈ ಸರ್ಕಾರ ಸತ್ತಿದೆ ಎಂದೆ. ಇದರಲ್ಲಿ ಏನು ಮಹಾ ಅಪರಾಧ ಇತ್ತು. ನನ್ನ ಪಕ್ಕದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪಮೊಯಿಲಿಯವರು ಕುಳಿತಿದ್ದಾರೆ. ಇವರಾಗಲಿ, ಮಾನ್ಯ ಬಂಗಾರಪ್ಪನವರಾಗಲಿ, ಮಾನ್ಯ ವೀರೇಂದ್ರ ಪಾಟೀಲರಾಗಲಿ, ಮಾನ್ಯ ರಾಮಕೃಷ್ಣ ಹೆಗ್ಡೆಯವರಾಗಲಿ ಇದ್ದಾಗ ಬೆಳಗಾವಿಯ ಪ್ರಶ್ನೆಯನ್ನು ತೆಗೆದುಕೊಂಡಾಗ ಅದನ್ನು ಸಂತೋಷವಾಗಿ ಸ್ವಾಗತಿಸಿ ಇನ್ನೂ ಒಂದು ಗಂಟೆ ಮಾತನಾಡಿ, ಕನ್ನಡದ ಇತಿಹಾಸ, ಗಡಿ ಸಮಸ್ಯೆ, ಹೀಗೆ ಎಲ್ಲವನ್ನೂ ಹೇಳುತ್ತಿದ್ದರು. ಆದರೆ ನಿನ್ನೆ ಈ ಸದನದಲ್ಲಿ ನಡೆದಂಥ ಒಂದೇ ಒಂದು ಸಂದರ್ಭದ ಘಾಟಿಯನ್ನು ತಮಗೆ ಹೇಳಬಯುಸುತ್ತೇನೆ. "ಸಾಕುಮಾಡಿ, ನಾನು 4 ವರ್ಷದಿಂದ ನೋಡಿದ್ದೇನೆ, ಸ್ವಲ್ಪ ಸದರ ಕೊಟ್ಟರೆ ಅತಿಯಾಯಿತು ಎಂದು ಹೇಳಿದರು. ನಾನು ಈ ಸದನದಲ್ಲಿ 1967 ಇಸವಿಯಿಂದ ಇರತಕ್ಕ ಹಿರಿಯ ಸದಸ್ಯ. ನಾನು ಯಾರ ಕೃಪೆಯಿಂದಲೂ ಈ ಶಾಸಕಾಂಗಕ್ಕೆ ಬರುತ್ತಿಲ್ಲ. ಯಾವ ಪಕ್ಷದ ಲೇಬಲನ್ನೂ ಹಾಕಿಕೊಂಡು ನಾನು ಬಂದವನಲ್ಲ. ನನ್ನದೇ ಆದಂಥ ತತ್ವ, ಸಿದ್ಧಾಂತಗಳನ್ನು ಇಟ್ಟುಕೊಂಡು

ಹೋರಾಟ ಮಾಡಿ ಚುನಾವಣೆಯಲ್ಲಿ ಗೆದ್ದು ಬಂದಿರುವವನು. 10-15 ವರ್ಷಕಾಲ ನಾನು ಗೆಲ್ಲದೇ ಹೊರಗಡೆ ಇದ್ದಾಗಲೂ ಕೂಡ ನಾನು ಯಾರ ಮನೆಯಬಾಗಿಲಿಗೂ ಹೋಗಿ ಕೈಮುಗಿದವನಲ್ಲ. ಯಾವ ಮಂತ್ರಿಗಳ ಹತ್ತಿರಕ್ಕೂ ಅರ್ಜಿಯನ್ನು ತೆಗೆದುಕೊಂಡು ಹೋದವನಲ್ಲ. ಸದಸ್ಯರಾಗಿ ಎಂದು ನಾನು ಯಾರನ್ನೂ ಕೇಳಿದವನಲ್ಲ. ಈ ಸದನದ ಲಾಂಜಗೆ ಸುಮಾರು 8 ವರ್ಷಗಳ ಕಾಲ ಬರಲೇ ಇಲ್ಲ. ನಾನು ಹೊರಗಡೆಯೇ ಇದ್ದೆ. ಹೊರಗಡೆ ಎಂದರೆ ಮರದ ಕೆಳಗೆ ಕುಳಿತಿದ್ದಿರಬಹುದು, ಅಥವಾ ಇನ್ನೆಲ್ಲೋ ಕುಳಿತಿದ್ದಿರಬಹುದು. ಆದರೆ ಯಾವ ಹತ್ತಿರವೂ ಒಂದು ನಾನು ಕೈಮುಗಿದು ನನ್ನ ಕೆಲಸಮಾಡಿಕೊಡಿ ಎಂದು ಕೇಳಿರಲಿಲ್ಲ. 'ಸದರ ಕೊಟ್ಟರೆ ಅತಿಯಾಯಿತು' ಎಂದು ಇವರು ಹೇಳಬೇಕಾದರೆ ಇವರು ನನಗೆ ಏನು ಸದರವನ್ನು ಕೊಟ್ಟಿದ್ದಾರೆ? ಇವರ ಮನೆಯಲ್ಲಿ ನಾನೇನಾದರೂ ಜೀತದ ಆಳಾಗಿದ್ದರೆ, ನೀನು ನಮ್ಮಮನೆಯ ಜೀತದಾಳು ಆಗಿದ್ದೀಯ, ನಾನು ನಿನಗೆ ಸದರ ಕೊಟ್ಟೆ, ಎಂದು ಹೇಳಬಹುದು. ಆದರೆ ಇದು ಸದನ. ಇದನ್ನು ಅವರ ಸ್ವಂತ ಮನೆಯನ್ನಾಗಿ ಮಾಡಿಕೊಳ್ಳಲು ಅವರಿಗೆ ಅಧಿಕಾರ ಇಲ್ಲ.

12.00 ಪಿ.ಎಂ

ಈ ಸದನಕ್ಕೆ ಸಾರ್ವಭೌಮತ್ವ ಇದೆ. ಅವರ ಹಾಗೇ ಜನರು ನನ್ನನ್ನು ಚುನಾಯಿಸಿ ಕಳುಹಿಸಿದ್ದಾರೆ. ನಾನು ಚುನಾಯಿತ ಪ್ರತಿನಿಧಿಯಾಗಿ ಇಲ್ಲಿ ಇದ್ದೇನೆ. ಅದರಲ್ಲಿ ಬೇರೆ ಮಾತು ಇಲ್ಲ. ನನ್ನನ್ನು ಚುನಾಯಿತ ಪ್ರತಿನಿಧಿಯಾಗಿ ಕಳುಹಿಸಿರತಕ್ಕವರು ಜನರು. ಈ ಸದನದಲ್ಲಿ ಕಾನೂನು ಪ್ರಕಾರ ನಮಗೆ ರಕ್ಷಣೆ ಕೊಡಬೇಕಾದವರು ತಾವು. ಅವರು ಸೌಜನ್ಯವಾಗಿ ನನ್ನ ಮಾತನ್ನು ಸ್ವೀಕಾರ ಮಾಡದೆ ಯಾವುದೋ ಕೋಪ ತಾಪದಲ್ಲಿ ಸದರ ಕೊಟ್ಟದ್ದು ಎಂದರೆ ಬಹುಶಃ ಅವರ ತಲೆಯಲ್ಲಿ ಏನು ಇಟ್ಟುಕೊಂಡಿದ್ದಾರೆಂದರೆ ಗೊತ್ತಿಲ್ಲ. ನಾನು ಕೆ.ಸಿ. ರೆಡ್ಡಿಯವರ ಕಾಲದಿಂದ ಕೇಳಿದ್ದೇನೆ, ಹನುಮಂತಯ್ಯನವರ ಕಾಲದಲ್ಲಿ ಒಳಗಡೆ ಬರುವುದಕ್ಕಾಗಲಿಲ್ಲ. ನಿಜಲಿಂಗಪ್ಪನವರ ಕಾಲದಲ್ಲಿ ಒಳಗಡೆ ಬಂದೆ. ಅಲ್ಲಿಂದ ವೀರಪ್ಪ ಮೊಯಿಲಿಯವರ ಕಾಲದವರೆಗೆ ದೇವೇಗೌಡರ ಕಾಲದವರೆಗೆ ಈ ಸದನದಲ್ಲಿದ್ದೇನೆ. ಯಾರೂ ಸ್ವಲ್ಪವು ಸಹ ಈ ರೀತಿ ಧೋರಣೆ ತಾಳಲಿಲ್ಲ. ದಿ: ಗೋಪಾಲಗೌಡರು ಒಂದು ಸಂದರ್ಭದಲ್ಲಿ (ಮೈಕ್) ಮುರಿದು ಎಸೆದರು. ಮತ್ತೊಂದು ಸಂದರ್ಭದಲ್ಲಿ ರಾಜ್ಯಪಾಲರ ಭಾಷಣವನ್ನು ಕೆಳಗೆ ಹಾಕಿ ಒಂದು ಸಾರಿ ತುಳಿಯುತ್ತೇನೆ, ಎರಡು ಸಾರಿ ತುಳಿಯುತ್ತೇನೆ, ಮೂರು ಸಾರಿ ತುಳಿಯುತ್ತೇನೆಂದ ಹೇಳಿದರು. ನಾನು ಗೋಪಾಲಗೌಡರಂಥ ಹಿರಿಯ ವ್ಯಕ್ತಿಗಳ ಜೊತೆಯಲ್ಲಿದ್ದೆ. ಶ್ರೀಯುತರುಗಳಾದ ಚನ್ನಬಸಪ್ಪ, ಸಿದ್ದವೀರಪ್ಪನವರಂಥ ಮಹಾನ್ ಮೇಧಾವಿಗಳ ಜೊತೆಯಲ್ಲಿದ್ದೆ. ಶ್ರೀಮಾನ್ ನಿಜಲಿಂಗಪ್ಪನವರಂಥ ರಾಜಕೀಯ ತಪಸ್ವಿಗಳ ಜೊತೆಯಲ್ಲಿದ್ದೆ ಮತ್ತು ದಿ|| ದೇವರಾಜ ಅರಸುರವರಂಥ ಬಹಳ ಮೇಲ್ಪಟ್ಟಕ್ಕೆ ಕರ್ನಾಟಕ ಏಕೀಕರಣವನ್ನು ತಂದಂಥ ಮಹಾನ್ ನಾಯಕರ ಜೊತೆಯಲ್ಲಿದ್ದೆ. ಅತ್ಯಂತ ಆತ್ಮೀಯತೆಯಿಂದ ಪ್ರೀತಿ ವಿಶ್ವಾಸದಿಂದ ಇದ್ದ ಮೊಯಿಲಿಯವರು, ಬಂಗಾರಪ್ಪನವರು, ವೀರೇಂದ್ರ ಪಾಟೀಲರ ಜೊತೆಯಲ್ಲಿದ್ದೆ. ಆದರೆ ನಿನ್ನೆ ಅವರು ನನ್ನನ್ನು ತೆಗೆದುಕೊಂಡ ದೃಷ್ಟಿ ನೋಡಿದಾಗ ನನಗೆ ಅನ್ನಿಸಿತು,

ಅವರ ತಲೆಯಲ್ಲಿ ರಾಜ್ಯ ಅಂದರೆ ಅವರ ಸ್ವಂತ ಮನೆ ಇದ್ದಹಾಗೆ, ವಿಧಾನಸೌಧ ಅಂದರೆ ಮನೆ ಇದ್ದಹಾಗೆ, ನಾವೆಲ್ಲಾ ಊಳಿಗದವರು ಇದ್ದಹಾಗೆ. ಊಳಿಗದವರು ಅಂದರೆ ಬಾಗಿಲು ಕಾಯ್ದುಕೊಂಡಿರುವವರು. ಆ ರೀತಿ ಅವರು ಭಾವಿಸಿಕೊಂಡಿದ್ದಾರೆ. ಅವರ ಬಗ್ಗೆ ನನಗೆ ವೈಯಕ್ತಿಕ ದ್ವೇಷಾಸೂಯೆ ಯಾವುದೂ ಪ್ರಾಮಾಣಿಕವಾಗಿ ಇಲ್ಲ. ನನಗೆ ಕನ್ನಡದ ಪ್ರಶ್ನೆ ಬಂದಾಗ-ಗಡಿ ಪ್ರಶ್ನೆ ಬಂದಾಗ, ನೆಲದ ಪ್ರಶ್ನೆ ಬಂದಾಗ ನಾನು ಯಾರ ಜೊತೆಯಲ್ಲೂ ಹೊಂದಾಣಿಕೆ ಮಾಡಿಕೊಳ್ಳತಕ್ಕ ಪ್ರಶ್ನೆ ಇಲ್ಲ. ಅವರು ತಪ್ಪು ತಿಳಿದುಕೊಂಡಿದ್ದಾರೆ. ಅವರಿಗೆ ಏನಾಗಿದೆ ಎಂದರೆ ಬೆಳಿಗ್ಗೆ ಎಂದರೆ ಒಂದೇ ಒಂದು ಧ್ವನಿ ಕೇಳುತ್ತಿರುವುದು. ತಾವು ಅಂದರೆ ಏನು ಸ್ವಾಮಿ, ತಮ್ಮ ರಾಜ್ಯ ಅಂದರೆ ಏನು ಸ್ವಾಮಿ, ಇದನ್ನೇ ಕೇಳುತ್ತಿರದ್ದಾರೆಯೇ ಹೊರತು ಬೇರೆ ಏನೂ ಕೇಳುತ್ತಿಲ್ಲ. ಆ ಹೊಗಳುಭಟ್ಟರ ಒಂದು ಗುಂಪು ಅವರನ್ನು ದಿನೇದಿನೇ ಹೊಗಳಿ ಹೊಗಳಿ ಹೊನ್ನಶೂಲಕ್ಕೆ ಏರಿಸುತ್ತಿದೆ. ನನಗೆ ಯಾವ ವೈಯಕ್ತಿಕ ದ್ವೇಷವೂ ಇಲ್ಲ. ನಾನು ನನ್ನ ಒಂದು ಸ್ವಂತ ಕೆಲಸಕ್ಕೂ ಅವರಲ್ಲಿ ಅರ್ಜಿ ಹಾಕಲಿಲ್ಲ ನನ್ನ ತಾಲ್ಲೂಕಿನ ಅಧಿಕಾರಿಗಳ ವರ್ಗಾವರ್ಗ ಬಗ್ಗೆ ಅರ್ಜಿ ಹಾಕಿ ಒಂದೂ ಕಾಲು ವರ್ಷದಿಂದ ಹಗಲು ರಾತ್ರಿ ಶ್ರಮಪಟ್ಟೆ. ನನ್ನ 35 ವರ್ಷದ ಜೀವನದಲ್ಲಿ ಮಾಡದೇ ಇರತಕ್ಕ ಒಂದು ಪಾಪದ ಕೆಲಸ ಮಾಡಿದ್ದೇನೆ. ಆ ಪಾಪದ ಕೆಲಸಕ್ಕೆ ತಾವು ಏನು ಶಿಕ್ಷೆ ಕೊಟ್ಟರೂ ನಾನು ಬದ್ಧ. ಹಳ್ಳಿಕಡೆ ಪಾದರಕ್ಷೆಯಲ್ಲಿ ಹೊಡೆದುಕೊಳ್ಳಬೇಕೆಂದು ಹೇಳುತ್ತಾರೆ. ಬೇಕಾದರೆ ನನ್ನ ಪಾದರಕ್ಷೆಗಳನ್ನು ತೆಗೆದುಕೊಂಡು ನನ್ನ ತಲೆ ಮೇಲೆ ಹೊತ್ತುಕೊಂಡು ಹೋದರೂ ಚಿಂತೆ ಇಲ್ಲ. ಹೊಡೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ತಲೆಮೇಲೆ ಇಟ್ಟುಕೊಂಡು ಬೇಕಾದರೆ ಹೋಗುತ್ತೇನೆ, ಇದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಅದು ಬಿಟ್ಟರೆ ನಾನು ಸರ್ಕಾರಕ್ಕೆ ಯಾರೇ ಮಂತ್ರಿಗಳನ್ನು ಕೇಳಿ ಇಲ್ಲಿಂದ ಕೊನೆಯವರೆಗೆ ಯಾರೊಬ್ಬರ ಹತ್ತಿರಕ್ಕೆ ನನ್ನ ಸ್ವಂತಕ್ಕೆ ಏನಾದರೂ ಮಂತ್ರಿಗಳ ಹತ್ತಿರ ಹೋಗಿ ಕೇಳಿದ್ದೇನೆಂಬುದು ಇಲ್ಲವೇ ಇಲ್ಲ. ಅದರಲ್ಲೂ ಇಬ್ಬರು ಮೂವರು ಮಂತ್ರಿಗಳ ಹತ್ತಿರ ಕೇಳಿದ್ದೇವೆಂಬುದು ಇಲ್ಲವೇ ಇಲ್ಲ. ಅದರಲ್ಲೂ ಇಬ್ಬರು ಮೂವರು ಮಂತ್ರಿಗಳ ಹತ್ತಿರ ಬಿಟ್ಟರೆ ಯಾರನ್ನೂ ಕೇಳುವುದಕ್ಕೆ ಹೋಗಿಲ್ಲ. ಇದು ಸತ್ಯ. ಈ ಸತ್ಯ ಸಂಗತಿ ವಾಟಾಳ್ ನಾಗರಾಜ್ ಏನು ಎನ್ನತಕ್ಕದ್ದು ಇಡೀ ರಾಜ್ಯಕ್ಕೆ ಹೇಳಿದರಲ್ಲಾ ನನಗೆ 35 ವರ್ಷ, ಅವರೂ 36 ವರ್ಷ ಸೇವೆಯಲ್ಲಿರಬಹುದು.ನಮಗೂ ಅವರಿಗೂ ಬಡ್ತಿಯಲ್ಲಿ ಕಡಿಮೆ ಇರಬಹುದು, ವಯಸ್ಸಿನಲ್ಲಿ ಅವರಿಗೆ 62, ನನಗೆ ಕಡಿಮೆ. ಅವರು 62ಕ್ಕೆ ಬರುವಾಗ ನಾನು 35ಕ್ಕೆ ಬರುತ್ತೇನೆ. ಅದರ ಅದೃಷ್ಟ ಚೆನ್ನಾಗಿದೆ, ಮುಖ್ಯಮಂತ್ರಿಗಳಾಗಿದ್ದಾರೆ. ನಾನು ದುರಾದೃಷ್ಟ ಇಲ್ಲೇ ಇದ್ದೇನೆ. ಆದರೂ ಚಿಂತೆ ಇಲ್ಲ. ನಾನು ವಿರೋಧ ಪಕ್ಷದಲಲ್ಲಿ ಈ ರೀತಿ ಮಾತನಾಡುವುದಕ್ಕೆ ನನಗೆ ಅವಕಾಶ ದೊರೆತದ್ದು ನನ್ನ ಸೌಭಾಗ್ಯ. ಪ್ರಾಮಾಣಿಕವಾಗಿ ನಾನು ಸಂತೋಷಪಡುತ್ತೇನೆ. ನನ್ನ ಜೀವನದ ಉದ್ದಕ್ಕೂ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವುದಕ್ಕೆ ನಾನು ಸಂತೋಷಪಡುತ್ತೇನೆ, ಅದರ ಬಗ್ಗೆ ನನಗೆ ಚಿಂತೆ ಇಲ್ಲ. ಆದುದರಿಂದ ನನಗನ್ನಿಸುತ್ತದೆ. ಅವರೆಲ್ಲಾ ಹೊಗಳುಭಟ್ಟರು. ಯಾರಾದರೂ ಇದ್ದರೆ ಅವರಿಗೆ ನಾನು ಕೈಮುಗಿದು ಹೇಳುತ್ತೇನೆ, ಸ್ವಲ್ಪ ಹೊರ ಪ್ರಪಂಚವನ್ನು ತಾವು ತೋರಿಸಿ ಎಂದು ಬರೀ ಹೊಗಳಿಗೆ ಮಾಡದೆ ಹೊರ ಪ್ರಪಂಚದಲ್ಲಿ ಏನಿದೆ ಎಂಬ ಮಾತನ್ನು ಟೀಕೆಯ ಮಾತುಗಳನ್ನು ತಮ್ಮ ಬಗ್ಗೆ

ಟೀಕೆಯ ಮಾತುಗಳು ಏನಿವೆ ಎಂಬ ವಾತಾವರಣವನ್ನು ತಾವು ಹೇಳಿದರೆ ಇದು ಸರಿಹೋಗುತ್ತದೆ.

ಶ್ರೀ ಎನ್. ರಾಜಣ್ಣ : 40 ವರ್ಷದಲ್ಲಿ ಅವರ ಅನುಭವ ಏನಿದೆ ಹೊರಪ್ರಪಂಚ ಸಮುದ್ರದಲ್ಲಿ ಈಜಿ ಬರುತ್ತಾರೆಂದು ಜನ ಅವರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಇವತ್ತೇನು ಅವರು ಮುಖ್ಯಮಂತ್ರಿಗಳು ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಎಂದೂ ಅವರನ್ನು ನಿಮ್ಮನ್ನು ಮುಖ್ಯ ಮಂತ್ರಿ ಮಾಡಬಾರದೆಂದು ಹೇಳಲಿಲ್ಲ. ನಾನು ಎಂದೂ ಅವರ ವಿರುದ್ಧ ನಿಮ್ಮ ಸರ್ಕಾರವನ್ನು ಕಿತ್ತುಹಾಕಿ ಎಂದು ಹೇಳಲಿಲ್ಲ. ಆ ರೀತಿ ಹೇಳುವುದಕ್ಕೆ ಹೋದರೆ ಅದು ಸತ್ಯಕ್ಕೆ ದೂರವಾಗುತ್ತದೆ. ನನ್ನೊಬ್ಬನಿಂದ ಅವರ ಸರ್ಕಾರವನ್ನು ಕಿತ್ತುಹಾಕುವುದಕ್ಕೆ ಸಾಧ್ಯವಿಲ್ಲ. ಅದು ಸತ್ಯಕ್ಕೆ ದೂರವಾದ ಮಾತು ಸರ್ಕಾರ ಉಳಿಸಿಕೊಳ್ಳುವುದು ಬಿಡುವುದು ಅವರಿಗೆ ಸೇರಿದ್ದುದು. ನಾನು ಏತಕ್ಕೆ ಈ ಮಾತು ಹೇಳುವುದಕ್ಕೆ ಹೋಗಲಿ, ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯಮಂತ್ರಿ ಆದವರು ಆ ಒಂದು ಸ್ಥಾನಕ್ಕೆ ಎಷ್ಟು ಮಹತ್ವ ಕೊಡಬೇಕು ಎಂಬುದು, ಅವರಿಗೆ ಬಿಟ್ಟದ್ದು.

ಶ್ರೀ ಎಂ. ನಾರಾಯಣ ಸ್ವಾಮಿ: ಮುಖ್ಯಮಂತ್ರಿ ದೇವೇಗೌಡರಾಗಿದ್ದಾರೆ. ತಮಗೆ 35 ವರ್ಷ ಅನುಭವವಾಗಿದೆ. ತಮಗೆ ಮುಖ್ಯಮಂತ್ರಿ ಆಗುವ ಆಸೆ ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ನೀವೆಲ್ಲಾ ಬಂದರೆ ಆದರೂ ಆಗಬಹುದು, ನೋಡಿ ಸ್ವಲ್ಪ ಯೋಚನೆ ಮಾಡಿ. ನೀವೆಲ್ಲಾ ಒಟ್ಟಿಗೆ ಸೇರಿ ಅವರನ್ನು ಬಿಟ್ಟು ನಿಮ್ಮ ಕಡೆ ಬಂದು ಮಾಡುತ್ತೇವೆಂದು ಹೇಳಿದರೆ ಸ್ವಲ್ಪ ಆಗಬಹುದು. ಆದರೆ ನೀವು ಯಾರೂ ಬರುವುದಕ್ಕೆ ಸಾಧ್ಯವಿಲ್ಲ. ಸುಮ್ಮನೆ ನನಗೆ ಆಸೆ ಹುಟ್ಟಿಸುತ್ತಿದ್ದೀರಿ ನಾರಾಯಣಸ್ವಾಮಿ. ನನಗೆ ಆಸೆ ಇದೆ ನೀವು ಬಂದರೆ, ನಿಮ್ಮ ಶಕ್ತಿ ಕೊಟ್ಟರೆ ಆಸೆ. ಶಕ್ತಿ ಇಲ್ಲದೆ ನಾನು ಮುಖ್ಯಮಂತ್ರಿ ಆಗುತ್ತೇನೆಂದು ಹೇಳುವುದಕ್ಕೆ ಹೋಗುವುದಿಲ್ಲ. ಅದೃಷ್ಟ ಬೇರೆ, ಶಕ್ತಿ ಬೇರೆ. ಅದೃಷ್ಟ ಮುಂದೆ ಆದರೆ ಆಗಬಹುದು, ಬಿಟ್ಟರೆ ಬಿಡಬಹುದು. ಅದರ ಬಗ್ಗೆ ನಾನು ಚಿಂತೆ ಮಾಡುವುದಕ್ಕೆ ಹೋಗುವುದಿಲ್ಲ. ಆ ಪ್ರಶ್ನೆ ಬೇರೆ. ಈ ಪರಿಸ್ಥಿತಿ ಒಂದು ರೀತಿ ನಿರ್ಮಾಣವಾಗಿದೆ. ಇದನ್ನು ನಾವು ಯಾರ ಮುಂದೆ ಹೇಳತಕ್ಕದ್ದು. ಸರ್ಕಾರ ಅಂದರೆ ಏನು? ಸರ್ಕಾರ ಅಂದರೆ ಮುಖ್ಯಮಂತ್ರಿ ದೇವೇಗೌಡರೇ ಮಂತ್ರಿಮಂಡಲ ಅಂದರೆ ಅವರೆ ಇಡೀ ಸರ್ಕಾರ ಅಂದರೆ ಅವರೇ, ಹಿಂದೆಯಾದರೂ ಮುಖ್ಯಮಂತ್ರಿಯಾದವರನ್ನು ಕೇಳತಕ್ಕ ಮಂತ್ರಿಗಳು ಕೆಲವರು ಇದ್ದರು. ಈಗ ಮಂತ್ರಿ ಮಂಡಲದಲ್ಲಿ ಅಂಥವರು ಬೇಕೆಂದರೆ ಪಟೇಲರು ಒಬ್ಬರನ್ನು ನಾವು ತೋರಿಸಬಹುದು. ಅವರೂ ಸಹ ಕೇಳುವುದಕ್ಕೆ ಹೋಗುವುದಿಲ್ಲ, ಮಾಡುವುದಕ್ಕೆ ಹೋಗುವುದಿಲ್ಲ. ಅವರ ಇಲಾಖೆ ಆಯಿತು, ಅವರಾಯಿತು, ಆರಾಮವಾಗಿ ಇದ್ದುಬಿಟ್ಟಿದ್ದಾರೆ. ಮಿಕ್ಕವರು ಕೂಡ ನಾನು ಏಕೆ ಮಾಡುತ್ತೇನೆ, ಏನು ಮಾಡುತ್ತೇನೆಂದು ಕೇಳುವ ಮಟ್ಟದಲ್ಲಿ ಅವರು ಇಲ್ಲ. ಮಿಕ್ಕವರು ಬಗ್ಗೆ ನನ್ನಗನ್ನಿಸುತ್ತದೆ, ಮಂತ್ರಿಮಂಡಲ ಅನ್ನುವುದು ಇಲ್ಲಿ ಇಲ್ಲ. ಒಬ್ಬರೇ ಮಂತ್ರಿ. ಒಬ್ಬ ಹಳ್ಳಿಯಜವಾನನ್ನು ವರ್ಗ ಮಾಡಬೇಕಾದ ಅಧಿಕಾರವನ್ನು ಮುಖ್ಯಮಂತ್ರಿ ಇಟ್ಟುಕೊಂಡಿದ್ದಾರೆ. ಒಬ್ಬ ಜವಾನನ್ನು ವರ್ಗಾವರ್ಗಿಮಾಡಬೇಕಾದರೆ ಮಂತ್ರಿಗಳಿಗೆ ಅವರು ಎದೆ ಮುಟ್ಟಿ ಹೇಳಲಿ, ನನಗೆ ಅಧಿಕಾರ ಇದೆ

ಎಂದು ಹೇಳಲಿ, ನಮಗೆ ಅಧಿಕಾರ ಇದೆ ವರ್ಗ ಮಾಡುವುದಕ್ಕೆ ಎಂದು ಹೇಳು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಈ ಮಾತನ್ನು ನಾನು ಒಪ್ಪುವುದಿಲ್ಲ. ನನ್ನ ಆಡಳಿತದಲ್ಲಿ ತಾವು ಹೇಳುತ್ತಿದ್ದೀರಲ್ಲಾ, ನನಗೆ ಬಾಕಿಯವರು ಗೊತ್ತಿಲ್ಲ. ನನ್ನ ಆಡಳಿತದಲ್ಲಿ ಮುಖ್ಯಮಂತ್ರಿಗಳು ಯಾವುದೇ ರೀತಿಯಲ್ಲಿ ಪ್ರವೇಶ ಮಾಡಿಲ್ಲ. ನಾನು ಹೇಳಿಕೆ ಕೊಡುತ್ತೇನೆ. ಮುಖ್ಯಮಂತ್ರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇನೆಯೇ ಹೊರತು ಅವರನ್ನು ಕೇಳಿ ನಾನು ಮಾಡುತ್ತಿಲ್ಲ. ಅದಕ್ಕೆ ಅವರು ಅಪ್ರೀಷಿಯೇಟ್ ಮಾಡುವಂತೆ ನಾವೆಲ್ಲಾ ಅಪ್ರೀಷಿಯೇಟ್ ಮಾಡುವಂತೆ ವಿಷಯಗಳನ್ನು ಹೇಳುವುದು. ಈ ಮಾತು ಏನಿದೆ, ಜನರಲ್ ಆಗಿ ರಿಮಾರ್ಕ್ಸ ಮಾಡುವುದು ನನ್ನ ಮನಸ್ಸಿಗೆ ಅಷ್ಟೊಂದು ಸರಿ ಕಾಣುವುದಿಲ್ಲ, ಅದು ತಮಗೆ ಬಿಟ್ಟ ವಿಷಯ.

ಶ್ರೀ ವಿ. ಸೋಮಣ್ಣ : ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು, ಮುಖ್ಯಮಂತ್ರಿಗಳಿಗೆ ಎರಡು ಕಾಗದ ಕೊಟ್ಟಿರುವುದು ಬಿಟ್ಟರೆ ಸರ್ಕಾರದಲ್ಲಿ ಏನು ಎಂಬುದು ಗೊತ್ತಿಲ್ಲ ಅಂದರು. ಮಂತ್ರಿಗಳು ಏನು ಮಾಡುತ್ತಿದ್ದರು ಎಂದು ಯಾರನ್ನಾದರೂ ಗೂಢಚಾರರನ್ನು ಇಟ್ಟು ಅವರು ಮಾಹಿತಿ ತೆಗೆದುಕೊಳ್ಳುತ್ತಾರೆಯೇ? ಅವರು ಹಿರಿಯ ಸದಸ್ಯರು, ನಮ್ಮಂಥವರಿಗೆ ಅನೇಕ ವಿಚಾರಗಳನ್ನು ಹೇಳತಕ್ಕವರು, ಯಾವುದನ್ನು ಯಾವ ರೀತಿ ಹೇಳಬೇಕೆಂದು ಹೇಳುವುದರಲ್ಲಿ ನಮಗೆಲ್ಲರಿಗಿಂತ ಹೆಚ್ಚು ಅನುಭವ ಇರತಕ್ಕವರು. ದಯವಿಟ್ಟು ಯಾವುದೇ ಮುಖ್ಯಮಂತ್ರಿಗಳನ್ನು ಯಾವ ರೀತಿ ನಡೆಸಿಕೊಂಡು ಹೋಗುತ್ತಾರೆಂಬುದನ್ನು ಅರಿತುಕೊಂಡು ಏನು ಜನ ಮೊನ್ನೆ ತಾನೇ ತೀರ್ಮಾನ ಕೊಟ್ಟಿದ್ದಾರೆ. ಉಪಮುಖ್ಯಮಂತ್ರಿಗಳು ಮತ್ತು ಮುಖ್ಯಮಂತ್ರಿಗಳಲ್ಲಿ ಸಾಮರಸ್ಯ ಏನಿದೆ, ಪ್ರಾಯಶಃ ವಾಟಾಳ್ ನಾಗರಾಜ್ ಅವರಿಗೆ ಹಿಂದಿನ ಕಥೆ ಮಾಹಿತಿ ಘಟನೆಗಳನ್ನು ನೆನಪಿಗೆ ತರುವಂಥ ಘಟನೆಗಳ ಬಗ್ಗೆ ಯೋಚನೆ ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ. ತಾವು ಮಾತನಾಡುವಾಗ ದಯವಿಟ್ಟು ಅದರ ಬಗ್ಗೆ ಯೋಚನೆಮಾಡಿ ಮಾತನಾಡಿ. ಹಿಂದಿನ ಅನೇಕ ಘಟನೆಗಳನ್ನು ಹೇಳಿದರೆ, ಹೇಳುವಾಗ ಅದಕ್ಕೆ ಸಾಮರಸ್ಯ ಇಲ್ಲ. ಒಬ್ಬ ಜವಾನನ್ನು ವರ್ಗ ಮಾಡಬೇಕಾದರೆ ಅವರನ್ನು ಕೇಳಬೇಕೆ? ಇವೆಲ್ಲಾ ಮಾತನಾಡುವಾಗ ದಯವಿಟ್ಟು ಯೋಚನೆ ಮಾಡಿ ಮಾತನಾಡಿ.

ಶ್ರೀ ಜೆ.ಹೆಚ್. ಪಟೇಲ್ : ಅವರು ಮಂತ್ರಿಯಾಗಿಲ್ಲ. ಏಕೆಂದರೆ ಮಂತ್ರಿ ಹೇಗೆ ಫಂಕ್ಷನ್ ಮಾಡುತ್ತಾರೆಂಬುದು ಮೊಯಿಲಿಯವರಿಗೆ ಗೊತ್ತಿದೆ. ವಾಟಾಳ್ ನಾಗರಾಜ್ ಅವರಿಗೆ ಮಂತ್ರಿ ಅಂದರೆ ಹೇಗೆ ಎಂಬುದು ಗೊತ್ತಿಲ್ಲ. ಅದರಲ್ಲಿ ಮುಖ್ಯಮಂತ್ರಿ ಒಬ್ಬರೇ ಒಂದು ಟೀಮಿಗೆ ಕ್ಯಾಪ್ಟನ್ ಒಬ್ಬರೇ ಇರುತ್ತಾರೆ. 3-4 ಜನ ಇರುತ್ತಾರೆಯೇ? ಒಂದು ಟೀಮ್ ಚೆನ್ನಾಗಿ ಕೆಲಸ ಮಾಡಿದರೆ ಆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಯಾವ ರೀತಿ ಗೈಡ್ ಮಾಡಬೇಕೆಂಬುದು ಕ್ಯಾಪ್ಟನಗೆ ಗೊತ್ತಿರುತ್ತದೆ. ours is a team. A very good team led by a very able captain.

ಶ್ರೀ ವಾಟಾಳ್ ನಾಗರಾಜ್ : ಅದನ್ನೇ ನಾನು ಹೇಳಿದ್ದುದು ಸೋಮಣ್ಣ; ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸಬೇಡಿ ಅಂತ ಸೋಮಣ್ಣ ಅದನ್ನೇ ಹೇಳಿದ್ದು ಕೆಲವರ ಬಗ್ಗೆ. ನಿಮಗೆ ಅರ್ಥ ಆಗಲಿಲ್ಲವೇ ಅದು? ಬಿಡಿ, ನಾನೇನು ಮಾಡಲಿ. ಹೊಗಳಬೇಡಿ ಎಂದು ಸೋಮಣ್ಣನಿಗೆ ಹೇಳಿದೆ.

ಹೊಗಳಬೇಡಿ, ಹೊಗಳಬೇಡಿ ಹೊಗಳಬೇಡಿ. ಸೋಮಣ್ಣ ಏನು ಹೇಳಿದರು, ಜೆ.ಹೆಚ್. ಪಟೇಲರಿಗೂ ದೇವೇಗೌಡರಿಗೂ ತಂದಿಡುವುದಕ್ಕೆ ಹೋಗಬೇಡಿ ಎಂದು ಹೇಳಿದರು. ನಾನು ಆ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ನಿಮ್ಮಲ್ಲೇ ಬೇಕಾದಷ್ಟು ಜನ ಇರುವಾಗ ನಾನು ಏತಕ್ಕೆ ಆ ಕೆಲಸ ಮಾಡಲಿ? ಆ ಕೆಲಸ ನಾನು ಮಾಡುವುದಕ್ಕೆ ಹೋಗುವುದಿಲ್ಲ. ಪಟೇಲರು ಗೌಡರು ಇದ್ದರೆ ಊರು ಸುಭಿಕ್ಷ. ಆದ್ದರಿಂದ ಪಟೇಲರು ಗೌಡರು ಚೆನ್ನಾಗಿರಲಿ. ಒಬ್ಬರು ಶಾನುಭೋಗರನ್ನು ಸೇರಿಸಿಕೊಂಡು ಬಿಡಿ. ಅಲ್ಲಿಗೆ ಎಲ್ಲಾ ಸರಿಹೋಗುತ್ತದೆ. ಸಾಮಾನ್ಯವಾಗಿ ಒಂದು ಹಳ್ಳಿ ಎಂದಾಗ ಪಟೇಲರು, ಗೌಡರು ಮತ್ತು ಶ್ಯಾನುಭೋಗರು ಇರಬೇಕು. ಇಷ್ಟು ಜನ ಇದ್ದುಬಿಟ್ಟರೆ ಹಳ್ಳಿ ಉದ್ಧಾರ ಅಂತ. ಈಗ ಇಬ್ಬರೇ ಇದ್ದೀರಿ. ಇನ್ನೊಬ್ಬರು ಶ್ಯಾನುಭೋಗರನ್ನು ಸೇರಿಸಿಕೊಂಡುಬಿಟ್ಟರೆ ಉದ್ಧಾರ ಎಂದು ನಾನು ಅಂದುಕೊಂಡಿದ್ದೇವೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನನ್ನ ಅನುಭವದಲ್ಲಿ ಹೇಳಿದೆ. ಅದಿರಲಿ. ನಮ್ಮ ಪಟೇಲರು ನಮ್ಮೆಲ್ಲರಿಗೂ ಹಿರಿಯರು. ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ನಾನು ಹೋಗುತ್ತೇನೆ. ವಾದ ಮಾಡುತ್ತೇನೆ. ಜಗಳ ಆಡುತ್ತೇನೆ. ಏನೇ ಆದರೂ ಪಟೇಲರಲ್ಲಿರತಕ್ಕ ಗುಣವನ್ನೂ ನಾನು ಹೊಗಳಿಬಿಡುತ್ತೇನೆ. ಅತ್ಯಂತ ಸಾಧುವಾದಂಥ, ಎಂದೂ ಇನ್ನೊಬ್ಬರ ಮೇಲೆ ಸೇಡನ್ನು ತೀರಿಸಿದವರಲ್ಲ. ಮತ್ತೆ ಇನ್ನೊಬ್ಬರ ಮೇಲೆ ಪಿತೂರಿ ಮಾಡಿದವರಲ್ಲ. ಮತ್ತೆ ಸದನದಲ್ಲಿ ಪಟೇಲರು ನಾವು ಜಗಳ ಆಡಿದ್ದೇವೆ ಎಂದು ನಾಳೆ ಬೆಳಿಗ್ಗೆ ನಮ್ಮಲ್ಲಿ ಕೆ.ಇ.ಬಿ. ತಂತಿಗಳನ್ನೆಲ್ಲಾ ಕಿತ್ತುಹಾಕಿಬಿಡಿ ಎಂದು ಹೇಳುವ ಮಟ್ಟಕ್ಕೆ ಪಟೇಲರು ಹೋಗುವವರಲ್ಲ. ಪಟೇಲರು ಬೆಳೆದುಬಂದ ಧಾಟಿ ದಾರಿಯೇ ಬೇರೆ. ಏನು ಮಾಡುವುದಕ್ಕಾಗುತ್ತದೆ? ಮನಸ್ಸಿನಲ್ಲಿ ನೋವಿದ್ದರೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ತೋರಿಸಿಕೊಳ್ಳುವುದಕ್ಕಾಗುವುದಿಲ್ಲ. ಕೆಲವು ನೋವು ಅವರಿಗಿದೆ. ನನಗೆ ಗೊತ್ತು. ಆ ನೋವುಗಳನ್ನು ಅವರು ಬಹಿರಂಗವಾಗಿ ಇಲ್ಲಿ ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆ ನೋವುಗಳನ್ನು ಹೇಳಿ ಎಂದು ನಾನು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಹಾಗೇ ಇರಲಿ ಅನ್ನತಕ್ಕ ಮಾತನ್ನು ಹೇಳಿ, ಅವರ ಆರೋಗ್ಯವೂ ಚೆನ್ನಾಗಿರಲಿ. ಅವರ ಬಗ್ಗೆ ಬೇರೆ ಮಾತೇ ಇಲ್ಲ. ನಾನು ಅವರು ಹತ್ತಾರು ವರ್ಷದಿಂದ ಸ್ನೇಹಿತರು. ಹತ್ತಾರು ವರ್ಷದಿಂದ ನಮ್ಮ ಅವರ ಸ್ನೇಹ ಇದೆ. ಅವರ ಬಗ್ಗೆ ಭಗವಂತನಾಣೆ ನನಗೆ ಬಹಳ ಗೌರವ ಇದೆ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಚೆನ್ನಾಗಿರಲಿ ಅವರು. ಮತ್ತು ಈ ಸದನದಲ್ಲಿ ಅವರಿದ್ದರೇನೇ ಭೂಷಣ. ಸದನದಲ್ಲಿರುವಾಗಲೇ ನಾನು ಹಿಂದೆ ಹಾರ್ನಳ್ಳಿ ರಾಮಸ್ವಾಮಿ ಅವರಿಗೂ ಹೇಳುತ್ತಿದ್ದೆ. ಈ ಸದನಲ್ಲಿ ಅವರು ಸಂಸದೀಯ ಸಚಿವರಾಗಿದ್ದಾಗ ನಿಜವಾಗಿಯೂ ಖುಷಿಯಾಗುತ್ತಿತ್ತು ಇಲ್ಲಿ ಅವರನ್ನು ನೋಡುವುದಕ್ಕೆ. ನನಗೇನೂ ವೈಯಕ್ತಿಕವಾಗಿ ಯಾರ ಬಗ್ಗೆಯೂ ದ್ವೇಷ, ಅಸೂಯೆಯಿಂದ ಮಾತನಾಡುತ್ತೇನೆ ಅನ್ನತಕ್ಕಂಥದ್ದಲ್ಲ. ಪಟೇಲರ ಬಗ್ಗೆ ಜೊತೆಯಲ್ಲಿದ್ದೇನೆ. ಒಡನಾಡಿಯಾಗಿದ್ದೇವೆ. ಅವರ ಸಲಹೆ, ಸಹಕಾರ, ಅಭಿಮಾನ ಎಲ್ಲಾ ಮೊದಲಿಂದಲೂ ಇದೆ. ಅದರ ಬಗ್ಗೆ ನನ್ನದೇನೂ ತಕರಾರಿಲ್ಲ. ಆದ್ದರಿಂದ ನಾನು ಅವರನ್ನು ಬೇರ್ಪಡಿಸುವಂಥ ವಿಚಾರಕ್ಕೆ ನಾನಂತೂ ಹೋಗುವುದಿಲ್ಲ. ನಾನು ಏಕೆ ಬೇರ್ಪಡಿಸಲಿ? ಅದರಲ್ಲೇನಿದೆ ಲಾಭ?

ಶ್ರೀ ಎಲ್. ಆರ್. ಶಿವರಾಮೇಗೌಡ : ನೀವು ಬೇರ್ಪಡಿಸಿದರೂ ಅವರು ಬೇರೆಯಾಗುವುದಿಲ್ಲ. ಈಗೆಲ್ಲಾ ಅವರು ಬುದ್ಧಿವಂತರಾಗಿಬಿಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಆಯಿತು ಸ್ವಾಮಿ.

ಶ್ರೀ ಜೆ.ಹೆಚ್. ಪಟೇಲ್ : ನಾವಿಬ್ಬರೂ ಡೆಲ್ಲಿಗೆ ಹೋದೆವು. ಅವರದು ಯಾವುದೋ ಎಲೆಕ್ಷನ್ ಕೇಸ್ ಇತ್ತು. ಬಹಳ ಸತಾಯಿಸುತ್ತಿದ್ದರು ಕೋರ್ಟಿನಲ್ಲಿ, ತೊಂದರೆಯಾಗುತ್ತಿತ್ತು. ಆಗ ಬಹಳ ಫೇಮಸ್ ಅಡ್ವೊಕೇಟ್ ಇದ್ದರು ತಾರಕುಂದೆ ಅಂತ. ತಾರಕುಂದೆ ಅವರನ್ನು ಎಂಗೇಜ್ ಮಾಡುವುದಕ್ಕೆ ಎಂದು ನಾನು ಜಾರ್ಜ ಅವರ ಹತ್ತಿರ ಹೇಳಿಸಿ ಆಮೇಲೆ ನಾವಿಬ್ಬರೂ ಹೋದೆವು. ಆಮೇಲೆ ನಾವು ಆ ಕಡೆಯಿಂದ ಬಂದುಬಿಟ್ಟು ಕನ್ನಾಟಪ್ಲೇಸನಲ್ಲಿ ಸುತ್ತಾಡುತ್ತಿದ್ದೆವು. ಈ ಬೋಳುತಲೆಗೆ ವಿಗ್ ಅಂತ ಹಾಕುತ್ತಾರಲ್ಲ ಆ ವಿಗ್ ಹಾಕಿಕೊಂಡು ನೋಡೋಣ ಅಂತ ನೋಡಿದೆವು. ಆ ವಿಗ್ ಹಾಕಿದರೆ ನನಗೆ ನನ್ನ ಮಗ ಕಾಣುವ ಹಾಗೆ ಕಾಣುತ್ತೇನಲ್ಲ ಅನ್ನಿಸಿತು. ಅವರು ಆ ವಿಗ್ ಹಾಕಿಕೊಂಡು ಹೊರಗೆ ಬಂದು ನಿಂತರು. ಗುರುತೇ ಹಿಡಿಯುವುದಕ್ಕಾಗಲಿಲ್ಲ. ಅಷ್ಟು ಚೆನ್ನಾಗಿ ಮಾಡಿದ್ದರು. ಆಮೇಲೆ ನಾನು ವಿಗ್ ತೆಗೆದೆ. ಅವರು ಟೋಪಿ ಹಾಕಿಕೊಂಡರು. ಇಷ್ಟೇ ವ್ಯತ್ಯಾಸ.

ಶ್ರೀ ಬಿ.ಬಿ. ಶಿವಪ್ಪ : ಅವರೇ ಟೋಪಿ ಹಾಕಿಕೊಂಡರೂ ಅಥವಾ ಯಾರಾದರೂ ಹಾಕಿಸಿದರೋ ?

ಉಪಾಧ್ಯಕ್ಷರು : ಒಳಗೆ ಏನಿದೆ ಎಂದು ಯಾರಿಗೂ ಗೊತ್ತಿರಲಿಲ್ಲ. ಇವತ್ತು ಬಯಲಿಗೆ ಹಾಕಿದರು ಅವರು.

ಶ್ರೀ ವಾಟಾಳ್ ನಾಗರಾಜ್ : ಪಟೇಲರು ವಸ್ತುಸ್ಥಿತಿ. ಪಟೇಲರು ಪಾಪ, ನಿಜವಾಗಿಯೂ ಅವರು ಲೋಕಸಭೆಯಲ್ಲಿ ಸದಸ್ಯರಾಗಿದ್ದಾಗ ನಾನು ಬಂಗಾರಪ್ಪನವರು ಒಂದು ನಿಯೋಗ ಹೋದಾಗ ಪಾರ್ಲಿಮೆಂಟ್ ಮುಂದೆ ಕಪ್ಪುಬಾವುಟ ಪ್ರದರ್ಶನ ಮಾಡಬೇಕು ಮಹಾಜನ್ ವರದಿ ಬಗ್ಗೆ ಅಂತ ಹೇಳಿ, ಪಟೇಲರನ್ನು ಕೇಳಿಕೊಂಡು ಮಾಡೋಣ ಅಂತ ಒಂದು ಮಾತು ಹೇಳಿದರು ಅವರು. ಪಟೇಲರು ಜಾರ್ಜ ಫರ್ನಾಂಡಿಸ್ ಅವರನ್ನು ಕೇಳಿಕೊಂಡು ಮಾತನಾಡೋಣ ಎಂದರು. ನಾನು ಹೇಳಿದೆ ಬಂಗಾರಪ್ಪನವರೇ ಅವರಿಬ್ಬರನ್ನು ಕೇಳಿದ ತಕ್ಷಣ ಈ ವಿಚಾರದಲ್ಲಿ ಅತ್ಯಂತ ಪ್ರೀತಿಯಿಂದ ಈ ಕಪ್ಪು ಬಾವುಟ ಹಿಡಿಯಿರಿ ಎಂದು ಹೇಳುತ್ತಾರೆ. ಆ ಧಾಟಿಯಲ್ಲೇ ಅವರು ಮಾತನಾಡುತ್ತಾರೆ. ಅದರಲ್ಲೇನೂ ಬದಲಾವಣೆಯಾಗುವುದಿಲ್ಲ ಎಂದು ಹೇಳಿದೆ. ಅವರಿಗೆ ಹೋಗಿ ಹೇಳಿದ ತಕ್ಷಣ ಬೇರೆ ಮಾತೇ ಇಲ್ಲ. ಹಿಡಿಯಿರಿ, ಏನು ಬೇಕಾದರೂ ಆಗಲಿ ಎಂದು ಹೇಳಿದರು. ಕೊನೆಯವರೆಗೂ ನ್ಯಾಯಾಲಯದಲ್ಲಿ ನಮ್ಮ ಹಿಂದೆ ನಿಂತುಕೊಂಡು ನಮಗೆ ನಮಗೆ ನ್ಯಾಯಾಲದಲ್ಲಿ ಬೇಲ್ ಕೊಡದೇ ಇದ್ದರೆ ಬೇಲ್ ಕೊಡಿಸತಕ್ಕ ವ್ಯವಸ್ಥೆ ಮಾಡಿದ್ದರು. ಆಗ ಲೋಹಿಯಾ ಅವರು ಮತ್ತು ಇವರ ಹೆಸರು ಹೇಳಿದತಕ್ಷಣ ಆ ನ್ಯಾಯಾಧೀಶರ ಬಹಳ ಪ್ರೀತಿಯಿಂದ ನಿಮ್ಮನ್ನು ಸ್ವಂತ

ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿ ನನ್ನನ್ನು ಹಾಗೂ ಬಂಗಾರಪ್ಪನವರನ್ನು ಬಿಡುಗಡೆ ಮಾಡಿದರು. ಒಂದು ಇತಿಹಾಸ ಇದೆ. ಪಟೇಲರು ಒಂದು ಇತಿಹಾಸ ನಿರ್ಮಾಣ ಮಾಡಿದ್ದಾರೆ. ಅವರು, ಗೋಪಾಲಗೌಡರು ಇದೆಲ್ಲಾ ನೆನಪುಗಳು. ನಿಜವಾಗಿಯೂ ಇತಿಹಾಸದಲ್ಲಿ ಹೋಗತಕ್ಕ ನೆನಪುಗಳು. ಎಷ್ಟು ಪ್ರಾಮಾಣಿಕವಾಗಿ ನಾವು ಹೇಳಿದರೂ ಚಿಂತೆಯಿಲ್ಲ ಪಟೇಲರು ನಮ್ಮ ರಾಜ್ಯದ ಒಬ್ಬ ಅತ್ಯಂತ ಗೌರವಾನ್ವಿತ ಮೇಲ್ಪಟ್ಟದ ವ್ಯಕ್ತಿ. ಅದರ ಬಗ್ಗೆ ಎರಡನೇ ಮಾತಿಲ್ಲ. ಸದನದಲ್ಲಿ ಅವರಿಗೂ ಗುಂಡೂರಾಯರಿಗೂ ನಡೆದ ವಾಗ್ವಾದ ನೀವು ನೋಡಿದ್ದೀರಿ. ಸ್ವಾಮಿ, ಅನೇಕ ಜನ ನೋಡಿದ್ದೀರಿ. ಪಟೇಲರು ಇಲ್ಲಿಂದ ಅಲ್ಲಿಗೆ ಹೋದರು. ಗುಂಡೂರಾಯರು ಅಲ್ಲಿಗೆ ಬಂದರು. ಅಂದರೆ ಇಬ್ಬರೂ ತೋಳು ಮಡಿಸಿಕೊಂಡರು. ಆದರೆ ಸ್ನೇಹ- ಬೆಳಿಗ್ಗೆ ಏಳೂವರೆ ಗಂಟೆಗೆ ಗುಂಡೂರಾಯರ ಮನೆಗೆ ತಿಂಡಿಗೆ ಹೋದರು ಪಟೇಲರು. ಅಂದರೆ ಎಷ್ಟು ಸ್ನೇಹ ಇತ್ತು? ಈ ಮುಖ್ಯಮಂತ್ರಿಗಳ ತರಹ ಅಲ್ಲ. ಅಷ್ಟೇ ವಿಚಾರ. ನನಗೇನಿಲ್ಲ. ಗೋವಿಂದೇಗೌಡರ ಬಗ್ಗೆ ನನಗೇನಿಲ್ಲ. ಪಾಪ ಹಿರಿಯರು ಅವರು. ಅವರು ಪ್ರೀತಿಯಿಂದ ಇರುವುದರಿಂದ ಅವರ ಇಲಾಖೆಗೆ ಅವರೇನೂ ಕೈಹಾಕಿಲ್ಲ. ಅವರೆಲ್ಲಾ ಪ್ರೀತಿಯ ಒಂದು ವಸ್ತುಗಳು. ಅವರ ಜೊತೆಯಲ್ಲಿ ಬಹಳ, ಮುಖ್ಯಮಂತ್ರಿಯ ಪ್ರೀತಿಯ ವಸ್ತುಗಳು. ಇವರೆಲ್ಲಾ ಬಹಳ ಅತ್ಯಂತ ಪ್ರೀತಿ, ವಿಶ್ವಾಸ, ಅಭಿಮಾನ ಇಟ್ಟಿರತಕ್ಕ ಮಂತ್ರಿಗಳು. ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಆದ್ದಿರಂದ ಅವರ ಇಲಾಖೆಗೆ ಕೈಹಾಕುವುದಕ್ಕೆ ಹೋಗುವುದಿಲ್ಲ. ನಿಮ್ಮ ಇಲಾಖೆ ಎಲ್ಲಾ ನನ್ನ ಇಲಾಖೆ ಇದ್ದಹಾಗೆ ಎಂದು ಅವರು ತಿಳಿದುಕೊಂಡು ಬಿಟ್ಟಿದ್ದಾರೆ. ಆದ್ದರಿಂದ ಅದೇನೂ ಬದಲಾವಣೆ ಆಗುವುದಕ್ಕೆ ಹೋಗುವುದಿಲ್ಲ. ಆದ್ದಿರಂದ ಅವರು ಏತಕ್ಕೆ ಕೈ ಹಾಕುವುದಕ್ಕೆ ಹೋಗುತ್ತಾರೆ? ಇಷ್ಟಕ್ಕೆ ಬಿಡುತ್ತೇನೆ. ಅಧ್ಯಕ್ಷರೆ, ಮುಂದಿನ ನಮ್ಮ ಶಾಸಕರ ಪರಿಸ್ಥಿತಿ ಎಲ್ಲಾ ಮಾನ್ಯ ಪಟೇಲರಿಗೆ ಮತ್ತೊಮ್ಮೆ ಈ ಸದನದಲ್ಲಿ ಒತ್ತಾಯ ಮಾಡಿಹೇಳುತ್ತೇನೆ. ಇಡೀ ಸಮಗ್ರ ಯಾವುದೇ ಪಕ್ಷದ ಶಾಸಕರಾಗಿರಲಿ ತಾಲ್ಲೂಕಿನ ಹಿಡಿತ ಕಳೆದುಕೊಂಡಿದ್ದೇವೆ ನಾವು. ಹಿಂದೆ ನಮಗೆ ಶಾಸಕರು ಅಂತ ಹೇಳಿದರೆ ಅಲ್ಲಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಸ್ವಲ್ಪ ಕೆಲಸಗಳನ್ನು ನಮಗೆ ಕೊಟ್ಟಿದ್ದಿರಿ ನೀವು. ಇದನ್ನು ಹತ್ತಾರು ಸಾರಿ ಹೇಳಿದ್ದೇನೆ. ಈ ಸಾರಿಯೂ ಕೊನೆಯದಾಗಿ ನಿಮಗೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಈ ಆಶ್ರಯ ಮನೆಯ ಹಂಚಿಕೆ, ನಿವೇಶನದ ಹಂಚಿಕೆ, ಇದಕ್ಕೆ ಅಧ್ಯಕ್ಷರನ್ನಾಗಿ ಶಾಸಕರನ್ನು ಮಾಡಿದ್ದಿರಿ. ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರೂ ಶಾಸಕರೇ ಆಗಿದ್ದರು. ಈಗಿಲ್ಲ ಬಿಡಿ. ಇದು ನಿಮ್ಮ ಈ ಬದಲಾವಣೆಯಾಗಿ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಬದಲಾವಣೆಯಾದಮೇಲೆ ವ್ಯವಸ್ಥೆ ಬದಲಾವಣೆಯಾಗಿದೆ. ನಾನು ಅದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಪ್ರಶ್ನೆ ತಮಗೆ ಹೇಳುತ್ತೇನೆ, ಒಂದು ಕಾರ್ಯಾಲಯ ಅಂತ ಹೇಳಿ ತಾವು ಏನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯದ ಪಕ್ಕದಲ್ಲಿ ಒಂದು ಕಾರ್ಯಾಲಯ ಮಾಡಬೇಕು ಎಂದು ಹೇಳಿದ್ದಿರಿ ಅದು ಕಾರ್ಯಗತ ಆಗಲಿಲ್ಲ. ಮತ್ತು ಶಾಸಕರುಗಳಿಗೆ ಸ್ವಲ್ಪವಾದರೂ ತಾವು ಕ್ಷೇತ್ರದಲ್ಲಿ ಮತದಾರರನ್ನು ಉಳಿಸಿಕೊಳ್ಳುವುದಕ್ಕೆ ಹಾಗೂ ಮುಂದಿನ ಚುನಾವಣೆಯಲ್ಲಿ ನಿಂತು ಠೇವಣಿಯನ್ನು ಕಳೆದುಕೊಳ್ಳದೆ ಗೆಲ್ಲತಕ್ಕ ಒಂದು ಕೆಲಸ ಮಾಡತಕ್ಕ ವ್ಯವಸ್ಥೆಯನ್ನು ಜಾರಿಗೆ ತಂದರು. ತಾವು ಕ್ರಮ ಕೈಗೊಳ್ಳಬೇಕು. ಅದಕ್ಕೆ ಏನು

ಕಾರ್ಯಕ್ರಮ ತಾವು ಹಾಕಿಕೊಂಡಿದ್ದೀರಿ? ಏನಾಗುತ್ತದೆಂದರೆ ಸಂಪೂರ್ಣ ಎಲ್ಲಾ ಪಕ್ಷದ ಶಾಸಕರು, ನಾನು ಒಂದು ಪಕ್ಷವಾಗಿ ಮಾತನಾಡುತ್ತಿಲ್ಲ. ಎಲ್ಲಾ ಪಕ್ಷದ ಶಾಸಕರಿಗೂ ಇವತ್ತು ಕ್ಷೇತ್ರದಲ್ಲಿ ಕೆಲಸ ಇಲ್ಲ. ವಿಭಾಗಾಧಿಕಾರಿ ಅಧ್ಯಕ್ಷರು. ತಾಲ್ಲೂಕು ಪಂಚಾಯಿತಿಗೆ ನಿವೇಶನ ಹಂಚುವುದನ್ನು ಬಿಟ್ಟಿದ್ದೀರಿ. ಒಂದು ನಿವೇಶನ ಕೊಡುವುದಕ್ಕಾಗುವುದಿಲ್ಲ ನಮ್ಮ ಕೈಯಲ್ಲಿ. ಒಂದು ಕೊಳವೆಭಾವಿ ಹಾಕಿಸುವುದಕ್ಕಾಗುವುದಿಲ್ಲ. ಒಂದು ರಸ್ತೆ ಮಾಡಿಸುವುದಕ್ಕಾಗುವುದಿಲ್ಲ. ಜನರು ನಮ್ಮನ್ನು ಯಾವರೀತಿ ಗುರುತಿಸಬೇಕು? ಯಾರನ್ನು ನಾವು ಪ್ರತಿನಿಧಿಸಬೇಕು? ಸ್ಪಷ್ಟವಾಗಿ ಹೇಳಿಬಿಡಿ. ಇದರ ಬಗ್ಗೆ ಸಮಗ್ರ ಚಿಂತನೆ ನೀವು ಮಾಡಿ ಶಾಸಕರು ಆ ಜನರ ಮುಂದೆ, ಮತದಾರರ ಮುಂದೆ ಹೋಗತಕ್ಕ ವ್ಯವಸ್ಥೆಯನ್ನು ನೀವು ಮಾಡಲಿಲ್ಲ ಅಂದರೆ ಇನ್ನು ಮೂರು ವರ್ಷದಲ್ಲಿ ನಾವು ಶಾಸನಸಭೆಯ ಚುನಾವಣೆಗೆ ಹೋಗುವುದಕ್ಕಾಗುವುದಿಲ್ಲ. ಶಾಸಕರ ಅಸ್ತಿತ್ವವನ್ನೇ ಕಡೆಗಾಣಿಸತಕ್ಕ ವ್ಯವಸ್ಥೆಗೆ ತಾವು ಹೋಗಬೇಡಿ. ಅದಕ್ಕೆ ಒಂದು ಬೇರೆ ರೂಪವನ್ನು ಕೊಟ್ಟು, ಶಾಸಕರ ಮಾತಿಗೆ ಕೆಲಸ ಮಾಡುವುದಕ್ಕೆ ಅವಕಾಶ ಕೊಡತಕ್ಕ ದಾರಿಯನ್ನು ತಾವು ಮಾಡಿಕೊಡಬೇಕು. ಅತಿ ಮುಖ್ಯವಾಗಿ ನೀವು ಮಾಡಬೇಕಾದ ಕೆಲಸ ನಿವೇಶನ ಹಂಚಿಕೆಯನ್ನು ಶಾಸಕರಿಗೆ ಕೊಡಬೇಕು. ಇದು ನನ್ನ ಸ್ಪಷ್ಟ ಅಭಿಪ್ರಾಯ. ಮತ್ತು ಶಾಸಕರಿಗೆ ಒಂದು ಕಾರ್ಯಾಲಯ ಅಲ್ಲಿ ಇರಲೇಬೇಕು. ಮೂರು ತಿಂಗಳಗೊಂದು ಸಾರಿ 20 ಅಂಶಗಳ ಕಾರ್ಯಕ್ರಮದ ಸಭೆಯನ್ನು ಕರೆಯುವ ಅಧಿಕಾರವನ್ನು ಶಾಸಕರಿಗೆ ಕೊಟ್ಟಿದ್ದೀರಿ ಅದು ಆಗುವುದಿಲ್ಲ. ತಿಂಗಳಿಗೊಂದು ಸಾರಿ 20 ಅಂಶಗಳ ಕಾರ್ಯಕ್ರಮದ ಸಭೆಯನ್ನು ಕರೆಯತಕ್ಕ ವ್ಯವಸ್ಥೆಯನ್ನು ಶಾಸಕರು ಮಾಡಬೇಕು. ಈ ಮೂರನ್ನು ಶಾಸಕರಿಗೆ ಮಾಡಿದರೆ ಸಾಕಾಗಿದೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ನೀವು ಚಿಂತನೆ ಮಾಡಬೇಕೆಂದು ಹೇಳಿ ತಮಗೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಇನ್ನು ಕಾವೇರಿಯ ಬಗ್ಗೆ ಕಣ್ಣೀರಿನ ಕಥೆ. 5 ಟಿ.ಎಂಸಿ ನೀರನ್ನು ಬಿಟ್ಟ ಬಗ್ಗೆ ಯಾವ ವಿರೋಧಪಕ್ಷಗಳ ಮಾತನ್ನು ಕೇಳಲಿಲ್ಲ. ಮುಖ್ಯಮಂತ್ರಿಗಳು ಆ ನೀರನ್ನು ಧಾರಾಳವಾಗಿ ಬಿಟ್ಟರಿಯೆಂದು ಹೇಳಿ ನಾನೂ ಸೇರಿ ಎಲ್ಲಾ ವಿರೋಧಪಕ್ಷಗಳು ಸರ್ಕಾರದ ಮೇಲೆ ನಿರಂತರವಾದ ಧಾಳಿಯನ್ನು ಮಾಡಿದರು. ಶಾಸನಸಭೆಯ ಹೊರಗೆ ಸಮಗ್ರವಾದಂತಹ ಚಳುವಳಿ, ಹೋರಾಟಗಳು ಸತ್ಯಾಗ್ರಹ ನಿರಂತರವಾಗಿ ನಡೆಯಿತು. 5 ಟಿಎಂಸಿ ನೀರನ್ನು ಹೇಳದೇ ಕೇಳದೇ ತಮಿಳುನಾಡಿನ ಮನವನ್ನು ಒಲಿಸಿಕೊಳ್ಳುವುದಕ್ಕೆ ಬಿಟ್ಟಿದ್ದಾರೆಂದು ಮಾನ್ಯ ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರಿದಂ ಹಿಡಿದು ಕಾಂಗ್ರೆಸ್ , ಕೆಸಿಪಿ ಇಲ್ಲಿರತಕ್ಕ ಎಲ್ಲಾ ವಿರೋಧಪಕ್ಷಗಳು 5 ಟಿಎಂಸಿ ನೀರನ್ನು ಬಿಟ್ಟದ್ದನ್ನು ತೀವ್ರವಾಗಿ ವಿರೋಧಮಾಡಿ ಸರ್ಕಾರವನ್ನು ನಿರಂತರವಾಗಿ ತರಾಟೆಗೆ ತೆಗೆದುಕೊಂಡು ಕನಿಷ್ಟ ನಾಲ್ಕೈದು ದಿನಗಳ ಕಾಲ ಈ ಚರ್ಚೆ ನಡೆಯಿತು. ಅದು ಆದ ನಂತರ ಮತ್ತೆ ನ್ಯಾಯಮಂಡಳಿಯಿಂದ 11 ಟಿಎಂಸಿ ನೀರನ್ನು ಬಿಡಬೇಕೆಂದು ಹೇಳಿ ಆದೇಶ ಬಂತು. ಇದಕ್ಕಾಗಿ ತುರ್ತು ಶಾಸನಸಭಾ ಅಧಿವೇಶನ ಕರೆಯಬೇಕೆಂದು ಹೇಳಿ ವಿರೋಧಪಕ್ಷಗಳ ಸಭೆ ಸೇರಿತು. ವಿರೋಧಪಕ್ಷದ ಸಭೆಯಲ್ಲಿ ಅಧಿವೇಶನ ಕರೆಯಬೇಕೆಂದು ಹೇಳಿ ವಿರೋಧಪಕ್ಷಗಳ ಪಕ್ಷದವರೆಲ್ಲರೂ ಒಂದು ಹನಿ ನೀರನ್ನು ತಮಿಳುನಾಡಿಗೆ ಬಿಡುವುದಿಲ್ಲವೆಂದು ಹೇಳಿ ಸ್ಪಷ್ಟಪಡಿಸಿ

ಪ್ರಧಾನಮಂತ್ರಿಗಳು ಮಾತುಕತಗೆ ಕರೆದರೂ ಸಹಿತ 11 ಟಿಎಂಸಿ ನೀರಿನ ಬಗ್ಗೆ ಮಾತನಾಡಬಾರದು. ಎಂದು ನಿರ್ಧರಿಸಲಾಗಿತ್ತು. ಸಮಗ್ರವಾಗಿ ಇಡೀ ಕಾವೇರಿ ನೀರಿನ ಬಗ್ಗೆ ಚರ್ಚೆ ಮಾಡುವುದಾದರೆ ತಾವು ಪ್ರಧಾನಮಂತ್ರಿಗಳ ಹತ್ತಿರ ಹೋಗಬಹುದು ಆದ್ದರಿಂದ ಶಾಸನಸಭೆಯನ್ನು ತುರ್ತಾಗಿ ಕರೆಯಬೇಕೆಂದು ಹೇಳಿ ಇಡೀ ವಿರೋಧಪಕ್ಷಗಳು ಹೇಳಿ, ವಿರೋಧಪಕ್ಷ 11 ಟಿಎಂಸಿ ನೀರು ಅಲ್ಲ ಒಂದು ಹನಿ ನೀರನ್ನು ಬಿಡುವುದಿಲ್ಲವೆಂದು ಹೇಳಿ ಇಡೀ ವಿರೋಧಪಕ್ಷಗಳೆಲ್ಲಾ ಒಕ್ಕೊರಲಿನ ತೀರ್ಮಾನ ತೆಗೆದುಕೊಂಡಿತು. ಅದರ ಜೊತೆಗೆ ಶಾಸನಸಭೆಯ ತುರ್ತು ಅಧಿವೇಶನ, ತುರ್ತು ಅಧಿವೇಶನದಲ್ಲಿ ನಿರ್ಣಯ. ನ್ಯಾಯಮಂಡಳಿಯನ್ನೇ ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ಹೇಳಿದ ನನ್ನ ನಿರ್ಣಯ ಬರಲಿಲ್ಲ. ಸ್ವಲ್ಪ ಬದಲಾವಣೆ ಮಾಡಿ, ವಿರೋಧಪಕ್ಷದ ನಾಯಕರು ಒಂದು ನಿರ್ಣಯವನ್ನು ತಂದರು. ನಾನು ಅದನ್ನು ವಿರೋಧಮಾಡಿ ಸಭಾತ್ಯಾಗ ಮಾಡಿದೆ. ನಂತರ ಸಭೆ ಮುಂದೆ ಹೋಯಿತು. ಕೇಂದ್ರಕ್ಕೆ ನಿಯೋಗ ಹೋಯಿತು. ಕೇಂದ್ರಕ್ಕೆ ಸರ್ವಪಕ್ಷಗಳ ನಿಯೋಗ ಹೋಗುವಾಗ ಒಂದು ಹನಿ ನೀರನ್ನು ಬಿಡುವುದಿಲ್ಲ ಮುಖ್ಯಮಂತ್ರಿಗಳು ಜನತಾದಳದ ಶಾಸಕಾಂಗ ಪಕ್ಷದಲ್ಲಿ ಒಂದು ಹನಿ ನೀರೂ ಬಿಡುವುದಿಲ್ಲ ನನ್ನ ಅಧಿಕಾರ ಹೋದರೂ ಚಿಂತೆಯಿಲ್ಲವೆನ್ನತಕ್ಕ ಮಾತನ್ನು ವೀರಾವೇಷದಿಂದ ಅಲ್ಲಿ ಹೇಳಿದರು. ಆದಾದ ನಂತರ ದೆಹಲಿಗೆ ಹೋದರು, ನಮ್ಮ ನಿಯೋಗ ಹಗಿ ಬರುವುದರೊಳಗಾಗಿ ಪ್ರಧಾನಿಯವರನ್ನು ಭೇಟಿಮಾಡಿದರು. ಪ್ರಧಾನಿಯವರನ್ನು ಭೇಟಿ ಮಾಡಿ ಅವರ ಜೊತೆಯಲ್ಲಿ ಮಾತುಕತೆಯನ್ನು ಆಡಿ ನಂತರ ನಮ್ಮ ನಿಯೋಗವನ್ನು ಪ್ರಧಾನಮಂತ್ರಿಯವರ ಮುಂದೆ ಕರೆದುಕೊಂಡು ಹೋದಾಗ ವಾದ ವಿವಾದಗಳು ನಡೆದವು. ಕೊನೆಗೆ 6 ಟಿಎಂಸಿ ನೀರನ್ನು ಬಿಡಬೇಕೆಂದು ಹೇಳಿ ಪ್ರಧಾನಿಯವರು ತೆಗೆದುಕೊಂಡಂಥ ನಿರ್ಣಯಕ್ಕೆ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವೇಗೌಡರು ಒಪ್ಪಿದರು. ನಾನು ನೇರವಾಗಿ ಅದನ್ನು ವಿರೋಧ ಮಾಡಿದೆ. ತಮಗೆ ಹೇಳುತ್ತಿದ್ದೇನೆ ಅಧ್ಯಕ್ಷರು, 5 ಟಿಎಂಸಿ ನೀರನ್ನು ಬಿಡುವುದಕ್ಕೆ ವಿರೋಧ ಮಾಡಿದಂತಹ ಎಲ್ಲಾ ವಿರೋಧ ಪಕ್ಷದವರು 6 ಟಿಎಂಸಿ ನೀರನ್ನು ಬಿಡತಕ್ಕ ನಿಲುವಿಗೆ ಒಪ್ಪಿದ್ದು ಇದೆಯಲ್ಲಾ ಇದು ನಿಜವಾಗಲೂ ಬಹಳ ಅತ್ಯಂತ ಶೋಚನೀಯ. ಇಡೀ ವಿರೋಧಪಕ್ಷಗಳನ್ನೇ ಮುಳುಗಿಸಿದರು.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ವಾಟಾಳನಾಗರಾಜ್ ರವರು ಒಂದು ನಿಮಿಷ ಈಲ್ಡ್ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ಈಲ್ಡ್ ಆಗುವುದಿಲ್ಲ.

ಶ್ರೀಎಲ್. ಆರ್. ಶಿವರಾಮೇಗೌಡ : ನಾನು ನಿಮ್ಮ ಸಹಾಯಕ್ಕೆ ಬರುತ್ತೇನೆ.

ಶ್ರೀ ವಾಟಾಳನಾಗರಾಜ್ : ನಿಮ್ಮ ಸಹಾಯ ನನಗೆ ಬೇಡ. ಈಲ್ಡ್ ಆಗುವುದಕ್ಕೆ ಆಗುವುದಿಲ್ಲ. ಸಹ ಸದಸ್ಯರ ಪ್ರಭುತ್ವ ಇದು. ಸಹ ಪ್ರಭುತ್ವ ಅಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ವಾಟಾಳನಾಗರಾಜರವರೇ, ತಾವು ಹಿರಿಯರು ಈ ಧೋರಣೆ ಬೇಡ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ವಾಟಾಳನಾಗರಾಜ್ ರವರು ಒಂದು ನಿಮಿಷ ಈಲ್ಡ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ಈಲ್ಡ ಆಗುವುದಿಲ್ಲ.

ಶ್ರೀಎಲ್. ಆರ್. ಶಿವರಾಮೇಗಾಡ : ನಾನು ನಿಮ್ಮ ಸಹಾಯಕ್ಕೆ ಬರುತ್ತೇನೆ.

ಶ್ರೀ ವಾಟಾಳನಾಗರಾಜ್ : ನಿಮ್ಮ ಸಹಾಯ ನನಗೆ ಬೇಡ. ಈಲ್ಡ ಆಗುವುದಕ್ಕೆ ಆಗುವುದಿಲ್ಲ. ಸಹ ಸದಸ್ಯರ ಪ್ರಭುತ್ವ ಇದು. ಸಹ ಪ್ರಭುತ್ವ ಅಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ವಾಟಾಳನಾಗರಾಜರವರೇ, ತಾವು ಹಿರಿಯರು ಈ ಧೋರಣೆ ಬೇಡ.

ಶ್ರೀ ವಾಟಾಳ್ ನಾಗರಾಜ್ : ಇರಲಿ, ಹಿರಿಯರು ಅದೆಲ್ಲಾ ಆಮೇಲೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ, ಕೃಷ್ಣಾದಲ್ಲಿ ಮೀಟಿಂಗ್ ಕರೆದಾಗ ಎಲ್ಲಾ ವಿರೋಧಪಕ್ಷಗಳ ನಾಯಕರುಗಳೂ ಸಹಿತ ಕೇಂದ್ರ ಸರ್ಕಾರದ ಸೌಹಾರ್ದಕ್ಕಾಗಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಹೇಳಿ, ನೀರು ಬಿಡಬೇಕಾದ ಸಂದರ್ಭ ಬಂದರೆ ಒಂದೊಂದು ತರಹ ಹೇಳಿಕೆ ಕೊಟ್ಟರು. ನಾವು ಒಪ್ಪಿಲ್ಲವೆಂದು ಹೇಳಿ. ಆದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇದು ರೆಕಾರ್ಡ ಆಗಲಿಯೆಂದು ಹೇಳಿ ವಿಶೇಷ ಅಧಿವೇಶನ ಕರೆದದ್ದನ್ನು ತಮಗೆ ಜ್ಞಾಪಕ ಮಾಡಿಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವರಾಮೇಗೌಡರು ಏನೋ ಹೇಳಲಿಕ್ಕೆ ಹೋಗಿ ಯಾವುದೋ ಅರ್ಥ ಬರುವ ರೀತಿಯಲ್ಲಿ ಮಾತನಾಡಿದರು. This will be a reflection on the Laders of Opposition. ಎಲ್ಲಾ ಸದಸ್ಯರಿಗೆ. ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದರ ಮೇಲೆ ಮಾನ್ಯ ಶಿವರಾಮೇಗೌಡರು ವ್ಯಾಖ್ಯಾನ ಮಾಡಲಿಕ್ಕೆ ಹೋದರೆ it will be a reflection on the Members of the opposition. ನಾವು ಇದರ ಬಗ್ಗೆ ಮಾತನಾಡಬೇಕಾಗುತ್ತದೆ. ದಯಮಾಡಿ ಈ ಮಾತು ರೆಕಾರ್ಡನಲ್ಲಿ ಬರಬಾರದು.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಪ್ರಾಮಾಣಿಕನೂ ಇಲ್ಲ, ಅಪ್ರಾಮಾಣಿಕನೂ ಇಲ್ಲ ಈ ತರಹ ಹೇಳಿ ದಯಮಾಡಿ ದಾರಿ ತಪ್ಪಿಸಬೇಡಿ. ನಾವು ಜವಾಬ್ದಾರಿಯಿಂದ ಈ ಸಭೆಗೆ ಹೋಗಿದ್ದೇವೆ. ಈ ತರಹ ಮಾತನಾಡಿದರೆ ಇನ್ನು ಯಾವ ಸಭೆಗೂ ಹೋಗುವುದಿಲ್ಲ. ಈ ತರಹ ಇಂಟ್ರಿಪಿಟ್ ಮಾಡಿಕೊಂಡು ತಿರುಗಾಡಬಾರದು. ಏಕೆಂದರೆ ನಾವು ಒಂದು ಒಮ್ಮತದಿಂದ ಚರ್ಚೆ ಮಾಡಿಕೊಂಡು, ಅವರು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡಿಕೊಂಡು ಹೋದರು ಅಂದರು.

ಕಾವೇರಿ ವಿಷಯದಲ್ಲಿ ಮಾನ್ಯ ವಾಟಾಳನಾಗರಾಜರವರನ್ನು ಬಿಟ್ಟರೆ ಬಾಕಿ ಎಲ್ಲರೂ ಕೂಡ ಒಂದೇ ಧ್ವನಿಯಲ್ಲಿ ಮಾತನಾಡಿದರು. ಅವರು ಏನು ಹೇಳಿದರು? ಒಬ್ಬೊಬ್ಬರು ಒಂದೊಂದು ಧ್ವನಿಯಲ್ಲಿ ಮಾತನಾಡಿದರು ಅಂತ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮೊದಲನೆಯ ಹಂತದ್ದು ನಾನು ಹೇಳಿದ್ದುದು ಎರಡನೆಯ ಹಂತದಲ್ಲಿ ಎಲ್ಲರೂ ಒಪ್ಪಿದ್ದೀರಿ. ಮೊದಲನೆಯ ಹಂತದಲ್ಲಿ ಒಪ್ಪಿದ್ದೀರಾ? ಹಂತವೂ ಇಲ್ಲ

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಸದಸ್ಯರು ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮೊದಲನೆಯ ಹಂತದಲ್ಲಿ ಮಾನ್ಯ ವಿರೋಧಪಕ್ಷದವರು ಎಲ್ಲರೂ ಒಪ್ಪಿಕೊಂಡು ಹೋಗಿದ್ದುದ್ದು ನಿಜ. ಮುಖ್ಯಮಂತ್ರಿಗಳು ತೆಗೆದುಕೊಳ್ಳತಕ್ಕ ನಿಲುವಿಗೆ ನಾವು ಬದ್ಧರು ಎಂದು ಹೇಳಿದ್ದುದು ನಿಜ. ಕೊನೆಗೆ ನೀವು ಹೋಗಿ ಹೋಗಿ ಪ್ರತಿ ಹೇಳಿಕೆ ಕೊಟ್ಟಮೇಲೆ ಇದು ರೇಕಾರ್ಡಗೆ ಹೋಗಲಿ ಇದೆಲ್ಲಾ ಬೇಡವೆಂದು ಹೇಳಿ ನಾವೆಲ್ಲರೂ ಸೇರಿ ಚರ್ಚೆ ಮಾಡಿದ್ದೇವೆ.

ಶ್ರೀ ವಾಟಾಳನಾಗರಾಜ್ : ಅದು ಹಾಗಲ್ಲ, ಮಾನ್ಯ ಶಿವರಾಮೇಗೌಡರಿಗೆ ಗೊತ್ತಿಲ್ಲ ನಿಮಗೆ ಅನೇಕ ವಿಚಾರಗಳು, ಏಕೆಂದರೆ ಎಷ್ಟೋ ಸಾರಿ ನಾವು ಅವರನ್ನು ವಿರೋಧಪಕ್ಷಗಳ ಸಭೆಗೆ ಅವರನ್ನು ಕರೆದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ಗೊತ್ತಿಲ್ಲದೆ ಇರತಕ್ಕದ್ದನ್ನು ನಾನು ಹೇಳುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಎಷ್ಟೋ ಸಾರಿ ವಿರೋಧಪಕ್ಷಗಳ ಸಭೆಗೆ ನಾವು ಅವರನ್ನು ಕರೆದಿಲ್ಲ. ಅವರನ್ನು ಯಾವತ್ತು ಕರೆದಿದ್ದೇವೆ? ಅದು ನನಗೆ ಗೊತ್ತೇ ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ನೀವು ಮಾತ್ರ ವಿರೋಧಪಕ್ಷದವರಾಗಿದ್ದಿರಿ. ನಾವೆಲ್ಲಾ ಬೇರೆ ಇದ್ದವೋ?

ಶ್ರೀ ವಾಟಾಳನಾಗರಾಜ್ : ಇವರು ಸಹ ಸದಸ್ಯರು. ಆದ್ದರಿಂದ ಇವರು ವಿರೋಧಪಕ್ಷ ಅಲ್ಲ ಇವರು. ಅವರೂ ಸಹ ಸದಸ್ಯರು, ಅವರ ಬಗ್ಗೆ ನನಗೆ ಗೌರವವಿದೆ. ಆದರೆ ಈ ವಿಚಾರದ ಬಗ್ಗೆ ನನಗೆ ಅಷ್ಟು ನಂಬಿಕೆಯಿಲ್ಲ. 6 ಟಿಎಂ.ಸಿ ನೀರು ಬಿಡುವುದಕ್ಕೆ ಏಕೆ ಒಪ್ಪಿದರು?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವೀರಪ್ಪಮೊಯಿಲಿಯವರು ಹೇಳಿದ ಮಾತಿಗೆ, ನಾವು ಇಡೀ ಸದನ ತಾವು ಒಬ್ಬರು ಅದು ಕನ್ಸಿಸ್ಟಿಂಗ್ ನಿಲುವು ತೆಗೆದುಕೊಂಡಿದ್ದೀರಿ ಅದು ಬೇರೆ. ಇನ್ನು ಕಾವೇರಿ ಬಗ್ಗೆ ಇಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. 5 ಟಿಎಂಸಿ ನೀರು ಕೊಟ್ಟಾಗ ಸದನದ ಅಭಿಪ್ರಾಯ ಏನೆಂಬುದು ಗೊತ್ತಾಯಿತು, ಬೇರೆ ಬೇರೆ ಎಲ್ಲಾ ಪಕ್ಷಗಳು ಅವರ ಮನಸ್ಸಿನಲ್ಲಿರುತಕ್ಕ ಫ್ರಾಂಕ್ ಆಗಿ ಇನದಿ ಇಂಟರೆಸ್ಟ್ ಆಫ್ ದಿ ಸ್ಟೇಟ್ ಮಾತನಾಡಿದ್ದಾರೆ. 6 ಟಿ.ಎಂಸಿ ನೀರು ಕೊಡುವ ಹೊತ್ತಿಗೆ ಏನು ಬೆಳವಣಿಗೆ? ನಾವು ಹೇಳಿದ್ದೇನು ರಾಜ್ಯಸರ್ಕಾರ ಮತ್ತು

ಈ ಸದನದ ನಿಲುವು ಏನಿತ್ತು ಇದರ ಬಗ್ಗೆ ಒಂದು ಗೈಡಲೈನ್ಸ್ ಆಗಬೇಕು ನ್ಯಾಷನಲ್ ವಾಟರ್ ಪಾಲಿಸಿಯಾಗಬೇಕು. ಬರೀ ಅಲ್ಲೊಂದು 5 ಟಿಎಂಸಿ ನೀರು ಕೊಡು, ಇಲ್ಲೊಂದು 6 ಟಿಎಂಸಿ ನೀರು ಕೊಡು ಇದು ಆಗಬಾರದು ಎಂದು ಪ್ರಧಾನಮಂತ್ರಿಗಳು ಕರೆದರೆ ತಾವು ಮೊದಲನೆಯ ಸಾರಿ ಹೇಳಿದ್ದೀರಿ. ಪ್ರಧಾನಮಂತ್ರಿಗಳು ಹತ್ತಿರ ನಾವು ನೀರು ಎಷ್ಟು ಬಿಡುತ್ತೇವೆ ಎನ್ನುವುದನ್ನು ಚರ್ಚೆ ಮಾಡುವುದಕ್ಕೆ ಹೋಗಬಾರದು ಪ್ರಿನ್ಸಿಪಲ್ ಆಗಿ ನೀವು ಮಾತನಾಡಬೇಕು. ಆಗ ತಾವು ಹೇಳಿದ್ದುದು ಇದೇನೇ. ಅದರೊಳಗೆ ಅವರು ಅನೌನ್ಸ ಮಾಡಿದರು. ಸುಪ್ರೀಂಕೋರ್ಟನವರ ಆದೇಶದ ಮೇರೆಗೆ ಟ್ರಿಬ್ಯುನಲ್ ಅವಾರ್ಡನ್ನು ಇಂಪ್ಲಿಮೆಂಟ್ ಮಾಡುವ ಬದಲಾಗಿ ಈಗ ಸಧ್ಯಕ್ಕೆ ಮ್ಯುಚಿಯಲಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಇಂತಹ ವಿಷಯಗಳಲ್ಲಿ ಜ್ಯುಡಿಷಿಯರಿ ಅದರ ತೀರ್ಮಾನದಂತೆ ಹೋಗುವುದು ಕಷ್ಟವಾಗುತ್ತದೆಂದು ಸುಪ್ರೀಂಕೋರ್ಟ ಹೇಳಿದ್ದರಿಂದ ಪ್ರಧಾನಮಂತ್ರಿಗಳು, ಇವೆಲ್ಲಾ ಇದ್ದಾಗ ಮಾನ್ಯ ವಾಟಾಳನಾಗರಾಜರವರೇ, ಈಗ ಈ ವಿಷಯದ ಪ್ರಸ್ತಾಪ ಅನಾವಶ್ಯಕ. ಹೆಚ್ಚು ಕಮ್ಮಿ ಒಂದು ತಿಳುವಳಿಕೆಗೆ ಬಂದಿದ್ದೇವೆ.

12.30 ಪಿ.ಎಂ.

ತಮಿಳುನಾಡಿಗೆ ನಮ್ಮ ನಿಲುವನ್ನು ಸ್ಪಷ್ಟವಾಗಿ ಇಡೀ ಸದನ ಒಂದಾಗಿ ತಿಳಿಸಿದ್ದೇವೆ. ಮತ್ತೆ ಇದರ ಪ್ರಸ್ತಾಪ ಏಕೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳನಾಗರಾಜ : ನನ್ನ ನಿಲುವು ವಿರುದ್ಧವಾದುದು. 6 ಟಿ.ಎಂ.ಸಿ ನೀರನ್ನು ಬಿಟ್ಟಿದ್ದು ಸರಿಯಿಲ್ಲ. 6 ಟಿ.ಎಂ.ಸಿ ನೀರು ಬಿಡಬೇಕಾದರೆ ಅದರ ಉದ್ದೇಶ, ಅಧಿಕಾರ ಹೋಗುತ್ತದೆ ಎನ್ನುವಂಥ ಒಂದೇ ಒಂದು ಉದ್ದೇಶದಿಂದ ನೀವು 6 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟಿದ್ದೀರಿ, ಬೇರೆ ಮಾತೇ ಇಲ್ಲ. ಹಗಲು ರಾತ್ರಿ ಈ ದೇಶದ ಜನಕ್ಕೆ ನೀವು ಏನು ಹೇಳಿದ್ದೀರಿ? ನಮ್ಮಲ್ಲಿ ನೀರಿಲ್ಲ, ನೀರು ಬಿಡುವುದಕ್ಕೆ ಆಗುವುದಿಲ್ಲ ಎಂದು ಹೇಳಿಕೊಂಡು, ಇಡೀ ರಾಜ್ಯಕ್ಕೆ ಹಾಗೆ ಹೇಳಿ ಕೊನೆಗೆ ಹೋಗಿ ನೀವು ಪ್ರಧಾನಮಂತ್ರಿಗಳ ಮಾತಿಗೆ ಕಟ್ಟುಬಿದ್ದು ನೀವು ನೀರನ್ನು ಬಿಡುವುದಕ್ಕೆ ಹೋದಿರಲ್ಲಾ, ಇದರ ನಿಜವಾದ ಉದ್ದೇಶ ಏನು? ಯಾವ ಉದ್ದೇಶಕ್ಕೋಸ್ಕರ ಹೀಗೆ ಮಾಡಿದ್ದೀರಿ? ನೇರವಾಗಿ ಸರ್ವೋಚ್ಚ ನ್ಯಾಯಾಲಯ ನೀವು ನೀರು ಬಿಡಬೇಕು ಎನ್ನತಕ್ಕಂಥ ಆದೇಶವನ್ನು ಹೊರಡಿಸುತ್ತದೆ. ಇದಕ್ಕೆ ವಿರೋಧವಾಗಿದ್ದರೆ ಸರ್ಕಾರವನ್ನು ವಜಾ ಮಾಡುತ್ತಾರೆ. ಸರ್ಕಾರ ವಜಾಮಾಡಿದರೆ ಕೆ.ಆರ್.ಎಸ್. ಸುತ್ತ ಮಿಲಿಟರಿ ತಂದು ಹಾಕುತ್ತಾರೆ. ಮಿಲಿಟರಿ ತಂದುಹಾಕಿದ ಮೇಲೆ ನೀರು ಬಿಟ್ಟುಹೋಗುತ್ತಾರೆ. ಈ ಸೂತ್ರದ ಮೇಲೆ ನೀವು ನೀರನ್ನು ಬಟ್ಟಿರತಕ್ಕಂಥಾದ್ದು. ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. 6 ಟಿ.ಎಂ.ಸಿ. ನೀರನ್ನು ಬಿಟ್ಟಿರತಕ್ಕಂಥ ವಿಚಾರ ಇದು ಸತ್ಯ. ಯಾವ ಉದ್ದೇಶಕ್ಕಾಗಿ? ನಿಮ್ಮ ಅಧಿಕಾರ, ಗದ್ದುಗೆ ಕಳಚಿ ಬೀಳುತ್ತದೆ ಅಂತ ತಾನೆ? ಹೇಳಿ. ನೀರು ಇಲ್ಲ ಎಂದು ಹೇಳಿದವರು ನಮ್ಮ ಮುಖ್ಯಮಂತ್ರಿಗಳು. ಎಲ್ಲಾ ಸಭೆಗಳಲ್ಲೂ ನೀರಿಲ್ಲ ಎಂದು ಹೇಳಿದವರು ನಮ್ಮ ಮುಖ್ಯಮಂತ್ರಿಗಳು. ನ್ಯಾಯಮಂಡಳಿ ಸರಿಯಾಗಿಲ್ಲವೆಂದು ಅವರು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ ಅನೇಕ ಕಡೆ ಸಭೆ ಸಮಾರಂಭ ಮಾಡಿ ಹೇಳಿದರು.

ನ್ಯಾಯಮಂಡಳಿಯ ವರ್ತನೆ ಖಂಡನೀಯವೆಂದು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ ಹೇಳಿದರು. ಆದರೆ ಮುಖ್ಯಮಂತ್ರಿಗಳಾದ ನಂತರ, ನ್ಯಾಯಮಂಡಳಿ ಇರಬೇಕು, ಎಂದು ಅದು ರದ್ದಾಗಬೇಕೆಂದು ಎಲ್ಲಿಯೂ ನೇರವಾಗಿ ಶಕ್ತಿಯುತವಾಗಿ ಅವರು ಹೇಳಲಿಲ್ಲ. ಸುಮ್ಮನೆ ನ್ಯಾಯಮಂಡಳಿ ಮುಂದೆ ಅರ್ಜಿ ಹಾಕುತ್ತಿದ್ದೇವೆ. ನ್ಯಾಯಮಂಡಳಿ ಮುಂದೆ ಹೋಗಬೇಕು ಎಂದು ಹೇಳಿದರು. ಮತ್ತೊಂದು ರಾಷ್ಟ್ರದ ಜಲನೀತಿ. ಯಾವ ರಾಷ್ಟ್ರೀಯ ಜಲನೀತಿಯನ್ನು ಯಾರು ಒಪ್ಪಿಕೊಂಡರು? ರಾಷ್ಟ್ರೀಯ ಜಲನೀತಿ ಒಮ್ಮತವಾಗದಿದ್ದರೆ ಒಪ್ಪತಕ್ಕಂಥವರು ಯಾರು? ಇದೆಲ್ಲಾ ಸಮಸ್ಯೆಗಳು ಇರುತ್ತವೆ. ಆದ್ದರಿಂದ 6 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದು ನಿಮ್ಮ ಒಂದು ಅಧಿಕಾರದ, ಗದ್ದುಗೆ ಮೇಲೆ ಅಪಾಯ ಒದಗುತ್ತದೆ ಎನ್ನುವಂಥ ದೃಷ್ಟಿಯಿಂದ ಮಾತ್ರ.

ಶ್ರೀ ಕೆ.ಎನ್ ನಾಗೇಗೌಡ : ಮಾನ್ಯ ವಾಟಾಳ್ ನಾಗರಾಜರವರು ಬಹುಶಃ ವಾಸ್ತವಾಂಶ ಮೇಲೆ ವಿರೋಧ ಮಾಡಿದರೆ ಅದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ. ಕಾರಣ ಏನೆಂದರೆ ಅವರು ತುಂಬಾ ಚೆನ್ನಾಗಿ ಮಾತನಾಡುತ್ತಾರೆ. ವಿಚಾರವಂತರಿದ್ದೀರಿ, ವಿಚಾರವನ್ನು ತಿಳಿದುಕೊಂಡವರು ಇದ್ದೀರಿ. ಈ ನೆಲ, ಜಲದ ಬಗ್ಗೆ ಸಾಕಷ್ಟು ಕಮಿಟಮೆಂಟ್ ಇರತಕ್ಕಂಥ ಕರ್ನಾಟಕ ರಾಜ್ಯದ ಒಬ್ಬ ಮುಖಂಡರು ತಾವು. ಭಾರತ ದೇಶದ ಇತಿಹಾಸದಲ್ಲಿ, ಮಾನ್ಯ ವೀರಪ್ಪ ಮೊಯಿಲಿಯವರು ಇದ್ದಾರೆ, ಜೆ.ಎಚ್. ಪಟೇಲರು ಇಲ್ಲಿ ಇದ್ದಾರೆ. ಭಾರತ ದೇಶದ ನೀರಾವರಿ ಇತಿಹಾಸದಲ್ಲಿ ಬಚಾವಾಗಿರತಕ್ಕಂಥ ಸರ್ಕಾರ ಯಾವುದಾದರೂ ಇದ್ದರೆ ಅದು ದೇವೇಗೌಡರ ಸರ್ಕಾರ. ಇದು ನರ್ಮದಾ ಇರಲಿ, ಕೃಷ್ಣಾ ಇರಲಿ. Our Chief Minister and Mr. Patilji are the most experienced personalities.

11 ಟಿ.ಎಂ.ಸಿ. ನೀರನ್ನು ಬಿಡಬೇಕು ಎಂದು ಇದ್ದ ಮಧ್ಯಂತರ ತೀರ್ಪಿನಲ್ಲಿ 6.ಟಿ.ಎಂ.ಸಿ ನೀರನ್ನು ಬಿಟ್ಟು 5 ಟಿ.ಎಂ.ಸಿ ನೀರನ್ನು ಉಳಿದಂಥ ಇತಿಹಾಸ ಭಾರತದೇಶದಲ್ಲಿ ಯಾವುದಾದರೂ ಒಂದು ಜಲವಿವಾದದಲ್ಲಿ ಇದ್ದರೆ, ನೀವು ಮಾಡಿದಂಥ ಆಪಾದನೆ ಸತ್ಯ ಇದೆ. ದೇವೇಗೌಡರು ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ 6.ಟಿ.ಎಂ.ಸಿ ನೀರನ್ನು ಬಿಟ್ಟಿರುವುದು ಸರಿ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇಲ್ಲವಾದರೆ ದೇವೇಗೌಡರ ನಾಯಕತ್ವದಲ್ಲಿ ಭಾರತದ ಇತಿಹಾಸದಲ್ಲಿ ಪ್ರಧಾನಮಂತ್ರಿಗಳ ಸಹಕಾರದಲ್ಲಿ, ಟ್ರಿಬ್ಯುನಲಗೆ ಇರತಕ್ಕಂಥ ಹಕ್ಕಿನಲ್ಲಿ 11 ಟಿ.ಎಂ.ಸಿ ಗೋಸ್ಕರವಾಗಿ 6 ಟಿ.ಎಂ.ಸಿ ನೀರನ್ನು ಕೊಟ್ಟು 5 ಟಿ.ಎಂ.ಸಿ.ಯನ್ನು ಉಳಿಸಿದ ಇತಿಹಾಸ ಕರ್ನಾಟಕದಲ್ಲಿ ಇದೆಯೆಂದು ಒಪ್ಪಿದರೆ ಅದಕ್ಕೆ ವಿರೋಧ ಮಾಡಬಾರದು. ಇತಿಹಾಸ ಇದ್ದರೆ ನೀವು ನಿಜವಾಗಿಯೂ ವಿರೋಧ ಮಾಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಗೇಗಾಡರ ಸ್ವಾಮಿ ನಿಷ್ಠಗೆ ಅಭಿನಂದನೆಗಳು.

SRI K.N. NAGEGOWDA : You cannot use that word. You must withdraw that word. You cannot pinch my mind; you cannot pinch my personal character.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪೂರ್ತಿ ಹೇಳಿದಮೇಲೆ ಹೇಳಿ.

ಶ್ರೀ ಕೆ.ಎನ್. ನಾಗೇಗೌಡ : ಇಲ್ಲಿ ಸ್ಟಾರ್ಟಿಂಗೇ ರಾಂಗು. 'ಸ್ವಾಮಿ ನಿಷ್ಠೆ' ಎಂದರೆ ಏನು ಸ್ವಾಮಿನಿಷ್ಠೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಸ್ಥಾನದ ಘನತೆ, ಗೌರವದಿಂದ ಮಾತನಾಡಬೇಕು. You tell me. You cannot use all those words, ಸ್ವಾಮಿ ನಿಷ್ಠೆ ಎಂದರೆ ಏನು? ಯಾರ ನಿಷ್ಠೆಗೋಸ್ಕರ ನಾನು ಮಾತನಾಡಿದ್ದೇನೆ? ನಾನೂ ನಿಮ್ಮ ಹಾಗೆ 25 ವರ್ಷ ರಾಜಕೀಯ ಮಾಡಿ ಬಂದಿದ್ದೇನೆ. ಸ್ವಾಮಿ ನಿಷ್ಠೆ ಎಂದರೆ ಯಾರದ್ದು ಸ್ವಾಮಿ ನಿಷ್ಠೆ? You don't touch my mind. I am not such a person... ಅದು ಯಾವ ಸ್ವಾಮಿ ನಿಷ್ಠೆ ಎಂಬುದನ್ನು ಹೇಳಿ.

(ಸಭೆಯಲ್ಲಿ ಗೊಂದಲ. ಕೆಲವು ಸದಸ್ಯರು ಏಕಕಾಲದಲ್ಲಿ ಎದ್ದುನಿಂತು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಕೆ.ಎನ್. ನಾಗೇಗೌಡ : ಬಾಯಿಗೆ ಬಂದಹಾಗೆ ಮಾತನಾಡುವುದಿಲ್ಲ. ಯಾರಿಗೆ ಸ್ವಾಮಿ ನಿಷ್ಠೆ?

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ಇನ್ನೂ ಅವರು ಹೇಳಬೇಕಾದದ್ದು ಇದೆ. ಸ್ವಾಮಿನಿಷ್ಠೆ ಅವರಿಗೆ ಇದೆ. ಕರ್ನಾಟಕದ ಬಗ್ಗೆ ಸ್ವಾಮಿ ನಿಷ್ಠೆ ಇದೆ. ಯಾವುದೇ ನೀರಿನ ವಿಷಯ ಇರಲಿ, ಮತ್ತೊಂದಿರಿಲಿ, ರಾಜ್ಯದ ಬಗ್ಗೆ ರಾಜ್ಯದ ನೆಲಜಲದ ಬಗ್ಗೆ ಸ್ವಾಮಿ ನಿಷ್ಠೆ ಇದೆಯೆಂದು ಬಹುಶಃ ಅವರು ಹೇಳುವುದಕ್ಕೆ ಹೊರಟ್ಟಿದ್ದರೋ ಬಿಟ್ಟಿದ್ದರೋ ಏನು ಕಥೆಯೋ ನನಗೆ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಪೂರ್ತಿ ಮಾಡುವುದಕ್ಕೆ ಬಿಡಲಿಲ್ಲ. 'ಒಂದು ನಿಮಿಷ' ಎಂದೆ.

ಶ್ರೀ ಕೆ.ಎನ್. ನಾಗೇಗೌಡ : ಆರು ತಿಂಗಳು ಮಂತ್ರಿಯಾಗಿ ಮುಂದುವರೆಯಿರಿ ಎಂದು ಹೇಳಿದರೂ ಬಿಸಾಕಿ ನಾನು ಬಂದಿದ್ದೇನೆ. ಸ್ವಾಮಿ ನಿಷ್ಠೆ ಎಂದರೆ ದೇವೇಗೌಡರ ನಿಷ್ಠೆ ಅಲ್ಲ. ನೀವು ಹೇಳಿದ್ದು ನನಗೆ ಅರ್ಥವಾಯಿತು. ನೀವು ಹೇಳಿದ್ದುದು ನನಗೆ ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಇಷ್ಟು ಸೀರಿಯಸ್ ಆಗಿ ತೆಗೆದುಕೊಳ್ಳುವುದಾದರೆ ತುಂಬಾ ಸಂತೋಷ. ನಾನು ಇವರನ್ನು ಕೇಳುತ್ತೇನೆ. ಯಾರಿಗೆ ಅಭಿನಂದನೆ ಸಲ್ಲಿಸಬೇಕು? ಯಾರು 11 ಟಿ.ಎಂ.ಸಿ. ನೀರನ್ನು ಕಡಿಮೆ ಮಾಡಿದಂಥವರು? ಯಾವಾಗ ಸುಪ್ರೀಂ ಕೋರ್ಟ ಟ್ರಿಬ್ಯುನಲನ ಆರ್ಡರನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿಲ್ಲವೆಂದು ಮನದಟ್ಟಾದಾಗ ಈ ದೇಶದ ಇತಿಹಾಸದಲ್ಲಿ ಮೊದಲಬಾರಿಗೆ ಯಾವ ಸುಪ್ರೀಂ ಕೋರ್ಟ ನೇಮಕ ಮಾಡಿತೋ ಅದೇ

ಟ್ರಿಬ್ಯೂನಲನ ತೀರ್ಪು ಸರಿಯಲ್ಲವೆಂದು ಪ್ರಧಾನಿಯವರಿಗೆ ವಹಿಸಿ, ತಜ್ಞರನ್ನು ಕಳುಹಿಸಿ ವಾಸ್ತವಿಕ ಸ್ಥಿತಿಯ ಆಧಾರದ ಮೇಲೆ ಸಂದರ್ಭ ನೋಡಿಕೊಂಡು ಎರಡೂ ರಾಜ್ಯಗಳು ನಡೆಮಕೊಳ್ಳಬೇಕೆಂದು ಹೇಳಿರತಕ್ಕಂಥಾದ್ದು ಸುಪ್ರೀಂ ಕೋರ್ಟು. ಆ ಸಂದರ್ಭದಲ್ಲಿ ಯಾವುದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿಲ್ಲದೇ ಇರುವಂಥ ನಿರ್ಣಯ ಮಾಡಿದಂಥ ಟ್ರಿಬ್ಯುನಲಗೆ ಮಾನಮರ್ಯಾದೆ, ಸ್ವಲ್ಪವಾದರೂ ಸ್ವಾಭಿಮಾನ ಇದ್ದರೆ ಒಂದು ಕ್ಷಣವೂ ಸಹ ಆ ನ್ಯಾಯಾಧೀಶರು ಅವರ ಪೀಠದಲ್ಲಿ ಕುಳಿತುಕೊಳ್ಳಬಾರದಿತ್ತು. ಯಾರಿಗೆ ಅಭಿನಂದನೆ ಸಲ್ಲಿಸಬೇಕು, ನಾಗೇಗೌಡರೇ? ಬಹುಶಃ ಮಾನ್ಯ ನಾಗೇಗೌಡರು ಇಲ್ಲಿ ಕುಳಿತಿದ್ದರೆ ಖಂಡಿತ ಸರ್ಕಾರದ ಜತೆ ನೀವು ಸಹಕಾರ ಕೊಡುತ್ತಿರಲಿಲ್ಲ. ನಮ್ಮ ಸ್ವಾಮಿ ನಿಷ್ಠೆ ವ್ಯಕ್ತಿ ಬಗ್ಗೆ ಅಲ್ಲ, ಈ ನಾಡಿನ ಬಗ್ಗೆ. ಅದಕ್ಕೇ ನಾವೇನು ಮಾಡಿದ್ದೆವು? ಎಲ್ಲಾ ಪಕ್ಷ, ಬೇಧ ಮರೆತು ಸಂಪೂರ್ಣ ಸಹಕಾರವನ್ನು ಕೊಟ್ಟಿದ್ದೆವು. ಡೆಲ್ಲಿಗೆ ಹೋಗಿ ಪ್ರಧಾನ ಮಂತ್ರಿಗಳನ್ನು ಕಂಡೆವು; ನೀವು ಅಭಿನಂದನೆಯನ್ನು ಸಲ್ಲಿಸಬೇಕಾಗಿರುವುದು ಮುಖ್ಯಮಂತ್ರಿಗಳಿಗೆ ಅಲ್ಲ. ಈ ಸಮಯದಲ್ಲಿ ರಾಜಕಾರಣ ಮಾಡದೇನೆ ಸಂಪೂರ್ಣ ಸಹಕಾರ ಕೊಟ್ಟಂಥ ವಿರೋಧ ಪಕ್ಷದ ಬಗ್ಗೆ ನೀವು ಹೇಳಬೇಕು. ಆದ್ದರಿಂದ ನೀವು ಇದು ದೇವೇಗೌಡರ ಹೆಗ್ಗಳಿಕೆ ಎಂದು ಹೇಳಬೇಡಿ. ದೇವೇಗೌಡರ ಸಾಧನೆಯಿಂದ ಅದು ಸ್ವಾಮಿ ನಿಷ್ಠೆ ಆಗುತ್ತದೆ. ಒಂದು ಮಾತನ್ನು ನಾನು ಹೇಳುತ್ತೇನೆ. ಈ ಗೌರವ ಈ ಸದನಕ್ಕೆ ಸಲ್ಲಬೇಕು. ಆ ಕಡೆ, ಈ ಕಡೆ ಕುಳಿತಂಥ ಸದಸ್ಯರಿಗೆ ಸೇರಬೇಕು ಎಂದರೆ ಅದು ರಾಜ್ಯ ನಿಷ್ಠೆ ಆಗುತ್ತಿತ್ತು. ಈಗ ನಿಮ್ಮ ಮುಖ್ಯಮಂತ್ರಿಗಳನ್ನು ಹೊಗಳಿ ನೀವು ಸ್ವಾಮಿ ನಿಷ್ಠೆ ಪ್ರದರ್ಶನ ಪ್ರದರ್ಶನ ಮಾಡತಕ್ಕಂಥಾದ್ದನ್ನು ಜನ ಮೆಚ್ಚುವುದಿಲ್ಲ, ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ದೇವೇಗೌಡರು ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ಎಂದು ಪದೇಪದೇ ಒತ್ತಿ ಹೇಳಿದ್ದರಿಂದ ನಾನು ಹೇಳಿದೆ. ಅದು ಅಲ್ಲ. ಇದು ಇತಿಹಾಸ ಹಾಗೆ ಇದೆ. ವಿರೋಧಪಕ್ಷದವರ ಸಹಕಾರ ಇಲ್ಲದಿದ್ದರೆ ಇದು ಖಂಡಿತವಾಗುತ್ತಿರಲಿಲ್ಲ. ಇದರ ಬಗ್ಗೆ ಎರಡನೇ ಮಾತಿಲ್ಲ. ಆ ಪೋರ್ಷನಗೆ ನಾನು ಹೋಗಲಿಲ್ಲ. ನನ್ನ ಪೋರ್ಷನ್ ಬರೀ ನಾಗರಾಜರ ವಿಷಯಕ್ಕೆ ಇತ್ತು. ಈಗ ಮಾನ್ಯ ಯಡಿಯೂರಪ್ಪನವರು ತಮ್ಮ ಸಹಕಾರ ಇತ್ತು ಎಂದು ಹೇಳಿದರು. ಅವರ ಸಹಕಾರ ಸತ್ಯವಾಗಿಯೂ ಇತ್ತು. ಆದರೆ ವಿರೋಧಪಕ್ಷದ ಮೇಲೆ ಮಾತನಾಡುವುದಕ್ಕಿಂತ ಮುಖ್ಯಮಂತ್ರಿಗಳು ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಎಂದು ಹೇಳಿದಾಗ ನಾನು ಹೇಳಿದ್ದಕ್ಕೆ ಅವರು 'ಸ್ವಾಮಿ ನಿಷ್ಠೆ' ಎಂದು ಹೇಳಿದರು. ಸ್ವಾಮಿ ನಿಷ್ಠೆ ಎಂದು ಹೇಳಿದ್ದಕ್ಕೆ ನಾನು ಹೇಳಿದೆ ಅವರಿಗೆ, 'ಆ ನಿಷ್ಠೆ ಅಲ್ಲ ಸ್ವಾಮಿ' ಅಂತ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಸದಸ್ಯರಾದ ನಾಗೇಗೌಡರು ನನ್ನ ಹೆಸರನ್ನು ಕೂಡ ತೆಗೆದು ಮಾನ್ಯ ಮುಖ್ಯಮಂತ್ರಿಗಳಿಗೆ ಶಿಫಾರಸ್ಸು ಮಾಡುವುದಕ್ಕೆ ಹೋಗಿದ್ದೀರಿ. ಆದ್ದಿರಂದ ಸ್ವಲ್ಪ ಮಾತನ್ನು ನಾನು ಹೇಳಬೇಕಾಗುತ್ತದೆ. ಏಕೆಂದರೆ ಇತಿಹಾಸವನ್ನು ತಿರುಚಬಾರದು. ಇತಿಹಾಸವನ್ನು

9521

ನಾಡಿನ ಮುಂದೆ, ಜನರ ಮುಂದೆ ಇಡಬೇಕಾಗುತ್ತದೆ. ಟ್ರಿಬ್ಯುನಲ್ ಕಾನ್ಸಿಟ್ಯೂಟ್ ಆದಮೇಲೆ ಮಾನ್ಯ ಮುಖ್ಯಮಂತ್ರಿಗಳು ಪ್ರಥಮ ಹಂತದಲ್ಲಿ 5 ಟಿ.ಎಂ.ಸಿ ಬಿಡುಗಡೆ ಆಗುವವರೆಗೆ ಎಂದೂ ಕೂಡ ಕರ್ನಾಟಕ ರಾಜ್ಯ ತಮಿಳುನಾಡಿಗೆ ಒಂದು ಹನಿ ನೀರನ್ನೂ ಬಿಟ್ಟುಕೊಟ್ಟಿಲ್ಲ. ಅಂದರೆ, over and above the natural flow, ಒಂದು ಹನಿ ನೀರು ಬಿಟ್ಟುಕೊಡಲಿಲ್ಲ. ಟ್ರಿಬ್ಯುನಲ್ ಆದಮೇಲೆ ಪ್ರಥಮ ಬಾರಿ 5 ಟಿ.ಎಂ.ಸಿ ನೀರನ್ನು ಬಿಟ್ಟುಕೊಟ್ಟಂಥ ಕೀರ್ತಿಯೋ ಅಪಕೀರ್ತಿಯೋ ಮಾನ್ಯಮುಖ್ಯಮಂತ್ರಿಯವರಿಗೆ ಸೇರಬೇಕು. ನಮ್ಮ ಮುಂದೆ ಸ್ವಲ್ಪ ಇತಿಹಾಸ ಬೇಕಾಗುತ್ತದೆ. ಆಮೇಲೆ, ಅಧ್ಯಕ್ಷರೇ ತಮಗೆ ಗೊತ್ತಿದೆ. ಒಬ್ಬ ಮುಖ್ಯಮಂತ್ರಿಯವರು ಇಡೀ ರಾಷ್ಟ್ರದಲ್ಲಿ, ಅದೂ ತಮಿಳುನಾಡಿನ ಮುಖ್ಯಮಂತ್ರಿಯವರು ಪ್ರಥಮಬಾರಿ, ಹೊರಗೆ ಬಂದು, ಮರೀನಾ ಬೀಚನಲ್ಲಿ ಸತ್ಯಾಗ್ರಹ ಮಾಡಿ, 205 ಟಿ.ಎಂ.ಸಿ ನೀರು ಬಿಟ್ಟುಕೊಡಬೇಕು ಮತ್ತೆ ಉಳಿದ ಇನಸ್ಟಾಲಮೆಂಟ್ ಬಿಟ್ಟುಕೊಡಬೇಕು. ಇಂಟೀರಿಯಮ ಆರ್ಡರನ್ನು ಇಂಪ್ಲಿಮೆಂಟ್ ಮಾಡಬೇಕೆಂದು, ಹೇಳಿದಾಗಲೂ ಕೂಡ, ಕೇಂದ್ರದ ಮಂತ್ರಿ ಇಲ್ಲ ಬಂದಾಗಲೂ ಕೂಡ, ಅದಕ್ಕೆ ಬಗ್ಗದೆ ನಾಡಿನ ಅಭಿಮಾನವನ್ನು ಎತ್ತಿ ಹಿಡಿದಿದ್ದು ನನ್ನ ಸರ್ಕಾರ. ಇದು ನಡೆದಿದೆ ಇತಿಹಾಸ. ನೀವು ದಯಮಾಡಿ, ಭಾಗಶಃ ಇತಿಹಾಸ ಹೇಳುವುದಕ್ಕೆ ಹೋಗಬೇಡಿ. ಕಾವೇರಿ ನದಿ ನೀರಿನ ಇತಿಹಾಸ ಬಹಳ ದೊಡ್ಡದಿದೆ. ಆಯಾ ಕಾಲದಲ್ಲಿ, ಆಯ ಮುಖ್ಯಮಂತ್ರಿಗಳು, ಆಯಾ ಸರ್ಕಾರ, ತಮ್ಮ ಪಾಲಿನ ಸೇವೆಯನ್ನು ಮಾಡಿಕೊಂಡೇ ಬಂದಿದ್ದಾರೆ. ಆದ್ದರಿಂದ, ಸರಿ ನೀವು ಅವರ ಜೊತೆಯಲ್ಲಿದ್ದೀರಿ, ಅವರನ್ನು ಹೊಗಳಬೇಕು. ನಮ್ಮ ಜೊತೆಯಲ್ಲಿದ್ದಾಗ, ನಮ್ಮನ್ನು ಹೊಗಳಬೇಕು. ಆ ಕೆಲಸ ಮಾಡಿ. ಆದರೆ, ಇತಿಹಾಸವನ್ನು ತಿರುಚತಕ್ಕ ಕೆಲಸವನ್ನು ಮಾತ್ರ ದಯಮಾಡಿ ಮಾಡಬೇಡಿ. ಇತಿಹಾಸ ಏನಿದೆ ಎಂಬುದು ತಮಗೆ ಗೊತ್ತಿದೆ. ಮಾನ್ಯ ಪ್ರಧಾನಿಯವರು ಹೇಳಿದರು. ಮಾನ್ಯ ಶುಕ್ಲಾರವರು ಇಲ್ಲಿ ಬಂದರೂ ಕೂಡ, ನಾನು ಪಕ್ಷದ ಸದಸ್ಯನಾಗಿ ಮುಖ್ಯಮಂತ್ರಿಯಾಗಿದುದ್ದು ನನ್ನ ಅಧಿಕಾರಕ್ಕೆ ಚ್ಯುತಿ ಬಂದರೂ ಕೂಡ ಕರ್ನಾಟಕ ರಾಜ್ಯದ ಹಿತ ಬಲಿಕೊಡುವುದಿಲ್ಲವೆಂದು ಹೇಳಿ, ದಿಟ್ಟವಾಗಿ, ಧೈರ್ಯವಾಗಿ ಎದ್ದು ನಿಂತೆ. ಇದನ್ನು ತಾವು ಸ್ವಲ್ಪ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಶ್ರೀ ಕೆ.ಎನ್. ನಾಗೇಗೌಡ : ವಿ.ಸಿ. ಶುಕ್ಲಾರವರು ಬಂದು ಮಾನಿಟರಿಂಗ್ ಸೆಲ್ ಮಾಡುವ ವಿಚಾರದಲ್ಲಿ ಹೇಳಿ ಹೋದಾಗ, ನನ್ನದು ಸ್ವಾಭಿಮಾನ ಎಂದು ಹೇಳಿದಿರಿ. ನಿಮ್ಮ ಆತ್ಮಮುಟ್ಟಿಕೊಂಡು ಹೇಳಿ. ನಿಮಗೆ ಆ ಕೀರ್ತಿ ಬರಬೇಕಾದರೆ, ನನ್ನ ಕಾಂಟ್ರಬ್ಯೂಷನ್ ಏನು ಎನ್ನತಕ್ಕಂತಾದ್ದನ್ನು ನೀವು ಹೇಳಬೇಕು. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ, ನಿಮ್ಮ ಮೇಲೆ ಬಂದಂಥ ಆಪಾದನೆಯನ್ನು ನಿಮ್ಮ ಯಾವುದೇ ಮಂತ್ರಿಮಂಡಲದಲ್ಲಿ ನಿಮ್ಮ ಉಪ ಮುಖ್ಯಮಂತ್ರಿಗಳನ್ನೂ ಸೇರಿಸಿಕೊಂಡು, ನಿಮಗೆ ಪರಿಹಾರ ಮಾಡುವುದಕ್ಕೆ ಆಗಲಿಲ್ಲ. 7 ಜನ ಮಂತ್ರಿಗಳನ್ನು ಕೂಡಿಹಾಕಿಕೊಂಡು, ಒಂದೇ ಸರ್ಕಾರ, ಕಾಂಗ್ರೆಸ ಸರ್ಕಾರ ಕೇಂದ್ರದಲ್ಲಿತ್ತು. ರಾಜ್ಯದಲ್ಲಿತ್ತು. ಪಕ್ಷವನ್ನು ಬಿಟ್ಟು , ಪಕ್ಷಭೇದ ಬಿಟ್ಟು, ನಾಯಕರು ಉಳಿಯಬೇಕು, ಕರ್ನಾಟಕ ರಾಜ್ಯದಲ್ಲಿ ಕಾವೇರಿ ಎಂದು ಹೇಳಿ, ನಿಮ್ಮ ಹಿಂದೆ ನಿಂತು ಪತ್ರಿಕಾಗೋಷ್ಠಿಯಲ್ಲಿ ಮಾಡಿ, ಶುಕ್ಲಾರವರನ್ನು ಟೀಕೆ ಮಾಡಿದ್ದು ಈ ನಾಗೇಗೌಡ, ಎಂಬುದನ್ನು ಮರೆಯಬೇಡಿ. ಅದಕ್ಕೆ ನನ್ನದೂ ಪಾಲು ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕೆ ನನ್ನ ಅಭಿನಂದನೆಗಳು. ಆದರೆ, ಅದನ್ನು ಹೇಳಲಿಲ್ಲವಲ್ಲಾ.

SRI K.N. NAGEGOWDA : I have not gone to that extent. I never touched Sri Moiliji. I never touched Sri Yediyurappaji. I was just referring only to Mr. Nagaraj.

ಶ್ರೀ ಎಂ. ಶ್ರೀನಿವಾಸ : ಈಗ ಇಬ್ಬರು ಮಂತ್ರಿಗಳು ಹೋದರು, ತಾವು ಕ್ಯಾಬಿನೆಟಗೆ ಹೋಗುತ್ತೀರಿ, ಆದ್ದರಿಂದ ಹೊಗಳುತ್ತಿದ್ದೀರಿ

ಶ್ರೀ ಕೆ.ಎನ್. ನಾಗೇಗೌಡ : ಮಂತ್ರಿಮಂಡಲಕ್ಕೋಸ್ಕರ, ಮಂತ್ರಿಗೋಸ್ಕರ ನಾವು ಬಂದವರಲ್ಲ. ನೀವು ಅಷ್ಟು ಚಿಲ್ಲರೆಯಾಗಿ ಯೋಚನೆ ಮಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕಾವೇರಿ ವಿಚಾರದಲ್ಲಿ, ಜಲ ನೆಲದ ವಿಚಾರದಲ್ಲಿ ನಾಗೇಗೌಡರನ್ನು ನಾವೇನೂ ತೆಗಳಬೇಕಾದ ಪ್ರಸಂಗ ಇಲ್ಲ. ಅವರಿಗೆ ಕಾವೇರಿ ಬಗ್ಗೆ ಮೊದಲಿಂದಲೂ ಇದೆ. ಮತ್ತು ಈ ಸಂದರ್ಭದಲ್ಲೂ, 6 ಟಿ.ಎಂ.ಸಿ ನೀರನ್ನು ಬಿಡುವ ಸಂದರ್ಭದಲ್ಲೂ ದೆಹಲಿಯಲ್ಲಿ ಕುಳಿತಾಗ, ಅವರ ಅನೇಕ ನೋವನ್ನು ನಾನು ನೋಡಿದ್ದೇನೆ. ಬೆಳಿಗ್ಗೆಯಿಂದ ಸಂಜೆಯವರೆಗೆ, ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕೆನ್ನುವವರೆಗೂ ಅವರು ಚಿಂತೆ ಮಾಡಿದ್ದರು. ಒಂದು ವಿಚಾರವನ್ನು ನೇರವಾಗಿ ಹೇಳುತ್ತಿದ್ದೇನೆ. ಅಧಿಕಾರ ಉಳಿಸಿ ಕೊಳ್ಳುವುದಕ್ಕೆ ಹೇಳುತ್ತಾರೆಂದು ವಾಟಾಳ್ ನಾಗರಾಜರು ಹೇಳಿದರೆಂದು ಹೇಳಿದರು. ನಾನು ಈಗ ಐದು ಸಾರಿ ಹೇಳಿದ್ದೇನೆ, ಇನ್ನೂ ನೂರು ಸಾರಿ ಹೇಳುತ್ತೇನೆ. ಅಧಿಕಾರ ಉಳಿಸಿಕೊಳ್ಳುವುದಕ್ಕೆ 6 ಟಿ.ಎಂ.ಸಿ ನೀರನ್ನು ಬಿಟ್ಟರು. ಮತ್ತೊಂದು ಮಾತು ಮಾನ್ಯ ನಾಗೇಗೌಡರು ಹೇಳಿದರು. ಪ್ರಧಾನಿಯವರ ಸಹಕಾರದಿಂದ, ನಿಜ. ಪ್ರಧಾನಿಯವರ ಸಹಕಾರಕ್ಕೋಸ್ಕರವೇ, ಜನತಾ ದಳ ಸರ್ಕಾರ ಇಲ್ಲಿರುವುದು ನಿಜ. ಪ್ರಧಾನ ಮಂತ್ರಿಯವರೇ ನಿಮ್ಮ ಯಜಮಾನರು. ಅವರಮಾತೇ ಇಲ್ಲಿ ನಡೆಯುವುದು. ಅವರು ಹೇಳಿದಹಾಗೆಯೇ ನಿಮ್ಮ ಮುಖ್ಯಮಂತ್ರಿಗಳು ಕೇಳಿದರು. ಅವರು ಹೇಳಿದ ಮೇಲೆಯೇ ನೀವು 6 ಟಿ.ಎಂ.ಸಿ. ನೀರು ಬಿಟ್ಟಿದ್ದುದು. ಇದರ ಬಗ್ಗೆ ಲವಲೇಶವೂ ಅನುಮಾನವಿಲ್ಲ. ಪ್ರಧಾನ ಮಂತ್ರಿಯಾದ ಮಾತಿಗೆ ಒಗೊಟ್ಟು, ಪ್ರಧಾನ ಮಂತ್ರಿಯವರು ಕೊಟ್ಟಂಥ ಸೂತ್ರವನ್ನು ಅಳವಡಿಸಬೇಕೆಂದು ಹೇಳಿ...

ಶ್ರೀ ಜೆ.ಹೆಚ್. ಪಟೇಲ್ : ನೀವು ಹೇಳುತ್ತಾ ಇಡುವಂಥಾದ್ದು ಸಂಪೂರ್ಣ ಅಸಮರ್ಥನೀಯ ಮತ್ತು ಸತ್ಯಕ್ಕೆ ದೂರವಾದುದು. ಮಾನ್ಯ ಮುಖ್ಯಮಂತ್ರಿಗಳು ಯಾರ ಮಾತಿಗೆ ಬೆಲೆ ಕೊಟ್ಟರು? ಪ್ರಧಾನ ಮಂತ್ರಿಯವರ ಮಾತಿಗೆ ನಿಜ. ಅಧಿಕಾರ ಹೇಗೋ ಉಳಿಸಿಕೊಳ್ಳುವುದು, ಏನೋ ಮಾಡಿ ಬದುಕಬೇಕೆಂಬುದು ನಮ್ಮ ನಿಲುವಲ್ಲ, ಇದು ಯಾವತ್ತೂ ಇಲ್ಲ. ರಾಜ್ಯದ ಹಿತರಕ್ಷಣೆ ಬಂದಾಗ ಯಾವತ್ಯಾಗಕ್ಕೂ ನಾವೆಲ್ಲರೂ ಸಿದ್ಧರಾಗಿದ್ದೇವೆಂದು ಈ ಸದನದಲ್ಲೇ ಎಲ್ಲರೂ ಹೇಳಿದ್ದೇವೆ. ಆದರೆ,

ಪ್ರಧಾನ ಮಂತ್ರಿಗಳ ಮಾತನ್ನು ಯಾವ ಸಂದರ್ಭದಲ್ಲಿ, ಸುಪ್ರೀಂಕೋರ್ಟಿನ ಆದೇಶದ ಸಂದರ್ಭದಲ್ಲಿ ನೀವು ಹೇಳಿತ್ತೀರಿ ಸುಪ್ರೀಂಕೋರ್ಟ್ ಆರ್ಮಿ ತರುತ್ತಿತ್ತು. ನೀರು ಬಿಡಿಸಿಕೊಳ್ಳುತ್ತಿತ್ತು. ಅದಕೋಸ್ಕರ ಎಂದು ಅದು ಅಲ್ಲ. ವಾಸ್ತವಿಕವಾಗಿ ಆ ರೀತಿ ಆಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ನಾವು ಕುರ್ಚಿ ಉಳಿಸಿ ಕೊಳ್ಳುವುದಕ್ಕೋಸ್ಕರ 6 ಟಿ.ಎಂ.ಸಿ ನೀರು ಬಿಟ್ಟಿದ್ದೇವೆಂದು ನಿಮ್ಮ ಗ್ರಹಿಕೆ ತಪ್ಪಿರುವುದರಿಂದ ಹೇಳಿರಬಹುದು. ಆದರೆ, ವಾಸ್ತವಿಕವಾಗಿ ಸುಪ್ರೀಂಕೋರ್ಟಿನ ರೋಲ್ ಏನಾದರೂ ನೀವು ಆಲೋಚನೆ ಮಾಡಿದರೆ ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಗ್ರಹಿಕೆ ಏನೆಂದು ತಮಗೆ ಗೊತ್ತಿದೆ. ನಾವೂ, ನೀವು ಬಹಳ ವರ್ಷಗಳ ಕಾಲ ಜೊತೆಯಲ್ಲೇ ಇದ್ದವರು. ಗ್ರಹಿಕೆ ಯಾರು ಯಾರದು ಏನು ಎಂಬುದು ಗೊತ್ತಿದೆ. ಅವರ ಬಗ್ಗೆ ವಾದ ಇಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಅವರಲ್ಲೇನೂ ಅನುಮಾನ ಇಲ್ಲ. ಈ 6 ಟಿ.ಎಂ.ಸಿ ನೀರನ್ನು ಹಿಂದಿನ ಮುಖ್ಯಮಂತ್ರಿಗಳಾದ ವೀರಪ್ಪ ಮೊಯ್ಲಿಯವರ ಕಾಲದಲ್ಲಾಗಲೀ, ಬಂಗಾರಪ್ಪನವರ ಕಾಲದಲ್ಲಾಗಲೀ [illegible] ಪಟೇಲರ ಕಾಲದಲ್ಲಾಗಲೀ ಬಿಟ್ಟು, ದೇವೇಗೌಡರು ಹೊರಗೆ ಇದ್ದಿದ್ದರೆ, ಇವರ ಚರ್ಮ ಸುಲಿದು, ಆ ಚರ್ಮದಲ್ಲಿ ಪಾದರಕ್ಷೆ ಮಾಡಿಕೊಂಡು, ಇವರನ್ನು ಅಧಿಕಾರದಿಂದ ಓಡಿಸಿಬಿಡುತ್ತಿದ್ದರು. ಈಗ, ಅವರು 6 ಟಿ.ಎಂ.ಸಿ ನೀರು ಬಿಟ್ಟರು, ಬಿಡಲಿ. ವಿರೋಧಪಕ್ಷದವರ ಬೆಂಬಲದಿಂದ ನಡೆಯಲಿ. ಇದೊಂದು ರೀತಿ ಅಯ್ಯಪ್ಪನ ಚಾವಡಿ ಆದಹಾಗೆ ಆಯಿತು. ಕರ್ನಾಟಕ ರಾಜ್ಯ ಹೌದಪ್ಪನ ಚಾವಡಿ. ಯಾರು ಏನು ಬೇಕಾದರೂ ಮಾಡಿಕೊಂಡುಹೋಗಬಹುದು. ಇದಲ್ಲ, ಕರ್ನಾಟಕವನ್ನು ಬಲಿಕೊಟ್ಟು, 6 ಟಿ.ಎಂ.ಸಿ ನೀರನ್ನು ಬಿಟ್ಟಿರುವುದಲ್ಲಿ ಅನುಮಾನವೇ ಇಲ್ಲ. ನಾನಂತೂ ಇದಕ್ಕೆ ವಿರೋಧ. ಇದು ಸ್ಪಷ್ಟವಿದೆ. ನಾನು ಸಂಪೂರ್ಣವಾಗಿ ಸರ್ವಪಕ್ಷಗಳ ಸಭೆಯಿಂದ ಹೊರಗೆ ಹೋದೆ. ನ್ಯಾಯಮಂಡಳಿಯನ್ನು ಸಮಗ್ರವಾಗಿ ವಿರೋಧ ಮಾಡಿದೆ. ಮತ್ತು ಎಲ್ಲಾ ವಿರೋಧಪಕ್ಷಗಳಿಗೂ ಕೈಮುಗಿದು ಪ್ರಾರ್ಥನೆ ಮಾಡಿದೆ. ದಯಮಾಡಿ ಹೋಗಬೇಡಿ, ನೀವು ಯಾರೂ ಅದಕ್ಕೆ ಸಲ, ಆಗಬೇಡಿ ಎಂದು ಹೇಳಿದೆ.

(ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ರವರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು).

ಶ್ರೀಮಾನ್ ನಂಜೇಗೌಡರು. ನಮ್ಮೆಲ್ಲರಿಗೂ ಹಿರಿಯವರು. ಅವರು, ಯಡಿಯೂರಪ್ಪನವರು ಮತ್ತು ಪ್ರಮೀಳಾದವರು, ಅವರ ಕಾರ್ಯಾಲಯದ ಒಂದು ರೂಮಿನಲ್ಲಿ ಕುಳಿತಿದ್ದರು. ನಾನು ಹೋದೆ, ಮಾನ್ಯ ನಂಜೇಗೌಡರಿಗೆ ಕೈಮುಗಿದೆ. 30 ವರ್ಷಗಳ ಕಾಲ ನೀರಾವರಿಯ ಬಗ್ಗೆ ಅಪಾರವಾದ ತಪಸ್ಸನ್ನು ಮಾಡಿದಿರಿ, ನಿಮ್ಮ ತಪಸ್ಸನ್ನು ಧಾರೆಯೆರೆಯಬೇಡಿ ಎಂದು ಹೇಳಿದೆ. ನಾನು ಯಡಿಯೂರಪ್ಪನವರಿಗೂ ಹೇಳಿದೆ. ಯಡಿಯೂರಪ್ಪನವರೇ, ನಂಜೇಗೌಡರ ಮಾತಿಗೆ ಬೆಲೆ ಕೊಡಬೇಡಿ ಎಂದು ಹೇಳಿದೆ. ಮಾನ್ಯ ನಂಜೇಗೌಡರ ಮನೆಯವರೂ ಕೂಡ ನೀರು ಬಿಡಕೂಡದು ಎಂದು ಹೇಳುತ್ತಾರೆ; ಈ ಮಾತು ಹೇಳಿದೆ. ಶ್ರೀಮತಿ ಪ್ರಮೀಳಾರವರು ಹೇಳಿದರು, ನಮಗೆ ಆತ್ಮಸಾಕ್ಷಿ ಮತ ಕೊಡಿ, ನಾವು ಸಧ್ಯಕ್ಕೆ ವಿರೋಧ ಮಾಡುತ್ತೇವೆ ಎಂದು. ಇವೆಲ್ಲವೂ ನಡೆದಿದೆ. ಆದ್ದರಿಂದ, ವಿರೋಧ ಪಕ್ಷಗಳೂ ಸಹ, ಅವರು ಹಾಕಿಕೊಂಡು ನೇಣುಗಂಬದ ಹಗ್ಗಕ್ಕೆ, ಸಿಕ್ಕಿದರು.

ಕರ್ನಾಟಕದಲ್ಲಿ ನೀರೇ ಇಲ್ಲ ಎಂದು, ನೀರು ಬಿಟ್ಟಂಥ ವಾದ ಏನಿದೆ, ಇದು ತೋರಿಕೆ. ಅಧಿಕಾರ ಉಳಿಸಿಕೊಳ್ಳತಕ್ಕ ಒಂದೇಒಂದನ್ನು ಬಿಟ್ಟರೆ, ಬೇರೆ ಪ್ರಶ್ನೆ ಇಲ್ಲವೆನ್ನುವುದನ್ನು ನಾನು ಸ್ಪಷ್ಟಪಡಿಸಿದ್ದೇನೆ. ಈಗಲೂ ನನ್ನ ನಿಲುವು, ಕರ್ನಾಟಕದ ರೈತರಿಗೆ, ಕರ್ನಾಟಕ ಜನಾಂಗಕ್ಕೆ ಅನ್ಯಾಯ ಮಾಡಿದ್ದೀರಿ. ನ್ಯಾಯಮಂಡಳಿ ರದ್ಧತಿ ಬಗ್ಗೆ ನಿಮ್ಮಲ್ಲಿ ಚಕಾರ ಇಲ್ಲ. ಸುಮ್ಮನೆ ನಾಟಕವಾಡುತ್ತಿದ್ದೀರಿ. ನ್ಯಾಯಮಂಡಳಿ ಮುಂದೆ ಅಲ್ಲಿ ನಿಲ್ಲಿಸಿದಹಾಗೆ ಮಾಡುವುದು, ನ್ಯಾಯಮಂಡಳಿ ಸ್ಥಗಿತ ಮಾಡಿದೆ ಎಂದು ಹೇಳುವುದು, ಇವೆಲ್ಲವೂ ರಾಜ್ಯದ ಜನತೆಗೆ ಮಾಡಿದ ಮಹಾಮೋಸ ಎನ್ನುವುದನ್ನು ಸ್ಪಷ್ಟವಾಗಿ, ನೂರಕ್ಕೆನೂರು ಹೇಳುತ್ತಿದ್ದೇನೆ. ಈ ಪಾಪದಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ನೇರವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ತಮಗೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ನಾನಿನ್ನು 10 ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : 5 ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ.ಎನ್. ನಾಗೇಗೌಡ : ನಿನ್ನೆಯೆಲ್ಲಾ ಜಗಳ ಮಾಡುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್ : ನಾವು , ನೀವು ತೀರಾ ಒಂದೇ. ಅವರು ಮನೆ ಜಗಳವನ್ನು ಬೀದಿಗೆ ತರುತ್ತಿದ್ದಾರೆ. ಆಕಸ್ಮಾತ್ ನಮಗೂ, ನಿಮಗೂ ಜಗಳ ಆಗುವುದು ಬೇಡವೇ?

ಅಧ್ಯಕ್ಷರು : ಅವರು ಸಹಕರಿಸುತ್ತಿದ್ದಾರೆ. ನನಗೆ ನಿಮ್ಮ ಯಾರ ಜೊತೆಯಲ್ಲೂ ಜಗಳ ಇಲ್ಲ. ಜಗಳ ನಿಮ್ಮ ಅವರ ಮಧ್ಯೆ ನಡೆಯುತ್ತದೆ. ನಾನೇನೋ ಸಂಧಾನ ಮಾಡುವುದಕ್ಕೆ ನೋಡುತ್ತೇನೆ. ಒಪ್ಪದಿದ್ದರೆ, ನಿಮ್ಮ ನಿಮ್ಮ ಹಣೆಬರಹ ಎಂದು ಬಿಟ್ಟುಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ಆ ರೀತಿ ಬಿಟ್ಟು ಹೋಗುವುದಕ್ಕಾಗುವುದಿಲ್ಲ. ನೀವು ಇದ್ದಕ್ಕಿದ್ದಹಾಗೆ ಬಿಟ್ಟರೆ, ಆಗ ನಮ್ಮ ಪರಿಸ್ಥಿತಿ ಏನು? ಈ ಒಂದು ವಿಚಾರದಲ್ಲಿ ನಾನು ಅತ್ಯಂತ ಕಳಕಳಿಯಿಂದ, ನನ್ನ ನಿಲುವನ್ನು ಸ್ಪಷ್ಟಮಾಡಿದ್ದೇನೆ. ಕಾವೇರಿ ವಿಚಾರದಲ್ಲಿ ನಾನು ಎಂದೂ, ಯಾರ ಜೊತೆಯಲ್ಲೂ ರಾಜಿಯಾಗತಕ್ಕ ಪ್ರಶ್ನೆಯೇ ಇಲ್ಲ. ಕಾವೇರಿ ನ್ಯಾಯಮಂಡಳಿಯನ್ನು ಬಹಿಷ್ಕಾರ ಹಾಕಲೇಬೇಕು, ನ್ಯಾಯಮಂಡಳಿ ಮುಂದೆ ಕರ್ನಾಟಕ ಸರ್ಕಾರ ಭಾಗಿಯಾಗಬಾರದು ಎನ್ನುವುದರಲ್ಲಿ, ಯಾವುದೇ ವಿಧವಾದ ರಾಜಿಗೆ ನಾನಂತೂ ಸಿದ್ಧನಿಲ್ಲ. ಆ ದೃಷ್ಟಿಯಿಂದಲೇ ವಿರೋಧಪಕ್ಷಗಳು ಕರೆದ ಸಭೆಯಲ್ಲಿ ನಾನೆಂದೂ ಭಾಗವಹಿಸಲಿಲ್ಲ ಮತ್ತು ಎಂದೆಂದೂ ಹೋಗುವುದಿಲ್ಲ. ಕಾವೇರಿ ವಿಚಾರದಲ್ಲಿ ಮಾತ್ರ ಈ ತೀರ್ಮಾನಕ್ಕೆ ಬಂದಿದ್ದೇನೆ. ರಾಜ್ಯಪಾಲರ ಸಮಗ್ರ ಭಾಷಣವನ್ನು ನೋಡಿದಾಗ, ಕನ್ನಡ ಸಂಸ್ಕೃತಿ ಬಗ್ಗೆಯಾಗಲೀ, ಕನ್ನಡ ಸಾಹಿತ್ಯದ ಬಗ್ಗೆಯಾಗಲೀ, ಕನ್ನಡ ಭಾಷೆಯ ಬಗ್ಗೆಯಾಗಲೀ, ಕನ್ನಡ ರಂಗಭೂಮಿ ಬಗ್ಗೆಯಾಗಲೀ, ಯಾವುದೇ ಚಕಾರವಿಲ್ಲ. ನನಗನಿಸುತ್ತದೆ, ಕರ್ನಾಟಕ ರಾಜ್ಯಕ್ಕೆ ಭಾಷಾವಾರು ಪ್ರಾಂತವಾದ ನಂತರ, ಒಂದು ರೀತಿಯ ಮೋಡ ಕವಿದ ವಾತಾವರಣ ನಿರ್ಮಾಣ ಆಗಿದೆ. ಕರ್ನಾಟಕದಲ್ಲಿ ಕನ್ನಡಿಗರೇ ಅಲ್ಪಸಂಖ್ಯಾತರಾಗತಕ್ಕಂಥ ಪರಿಸ್ಥಿತಿ

ಒದಗಿದೆ. ಪರಭಾಷೆಯವರ ಧಾಳಿ ವಲಸೆ 1956ರಿಂದ ಇಲ್ಲಿಯವರೆಗೂ ನಿರಂತರವಾಗಿ ನಡೆದಿದೆ. ಸ್ವಲ್ಪ ಹೆಚ್ಚು ಕಡಿಮೆ ಒಂದು ಕೋಟಿ ಜನ ನೆರೆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಬಂದಿದ್ದಾರೆ. ಈ ವಲಸೆಯಿಂದ ಕರ್ನಾಟಕದ ರಾಜಕೀಯಮೇಲೆ ಸಾಂಸ್ಕೃತಿಕವಾಗಿ ಅಪಾಯವಾದಂತಹ ಮಹತ್ತರವಾದಂತಹ ಏಟು ತಗಲಿದೆ. ಆರ್ಥಿಕವಾಗಿಯೋ ಏಟು ತಗಲಿದೆ. ಆ ಉದ್ದೇಶದಿಂದ ವಲಸೆಯನ್ನು ನಿಲ್ಲಿಸುವುದಕ್ಕೆ ಬಂದ ಪ್ರಾಮಾಣಿಕ ಚಿಂತನೆ ಪ್ರಾಮಾಣಿಕ ಪ್ರಯತ್ನ ಸರ್ಕಾರದಲ್ಲಿ ಆಗಬೇಕಾದುದು ಕರ್ತವ್ಯ. ಭಾಷೆಯ ಬಗ್ಗೆ ಸರ್ಕಾರದ ನೀತಿ ಸ್ಪಷ್ಟ ಇಲ್ಲ. ಕನ್ನಡ ಭಾಷೆಯ ಬಗ್ಗೆ ಸ್ಪಷ್ಟ ನೀತಿ ಇಲ್ಲ. ಗ್ರಾಮ ಪಂಚಾಯಿತಿಯಿಂದ ಹಿಡಿದು ಸರ್ಕಾರದವರೆಗೂ ಸಂಪೂರ್ಣವಾಗಿ ಕನ್ನಡವನ್ನು ಸಮಗ್ರವಾಗಿ ಕಡೆಗಾಣಿಸಿದ್ದಾರೆ. ಈ ದೃಷ್ಟಿಯಿಂದ ನೋಡಿದಾಗ ಕರ್ನಾಟಕ ಸರ್ಕಾರ ತಮ್ಮ ರಾಜ್ಯಪಾಲರ ಭಾಷಣದ ಮೂಲಕ ಕನ್ನಡದ ಬಗ್ಗೆ ಯಾವುದೇ ರೀತಿಯಾದ ಒಂದು ಪರಿಣಾಮಕಾರಿಯಾದ ಒಂದು ಆದೇಶವನ್ನು ಒಂದು ಮನವಿಯನ್ನು ಒಂದು ವಿಚಾರ ಹೇಳಿಲ್ಲ. ಇವತ್ತು ನಾನು ತಮಗೆ ಹೇಳುತ್ತಿದ್ದೇನೆ ಒಂದೇ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಕನ್ನಡ ರಂಗಭೂಮಿ ಕರ್ನಾಟಕ ರಾಜ್ಯದಲ್ಲಿ ವೈಭವವಾಗಿ ಬೆಳೆದಿತ್ತು. ಸುಮಾರು ಫೀರ್ ಕಂಪನಿ, ವರದಾಚಾರ್ ಕಂಪನಿ ಗುಬ್ಬಿ ವೀರಣ್ಣನವರ ಕಂಪನಿ, ಸುಬ್ಬಯ್ಯನಾಯಿಡು ಅವರ ಕಂಪನಿ, ನಾಗೇಂದ್ರರಾಯರ ಕಂಪನಿ ಪಂತಲು ಅವರ ಕಂಪನಿ ಈ ರೀತಿಯಾದಂತಹ ಕಂಪನಿಗಳು ಚಾಮುಂಡೇಶ್ವರಿ ಕಂಪನಿ ಇಡೀ ಕರ್ನಾಟಕದ ಉದ್ದಗಲಕ್ಕೂ ಉತ್ತರ ಕರ್ನಾಟಕದಲ್ಲಿ ಅನೇಕ ಕಂಪನಿಗಳು ಚಿಂದೋಡಿ ವೀರಪ್ಪನ ಕಂಪನಿ ಇವೆಲ್ಲಾ ಕಂಪನಿಗಳು ಇವತ್ತು ನೆಲ ಕಚ್ಚಿವೆ. ಇಲ್ಲಿ ಬೆಳೆದಂತಹ ಕನ್ನಡ ಕಲೆಗೆ ಚಲನಚಿತ್ರ ರಂಗಕ್ಕೆ ಅತ್ಯಂತ ಅಡಿಪಾಯ ರಂಗಭೂಮಿ. ಈ ರಂಗಭೂಮಿಯ ಬೆಳವಣಿಗೆಗೆ ಸರ್ಕಾರ ವಿಶೇಷವಾದಂತಹ ಯೋಜನೆಯನ್ನು ಹಾಕಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಾಲ್ಕನೇ ತಾರೀಖು ಸರ್ಕಾರದವರು ಆಯುವ್ಯಯವನ್ನು ಮಂಡಿಸುತ್ತಿದ್ದಾರೆ. ರಂಗಭೂಮಿ ಬೆಳವಣಿಗೆಗೆ ಒಂದು ವಿಶೇಷವಾದಂತಹ ಯೋಜನೆಯನ್ನು ಹಾಕುವುದಕ್ಕೆ ಕನಿಷ್ಟ 25 ಕೋಟಿ ರೂಪಾಯಿಗಳನ್ನಾದರೂ ತಮ್ಮ ಆಯುವ್ಯಯದಲ್ಲಿ ಮುಡಿಪು ಇಡಬೇಕು ಎನ್ನತಕ್ಕಂಥಾದ್ದು ನನ್ನದು. ಎಲ್ಲಾ ರಂಗಭೂಮಿ ಕಂಪನಿಗಳನ್ನು ಉಳಿಸುವುದಕ್ಕೆ ಪ್ರತಿ ಕಂಪನಿಗೆ ಸಿನಿಮಾಗಳಿಗೆ ಕೊಟ್ಟಂತೆ ಸಹಾಯಧನರೀತಿಯಲ್ಲಿ ಒಂದೊಂದು ಚಿತ್ರಕ್ಕೂ ತಾವು ಏನು ಕೊಡುತ್ತಿದ್ದೀರಿ ಅದರ ಬದಲು ಒಂದು ವರ್ಷಕ್ಕೆ ಒಂದು ನಾಟಕದ ಕಂಪನಿಗೆ ಕನಿಷ್ಟ 5 ಲಕ್ಷ ರೂಪಾಯಿಗಳನ್ನಾದರೂ ಕಂಪನಿಗಳಿಗೆ ಬೆಳವಣಿಗೆ ತಾವು ಕೊಡಬೇಕು. ಇವತ್ತು ನಿಜವಾಗಿಯೂ ಕನ್ನಡ ರಂಗಭೂಮಿ ಕಲೆ ಉಳಿದಿರತಕ್ಕಂಥಾದ್ದು ಹಳ್ಳಿಗಾಡಿನಲ್ಲಿ ಈ ಹಳ್ಳಿಗಾಡಿನಲ್ಲಿ ಆಡತಕ್ಕಂಥ ನಾಟಕಗಳು ತಮಗೆ ಗೊತ್ತಿದೆ. ಆ ನಾಟಕಗಳನ್ನು ಆಡಿಸತಕ್ಕಂಥ ಮೇಸ್ಟ್ರುಗಳಿಗೆ ಆ ಸಂಸ್ಥೆಗಳಿಗೆ ಇವತ್ತು ನಾವು ಸಹಾಯಧನವನ್ನು ಕೊಡುತ್ತಿಲ್ಲ. ಆ ಮೇಸ್ಟ್ರುಗಳಿಗೆ ಮತ್ತು ನಾಟಕದ ಕಂಪನಿಗಳಿಗೆ ಉತ್ತಮವಾದ ಸಹಾಯಧನವನ್ನು ಕೊಡತಕ್ಕಂಥ ಯೋಜನೆಯನ್ನು ಸರ್ಕಾರ ಮಾಡಬೇಕು. ಒಂದು ಕಾಲದಲ್ಲಿ ಕನ್ನಡ ರಂಗಭೂಮಿ ಭಾರತದಲ್ಲಿ ಅತ್ಯಂತ ಹಿಮಾಲಯ ಪರ್ವತಕ್ಕೆ ಬೆಳೆದಂತಹ ರಂಗಭೂಮಿ ಇವತ್ತು ನಶಿಸಿ ಹೋಗುತ್ತಿದೆ. ನೂರಾರು ವರ್ಷಗಳು ರಂಗಭೂಮಿಯಾಗಿ

ಬೆಳೆದಂತಹ ಹಾಗೂ ಮೆರೆದಂತಹ ಗುಬ್ಬಿ ಕಂಪನಿ ಇವತ್ತು ಅವಸಾನವಾಗಿದೆ. ಆ ಕಂಪನಿಯನ್ನು ಇವತ್ತು ಯಾರೂ ಕೇಳತಕ್ಕಂಥ ಪ್ರಶ್ನೆ ಇಲ್ಲ. ಇವತ್ತು ಸಹ ಈ ಕಂಪನಿಗಳ ಬೆಳವಣಿಗೆ ಜಿಲ್ಲೆಯಲ್ಲಿ ಉತ್ತಮವಾದಂತಹ ಸುಸಜ್ಜಿತವಾದಂತಹ ರಂಗಮಂದಿರಗಳು ಬೇಕು. ಇವತ್ತು ರಂಗಮಂದಿರಗಳು ಕೇವಲಸಮುದಾಯ ಭವನ ಉತ್ತಮ ರಂಗಮಂದಿರಗಳು ಬೇಕು. ಬೆಂಗಳೂರು ನಗರದಲ್ಲಿ ಒಂದು ಕಾಲದಲ್ಲಿ ಮಹದೇವಸ್ವಾಮಿಯವರ ಕಂಪನಿ ಮತ್ತೊಂದು ಕಡೆ ಚಿಂದೋಡಿ ವೀರಪ್ಪನವರ ಕಂಪನಿ ಮತ್ತೊಂದು ಕಡೆ ಹಿರಣ್ಣಯ್ಯನವರ ಕಂಪನಿ ಎಲ್ಲಾ ಕಡೆ 3-4 ನಾಟಕ ಕಂಪನಿಗಳು ಇದ್ದವು. ಈಗ ಇಲ್ಲಿ ಇರತಕ್ಕಂಥಾದ್ದು ನಾಟಕಕ್ಕಿಂತ ಸಿನಿಮಾ ಮಂದಿರಗಳು ಜಾಸ್ತಿಇವೆಯೇ ಹೊರತು ನಾಟಕ ಮಂದಿರಗಳು ಇಲ್ಲ. ಆ ದೃಷ್ಟಿಯಿಂದ ಸರ್ಕಾರ ಸಂಪೂರ್ಣವಾಗಿ ರಂಗಭೂಮಿಯನ್ನು ಉಳಿಸುವುದಕ್ಕೆ ವಿಶೇಷವಾದ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಬೇಕೆಂದು ಹೇಳಿ ನಾನು ರಾಜ್ಯಪಾಲರ ಭಾಷಣವನ್ನು ಸಂಪೂರ್ಣವಾಗಿ ವಿರೋಧಿಸಿ ತಾವು ನನಗೆ ತಮ್ಮ ಭಾಷಣವನ್ನು ಮುಗಿಸಿ ಎಂದು ಸನ್ನೆ ಕೊಟ್ಟಮೇಲೆ ನನ್ನಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ಪುಟ 7 ರಲ್ಲಿ ವಿದ್ಯುತ್ ಬಗ್ಗೆ ಹೇಳುವಾಗ ನನ್ನ ಸರ್ಕಾರ ವಿದ್ಯುತ್ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದು ನನ್ನ ಸರ್ಕಾರಕ್ಕೆ ಸಾಧ್ಯವಾಗಿದೆ. ಈ ಬಿಕ್ಕಟ್ಟಿನಿಂದ ಪಾರಾಗಲು ಮಹಾರಾಷ್ಟ್ರದಿಂದ ನನ್ನ ಸರ್ಕಾರ ಪ್ರತಿ ತಿಂಗಳೂ 140 ದಶಲಕ್ಷ ಎಂದು ಇದೆ. ಅದು ಪ್ರತಿ ತಿಂಗಳು ಇಲ್ಲ. " ಆಗಸ್ಟ ತಿಂಗಳಿಂದ ಇಲ್ಲಿಯವರೆಗೆ," ಎಂದು ಬದಲಾವಣೆ ಮಾಡಿಕೊಳ್ಳಬೇಕು. ಏಕೆಂದರೆ ಮತ್ತೆ ಅದು ರೇಕಾರ್ಡಸಲ್ಲಿ ತಪ್ಪು ಇರಬಾರದು. ಅದಕ್ಕೆ.

ಅಧ್ಯಕ್ಷರು : ಆಗಬಹುದು.

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅಧ್ಯಕ್ಷರೇ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ತಮ್ಮ ಅಪ್ಪಣೆ ಪಡೆದು ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ಸರ್ಕಾರ ಬಂದು 14 ತಿಂಗಳು ಆಗಿದ್ದರೂ ಸಹ ಬಹಳ ಸಮಸ್ಯೆಗಳನ್ನು ಎದುರಿಸಬೇಕಾದಂತಹ ಒಂದು ಸಂದರ್ಭವನ್ನು ಈ ವರ್ಷದಲ್ಲಿ ಬಂತು. ಆದರೂ ಸಹ ಅವೆಲ್ಲವನ್ನೂ ಸಹ ಬಹಳ ನಿರರ್ಗಳವಾಗಿ ಬಗೆಹರಿಸಿ ಈ ಒಂದು ವರ್ಷದಲ್ಲಿ ಯಾವುದೇ ಒಂದು ಸ್ಕ್ಯಾಂಡಲ್ ಇಲ್ಲದೇ ಇರತಕ್ಕಂಥ ಒಂದು ಸರ್ಕಾರ ಎಂದು ಹೇಳಿದರೆ ತಪ್ಪೇನೂ ಆಗುವುದಿಲ್ಲ. ನಾವು ಯಾವಾಗಲೂ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ವಾಟಾಳನಾಗರಾಜ್ ಅವರು ಹೇಳುತ್ತಿದ್ದರು ಆರುತಿಂಗಳೂ ಆಗಿದೆ ಈ ಸರ್ಕಾರದ ಮೇಲೆ ಯಾವುದೇ ರೀತಿಯಾದಂತಹ ಗುರುತರವಾದ ಆಪಾದನೆಗಳು ಇಲ್ಲ ಅಂತ ಹೇಳಿದರೆ ಆರು ತಿಂಗಳು ಆದ ಮೇಲೆಯೇ ಅದರ ವಾಸನೆ ಬರುವುದು 8 ತಿಂಗಳು 10 ತಿಂಗಳು ಆದರೂ ಸಹ ವಾಟಾಳ್ ನಾಗರಾಜ್ ಅವರು ಹೇಳಿದಂತೆ 6 ತಿಂಗಳು ಅಲ್ಲ 8 ತಿಂಗಳು ಅಲ್ಲ 14 ತಿಂಗಳು ಆದರೂ ಸಹ ಯಾವುದೇ ತರಹದ ಒಂದು ಗುರುತರವಾದ ಆಪಾದನೆ ಇಲ್ಲದೇ ಇರತಕ್ಕಂಥ ಸರ್ಕಾರ

ನಡೆದುಕೊಂಡು ಬಂದಿದೆ ಅಂತ ಹೇಳಿದರೆ ತಪ್ಪೇನು ಆಗುವುದಿಲ್ಲ. ಇವತ್ತು ರಚನಾತ್ಮಕವಾಗಿ ಈ ಸರ್ಕಾರ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಬಹಳ ಆಸಕ್ತಿವಹಿಸಿ ಕೆಲಸ ಮಾಡುತ್ತಿದೆ ಎಂದು ಹೇಳಿದರೆ ತಪ್ಪೇನೂ ಆಗುವುದಿಲ್ಲ. ಅವರು ಮುಖ್ಯಮಂತ್ರಿಗಳಾಗಿ ಬಂದ ಮೇಲೆ ಜನತಾ ದರ್ಶನದ ಎನ್ನತಕ್ಕಂಥ ಒಂದು ಹೊಸ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಕೆಲವರು ಮುಖ್ಯಮಂತ್ರಿಗಳು ಆದಾಗ ಏನಾದರೂ ಒಂದು ಹೊಸ ಸಾಧನೆ ಮಾಡಬೇಕು ಅಂತ ಹೇಳಿ ಕೆಲವರು ಕೆಲವು ವಿಚಾರಗಳನ್ನು ಹಮ್ಮಿಕೊಳ್ಳುತ್ತಾರೆ. ಹಿಂದಿನ ಮುಖ್ಯಮಂತ್ರಿಗಳು ಸಹ ಯಾವುದೋ ಒಂದು ವಿಚಾರವನ್ನು ಪ್ರಸ್ತಾಪ ಮಾಡುವಂತಹ ಕಾಲದಲ್ಲಿ ಕಡತ ಯಜ್ಞ ಮಾಡುತ್ತೇನೆಂದು ಹೇಳಿ ಮಾಡಿದರು. ಅವರ ಉದ್ದೇಶ ಸಹ ಸಾರ್ವಜನಿಕರಿಗೆ ಒಳ್ಳೆಯದು ಮಾಡಬೇಕು ಅಂತಲೇ ಹೊರತು ಬೇರೆ ಏನೂ ಮಾಡಬೇಕೆಂದು ಅಲ್ಲ. ಅದೇ ರೀತಿ ಸನ್ಮಾನ್ಯ ದೇವೇಗೌಡರು ಸಹ ಜನತಾ ದರ್ಶನ ಮಾಡಿದರೆ ಯಾರು ಒಬ್ಬ ಸಾಮಾನ್ಯ ಪ್ರಜೆ ಹಳ್ಳಿಗಾಡು ಪ್ರದೇಶದಲ್ಲಿ ಇದ್ದಾನೆ ಅವನ ಸಂಕಷ್ಟಕೋಸ್ಕರ ಅವನು ಇಲ್ಲಿ ಬೆಂಗಳೂರಿಗೆ ಅಲೆಯುವುದು ಬೇಡ ಅವನ ಸಂಕಷ್ಟವನ್ನು ಅಲ್ಲೇ ಪರಿಹಾರ ಮಾಡಬೇಕು ಎನ್ನುವಂತಹ ಒಂದು ಪ್ರಾಮಾಣಿಕವಾಗಿ ನೋಡಬೇಕಾಗಿದೆ. ಆದರೆ ಇಲ್ಲಿ ಬಂದಂತಹ ಅರ್ಜಿಗಳು ನಾವು ಪತ್ರಿಕೆಯಲ್ಲಿ ನೋಡಿದ್ದೇವೆ. ಇಲ್ಲಿ ಹಿರಿಯ ಮುಖಂಡರುಗಳಾಗಿದ್ದಂತಹ ನಮ್ಮ ಸ್ನೇಹಿತರು ಅನೇಕರು ಭಾಷಣ ಮಾಡಿದರು ಜನತಾ ದರ್ಶನದ ಬಗ್ಗೆ. ಬಹಳ ವಿಚಿತ್ರವಾಗಿ. ನಾನು ಅವರಿಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಒಂದು ಪ್ರಾಮಾಣಿಕ ಪ್ರಯತ್ನಮಾಡತಕ್ಕಂಥ ಕಾಲದಲ್ಲಿ ಕೆಲವು ವ್ಯತ್ಯಾಸಗಳು ಆಗುತ್ತವೆ. ವ್ಯತ್ಯಾಸಗಳು ಆಗದ್ದನ್ನು ಮಾತ್ರ ಎತ್ತಿ ಹಿಡಿಯುವಂತಾದ್ದು ಅಲ್ಲ. ಏನು ಅನುಕೂಲ ಆಯಿತು ಎನ್ನುವುದನ್ನು ಸಹ ಎತ್ತಿ ತೋರಿಸಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ಬರೀ ಇದು ಜಿಲ್ಲೆ ಮಟ್ಟದ ಜನತಾ ದರ್ಶನ ಅಲ್ಲ. ತಾಲ್ಲೂಕು ಮಟ್ಟದಲ್ಲಿ ಕೂಡ ಜನತಾ ದರ್ಶನ ಆಗಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಜನತಾ ದರ್ಶನದಿಂದ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಹಳ್ಳಿಯವರಿಗೆ ಒಂದು ಹೊಸ ಆಯಾಮ ಆಗಿದೆ, ತಾಲ್ಲೂಕು ಮಟ್ಟದಲ್ಲಿ ಕೂಡ ಜನತಾ ದರ್ಶನ ಆಗಬೇಕೆಂದು ಹೇಳುವುದರಲ್ಲಿ ನಾನೂ ಒಬ್ಬ. ಇವತ್ತು ಸಾಮಾನ್ಯ ಜನ, ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನ ಸರ್ಕಾರದ ಮಟ್ಟಕ್ಕೆ ಸುದ್ಧಿಯನ್ನು ಮುಟ್ಟಿಸುವುದಕ್ಕೆ ಒಂದು ಅವಕಾಶ ಆಗುತ್ತದೆ.

ಅಧ್ಯಕ್ಷರು : ಶಿವರಾಮೇಗೌಡರೇ ನಿಮಗೆ ಕೊಟ್ಟಿರುವುದು 20 ನಿಮಿಷ. ಅಷ್ಟರಲ್ಲಿ ಮುಗಿಸಬೇಕು. ತಾವು ಆ ಕಡೆ ಈ ಕಡೆ ಮಾತನಾಡಿ ಟೈಮ್ ಕಳೆದುಕೊಂಡರೆ ನಾನು ಜವಾಬ್ದಾರನಲ್ಲ.

1.00 ಪಿ.ಎಂ

ಜನತಾ ದರ್ಶನ ಕಾರ್ಯಕ್ರಮದಿಂದ ಬಹಳ ಒಳ್ಳೆಯದಾಗಿದೆಯೆಂದು ಜನರು ತೀರ್ಮಾನಕ್ಕೆ ಬಂದಿದ್ದಾರೆ. ಇತ್ತೀಚಿನ ದಿವಸಗಳ ಆಡಳಿತದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿದೆ. ತಮಗೆ ಗೊತ್ತಿದ್ದ ಹಾಗೆ ಕಾನೂನು ವ್ಯವಸ್ಥೆ ಉತ್ತಮವಾಗಿದೆ. ಹುಬ್ಬಳ್ಳಿಯ ಈದ್ಗಾ ಮೈದಾನದ ಸಮಸ್ಯೆ ಬಗ್ಗೆ ಜನರು

ನಿಟ್ಟುಸಿರು ಬಿಡುತ್ತಿದ್ದದನ್ನು ಈ ಸರ್ಕಾರ ಬಂದ ಮೇಲೆ ಸುಲಲಿತವಾಗಿ ಬಗೆಹರಿಸಿದೆ. ಹಿಂದಿನ ದಿವಸಗಳಲ್ಲಿ ರೌಡಿಗಳ ಹಾವಳಿ ಬಗ್ಗೆ, ದರೋಡೆಗಳ ಬಗ್ಗೆ ಮತ್ತು ಲಾಕಪ್ ಡೆತಗಳ ಬಗ್ಗೆ ದಿನ ನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದೆವು. ಈ ಸರ್ಕಾರ ಬಂದ ಮೇಲೆ ಬಹಳಷ್ಟು ಈ ತರಹದ ಹಾವಳಿ ಕಡಿಮೆ ಮಾಡಿ ಕಾನೂನು ಸುವ್ಯವಸ್ಥೆ ತಂದಿರುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಹವಾಲಾಬಗ್ಗೆ ಬರುತ್ತಿರುವ ವರದಿಗಳನ್ನು ದಿನಬೆಳಿಗ್ಗೆಯಾದರೆ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಈ ಬಗ್ಗೆ 11 ಜನ ಮುಖಂಡರುಗಳ ಅರೆಸ್ಟ ವಾರೆಂಟ್ ಕೊಟ್ಟಿರುವ ಬಗ್ಗೆ ಮಾತನಾಡಿದಾಗ, ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ತಾವು ತಿಳಿಸಿದ್ದೀರಿ. ರಾಷ್ಟ್ರ ನಾಯಕರನ್ನು ಈ ಸಂದರ್ಭದಲ್ಲಿ ಬಂಧಿಸಿದಾಗ ಕಾನೂನು ಸುವ್ಯವಸ್ಥೆ ಹದಗೆಡಬಹುದೆಂದು ನಮ್ಮ ಕಳಕಳಿ. ಹವಾಲಾ ಪ್ರಕರಣದಲ್ಲಿ ರಾಜಕೀಯ ಪಿತೂರಿ ಮಾಡಿ ಇದರಲ್ಲಿ ಎಲ್ಲರನ್ನೂ ಸಿಲುಕಿಸುತ್ತಿರುವುದನ್ನು ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ.

ಅಧ್ಯಕ್ಷರು : ದಯಮಾಡಿ ಕೇಳಿ, ಯಾವುದೇ ವಿಚಾರದಲ್ಲಿ ಕೋರ್ಟ ಮುಂದೆ ಚಾರ್ಜಶೀಟ್ ಸಬಮಿಟ್ ಮಾಡಿದಾಗ ಇಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶವಿರುವುದಿಲ್ಲ. ಮೊನ್ನೆ ದಿವಸ ಮಾನ್ಯ ನಂಜುಂಡಸ್ವಾಮಿಯವರ ಬಂಧನದ ಬಗ್ಗೆ ಚರ್ಚೆ ಮಾಡಲಾಯಿತು, ಅವರ ಬಗ್ಗೆ ಚಾರ್ಜ ಷೀಟ್ ಸಬಮೀಟ್ ಮಾಡಿದ ಮೇಲೆ ಅದರ ಬಗ್ಗೆ ಮಾತನಾಡಲು ನಮಗೆ ನಿರ್ಬಂಧವಿರುತ್ತದೆ. ಮಾತನಾಡಬಾರದು. ಕೆಲವು ನೀತಿ ನಿಯಮಗಳನ್ನು ನಾವು ನಮ್ಮ ಮೇಲೆ ಹೇರಿಕೊಳ್ಳಬೇಕಾಗುತ್ತದೆ. ಅದು ರಾಷ್ಟ್ರ ದ್ರೋಹವೋ ರಾಷ್ಟ್ರ ಸೇವೆಯೋ ಅದೆಲ್ಲಾ ನಮಗೆ ಸಂಬಂಧವಿರುವುದಿಲ್ಲ. ಆದರೆ, ಅದರ ಬಗ್ಗೆ ಇಲ್ಲಿ ಮಾತನಾಡಲು ಅವಕಾಶವಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನು ತಮ್ಮ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಅದರಿಂದ ಆಗತಕ್ಕಂಥ ಅನಾಹುತದ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದೆನೇ ಹೊರತು ಬೇರೆ ಏನಿಲ್ಲ. ಎಷ್ಟೋ ಜನ ನಿರಪರಾಧಿಗಳು ಅದರಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ನಿಜವಾದ ಅಪರಾಧಿಗಳನ್ನು ಅರೆಸ್ಟ ಮಾಡಲಿಲ್ಲ ಮತ್ತು ಅವರ ಮೇಲೆ ಚಾರ್ಜಶೀಟ್ ಹಾಕಲಿಲ್ಲವಲ್ಲಾ ಎಂದು.

ಅಧ್ಯಕ್ಷರು : ನಿಜವಾದ ಅಪರಾಧಿಗಳ ಲಿಸ್ಟ ತಮ್ಮ ಹತ್ತಿರ ಇದ್ದರೆ ತಾವು ಸಿ ಬಿಐ ಗೆ ಕಳುಹಿಸಿಕೊಡಿ, ಆದರೆ ಅದರ ಬಗ್ಗೆ ಇಲ್ಲಿ ಚರ್ಚೆ ಬೇಡ.

ಶ್ರೀ ಎಲ್. ಆರ್. ಶಿವರಾಮೇಗೌಡ : ಹರ್ಷದ್ ಮೆಹ್ತಾ ಗಿಂತ ಲಿಸ್ಟ ಬೇಕೇ?

ಅಧ್ಯಕ್ಷರು : ಇದೇನು ಶಿವರಾಮೇಗೌಡರು ಹೀಗೆ ಮಾತನಾಡುತ್ತಿದ್ದಾರೆಂದು ಹೆಣ್ಣು ಮಕ್ಕಳೆಲ್ಲಾ ನಗುತ್ತಿದ್ದಾರೆ. ಗಂಭೀರವಾಗಿ ಮಾತನಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ದೇವೇಗೌಡರ ಆಡಳಿತವನ್ನು ಎರಡು ಪ್ರಮುಖವಾದ ಸಮಸ್ಯೆಗಳು ಕಾಡುತ್ತಿವೆ. ಒಂದು ಕಬ್ಬಿನ ಸಮಸ್ಯೆ ಇನ್ನೊಂದು

ವಿದ್ಯುತ್ ಸಮಸ್ಯೆ. ವಿದ್ಯುತ್ ಸಮಸ್ಯೆ ಬಗ್ಗೆ ಈಗಾಗಲೇ ಮುಖಂಡರುಗಳು ಮಾತನಾಡಿದ್ದಾರೆ, ಆ ಸಮಸ್ಯೆ ಬಗೆಹರಿಸುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆಂದು ಮಾನ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಕಳಕಳಿಯಿಂದ ವ್ಯಕ್ತಮಾಡಿರುತ್ತಾರೆ, ಈ ವಿದ್ಯುತ್ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸುವ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಮಾತ್ರ ಹೇಳಿ ಕಬ್ಬಿನ ಸಮಸ್ಯೆ ಬಗ್ಗೆ ಒಂದೆರಡು ಮಾತನಾಡುತ್ತೇನೆ. ಈ ರಾಜ್ಯದಲ್ಲಿ ಇದ್ದಕ್ಕಿದ್ದ ಹಾಗೆ ಕಬ್ಬಿನ ಬೆಳೆ ಜಾಸ್ತಿಯಾಗಿ ಕಬ್ಬು ಅರೆಯಲು ತೊಂದರೆಯಾಗಿಲ್ಲ. ಹೆಚ್ಚು ಬೆಳೆದಿರುವ ಕಬ್ಬನ್ನು ಹೊರ ರಾಜ್ಯಗಳಲ್ಲಿರುವ ಸಕ್ಕರೆ ಕಂಪನಿಗಳಿಗಾದರೂ ಕಳುಹಿಸಿ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಮಾನ್ಯ ಸಕ್ಕರೆ ಮಂತ್ರಿಯವರು ಪ್ರಯತ್ನಪಟ್ಟಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇನ್ನೂ ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಬಿಜೆಪಿ ಪಕ್ಷದ ಮಿತ್ರರು ಅವರದೇ ಪಕ್ಷದ ಸರ್ಕಾರದ ಇರುವ ಮಹಾರಾಷ್ಟ್ರಕ್ಕೆ ಹೋಗಿ ಕಬ್ಬನ್ನು ಅವರು ತೆಗೆದುಕೊಳ್ಳುವ ಹಾಗೆ ಏರ್ಪಾಡು ಮಾಡಿದ್ದಾರೆ. ಆಮೇಲೆ, ಈ ರಾಜ್ಯದಲ್ಲಿ ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ಮಾಡುವ ಬಗ್ಗೆ ಯಾರೂ ಪ್ರಾಮಾಣಿಕವಾದ ಪ್ರಯತ್ನವನ್ನು ಇದುವರೆಗೆ ಮಾಡಿರಲಿಲ್ಲ. ನಮ್ಮ ರಾಜ್ಯದಲ್ಲಿ 40 ರಿಂದ 45 ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವ ಬಗ್ಗೆ ಅನುಮತಿ ಕೋರಿ ಅರ್ಜಿಗಳಿವೆ. ಅವರಲ್ಲಿ 9 ಸಕ್ಕರೆ ಕಾರ್ಖಾನೆಗಳಿಗೆ ಮಂಜೂರಾತಿ ಪಡೆದುಕೊಂಡು ಬರುವುದರಲ್ಲಿ ಮಾನ್ಯ ಸಕ್ಕರೆ ಮಂತ್ರಿಗಳು ಯಶಸ್ವಿಯಾಗಿದ್ದಾರೆ. ಈ 9 ಕಬ್ಬಿನ ಕಾರ್ಖಾನೆಗಳನ್ನು ಶೀಘ್ರವಾಗಿ ಪ್ರಾರಂಭ ಮಾಡಿದರೆ ಕಬ್ಬಿನ ಸಮಸ್ಯೆ ಬಗೆಹರಿಯುತ್ತದೆ. ನಮ್ಮ ರಾಜ್ಯದಲ್ಲಿ ಈಗಾಗಲೇ ಎರಡೂಕಾಲು ಕೋಟಿ ಲಕ್ಷ ಟನ್ ಕಬ್ಬು ಬೆಳೆಯಲಾಗುತ್ತಿದೆ. ಇದರಲ್ಲಿ ಒಂದೂಕಾಲು ಕೋಟಿ ಲಕ್ಷ ಟನ್ ಕಬ್ಬು ಮಾತ್ರ ಅರೆಯಲು ಸಾಧ್ಯವಾಗುತ್ತಿದೆ. ಇನ್ನು ಉಳಿದ 1 ಲಕ್ಷ ಟನ್ ಕಬ್ಬನ್ನು ಅರೆಯುವುದಕ್ಕೆ ಸಾಧ್ಯವಿಲ್ಲವಾಗಿದೆ. ಪ್ರತಿ ವರ್ಷ ಸಕ್ಕರೆ ಕಾರ್ಖಾನೆಗಳಿಗೆ 3 ತಿಂಗಳು ಬಿಡಿವು ಕೊಡುವ ಬದಲು ಒಂದು ತಿಂಗಳು ಮಾತ್ರ ರಿಪೇರಿ ಮತ್ತಿತರ ಕೆಲಸಗಳಿಗೆ ಬಿಡುವು ಕೊಟ್ಟು ಎರಡು ತಿಂಗಳು ಹೆಚ್ಚುವರಿಯಾಗಿ ಕಬ್ಬನ್ನು ಅರಿಯುವುದಕ್ಕೆ ಪ್ರಯತ್ನ ಮಾಡಿದರೆ ಅದರಿಂದ ಸ್ವಲ್ಪಮಟ್ಟಿಗಾದರೂ ಸಮಸ್ಯೆ ಪರಿಹಾರವಾಗುತ್ತದೆ. ಆಮೇಲೆ, ಭೂ ಸುಧಾರಣೆ ಕಾಯಿದೆ ಜಾರಿಗೆ ತರಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತರುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಈ ಭೂ ಸುಧಾರಣೆ ಕಾನೂನಿಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದು ಸರಿಯಲ್ಲವೆಂದು ಪ್ರತಿ ಪಕ್ಷದ ಸದಸ್ಯರುಗಳು ಇಲ್ಲಿ ಧರಣಿ ಮಾಡಿರುವುದನ್ನು ನಾವು ನೋಡಿದ್ದೇವೆ. ಒಂದು ಕಡೆ ಪ್ರಜಾ ಪ್ರಭುತ್ವದ ಬಗ್ಗೆ ಅವರು ಮಾತನಾಡುತ್ತಾರೆ, ಇನ್ನೊಂದು ಕಡೆ ಪ್ರಜಾ ಪ್ರಭುತ್ವದ ವಿರುದ್ಧವಾಗಿ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೇ ವಂದನಾ ನಿರ್ಣಯ ಎನ್ನುವುದು; ಇವರು ಸರ್ಕಾರಕ್ಕೆ ನೇರವಾಗಿ ವಂದನೆಯನ್ನು ಅರ್ಪಿಸುತ್ತಿದ್ದಾರೆ. ಮಾತು ಮಾತಿಗೂ ಇವರು ಸರ್ಕಾರಕ್ಕೆ ವಂದಿಸುವ ಭಾಷಣಕ್ಕೆ ವಂದನಾ ನಿರ್ಣಯ ಅನ್ನುವುದು. ಅದಕ್ಕಾಗಿಯೇ ಸರ್ಕಾರದ ಸಹ ಸದಸ್ಯರಾಗಿರುವ ಶಿವರಾಮೇಗೌಡರು ವಂದನೆ ಸಲ್ಲಿಸುವುದಕ್ಕಾಗಿಯೇ ನಿರತರಾಗಿಬಿಟ್ಟಿದ್ದಾರೆ. ಇದು ನಿನ್ನೆ ಮಾಡಿದ

ಧರಣಕ್ಕೂ ಇವತ್ತಿನ ಪ್ರಜಾ ಪ್ರಭುತ್ವಕ್ಕೂ ಸಂಬಂಧ ಏನಿದೆ ಸ್ವಾಮಿ? ಕರಾಳ ಶಾಸನ ತರುತ್ತಿದ್ದಾರೆಂದು ನಾವು ಹೇಳಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಅದನ್ನು ಕೆಲವರು ಕರಾಳ ಶಾಸನವೆಂದರೆ ಅದನ್ನು ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ. ಅದನ್ನು ಸದನ ಒಪ್ಪಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಕಾರ ಕಾನೂನಿಗೆ ತಿದ್ದುಪಡಿ ತರಲಾಗಿದೆ. ಇದರ ಬಗ್ಗೆ ಚರ್ಚೆ ಮಾಡುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು, ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುವುದು ಸರಿಯಿಲ್ಲವೆಂದು ಧರಣಿ ಮಾಡಿದರೆ ಅದನ್ನ ಪ್ರಜಾಪ್ರಭುತ್ವವೆಂದು ಹೇಳುವುದಕ್ಕಾಗುತ್ತದೆಯೇ? ಒಂದು ಕಡೆ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದು, ಇನ್ನೊಂದು ಕಡೆ ಪ್ರಜಾಪ್ರಭುತ್ವದ ವಿರುದ್ಧವಾಗಿ ಕೆಲಸ ಮಾಡುವುದು, ಇದು ಸರಿಯಲ್ಲ. ನಿಜವಾಗಿ ರೈತರ ಬಗ್ಗೆ ಕಳಕಳಿ ಇದ್ದಿದ್ದರೆ, ಈ ಭೂ ಸುಧಾರಣಾ ಕಾಯಿದೆಯನ್ನು ಯಾವೊತ್ತೋ ಮಾಡಬೇಕಾಗಿತ್ತು. ಈಗಾಗಲೇ ಇದು ತಡವಾಗಿದೆ. 'ಅಪ್ಪ ಹಾಕಿದ ಆಲದ ಮರ' ಎಂದ ಹಳೆ ಪದ್ಧತಿಯಲ್ಲೇ ಬೆಳೆಗಳನ್ನು ಬೆಳೆದುಕೊಂಡಿದ್ದರೆ ಇವತ್ತಿನ ದಿವಸದಲ್ಲಿ ಆಗುವುದಿಲ್ಲ. ಅತ್ಯಾಧುನಿಕ ತಂತ್ರಜ್ಞಾನ ನಮ್ಮ ದೇಶಕ್ಕೆ ಬರಬೇಕಾಗಿದೆ. ಭೂ ಸುಧಾರಣೆ ಕಾಯಿದೆ ತಂದಿರುವುದರಿಂದ ಮಾರುಕಟ್ಟೆ ಬೆಲೆ ಜಾಸ್ತಿಯಾಗಿ ರೈತರ ಕಿಸೆಗೆ ದುಡ್ಡು ಹೋಗುತ್ತದೆ. ಜಮೀನುಗಳನ್ನು ಮಾಡಬಾರದೆಂದು ಯಾವ ನಿರ್ಬಂಧವಿದ್ದರೂ ಮಾರಾಟ ಮಾಡುವ ರೈತ ಅದನ್ನು ಮಾರಾಟ ಮಾಡಿಯೇ ಮಾಡುತ್ತಾನೆ. ಈ ಭೂ ಸುಧಾರಣಾ ಕಾನೂನು ಬಂದಿದ್ದರಿಂದ ರೈತರಿಗೆ ಅನುಕೂಲವಾಗಿದೆಯೇ ಹೊರತು ಕೆಟ್ಟದ್ದಲ್ಲವೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಸರ್ಕಾರ ಬಂದ ಮೇಲೆ ಮಂಡಲ ಪಂಚಾಯಿತಿ ಚುನಾವಣೆ, ಜಿಲ್ಲಾ ಪಂಚಾಯಿತಿ ಚುನಾವಣೆ ಮತ್ತು ಮುನಿಸಿಪಾಲಿಟಿ ಚುನಾವಣೆಗಳನ್ನು ಮಾಡಲಾಯಿತು. ಇನ್ನೂ ಕಾರ್ಪೋರೇಷನ್ ಚುನಾವಣೆ ಮಾತ್ರ ಬಾಕಿ ಇದೆ. ಸಹಕಾರ ಕ್ಷೇತ್ರದಲ್ಲಿ ಚುನಾವಣೆಗಳು ಆಗದೆ ಕಾರ್ಯ ಚಟುವಟಿಕೆಯೆಲ್ಲಾ ಸ್ಥಗಿತವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಸರಕಾರದವರು ಸಹಕಾರ ಸಂಘಗಳಿಗೆ ಚುನಾವಣೆಗಳನ್ನು ಮಾಡುವ ವಿಚಾರದಲ್ಲಿ ಅವುಗಳನ್ನು ಸಕಾಲದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇವೊತ್ತು ಶಿಕ್ಷಣ ಇಲಾಖೆಗೆ ಒಬ್ಬ ದಕ್ಷ ಹಾಗೂ ಪ್ರಾಮಾಣಿಕರಾದಂಥ ಸಚಿವರು ಇದ್ದಾರೆ. ನೀತಿಯ ವಿಚಾರದಲ್ಲಿ ನಿಷ್ಠುರರಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲಸ ಮಾಡತಕ್ಕಂಥ ಸಾರ್ವಜನಿಕರ ಹಿತಾಸಕ್ತಿಗೆ ತಕ್ಕ ಹಾಗೆ ನಿರ್ಧಾರಗಳನ್ನು ತೆಗೆದುಕೊಳ್ಳ ತಕ್ಕಂಥ ಅವರಿಂದ ಶಿಕ್ಷಣ ಇಲಾಖೆಗೆ ಒಳ್ಳೆಯ ಹೆಸರು ಬಂದಿದೆ. ಶಾಲೆಗಳಲ್ಲಿ, ಹೈಸ್ಕೂಲಗಳಲ್ಲಿ, ಕಾಲೇಜುಗಳಲ್ಲಿ ಶಿಕ್ಷಕರ ಕೊರತೆಯನ್ನು ಮನಗಂಡು 10 ಸಾವಿರ ಜನಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಕ್ರಮವನ್ನು ತೆಗೆದುಕೊಂಡಿದ್ದಾರೆ. ಇವೊತ್ತು ಡಿಪಿಇಪಿ ಕಾರ್ಯಕ್ರಮವನ್ನು ಸನ್ಮಾನ್ಯ ಶಿಕ್ಷಣ ಸಚಿವರು ಐದು ಜಿಲ್ಲೆಗಳಿಗೆ ಮಾತ್ರ ಕೊಟ್ಟಿರುವುದನ್ನು ಬಿಟ್ಟು ಅದನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತಾರ ಮಾಡಬೇಕು. ತಾವುಗಳು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಇನ್ನೂ ಹೆಚ್ಚಿನ ಹೈಸ್ಕೂಲಗಳನ್ನು

ಮತ್ತು ಜ್ಯೂನಿಯರ್ ಕಾಲೇಜುಗಳನ್ನು ರಾಜ್ಯದಲ್ಲಿ ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಮಣ್ಣಿನ ಮಗ ಅಧಿಕಾರವನ್ನು ವಹಿಸಿಕೊಂಡ ಮೇಲೆ, ರಾಜ್ಯದಲ್ಲಿ ಮಣ್ಣಿನ ಮಕ್ಕಳಿಗೆ ಅಧಿಕಾರ ಸಿಗಬೇಕೆಂಬ ಘೋಷಣೆಯ ಮೇಲೆ, ಇವೊತ್ತು ಸರ್ವೇಯರಗಳು, ಪೋಲೀಸ್ ಕಾನ್ಸಟೇಬಲಗಳು, ಅನಿಮಲ್ ಹಸಬೆಂಡರಿಯಲ್ಲಿನ ಸಿಬ್ಬಂದಿ ವರ್ಗವನ್ನು ಭರ್ತಿ ಮಾಡುತ್ತಾ ಇದ್ದೀರಿ. ಅದನ್ನು ಲೋಕಸೇವಾ ಆಯೋಗದ ಮೂಲಕ ತೆಗೆದುಕೊಳ್ಳುತ್ತಾ ಇದ್ದೀರಿ. ಇವೊತ್ತು ಭ್ರಷ್ಟಾಚಾರವು ಲೋಕಸೇವಾ ಆಯೋಗದ ಮೂಲಕ ಕೇಂದ್ರೀಕೃತವಾಗುವುದು ಬೇಡ. ಅಲ್ಲಿ ನಡೆಯುತ್ತಿರತಕ್ಕಂಥ ಭ್ರಷ್ಟಾಚಾರದ ವಿಚಾರವು ಎಲ್ಲರಿಗೂ ಗೊತ್ತಿರತಕ್ಕಂಥಾದ್ದೇ. ಅಲ್ಲಿಯೂ ಕೆಲವರು ಪ್ರಾಮಾಣಿಕರು ಇದ್ದಾರೆ. ಅಲ್ಲಿರತಕ್ಕಂಥ ಕೆಲವು ಅಪ್ರಾಮಾಣಿಕರು ಮಾಡತಕ್ಕಂಥ ವ್ಯವಹಾರಗಳು ಬಹಳಷ್ಟು ಇವೆ. ಆದ್ದರಿಂದ ನಿಮಗೆ, ಸರಕಾರಕ್ಕೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಸಹಾಯ ಮಾಡಬೇಕೆಂಬ ಕಳಕಳಿಯು ಇದ್ದಲ್ಲಿ ಜಿಲ್ಲಾ ಮಟ್ಟದಲ್ಲಿ ರಿಕ್ರೂಟಮೆಂಟ್ ಕಮಿಟಿಗಳನ್ನು ಮಾಡಿ ಅವರಿಗೆ ಒಂದು ಗೈಡಲೈನ್ಸ ಕೊಟ್ಟು, ನಾನ್ ಅಫೀಷಿಯಲ್ ಮೆಂಬರಗಳನ್ನು ಮಾಡಿ ಸಮಾಜದಲ್ಲಿ ಸೇವೆಯನ್ನು ಮಾಡಿರತಕ್ಕಂಥ ಯಾರ್‍ಯಾರು ಧುರೀಣರು ಇದ್ದಾರೆ, ಅಂಥವರನ್ನು ಗುರುತು ಮಾಡಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅವಕಾಶ ಸಿಗುವಂತೆ ಮಾಡಬೇಕು. ಆ ದಿಸೆಯಲ್ಲಿ ನೇಮಕಾತಿ ನಿಯಮಗಳಿಗೆ ತಿದ್ದುಪಡಿಯನ್ನು ತರಬೇಕೆಂದು ಹೇಳಿ, ಶೀಘ್ರದಲ್ಲಿಯೇ ರಿಕ್ರೂಟಮೆಂಟ್ ಕಮಿಟಿಗಳನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ವಸತಿ ವಿಚಾರದಲ್ಲಿ ಯಾವುದೇ ಸರಕಾರದವರು ಮಾಡದೇ ಇರತಕ್ಕಂಥ ಒಂದು ಒಳ್ಳೆಯ ಕೆಲಸವನ್ನು ಈ ಸರಕಾರದವರು ಮಾಡಿದಾದರೆ. 480 ಕೋಟಿ ರೂ. ಗಳನ್ನು ಇವೊತ್ತು ವಸತಿಗೋಸ್ಕರ ಕೊಟ್ಟಿರತಕ್ಕಂಥಾದ್ದು ಸ್ವಾಗತಾರ್ಹವಾದುದು. ನೀವು ಕೊಟ್ಟು ಏನು ಮಾಡಿದ್ದೀರಿ? ನಮ್ಮ ಎಂ.ಪಿ. ಪ್ರಕಾಶರವರು ಎಲ್ಲಾ ಹಣವನ್ನು ಕೊಡುವುದರ ಜೊತೆಗೆ ಎಲ್ಲಾ ಅಧಿಕಾರವನ್ನು ಕೂಡ ತಾಲ್ಲೂಕು ಮತ್ತು ಜಿಲ್ಲಾಪಂಚಾಯತನವರಿಗೆ ಕೊಟ್ಟುಬಿಟ್ಟಿದ್ದಾರೆ. ಮಾನ್ಯ ಬಿ.ಬಿ ಶಿವಪ್ಪನವರು ಮತ್ತು ವಾಟಾಳನಾಗರಾಜ್ ರವರು ಶಾಸಕರ ಸ್ಥಾನಮಾನಗಳ ಬಗ್ಗೆ ಮಾತನಾಡುವಾಗ ಬಹಳ ಚೆನ್ನಾಗಿ ಹೇಳಿದರು. ಮಾನ್ಯ ಸಚಿವರು ಅವರಿಗೆ ಏನು ಅಧಿಕಾರವನ್ನು ಕೊಟ್ಟಿದ್ದಾರೆ ಅದನ್ನು ಕೊಡಬೇಡಿ ಎಂದು ಹೇಳುವುದಿಲ್ಲ. ಇವೊತ್ತು 480 ಕೋಟಿ ರೂ.ಗಳನ್ನು ವಸತಿಗಾಗಿ ಕೊಟ್ಟು ಶಾಸಕರಾದಂಥವರು ಅರ್ಜಿಗಳನ್ನು ಹಿಡಿದುಕೊಂಡು ಅವರ ಮನೆಯ ಬಾಗಿಲಿಗೆ ಹೋಗಬೇಕಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಮೆಂಬರಗಳ ಮನೆಬಾಗಿಲಿಗೆ ಹೋಗಬೇಕಾದಂಥ ದುಸ್ಥಿತಿಯು ನಿಮ್ಮ ಕಾಲದಲ್ಲಿ ಆಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ನಾವು ಮಾಡಿದ್ದಲ್ಲ, ಹಿಂದಿನ ಸರಕಾರದವರು ಮಾಡಿದ ಶಾಸನ ಅದು.

ಶ್ರೀ ಎಲ್. ಆರ್. ಶಿವರಾಮೇಗೌಡ : ಹಿಂದಿನ ಸರಕಾರದವರು ಮಾಡಿರಬಹುದು. ಅದು ಅವರು ಮಾಡಿದ ಕರಾಳ ಶಾಸನ. ಆದರೆ ಅದಕ್ಕೆ ನೀವು ತಿದ್ದುಪಡಿ ತರತಕ್ಕಂಥ ಕೆಲಸವನ್ನು

ಮಾಡಬೇಕು. ಉದಾಹರಣೆಗೆ ನಮ್ಮ ಕ್ಷೇತ್ರದಲ್ಲಿ ಬಡವರು ಮನೆಗಳಿಗೆ ಬೇಸ್‌ಮೆಂಟ್ ಹಾಕಿದ್ದರು. ಅವು ಅಸೆಂಬ್ಲಿ ಚುನಾವಣೆಗಳಿಗೆ ಮುಂಚೆ. ಅಂಥ ಹತ್ತು ಮನೆಗಳಿಗೆ ಸಹಾಯ ಮಾಡಲು ತಾಲ್ಲೂಕು ಪಂಚಾಯತ್ ನಲ್ಲಿ ಪಟ್ಟಿ ಕೊಟ್ಟರೆ ಅವಕ್ಕೆ ಅವರು ಯಾವ ಆಸ್ಪದವನ್ನು ಕೊಟ್ಟಿಲ್ಲ. ಕೊನೆಗೆ ನಾನು ವಸತಿ ಸಚಿವರಿಗೆ ಅರ್ಜಿ ಕೊಟ್ಟು ಈ ಮನೆಗಳಿಗೆ ಅವಕಾಶ ಕೊಡಬೇಕು, ಇವುಗಳು ಬಹಳ ಅಚ್ಚುಕಟ್ಟಾಗಿ ನಿಮ್ಮ ನಿಯಮಗಳ ಅಡಿಯಲ್ಲಿಯೇ ಬರುತ್ತಾನೆ, ಎಂದು ಹೇಳಿದಾಗ ಮಾನ್ಯ ವಸತಿ ಸಚಿವರು ಜಿಲ್ಲಾ ಪಂಚಾಯತ್ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದರು. ಈ ಹತ್ತು ಜನರು ನಾವು ಬಳಿಗೆ ಬಂದರೆ ಕೊಡಬೇಕೆಂದು ಅದರಲ್ಲಿ ಹೇಳಿದ್ದರು. ರಾಜ್ಯ ಸರಕಾರದಿಂದ ಹೋಗಿರತಕ್ಕಂಥ ಪತ್ರಕ್ಕೆ ನಿಮ್ಮ ತಾಲ್ಲೂಕು ಮತ್ತು ಜಿಲ್ಲಾಪಂಚಾಯಗಳವರು ಕೊಡತಕ್ಕಂಥ ಕೊಡುಗೆ ಗೌರವಗಳೇನು? ಆ ಹತ್ತು ಜನರ ಅರ್ಜಿಗಳನ್ನು ನಿರ್ಲಕ್ಷ ಮಾಡಿ ಅವರಿಗೆ ಮನೆಗಳನ್ನು ಕೊಡಲೇ ಇಲ್ಲ. ಹಿಂದೆ ಬರೀ ಭಾಷಣ ಮಾಡುತ್ತಿದ್ದ ಸರಕಾರಗಳು ಹಣವನ್ನು ಇಷ್ಟು ಕೊಟ್ಟಿರಲಿಲ್ಲ. ನೀವು 480 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಆದರೆ ಶಾಸಕರುಗಳ ಕೈಗೆ ಅಧಿಕಾರವನ್ನು ಕೊಡದೆ ಇರುವುದು ಸರಿಯಲ್ಲ. ನಮಗೆ ಪೂರ್ಣ ಅಧಿಕಾರವನ್ನು ಕೊಡಿ ಎಂದು ನಾನು ಹೇಳುವುದಿಲ್ಲ. ಶಾಸಕರುಗಳು ತಾಲ್ಲೂಕು ಹೆಡಕ್ವಾರ್ಟರ್ಸನಲ್ಲಿ ತಿರುಗಾಡುವಾಗ ಯಾರೂದರು ಬಡವರು ನಮಗೆ ಒಂದು ಮನೆ ಕೊಡಿ ಎಂದರೆ ನೀವು ಹೋಗಿ ತಾಲ್ಲೂಕು ಪಂಚಾಯತನಲ್ಲಿ ಕೇಳಿ ಎಂದು ಹೇಳುವುದಕ್ಕೆ ಆಗುತ್ತದೆಯೇ? ಒಬ್ಬ ಶಾಸಕರ ಶಿಫಾರಸ್ಸಿಗೆ ಕೂಡ ಮಾರ್ಯಾದೆಯನ್ನು ಕೊಡುವುದಿಲ್ಲ. ಅಲ್ಲಿ ಗುಂಪುಗಾರಿಕೆ. ಅಲ್ಲಿ ವ್ಯಾಪಾರ ನಡೆಯುತ್ತದೆ. ಒಂದು ಪಂಚಾಯತದೆ 400 ಮನೆಗಳು ಬಂದರೆ ಅವರಲ್ಲಿಯೇ ಒಬ್ಬರಿಗೆ ಇಷ್ಟು ಎಂದು ಹಂಚಿಕೊಳ್ಳುತ್ತಾರೆ. ದಯಮಾಡಿ ಇದಕ್ಕೆ ತಾವುಗಳು ಅವಕಾಶವನ್ನು ಕೊಡಬಾರದು. ಗ್ರಾಮೀಣಾಭಿವೃದ್ಧಿ ಖಾತೆಗೆ ಬಹಳ ಒಳ್ಳೆಯ ಮಂತ್ರಿಗಳು ಸಿಕ್ಕಿದ್ದಾರೆ. ಆದರೆ ಶಾಸಕರುಗಳ ಚಿಂತಾಜನಕ ಪರಿಸ್ಥಿತಿಯನ್ನು ಕೂಡ ತಾವುಗಳು ನೋಡಬೇಕು. ಈ ಬಗ್ಗೆ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಯವರ ಮೂಲಕ ಇದನ್ನು ಹೇಳಿಸಬೇಕು. ಇವೊತ್ತು ನೀವು 400-500 ಮನೆಗಳನ್ನು ಕೊಡುತ್ತೀರಿ. ಮನೆಗಳನ್ನು ಕೊಡುವಾಗ ಗ್ರಾಮಪಂಚಾಯಿತಿ ಸಭೆಗಳಲ್ಲಿ ಫಲಾನುಭವಿಗಳನ್ನು ಗುರುತಿಸಬೇಕೆದು ಇದೆ.

ಆದರೆ ಅಲ್ಲಿ ನಿಮ್ಮ ಕಾನೂನು ಪ್ರಕಾರ ಮಾಡುತ್ತಾ ಇಲ್ಲ. ಯಾರು ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾಪಂಚಾಯತ್ ಸದಸ್ಯರಿರುತ್ತಾನೆ ಅವರು ಹೇಳಿದವರಿಗೆ ಕೊಡತಕ್ಕಂಥಾದ್ದು ವಾಡಿಕೆ ಇದೆ. ತಾವು ಮಂತ್ರಿಗಳು ಇರುವ ಕ್ಷೇತ್ರಗಳಲ್ಲಿ ನಿಮಗೆ ಹೆದರಿಕೊಂಡು ಹೀಗೆ ಆಗುತ್ತಿಲ್ಲವಾಗಿರಬಹುದು. ಇದು ಎಲ್ಲಾ ಕ್ಷೇತ್ರಗಳಲ್ಲಿಯೂ ನಡೆಯುತ್ತಿದ್ದು ಇದಕ್ಕೆ ಕಡಿವಾಣವನ್ನು ಹಾಕಬೇಕು. ಶಾಸಕರುಗಳಿಗೆ ಕೊನೆಯ ಪಕ್ಷ ಅರಧ ಭಾಗವನ್ನಾದರೂ ಕೊಡಬೇಕು. ಅರ್ಧ ಭಾಗವನ್ನು ಮಾತ್ರ ತಾಲ್ಲೂಕು ಪಂಚಾಯತ್ ಸದಸ್ಯರುಗಳಿಗೆ ಫಲಾನುಭವಿಗಳನ್ನು ಗುರುತಿಸುವ ಕೆಲಸವನ್ನು ಕೊಡಬೇಕು. ಇಲ್ಲವಾದರೆ ನಾವು ನಿಮ್ಮ ಮೂಲಕ ಶಿಫಾರಸ್ಸು ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವುಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳು ಒಂದು ವರ್ಷ ಅಥವಾ ಒಂದೂವರೆ ವರ್ಷ

ಇರಬೇಕೇ ಎಂಬುದು ತೀರ್ಮಾನವಾಗಬೇಕು. ನೀವು ಎಲ್ಲಾ ತರಹದ ಅಧಿಕಾರವನ್ನು ಕೊಟ್ಟಿದ್ದೀರಿ. ಆದರೆ ಅವರ ಅವಧಿಯನ್ನು ಗೊತ್ತುಮಾಡಲಿಲ್ಲ. ಈ ಸದನದಲ್ಲಿ ಅದನ್ನು ಹೇಳಬೇಕು. ಎಲ್ಲರಿಗೂ ಅವಕಾಶ ಸಿಗುವಂತೆ ಅದನ್ನು 1 ವರ್ಷ ಅಥವಾ 15 ತಿಂಗಳುಗಳು ಎಂದು ಮಾಡುತ್ತೇವೆಂದು ತಾವು ಹಿಂದೆ ಹೇಳಿದ್ದೀರಿ. ಇದನ್ನು ಸ್ಪಷ್ಟಪಡಿಸಿದರೆ ಅಧಿಕಾರ ಮಾಡುವವರಿಗೆ ಮತ್ತು ಅಧಿಕಾರಿಗಳಿಗೆ ಒಂದು ರೀತಿಯ ಬಿಗಿಯೂ ಬರುತ್ತದೆ. ಹಾಗೆಯೇ ಡಾ| ಕೃಷ್ಣಸ್ವಾಮಿ ನೇತೃತ್ವದ ತಜ್ಞರ ಸಮಿತಿಯನ್ನು ಮಾಡಿ ಜಿಲ್ಲಾ ಮತ್ತು ತಾಲ್ಲೂಕ ಪಂಚಾಯತ್ ಗಳ ಬಗ್ಗೆ ಒಂದು ವರದಿಯನ್ನು ಕೊಡಲು ವ್ಯವಸ್ಥೆ ಮಾಡಿದ್ದೀರಿ. ಆ ವರದಿಯನ್ನು ಕೂಡಲೇ ಜಾರಿಗೆತರಬೇಕು ಮತ್ತು ಲೋಪದೋಷಗಳನ್ನು ಸರಿಪಡಿಸಬೇಕು. ಇವೊತ್ತು ಆ ಕರಾಳಶಾಸನವನ್ನು ತಂದು ತಿದ್ದುಪಡಿ ಮಾಡದೇ ಇದವ ಮಾನ್ಯರುಗಳು ಇಲ್ಲಿ ಇದ್ದಾರೆ. ಅವರ ಹೆಸರುಗಳನ್ನು ನಾನು ಹೇಳಲು ಹೋಗುವುದಿಲ್ಲ. ಆ ಪಾಪದ ಬುಟ್ಟಿಯು ಅವರ ತಲೆಯ ಮೇಲಿದ್ದರೂ ಕೂಡ ಕಾರ್ಯಗತ ಮಾಡತಕ್ಕಂಥವರು ನೀವು. ನಿಮಗೆ ಕೂಡ ಆ ಕೆಟ್ಟ ಹೆಸರು ಬರುತ್ತದೆ. ನೀವು ಸಮಗ್ರವಾಗಿ ಎಲ್ಲೆಲ್ಲಿ ಅಂಥ ತಪ್ಪುಗಳಿವೆ ಅವುಗಳನ್ನು ಸರಿಪಡಿಸದೇ ಹೋದರೆ ಪಂಚಾಯತ್‌ರಾಜ್ ವ್ಯವಸ್ಥೆಯು ಸರಿಯಾಗಿ ನಡೆಯುವುದಿಲ್ಲ ಎಂಬ ಮಾತನ್ನು ಹೇಳಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ 5 ಲಕ್ಷ ಹಸಿರು ಕಾರ್ಡ್‌ಗಳನ್ನು ಕೊಟ್ಟಿದ್ದೀರಿ. ನ್ಯಾಯ ಬೆಲೆ ಅಂಗಡಿಗಳು ಯಾವ ಮಟ್ಟದಲ್ಲಿ ನಡೆಯುತ್ತಿವೆ ಎಂಬುದನ್ನು ಚಿಂತನೆ ಮಾಡಬೇಕಾಗಿದೆ. ನ್ಯಾಯಬೆಲೆ ಅಂಗಡಿಗಳು ಯಾವ ತರಹ ಅಂದರೆ ಅದೊಂದು ರೀತಿಯಲ್ಲಿ ವ್ಯಾಪಾರ. ಏನು ಆಹಾರಧಾನ್ಯಗಳನ್ನು ಕೊಟ್ಟು ಜನರಿಗೆ ತಲುಪಿಸಬೇಕೆಂದಿದ್ದರೋ ಅದು ಸರಿಯಾಗಿ ನಡೆಯುತ್ತಾ ಇಲ್ಲ. ಅದಕ್ಕೆ ಸರಿಪಡಿಸಲು ಒಂದು ಗೈಡಲೈನ್ಸ್ ಮಾಡಬೇಕು. ತಾಲ್ಲೂಕುಮಟ್ಟದಲ್ಲಿ ಇರತಕ್ಕಂಥ ಜಾಗೃತ ದಳವನ್ನು ಇನ್ನೂ ಹೆಚ್ಚು ಶಕ್ತಿಯುತವಾಗಿ ಮಾಡಬೇಕು. ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಒಂದು ತನಿಖಾ ಸಮಿತಿಯನ್ನು ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕು.

ಇವೊತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಮಾನ್ಯ ಜಾಲಪ್ಪನವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಬೆಂಗಳೂರು ನಗರದಲ್ಲಿಯಂತೂ ಸಬರಿಜಿಸ್ಟ್ರಾಟ ಆಫೀಸಗಳಲ್ಲಿ ಬಾತರೂಮುಗಳಲ್ಲಿ ಹಣದ ಮೂಟೆಯನ್ನು ಇಟ್ಟ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಇವೊತ್ತು ಅಂಥಹ ತಿಮಿಂಗಿಲಗಳನ್ನೆಲ್ಲ ಹೊರಹಾಕಿದ್ದಾರೆ. ಇವೊತ್ತು ಸ್ಟಾಂಪ್ ಮಾರಾಟ ಇಲಾಖೆಯ ಮೂಲಕ ರಾಜ್ಯಕ್ಕೆ ಮೂರನೇ ಒಂದು ಭಾಗದಷ್ಟು ವರಮಾನವು ಬರುತ್ತಿದೆ. ಸುಮಾರು 500ಕೋಟಿ ರೂ.ಗಳ ವರಮಾನ ಬರತಕ್ಕಂಥ ಇಲಾಖೆಯನ್ನು ಈಗ ಕಾಯಕಲ್ಪಕ್ಕೆ ಒಳಪಡಿಸಿದ್ದಾರೆ. ಹಿಂದೆ ಬೆಂಗಳೂರಿನಲ್ಲಿ ಒಂದು ಪತ್ರವನ್ನು ರಿಜಿಸ್ಟರ್ ಮಾಡಿಸಿದರೆ 3-6 ತಿಂಗಳುಗಳು ಬೇಕಾಗುತ್ತಿತ್ತು. ಸದರಿ ಮಾಲೀಕ ಕಚೇರಿಗೆ ಅಲೆದು ಸುಸ್ತಾಗಿ ಬಿಡುತ್ತಿದ್ದ. ಪಕ್ಕದ ತಮಿಳುನಾಡಿನಲ್ಲಿ ಈ ಕುರಿತು ಬಹಳ ಒಳ್ಳೆಯ ಸಿ ಮಾಡಿದ್ದಾರೆಂದು ನಾವು ಕೇಳಿದ್ದೇವೆ. ಅದನ್ನು ಗಮನಿಸಿ ನಮ್ಮ ಸಚಿವರೂ ಕೂಡ ಬಹಳ ವ್ಯವಸ್ಥಿತವಾಗಿ ಮಾಡಲು ಹೊರಟಿಸಿದ್ದಾರೆ. ಇಂಥ ಕಾಗದಪತ್ರಗಳನ್ನು 8-10 ದಿವಸಗಳಲ್ಲಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಸಿಬ್ಬಂದಿ

ಬಹಳ ಕಡಿಮೆ ಇದೆ. ಕಂಪ್ಯೂಟರ್ ವ್ಯವಸ್ಥೆಯನ್ನು ಮಾಡಿ ಈ ಕಾರ್ಯಗಳ ಬಗ್ಗೆ ಆಧ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಈ ರಾಜ್ಯದ ಎಲ್ಲಾ ಹಳ್ಳಿಗಳಿಗೆ ಡಾಂಬರ್ ರಸ್ತೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರವಾಗಿದೆ. ಯಾವ ಊರಿಗೆ ಹೋದರೂ ಕೂಡ ಅಲ್ಲಿನ ರಸ್ತೆಗಳು ಸರಿಯಾಗಿಲ್ಲದಿರುವುದು ಕಾಣುತ್ತದೆ. ಜನರು ನಮ್ಮನ್ನು ಶಪಿಸುತ್ತಾರೆ. ಇವೊತ್ತು ಲೋಕೋಪಯೋಗಿ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲಾ ಪರಿಷ್ತಗೆ ಸೇರಿದ ರಸ್ತೆಗಳ ಸ್ಥಿತಿಯು ಬಹಳ ಶೋಚನೀಯವಾಗಿದೆ. ಅವರಿಗೆ ಏನು ಅನುದಾನ ಕೊಟ್ಟು ಮಾಡಿಸುತ್ತಾ ಇದ್ದೀರಿ. ಅದು ಸಾಕಾಗುತ್ತಾ ಇಲ್ಲ.

ಇದು ಸ್ವಾಗತಾರ್ಹವಾದುದು. 27 ಸಾವಿರ ಹಳ್ಳಿಗಳಿಗೆ ಡಾಂಬರು ಮಾಡುತ್ತೇವೆಂದು ಹೇಳಿರುವುದನ್ನು ಶೀಘ್ರವಾಗಿ ವರ್ಷಕ್ಕೆಷ್ಟು ಎಂದು ಹಂತಹಂತವಾಗಿ ಮಾಡಿ. ಆಮೇಲೆ ಇನ್ನೊಂದೇನಾಗಿದೆ ಜಿಲ್ಲಾಪರಿಷತ್ತಿನಲ್ಲಿ ಸೇರಿರುವ ಎಲ್ಲಾ ರಸ್ತೆಗಳನ್ನೂ ಜಿಲ್ಲಾಪರಿಷತ್ ವತಿಯಿಂದ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ಹಿಂದೆ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ 50 ಕಿಮೀ ಜಿಲ್ಲಾಪರಿಷತ್ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಪಿಡಬ್ಲ್ಯೂಡಿಯವರ ಕೈಗೆ ಕೊಟ್ಟರು. ಲೋಕೋಪಯೋಗಿ ಇಲಾಖೆಗೆ ಕೊಡುವುದರಿಂದ ಅವರು ಹೆಚ್ಚು ದುಡ್ಡು ಕೊಡಲು ಅವಕಾಶವಾಗುತ್ತದೆ. ಆಗ ಶೀಘ್ರವಾಗಿ ರಸ್ತೆ ಮಾಡಲು ಅವಕಾಶವಾಗುತ್ತದೆ. ತಮ್ಮ ಕಾಲದಲ್ಲಿ 50 ಅಥವಾ 100 ಕಿ.ಮೀ ಒಂದು ಮತಕ್ಷೇತ್ರದಲ್ಲಿ ನೀವು ಮೇಲ್ದರ್ಜೇಗೇರಿಸಿ ಲೋಕೋಪಯೋಗಿ ಇಲಾಖೆಗೆ ವಹಿಸಿದರೆ ಅವು ಸುಲಭವಾಗಿ ಆಗುತ್ತವೆಂದು ಆ ಸಂದರ್ಭದಲ್ಲಿ ಹೇಳುತ್ತೇನೆ. ಮೊನ್ನೆ ಪತ್ರಿಕೆಯಲ್ಲಿ ಮತ್ತು ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪಾನನಿಷೇಧ ಮಾಡುತ್ತೇನೆಂದು ಹೇಳಿದ್ದಾರೆ. ಅಧ್ಯಕ್ಷರೇ, ಇವತ್ತು ಅಬ್ಕಾರಿ ಇಲಾಖೆಯಿಂದ 800 ರಿಂದ 1000 ಕೋಟಿ ವರಮಾನ ಬರುತ್ತದೆ. ನಾವು ಪಕ್ಕದ ಆಂಧಕ್ಕೆ ನಾಲ್ಕಾರು ಬಾರಿ ಹೋಗಿದ್ದೆವು. ನಾಗೇಗೌಡರು ಸೇರಿ. ಇವತ್ತು ಪಾನನಿಷೇಧ ಮಾಡುವ ವಿಚಾರದಲ್ಲಿ ವಾಟಾಳ್ ನಾಗರಾಜ್ ರಂಥವರು ಅದರ ವಾಸನೇನೇಗೊತ್ತಿಲ್ಲದಂಥವರು ಏನುಬೇಕಾದರೂ ಭಾಷಣ ಮಾಡುತ್ತಾರೆ. ಆದರೆ ಅದರು ರುಚಿ ಗೊತ್ತಿರುವವರ ಬಗ್ಗೆಯೂ ಅವರು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅದರ ರುಚಿ ಗೊತ್ತಿರುವಂತಹ ಶಿವರಾಮೇಗೌಡರ ಬಗ್ಗೆಯೂ ತಾವು ಯೋಚನೆ ಮಾಡಬೇಕೆಂದು ಅವರು ಹೇಳುತ್ತಿರುವುದು.

ಶ್ರೀ ಎಲ್. ಆರ್. ಶಿವರಾಮೇಗೌಡ : ಮದ್ಯಪಾನ 900 ಕೋಟಿ ಆದಾಯ ಕೊಡುವಂಥದು. ಇವತ್ತು ಆಂಧ್ರದಲ್ಲಿ ಎನಟಿಆರ್ ರಾಜ್ಯದ ಮುಖ್ಯಮಂತ್ರಿಯಾಗಿ ಬಂದಾಗ ಘೋಷಣೆ ಮಾಡಿದರು. 10 ತಿಂಗಳಿಂದೀಚೆಗೆ ಆ ರಾಜ್ಯದಲ್ಲಿ ಏನಾಗಿದೆ ಎಂಬ ವರದಿ ತರಿಸಿ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಬ್ಲಾಕ್ ಮಾರ್ಕೆಟ್ ನಡೆದು ಆ ರಾಜ್ಯಕ್ಕೆ ಎಷ್ಟು ದುಡ್ಡು ಬರುತ್ತಿತ್ತೋ ಅಷ್ಟು ಹಣ ಸೋರಿಹೋಗುತ್ತದೆ. ಕದ್ದು ವ್ಯಾಪರ ಮಾಡುತ್ತಿದ್ದಾರೆ. ಆಂಧ್ರ ಬಾರ್ಡರಗೆ ನೀವು ಯಾವುದೇ ಕಾರನಲ್ಲಿ ಹೋದರೆ ಕಾರನ ಡಿಕ್ಕಿಯಿಂದ ಹಿಡಿದು ಅಡಿವರೆಗೆ ಸೋಸಿನೋಡುತ್ತಾರೆ. ಆದರೂ

ಆಂಧ್ರಬಾರ್ಡರನಲ್ಲಿ ಇವತ್ತು ವ್ಯಾಪಾರ ನಡೆಯುತ್ತಿದೆ. ಆದರೆ ಬಹುರಾಷ್ಟ್ರೀಯ ಕಂಪನಿಗಳು ಈ ರಾಜ್ಯಕ್ಕೆ ಬರಬೇಕು ಎನ್ನುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕರ್ನಾಟಕದಿಂದ ಕಳ್ಳತನ ಮಾಡುತ್ತಾರಲ್ಲಾ, ಇಲ್ಲೂ ಪಾನನಿಷೇಧ ತರುವುದರಿಂದ ಆಂಧ್ರದವರಿಗೆ ಕದ್ದುಮುಚ್ಚಿ ಕುಡಿಯುವುದಕ್ಕೆ ಆಗುವುದಿಲ್ಲ. ಅದನ್ನು ತಪ್ಪಿಸುವ ಸಲುವಾಗಿ ತರಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಎಲ್.ಆರ್.ಶಿವರಾಮೇಗೌಡ : ಕುಡಿಯುವವರೆಲ್ಲಾ ಎಲ್ಲಿಗೆ ಹೋಗಬೇಕು ಆಗ? ಪ್ರಮೀಳಾ ಅವರ ಬಗ್ಗೆ ವಾಟಾಳ್ ನಾಗರಾಜರ ಬಗ್ಗೆ ನಮಗೆ ಬಹಳ ಗೌರವ ಇದೆ. ಹಾಗೆಯೇ ಕುಡಿಯದಿರುವವರ ಬಗ್ಗೆಯೂ ಗೌರವ ಇದೆ.

ಶ್ರೀ ವಾಟಾಳ್ ನಾಗರಾಜ್ : ಕುಡಿದರೆ ಹೃದಯ ಹೋಗಿಬಿಡುತ್ತದೆ ಸ್ವಾಮಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕುಡುಕರ ಮನೆ ಹೆಂಡತಿಯರ ಮಾಂಗಲ್ಯ ಕೂಡ ಮಾರುವ ಪರಿಸ್ಥಿತಿ ಬಂದಿದೆಯಲ್ಲಾ ಅದನ್ನು ನೋಡಿಕೊಳ್ಳುವವರು ಯಾರು? ನಿಮ್ಮ ಹೆಂಡತಿ ಮಕ್ಕಳ ರಕ್ಷಣೆಗೋಸ್ಕರ ಪಾನನಿಷೇಧ ತನ್ನಿ ಎಂದು ಹೇಳುತ್ತಿರುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಬಹಳ ಹೆಂಡತಿಯರ ರಕ್ಷಣೆ ಮಾಡುವುದಕ್ಕೆ ನೀವು ಹೊರಟಿದ್ದೀರಿ, ಬಹಳ ಸಂತೋಷ. ಆದರೆ ಆ ರಾಜ್ಯದ 900 ಕೋಟಿ, 5 ಲಕ್ಷಜನ ನಿರಾಶ್ರಿತರಾಗುತ್ತಾರೆ, ಏನಾಯಿತು? ಬಂಗಾರಪ್ಪನವ ಕಾಲದಲ್ಲಿ ಸೇಂದಿ ನಿಷೇಧಿಸಿದರು. ಇವತ್ತಿಗೂ ಸೇಂದಿ ವ್ಯಾಪರ ನಡೆಯುತ್ತಿಲ್ಲವೇ? ನೀವು ಬಹುರಾಷ್ಟ್ರೀಯ ಕಂಪನಿಗಳು ಈ ರಾಜ್ಯಕ್ಕೆ ಬರಬೇಕು ಅಂತೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಪ್ಪಾಗಬಾರದು. ನಾವೆಂದೂ ಹೇಳಿಲ್ಲ. ಬಹು ರಾಷ್ಟ್ರಕಂಪನಿಗಳಿಗೆ ನೀವು ಷಾಮೀಲಾಗಿ ಕರಾರುಗಳನ್ನು ಮಾಡಿಕೊಂಡಿದ್ದೀರಿ, ತರಬೇಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ದಯಮಾಡಿ ಒಂದು ಮಾತು ಕೇಳಿ. ನಿಮ್ಮದು ಬಿಜೆಪಿ. ರಾಷ್ಟ್ರಮಟ್ಟದ ಒಂದು ಪಕ್ಷ. ಇವತ್ತು ಮಹಾರಾಷ್ಟ್ರದಲ್ಲಿ ಎನ್ರಾನ್ ಜೊತೆ ಒಪ್ಪಂದ ಮಾಡಿಕೊಂಡು ಅಂಥಹ ಕಂಪನಿಗಳು ಬರಬೇಕೆಂದು ಹೇಳುತ್ತೀರಿ, ಇಲ್ಲಿ ನಂಜುಂಡಸ್ವಾಮಿಯವರ ಬಂಧನ ಆದರೆ ಬೇಡಿ ಎಂದು ಹೇಳುತ್ತೀರಿ. ದ್ವಿಮುಖ ನೀತಿ ಅನುಸರಿಸಬೇಡಿ. ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ. ಬಹುರಾಷ್ಟ್ರೀಯ ಕಂಪನಿಗಳು ಈ ರಾಷ್ಟ್ರಕ್ಕೆ ಬರದೇ ಇದ್ದರೆ ಈ ದೇಶ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈಸ್ಟ್ ಇಂಡಿಯಾ ಕಂಪನಿ ಇಲ್ಲಿಗೆ ಬಂದು ಏನಾಯಿತು ಎಂಬುದನ್ನು ನಾವು ನೋಡಿದ್ದೇವಲ್ಲಾ, ಇನ್ನು ಅಷ್ಟು ಕಂಪನಿಗಳನ್ನು ತಂದು ನಮ್ಮ ದೇಶವನ್ನು

ಮಾರುವುದಕ್ಕೆ ಹೊರಟಿದ್ದೀರಿ. ಅದನ್ನು ತಡೆಹಾಕಲು ನಮಗೆಷ್ಟು ಸಾಧ್ಯವಿದೆಯೋ ಅಷ್ಟು ಮಾಡುತ್ತೇವೆ. ನಿಮ್ಮ ಕೈಲಿ ಆಗದಿದ್ದರೆ ನಾವು ಮಹಿಳೆಯರು ಸೇರಿಕೊಂಡು ಮಾಡಲು ತೀರ್ಮಾನ ಮಾಡಿದ್ದೇವೆ. ಖಂಡಿತವಾಗಿಯೂ ಮಾಡುತ್ತೇವೆ.

ಶ್ರೀ ಶ್ರೀನಿವಾಸಗೌಡ : ಇವರ ನಾಯಕ ವಾಜಪೇಯಿಯವರು ನಾವೇನಾದರೂ ಅಧಿಕಾರಕ್ಕೆ ಬಂದರೆ ಈಗಿನ ಅರ್ಥಸಚಿವರನ್ನೇ ಅರ್ಥಸಚಿವರನ್ನಾಗಿ ಮುಂದುವರೆಸುತ್ತೇವೆಂದು ಹೇಳಿದ್ದಾರೆ. ಆದರೆ ಇವರು ಬಹುರಾಷ್ಟ್ರೀಯ ಕಂಪನಿಗಳು ಬರಬಾರದು ನಮ್ಮ ದೇಶಕ್ಕೆ ಎಂದು ಹೇಳುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಹಪ್ಪಳ ಸಂಡಿಗೆ ಮಾಡುವುದಕ್ಕೆ ಬಹುರಾಷ್ಟ್ರೀಯ ಕಂಪನಿಗಳು ಬನ್ನಿ ಎಂದು ಎಂದೂ ಕೂಡ ಹೇಳಿಲ್ಲ. ನಮ್ಮ ಸಣ್ಣ ಉದ್ದಿಮೆಗಳನ್ನು ನಮ್ಮ ದೇಶದವರೇ ಹೆಚ್ಚು ಜನ ನಡೆಸುತ್ತಿದ್ದಾರೆ. ಅವರು ಹಾಳಾಗುವುದಕ್ಕೆ ನಮ್ಮ ಪಕ್ಷ ಎಂದಿಗೂ ಬಿಡುವುದಿಲ್ಲ. ಅಂತಹ ಪಕ್ಷಗಳಿಗೆ ಎಂದಿಗೂ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದಾರೆ.

ಅಧ್ಯಕ್ಷರು : ತಿರುಪತಿಯಲ್ಲಿ ಚೌರ ಮಾಡಿಸಬೇಕೆಂದರೆ ಅವನು ಹಿಂದಿನಿಂದ ಮಾಡುತ್ತಾನೋ ಮುಂದಿನಿಂದ ಮಾಡುತ್ತಾನೋ , ಇರುವ ಕೂದಲೆಲ್ಲಾ ತೆಗೆಯುತ್ತಾನೆ, ಅಗ್ರಿಮೆಂಟ್ ಮಾಡಿ ಅವನನ್ನು ಈ ದೇಶಕ್ಕೆ ಕರೆದ ಮೇಲೆ ಹಪ್ಪಳಕ್ಕೆ ಬರುತ್ತಾನೇ ಚಿಪ್ಸ್‌ಗೇ ಬರುತ್ತಾನೋ ಅವನು ಬಂದಾಯತು, ನಮ್ಮ ಕತೆ ಮುಗಿಯಿತು, ಹೋಗಿ ಮುಂದಕ್ಕೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸಹೋದರಿ ಪ್ರಮೀಳಾ ನನಗೆ ಲಾಯರ್.

ಅಧ್ಯಕ್ಷರು : ಭಾಷಣ ಮಾಡಿದ್ದು ರಾಜ್ಯಪಾಲರು. ಅದರ ಮೇಲೆ ಮಾತನಾಡಿ. ಅನೇಕ ಹೊಸ ಸದಸ್ಯರಿಗೆ ಅವಕಾಶ ಇರಲಿಲ್ಲ. ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಮಾಡಿಕೊಂಡು ಅವರ ಉತ್ತರ 5ನೇ ತಾರೀಖು ಕೊಡಬೇಕು, ಎಲ್ಲಾ ಸದಸ್ಯರಿಗೂ ಅವಕಾಶ ಕೊಡಬೇಕೆಂದು ಇವತ್ತು ಎಲ್ಲಾ ಸದಸ್ಯರ ಪಟ್ಟಿ ಇಟ್ಟುಕೊಂಡಿದ್ದೇನೆ. ಪತ್ರಿಕೆಯಲ್ಲಿ ಬರುವುದಿಲ್ಲವೇನೋ ಎಂಬ ಕಾಳಜಿಯಿದ ಪತ್ರಿಕೆಯವರಿಗೆ ಹೇಳಿ ಇಟ್ಟುಕೊಂಡಿದ್ದೇನೆ. ನೀವು ಎರಡನೇ ಟರ್ಮ್‌ನವರು, ಸ್ವಲ್ಪ ಬೇಗ ಮುಗಿಸಿದರೆ ಮೊದಲ ಸಲ ಬಂದವರಿಗೆ ಅವಕಾಶ ಕೊಡೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ಉದ್ಯೋಗ ಎಂಬ ಸಂಸ್ಥೆ ಅವರ ಮುಖಂಡತ್ವದಲ್ಲಿ ನಡೆಯುತ್ತಿದೆ. ಅದು ಕರ್ನಾಟಕದ್ದಲ್ಲ, ಅದರ ವ್ಯವಸ್ಥೆಯೆಲ್ಲಾ ಬೇರೆಯದು. ನೀವು ವಿಶಾಲ ಮನೋವೃತ್ತಿ ಇಟ್ಟುಕೊಳ್ಳದೇಹೋದರೆ ಆಗುವುದಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ವಿರೋಧಿಸುವುದು ಅಷ್ಟು ಸೂಕ್ತವಲ್ಲ, ಒಂದು ಕಡೆ ಬಹುರಾಷ್ಟ್ರೀಯ ಕಂಪನಿಗಳಿಗೆ ಸಪೋರ್ಟ ಕೊಡುವುದು, ಇನ್ನೊಂದು ಕಡೆ ಅವು ಬೇಡ ಎಂದು ಹೇಳುವುದು ಸರಿಯಲ್ಲವೆಂದು ಹೇಳಿದೆ ಅಷ್ಟೆ. ಇವತ್ತು ಪಾನನಿಷೇಧವನ್ನು ಹಂತಹಂತವಾಗಿ ತರುತ್ತೇವೆನ್ನುತ್ತೀರಿ. ಜೆ.ಹೆಚ್. ಪಟೇಲರು ಇದಕ್ಕೆಲ್ಲಾ ನಮಗೆ ಸಪ್ಪೋರ್ಟ ಕೊಡುತ್ತಾರೆಂದು ನಾವು ಅಂದುಕೊಂಡಿದ್ದೇವೆ. ನೀವೂ ಸುಮ್ಮನಾಗಿಬಿಟ್ಟರೆ ನಮಗೆ ಬಹಳ ಕಷ್ಟವಾಗುತ್ತದೆ. ಮೊದಲಿಗೆ ಶರಾಬು, ಆಮೇಲೆ ಐಎಂಎಫ್ ನಿಷೇಧಿಸಬೇಕೆಂದು ಇಟ್ಟುಕೊಂಡಿದ್ದೀರಿ.

ಶ್ರೀ ಜೆ.ಹೆಚ್. ಪಟೇಲ್ : ನಮಗೆಷ್ಟು ಆದಾಯದ ಕೊರತೆಯಾಗುತ್ತದೆ ಪಾನನಿಷೇಧ ತರುವುದರಿಂದ, ಪಾನ ನಿಷೇಧ ತರದೇ ಇದ್ದರೆ ಸಮಾಜದಲ್ಲಿ ಯಾವರೀತಿಯಿಂದ ಹಳ್ಳಿಗಾಡಿನಲ್ಲಿರುವ ಬಡವರು ಅವರ ಆರೋಗ್ಯ ಎಷ್ಟು ಕೆಡುತ್ತದೆ ಇದನ್ನೆಲ್ಲಾ ಲೆಕ್ಕಹಾಕಿ, ಹಂತಹಂತವಾಗಿ ತರುತ್ತೇವೆಂದು ಹೇಳಿದ್ದೇವೆ. ಸರಾಯಿಯನ್ನು ನಿಷೇಧಿಸುವುದರಿಂದ ಹಳ್ಳಿಗಾಡಿನಲ್ಲಿ ಬಹಳ ಮಟ್ಟಿಗೆ ಜನರ ಆರೋಗ್ಯ ಸುಧಾರಿಸುತ್ತದೆ. ಇದರಿಂದ ಎಷ್ಟು ಕೋಟಿ ಬರುತ್ತದೆಯೋ ಅಷ್ಟು ಕೋಟಿಯನ್ನು ಆರೋಗ್ಯ ಸುಧಾರಣೆಗಳು ಖರ್ಚುಮಾಡಿದರೂ ತಪ್ಪಲ್ಲ. ಆ ದೃಷ್ಟಿಯಿಂದ 6 ಗಂಟೆ ಆದಮೇಲೆ ಹಳ್ಳಿಗಳಿಗೆ ಹೋಗುವುದೇ ಕಷ್ಟವಾಗಿದೆ.

1.30 ಪಿ.ಎಂ

ನನ್ನ ಅನುಭವದ ಮೇಲೆ ಹೇಳುತ್ತಿದ್ದೇನೆ. ಐಡಿಯಾ ಅಲ್ಲ ನಾನು ಹೇಳುತ್ತಿರುವುದು. ಆದರೆ ಹಂತ ಹಂತವಾಗಿ ನಿಷೇಧವನ್ನು ತರುವುದರಿಂದ ಆರೋಗ್ಯ ಸುಧಾರಣೆಯಾಗುತ್ತದೆ ಆದರೆ ಬೇರೆ ವಲಯದಿಂದ ಆ ಆದಾಯವನ್ನು ಹೇಗೆ ಭರಿಸಬೇಕೆಂಬುದನ್ನು ನಮ್ಮ ಸರಕಾರ ಯೋಚನೆ ಮಾಡುತ್ತಿದೆ. ಸಧ್ಯಕ್ಕೆ ನಿಮಗೇನೂ ತೊಂದರೆಯಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಆರೋಗ್ಯದ ಬಗ್ಗೆ ಭೇದ-ಭಾವ ಬೇಡ. ಹಳ್ಳಿ ಜನರ ಆರೋಗ್ಯ ಉತ್ತಮವಾಗಬೇಕು ಪಟ್ಟಣದವರನ್ನು ಆಮೇಲೆ ನೋಡೋಣವೆಂಬುದು ಬೇಡ. ಮಾಡುತ್ತೇವೆಂದು ಹೇಳುವುದಾದರೆ ಸಂಪೂರ್ಣ ಪಾನನಿಷೇಧ ತರತಕ್ಕಂತಹ ಪ್ರಾಮಾಣಿಕ ಪ್ರಯತ್ನ ಮಾಡಿ. ಆರೋಗ್ಯದ ಬಗ್ಗೆ ತಾವು ಹೇಳಿದಿರಿ. ನಮ್ಮ ಆರೋಗ್ಯ ಮತ್ತು ಮಾನ್ಯ ಶಿವರಾಮೇಗೌಡರ ಆರೋಗ್ಯ ನೋಡಿದಾಗ ನಿಮ್ಮ ಆರೋಗ್ಯ ಸ್ವಲ್ಪ ಕೆಟ್ಟ ಹಾಗೆ ಕಾಣುತ್ತದೆ. ಆದ್ದರಿಂದ ಆ ವಿಚಾರಕ್ಕೆ ಹೋಗುವುದು ಬೇಡ.

ಶ್ರೀ ಕೆ.ಎನ್. ನಾಗೇಗೌಡ : ಬಹಳ ಪ್ರಾಮುಖ್ಯವಾದ ವಿಚಾರವನ್ನು ಇಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದೇ ಒಂದು ಮನವಿ. ಆಂಧ್ರದಲ್ಲಿ ಚಂದ್ರಬಾಬು ನಾಯ್ಡು ಜೊತೆ ತಾವು ಇದ್ದಿರಿ , ನಾವು ಇದ್ದೆವು ಎರಡು ಮೂರು ಸಲ ಮಾತನಾಡಿದಾಗ ಅವರು ಹೇಳಿದಂತಹ ವಿಚಾರ ಮತ್ತು ತಾವು ಹೇಳಿದಂತಹ ವಿಚಾರ ಒಂದೇ ಆಗಿತ್ತು. ಅವರೇನು ಹೇಳಿದರು ಅಂದರೆ ಎನ್.ಟಿ.ಆರ್ ಗೂ ನಿಮಗೂ ಡಿಫರೆನ್ಸ ಬಂದಮೇಲೆ are you going to change your view. ಎಂದು ನೀವು ಕೇಳಿದಾಗ ಅವರೊಂದು ಮಾತನ್ನು ಹೇಳಿದರು. ಹೆಲ್ತ ಇಂಪ್ರೂವಮೆಂಟ್ ಹಳ್ಳಿಕಡೆ ಆಗಿದೆ. ಅದೊಂದೇ ಪ್ಲಸ್ ಪಾಯಿಂಟ್ ನಮಗೆ ಇರತಕ್ಕಂಥಾದ್ದು ಎಂದು ಹೇಳಿದರು. ನಾನು ಮತ್ತು ರಘುಪತಿ ಹಾಗೂ ಸ್ಪೀಕರ್ ಸಾಹೇಬರು 2-3 ತಿಂಗಳ ಕಾಲ ಅಲ್ಲಿ ಪ್ರವಾಸ ಮಾಡಿದ್ದೆವು. ಅಲ್ಲಿ ನೋಡಿದಾಗ ಸಾಮಾನ್ಯವಾಗಿ ಜನಗಳಲ್ಲಿ ಒಳ್ಳೆಯ ಅಭಿಪ್ರಾಯ ಇಲ್ಲ.

ಅಧ್ಯಕ್ಷರು : ಯಾವಾಗ......

ಶ್ರೀ ಕೆ.ಎನ್. ನಾಗೇಗೌಡ : ಎನ್. ಟಿ. ಆರ್ ತೀರಿ ಹೋದಾಗ ನೋಡುವುದಕ್ಕೆ

ಬಂದಿದ್ದರೆಂದೇ ಇಟ್ಟುಕೊಳ್ಳುತ್ತೇನೆ ನಾನು. ನಮ್ಮ ಕೈಗಾರಿಕೆಗಳ ಆಕ್ಟಿವಿಟೀಸ್ ಡೆಡ್ ಆಗಿದೆ. ನಮ್ಮ ಲೈಫಡೆಡ್ ಆಗಿದೆ ಬೇರೆಯವರ್ಯಾರು ಇಲ್ಲಿಗೆ ಬರುವುದಿಲ್ಲ. ಕಳ್ಳಭಟ್ಟಿಗಳು ಪ್ರಾರಂಭವಾಗಿವೆ ಎಂದು ಹೇಳುತ್ತಾರೆ. ಎರಡು ಪ್ಲಸ್ ಪಾಯಿಂಟ್ ಇದೆ. ಕ್ರಿಮಿನಲ್ ಆಕ್ಟಿವಿಟೀಸ್ ಕಡಿಮೆಯಾಗಿದೆ. ಜನರ ಆರೋಗ್ಯ ಇಂಪ್ರೂವ್ ಆಗಿದೆ. ಈ ಎರಡು ಪ್ಲಸ್ ಪಾಯಿಂಟ್ ಇದೆ. ಡೆವಲಪಮೆಂಟ್ ಆಕ್ಟಿವಿಟೀಸ್ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ 9 ಸಾವಿರ ಕೋಟಿ ಇಲ್ಲಿ ಆದಾಯ ಬರುತ್ತದೆ. 47 ಪರ್ಸೆಂಟ್ ಅನ್ನು ನಾವು ಸಂಬಳಕ್ಕೆ ಕೊಡುತ್ತೇವೆ. ಇನ್ನು ಉಳಿಯುವುದು 4 ಸಾವಿರ ಕೋಟಿ ಇದರಲ್ಲಿ 900 ಕೋಟಿ ಎಕ್ಸೈಸ್ 300 ಕೋಟಿ ಸೇಲ್ಸ್ ಟ್ಯಾಕ್ಸ್ 1200 ಕೋಟಿ ಇಲ್ಲಿ ಹೊರಟು ಹೋದರೆ How much you can spend on this ಎನ್ನುವುದನ್ನು ಇವತ್ತಿನ ಪತ್ರಿಕೆಯ ಡೆಕ್ಕನ್ ಹೆರಾಲ್ಡ, ಪ್ರಜಾವಾಣಿಯಲ್ಲಿ ಎಡಿಟೋರಿಯಲ್‌ನಲ್ಲಿ ನೋಡಿ. ನಮ್ಮ ಮುಖ್ಯಮಂತ್ರಿಗಳು ಜೂನ್ 1 ರಿಂದ ಪಾನನಿಷೇಧವನ್ನು ತರುತ್ತೇವೆಂಬ ಹೇಳಿಕೆ ಮೇಲೆ ಒಂದು ಎಡಿಟೋರಿಯಲ್ ಬರೆದಿದ್ದಾರೆ. ಸರಕಾರ ಬಹಳ ಕಾಷಿಯಸ್ ಆಗಿ ಇರಬೇಕು ಎಂದು ತಿಳಿಸಿದ್ದಾರೆ. ನಾನು ಭಾಷಣ ಮಾಡುವಾಗಲೇ ಹೇಳಿದೆ. 5 ಲಕ್ಷ ಜನ ನಿರುದ್ಯೋಗ ಆಗುವುದನ್ನು ಒಂದು ಕಡೆ ಇಟ್ಟುಕೊಳ್ಳೋಣ. ಪಾಲಿಸಿ ತರುವಾಗ ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಪ್ರಕಾಶರವರೂ ಇದ್ದಾರೆ. You are a very seasoned senior leader ಇದರ ಕಡೆಗೆ ವಿಶೇಷವಾಗಿ ಗಮನಹರಿಸಿ. ಮಾನ್ಯ ಮುಖ್ಯಮಂತ್ರಿಗಳು ನೀವು ಕುಳಿತು ಬಹಳ ವಿಶೇಷವಾಗಿ ಇದನ್ನು ಯೋಚನೆ ಮಾಡಬೇಕು ಬಹಳ ಕಾಷಯಸ್ ಆಗಿ ಡೀಲ್ ಮಾಡಬೇಕು. ಫೈನಾನಷಿಯಲ್ ಆಸ್ಪೆಕ್ಟ ಒಂದೇ ಅಲ್ಲ. ಎಂಟೈರ್ ಸ್ಟೇಟ್ ಎಕ್ಸಚೆಕರ್ ಒಂದೇ ಅಲ್ಲ ಸ್ಟೇಟ್ ಆಕ್ಟಿವಿಟೀಸ್ ಎಷ್ಟು ಡೆಡ್ ಆಗುತ್ತದೆಂಬುದರ ಬಗ್ಗೆ ತುಂಬಾ ಸೀರಿಯಸ್ ಆಗಿ ಯೋಚನೆ ಮಾಡಬೇಕೆಂಬುದನ್ನು ನಾನು ಪರ್ಸನಲ್ಲಾಗಿ ಸರಕಾರವನ್ನು ಅಪೀಲ್ ಮಾಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಪಾನ ನಿಷೇಧದ ಬಗ್ಗೆ ಹಿಂದಿನ ಸದನದಲ್ಲಿ ಕೆ.ಹೆಚ್. ಶ್ರೀನಿವಾಸ್ ಅವರು ಒಂದು ಖಾಸಗಿ ನಿರ್ಣಯ ತಂದರು. ಆಗ ಸಾಕಷ್ಟು ಎತ್ತರದ ಮಟ್ಟದಲ್ಲಿ ಚರ್ಚೆಯಾಯಿತು. ಚರ್ಚೆಯಾದ ಮೇಲೆ ಆಗ ಸದನದಲ್ಲಿ ಇದಕ್ಕೊಂದು ಸಮಿತಿ ಮಾಡಬೇಕು. ಏಕೆಂದರೆ ಪಾನನಿಷೇಧ ಪೂರ್ಣ ಪರವಾಗಿ ವಾದ ಮಾಡುವುದು ಕಷ್ಟವಾಗುತ್ತದೆ. ಪಾನನಿಷೇಧವನ್ನು ಕರಾರು ವಾಕ್ಕಾಗಿ ಜಾರಿಗೆ ಕೊಟ್ಟಿರತಕ್ಕಂತಹ ಸರಕಾರ ಈ ಜಗತ್ತಿನಲ್ಲಿ ಎಲ್ಲೂ ಇಲ್ಲ. ಈ ವಿಷಯದ ಬಗ್ಗೆ ವೈಜ್ಞಾನಿಕವಾಗಿ ಮಾನ್ಯ ನಾಗೇಗೌಡರು ಹೇಳಿದ ಹಾಗೆ ಆರ್ಥಿಕ ಚಿಂತನೆ ಸಮಾಜದ ಆರೋಗ್ಯ, ಮತ್ತು ಈಗಿರತಕ್ಕಂತಹ ಬಡ ಕುಟುಂಬಗಳ ಮೇಲೆ ಆಗುತ್ತಿರತಕ್ಕಂತಹ ಅನಾಹುತ ಇವನ್ನೆಲ್ಲಾ ಒಟ್ಟಿಗೆ ಸೇರಿಸಿ ಅವರ ರೆಸಲ್ಯೂಷನ್ ಮೇಲೆ ಚರ್ಚೆ ಮಾಡೋಣ. ನಾನೂ ಈ ಚರ್ಚೆಯಲ್ಲಿ ಭಾಗವಹಿಸುತ್ತೇನೆ. Alcoholism and smoking is being reduced voluntarily ಇಲ್ಲೇ ಇಂಟರ್ ನ್ಯಾಷನಲ್ ಎರ್ ಪೋರ್ಟಿಂಗ್ ಹೋಗಿ. ಅಲ್ಲಿ ಸ್ಮೋಕಿಂಗ್ ಅಂಡ್ ನಾನ್ ಸ್ಮೋಕಿಂಗ್ ಜೋನ್ ಎಂದು ಮಾಡೇ ಮಾಡಿರುತ್ತಾರೆ. ಈಗ ತಾನಾಗಿ ಸ್ಮೋಕಿಂಗ್ ಕಡಿಮೆ ಮಾಡಿದ್ದಾರೆ. ಇವತ್ತು ಹೆಲ್ತ ಕಾನ್‌ಷಿಯಸ್‌ನೆಸ್ ಪ್ರಪಂಚದ ಎಲ್ಲಾ ಕಡೆ ಬರುತ್ತಿದೆ. ಆರೋಗ್ಯ ಉಳಿಸಬೇಕೆಂದು

ಆ ರೀತಿಯಾಗುತ್ತಿದೆ. ಆಲ್ಕೋ ಹಾಲ್ ಬಗ್ಗೆ it should be more educative. ಸರಕಾರ ಕಾನೂನು ಮಾಡಿ ತಡೆಗಟ್ಟಿದರೆ ಅದು ಕಳ್ಳಬಟ್ಟಿಯಾಗುತ್ತದೆ. ಮತ್ತೊಂದು ಕ್ರೈಮ್ಸ್ ಆಗುತ್ತದೆ. ಆದರಿಂದ ಪ್ರಯೋಜನವಾಗುವುದಿಲ್ಲ. ಜನರನ್ನು ಎಜುಕೇಟ್ ಮಾಡಬೇಕು. ಸರಕಾರದ ಆದಾಯದ ಕಡೆಗೆ ಗಮನ ಇಡಬೇಕು. ಅದನ್ನು ಒಪ್ಪುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅದರ ಬಗ್ಗೆ ಗಮನ ಹರಿಸುತ್ತೇವೆಂದು ಹೇಳಿದ್ದೀರಿ ಸ್ವಾಗತಾರ್ಹ ತಾವು ಆ ರೀತಿ ತೀರ್ಮಾನ ಮಾಡಿ. ಕೆ.ಎಸ್.ಆರ್. ಟಿ.ಸಿ. ಬಗ್ಗೆ ಒಂದೆರಡು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಎಲ್ಲರಿಗೂ ಇದು ತೊಂದರೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳಂತೂ ಬಹಳ ಪ್ರಾಮಾಣಿಕರು. ಆದರೆ ನಿಮ್ಮ ಕೈಯಲ್ಲಿ ಆ ಇಲಾಖೆಯನ್ನು ಹ್ಯಾಂಡಲ್ ಮಾಡುವುದಕ್ಕಾಗುತ್ತದೆಯೋ ಇಲ್ಲವೋ ಎಂದು ನಮಗೆ ಬಂದಿರತಕ್ಕಂತಹ ಯೋಚನೆ. ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ಒಳ್ಳೆಯವರಿದ್ದೀರಿ. ಏನು ಹೇಳಿದರೂ ಕಾಗದದ ಮೇಲೆ ಬರೆಯುತ್ತೀರಿ ಆದರೆ ಆ ಇಲಾಖೆ ನಿಮ್ಮ ಹಿಡಿತಕ್ಕೆ ಸಿಕ್ಕಿದೆಯೇ ಇಲ್ಲವೇ ಎಂಬುದು ನಮ್ಮ ಯೋಚನೆ. ಪ್ರತಿ ತಾಲ್ಲೂಕಿಗೆ 4-4 ಬಸ್ ಕೊಡುತ್ತೇವೆಂದು ಹೇಳಿದ್ದಿರಿ.

ಶ್ರೀ ಆರ್. ಕೃಷ್ಣಪ್ಪ (ಬನ್ನೂರು) : ಇವತ್ತು ಇಲ್ಲಿ ಚರ್ಚೆ ಮಾಡುತ್ತಿರತಕ್ಕಂತಹ ವಿಷಯ ಬಹಳ ಒಳ್ಳೆಯ ವಿಷಯ. ಬರೀ ಸರಕಾರ ಹಣ ಬೇಕು ಹಣ ಬೇಕು ಎಂದು ಜನರಿಗೆಲ್ಲಾ ವಿಷ ಕುಡಿಸಿ ಕೊಟ್ಟಾಗ ಅದರಿಂದಾಗತಕ್ಕಂತಹ ದುಷ್ಪರಿಣಾಮದ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಹಳ್ಳಿಗಾಡಿನಲ್ಲಿದ್ದೇವೆ 5 ಗಂಟೆಯಾದ ಮೇಲೆ ಶಾಸಕರೇ ಆಗಲೀ ಯಾರೇ ಆಗಲೀ ಗೌರವಸ್ಥರು ಹೊರಗೆ ಬರಲಾಗುವುದಿಲ್ಲ. ಹಿಂದೆ ನಮ್ಮ ಹಳ್ಳಿಗಳಲ್ಲಿ ವೀರಶೈವರ ಕಾಫಿ ಕ್ಲಬ್, ಉಡುಪಿ ಬ್ರಾಹ್ಮಣರ ಕಾಫಿ ಕ್ಲಬ್ ಎಂಬ ಈ ರೀತಿಯ ಬೋರ್ಡುಗಳನ್ನು ನೋಡುತ್ತಿದ್ದೆವು. ಈಗ ಸರಕಾರವೇನಾದರೂ ಮನಸ್ಸು ಕೊಟ್ಟು ಲೈಸನ್ಸ ಕೊಡುವುದೇ ಆದರೆ ಎಲ್ಲಿ ಹೋದರೂ ಬರೀ ರಾಜಕುಮಾರ್ ಬಾರ್, ದೇವರ ಹೆಸರುಗಳಲ್ಲಿ ವೆಂಕಟೇಶ್ವರ ವೈನ್ ಷಾಪ್ ಎನ್ನುವ ಹೆಸರಿನಲ್ಲಿ ಪ್ರತಿಯೊಂದು ಕಡೆ ಬಾರುಗಳೇ ಜಾಸ್ತಿಯಾಗುತ್ತದೆ. ಇದರ ಮೇಲೆ ಇದರಿಂದಾಗಿ ಪ್ರತಿಯೊಂದು ಸಂಸಾರದ ಮೇಲೂ ಪರಿಣಾಮವಾಗುತ್ತದೆ. ನಾವು ಮಲಗಿಕೊಂಡರೆ ಪಕ್ಕದ ಮನೆಯಲ್ಲಿ ಜಗಳವಾಡುತ್ತಿರುತ್ತಾರೆ. 6 ಗಂಟೆಯಾದ ಮೇಲೆ ಪ್ರತಿಯೊಂದು ಮನೆಯಲ್ಲೂ ಜಗಳವೇ. ಅವನು ಬಡವನಾಗಲೀ ಬಲ್ಲಿದನಾಗಲೀ ಅನುಕೂಲಸ್ಥರ ಮನೆಯಲ್ಲಿ ಕೂಡ ನೆಮ್ಮದಿ ಇಲ್ಲ. ಯಾರು ಅನುಕೂಲಸ್ಥರಿರುತ್ತಾರೆ ಅವರ ಮನೆಯ ಹೆಂಗಸರುಗಳು ನೆಮ್ಮದಿಯಾಗಿಲ್ಲ. ಇದರಿಂದ ಸರಕಾರಕ್ಕೆ ಹಣವೇ ಬೇಕೆಂದರೆ ಒಂದು ಕೆಲಸ ಮಾಡೋಣ. ಪ್ರತಿಯೊಂದರಲ್ಲೂ ನ್ಯೂನತೆ ಇದ್ದೇ ಇದೆ. ಸರಕಾರಕ್ಕೆ ಹಣ ಬೇಕು ಹಾಗಾದರೆ ಕಳ್ಳಕಾರನ್ನು, ಕಾನೂನನ್ನು ಸ್ವಲ್ಪ ದಿವಸ ನಾವು ಪೋಲೀಸಿನವರಿಗೆ ಸಪೋರ್ಟ ಕೊಡುವುದಿಲ್ಲ ಅಂದರೆ ಒಂದೇ ದಿವಸ 5ಸಾವಿರ ಕೋಟಿ ಸರಕಾರಕ್ಕೆ ಬರುತ್ತದೆ. ಲೋಪದೋಷವಾಗುತ್ತದೆ. ಮ್ಯಾಜಿಸ್ಟ್ರೇಟರು ಕಳ್ಳನನ್ನು ಬಿಡುತ್ತಾರೆಂದರೆ ಕಾನೂನನ್ನೇ ವಜಾ ಮಾಡುವುದೇ? ಎಲ್ಲೆಲ್ಲಿ ಕಳ್ಳಭಟ್ಟಿ ಇಳಿಸುತ್ತಾರೆ ಅದನ್ನು ಸರಕಾರಕ್ಕೆ ಕಂಟ್ರೋಲ್ ಮಾಡುವುದಕ್ಕೆ

ಆಗುತ್ತಿಲ್ಲವೆಂದು ಹೇಳುತ್ತಾರೆ. ಆದರೆ ಅದಕ್ಕೆ ಸಪೋರ್ಟ್ ಪಡುವವರು ಯಾರು? ಎಲ್ಲಿಯಾದರೂ ಇದ್ದರೆ ಶಾಸಕರಾಗಿರತಕ್ಕಂತಹ ಜನ ನಾವು ಸಪೋರ್ಟ ಸರಕಾರಕ್ಕೆ ಕೊಡಬೇಕಾಗುತ್ತದೆ. ಎಲ್ಲೆಲ್ಲಿ ಈ ರೀತಿಯಾಗುತ್ತದೆ ಇದನ್ನು ನಿಲ್ಲಿಸುವುದಕ್ಕೆ ನಾವೆಲ್ಲಾ ಸಪೋರ್ಟ್ ಕೊಡುವುದೇ ಆದರೆ ಅದನ್ನು ಹಿಡಿಯಬಹುದು. ಈಗ ಹಣ ಇಷ್ಟೊಂದು ಬರುತ್ತದೆ ಬಂದಂತಹ ಹಣ ಎಲ್ಲೆಲ್ಲಿ ಲೋಪವಾಗುತ್ತಿದೆ. ಸಾವಿರಾರು ಕೋಟಿ ಉತ್ಪತ್ತಿ ಯಾಗುತ್ತಿದೆ. ಯಾವುದೇ ಹಣ ಲೋಪವಾಗದ ಹಾಗೆ ತಡೆಯುವ ವ್ಯವಸ್ಥೆ ಈ ರಾಜ್ಯದಲ್ಲಿಆಗುವುದಾದರೆ ಎಲ್ಲೋ ಹಣ ಬರುತ್ತದೆ ಅದು ದುರುಪಯೋಗವಾಗದ ಹಾಗೆ ತಡೆದರೆ ಸಾಕು. ರಾಜ್ಯ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತದೆ. ಸರಕಾರ ಪಾನನಿಷೇಧವನ್ನು ಈ ರಾಜ್ಯದಲ್ಲಿ ತರಬೇಕೆಂದು ಏನು ಇದೆ ಅದನ್ನು ತಂದರೆ ಈ ರಾಜ್ಯ ಸುಭೀಕ್ಷವಾಗುತ್ತದೆ. ಬರತಕ್ಕಂತಹ ಹಣ ಮುಖ್ಯವಲ್ಲ. ರಾಜ್ಯದ ಜನರ ಆರೋಗ್ಯದ ಬಗ್ಗೆ ರಾಜ್ಯದ ಶಾಂತಿ ಬಗ್ಗೆ ಆಡಳಿತದ ಬಗ್ಗೆ ಯೋಚನೆ ಮಾಡಬೇಕು.

ಅಧ್ಯಕ್ಷರು : ಪಾರ್ಟಿ ಮೀಟಿಂಗನಲ್ಲಿ ಸೇರಿ ಒಂದು ಒಮ್ಮತದ ತೀರ್ಮಾನಕ್ಕೆ ಬನ್ನಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ಕೊನೆಯದಾಗಿ ಕೆ.ಎಸ್.ಆರ್.ಟಿ.ಸಿ. ಬಗ್ಗೆ...

ಅಧ್ಯಕ್ಷರು : ಹೇಳಿದಿರಲ್ಲಾ ಮಾನ್ಯ ಬೀಳಗಿಯವರು ಬಹಳ ಒಳ್ಳೆಯವರು. ಚೆನ್ನಾಗಿದ್ದಾರೆಂದು ಹೇಳಿದಿರಿ, ಬೇಗ ಮುಗಿಸಿ. ಆ ಗಡಿಯಾರ ತೆಗೆಸಿ ಬಿಡಿ ನಾನು ಆ ಕಡೆ ನೋಡುವುದೇ ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ಎರಡೇ ನಿಮಿಷದಲ್ಲಿ ನಾನು ಮುಗಿಸುತ್ತೇನೆ. ಕೆ.ಎಸ್.ಆರ್.ಟಿ.ಸಿಯ ವ್ಯವಸ್ಥೆ ಬಹಳ ಅಸ್ತವ್ಯಸ್ತವಾಗಿದೆ. ಗ್ರಾಮಾಂತರ ಜನ ಬಹಳ ಬುದ್ಧಿವಂತರಾಗಿದ್ದಾರೆ. ಮಾನ್ಯ ಶಿವಪ್ಪನವರು ಬಹಳ ಚೆನ್ನಾಗಿ ವರ್ಣನೆ ಮಾಡಿದರು. ಇವತ್ತು ಬಸಗಳಲ್ಲಿ ಒಂದು ಸೀಟು ಹೆಚ್ಚಿಗೆ ಹಾಕಿದರೆ ಮಾಲೀಕರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಿದ್ದುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಕಾಲುಗಳನ್ನು ಕೆಳಗೆ ಬಿಟ್ಟುಕೊಂಡು ಒಳಗೆ ಎಷ್ಟು ಜನ ಇರುತ್ತಾರೆ ಅಷ್ಟೇ ಜನ ಮೇಲೂ ಕುಳಿತುಕೊಂಡು ಹೋಗುವಂತಹ ಪರಿಸ್ಥಿತಿ ಇದೆ. ಇದಕ್ಕೇನು ಕ್ರಮ ನೀವು ತೆಗೆದುಕೊಂಡಿದ್ದೀರಿ? ಹೆದ್ದಾರಿಗಳಲ್ಲಿ ಬಸನ ತೊಂದರೆ ಇಲ್ಲ. ಹೆದ್ದಾರಿಗಳಿಗೆ ಬಸ್ ಹಾಕುವುದು ಮುಖ್ಯವಲ್ಲ. ಗ್ರಾಮಾಂತರ ಪ್ರದೇಶದ ರೈತನ ಮಕ್ಕಳು ತಿರುಗಾಡಲಿಕ್ಕೆ ಬಸಗಳನ್ನು ಹಾಕಬೇಕು. ಬೆಂಗಳೂರು ನಗರದಲ್ಲಿ ಕೊಟ್ಟಿರತಕ್ಕಂತಹ ಸವಲತ್ತು ಏನು ಇದೆ ಅದರ ಕಾಲು ಭಾಗ ಸವಲತ್ತನ್ನು ಗ್ರಾಮಾಂತರ ಪ್ರದೇಶಕ್ಕೆ ಕೊಟ್ಟಿಲ್ಲ. ಬೆಂಗಳೂರು ನಗರದಲ್ಲಿ 75-80 ಅಥವಾ ಒಂದು ಕೋಟಿ ಜನಸಂಖ್ಯೆ ಆದರೆ, ಆ ಒಂದು ಕೋಟಿಗೆ ಎಷ್ಟು ಕೊಟ್ಟಿದ್ದೀರೋ ಉಳಿದ 4 ಕೋಟಿ ಜನರಿಗೆ ನೀವು ಅಷ್ಟು ಬಸ್ ಅನ್ನು ಕೊಟ್ಟಿಲ್ಲ. 4-4 ಏಪನ್ ಡೋರ್ ಬಸ್ ಕೊಡುತ್ತೇವೆಂದು ನೀವು ಅಧಿಕಾರಕ್ಕೆ ಬಂದಾಗ ಹೇಳಿದ್ದಿರಿ. ಎರಡೆರಡು ಕೊಡಿ. ಡಬ್ಬಲ್ ಡೋರ್ ಇರತಕ್ಕಂತಹ ಎರಡೆರಡು ಬಸಗಳನ್ನು ಕೊಡಿ. ಇನ್ನು ಬಸ್ ನಿಲ್ದಾಣಗಳು ಏನಾಗಿವೆ ಬಂದರೆ, ಅಲ್ಲಿಗೆ ಹೋಗಿ ಯಾರೂ ತಿರುಗಾಡುವುದಕ್ಕಾಗುವುದಿಲ್ಲ ಅಂತಹ ಮಟ್ಟಕ್ಕೆ ಇವೆ. ನಾಗಮಂಗಲದಲ್ಲಿ ಬಸ್‌ಸ್ಟಾಪ್ ಸ್ಥಾಪನೆ ಮಾಡಿದ್ದಾರೆ.

ಅಧ್ಯಕ್ಷರು : ನೀವು ಅಸೋಸಿಯೇಟ್ ಮೆಂಬರ್, ಇವನ್ನೆಲ್ಲಾ ಪಾರ್ಟಿ ಸಭೆಗಳಲ್ಲಿ ಹೇಳಬಹುದು ಅಲ್ಲಿ ಹೇಳಿ. ಬೇರೆ ಸದಸ್ಯರಿಗೆ ಅವಕಾಶ ಕೊಡಿ. 1-40 ಆಯಿತು.

ಶ್ರೀ ಎಲ್. ಆರ್. ಶಿವರಾಮೇಗೌಡ : ಆ ರಸ್ತೆಯಲ್ಲಿ ಟಾರ್ ಹಾಕಿಲ್ಲ. 5 ವರ್ಷವಾಯಿತು. ಕ್ರಮ ತೆಗೆದುಕೊಳ್ಳಬೇಕು. ಎಲ್ಲಾ ಜಿಲ್ಲೆಗಳನ್ನು ರಾಷ್ಟ್ರೀಕರಣ ಮಾಡಬೇಕು. ರಾಷ್ಟ್ರೀಕರಣ ಮಾಡದೇ ಹೋದರೆ ಈ ಅನಾಹುತ ತಪ್ಪುವುದಿಲ್ಲ. ಪ್ರಪ್ರಥಮವಾಗಿ ನಾವೆಲ್ಲಾ ಶಾಸಕರು ಸೇರಿಕೊಂಡು ಒಮ್ಮತದ ತೀರ್ಮಾನ ಕೊಡುತ್ತೇವೆ. ಮಂಡ್ಯ ಜಿಲ್ಲೆಯನ್ನು ನೀವು ರಾಷ್ಟ್ರೀಕರಣ ಮಾಡಿ ಇಲ್ಲವೇ ರಾಷ್ಟ್ರೀಕರಣ ಮಾಡುವುದಕ್ಕಾಗುವುದಿಲ್ಲವೆಂದರೆ ಖಾಸಗೀಕರಣ ಮಾಡಿ. ಯಾವುದೇ ಒಂದು ತೀರ್ಮಾನವನ್ನು ಸದನದಲ್ಲಿ ಹೇಳಬೇಕು. ಇದಕ್ಕೆ ಬೇಕಾದರೆ ನಮ್ಮ ಮಂಡ್ಯ ಜಿಲ್ಲೆಯ ಎಲ್ಲಾ ಶಾಸಕರು ಸಹಮತವನ್ನು ವ್ಯಕ್ತ ಮಾಡುತ್ತೇವೆ. ಇದನ್ನು ತೀರ್ಮಾನ ಮಾಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ಕಾಲಕಾಲಕ್ಕೆ ತಕ್ಕಂತೆ ಸಂದರ್ಭೋಚಿತವಾಗಿ ಕಳೆದ ಒಂದು ವರ್ಷ ಮೂರುತಿಂಗಳ ಕಾಲಾವಧಿಯಲ್ಲಿ ಆಡಳಿತ ಮಾಡಿರತಕ್ಕಂಥ ರಾಜ್ಯಸರ್ಕಾರಕ್ಕೆ ನಮ್ಮ ಪಕ್ಷ ಬೆಂಬಲ ಕೊಟ್ಟು ಬಂದಿದೆ. ರಾಜ್ಯಸರ್ಕಾರದ ಆಡಳಿತಕ್ಕೆ ಕನ್ನಡಿ ಹಿಡಿದು ನೋಡಿದರೆ ಸರ್ಕಾರದ ಕೆಲಸಕಾರ್ಯಗಳಲ್ಲಿ ಅಷ್ಟೇನೂ ಪ್ರಗತಿ ಇಲ್ಲ ಎನ್ನುವುದು ನಮ್ಮ ಪಕ್ಷದ ಒಂದು ಅನಿಸಿಕೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. 1994 ರ ಡಿಸೆಂಬರ್ ತಿಂಗಳ 20 ರಲ್ಲಿ ನಾವು ಪ್ರತಿಜ್ಞಾ ಸ್ವೀಕಾರ ಮಾಡುವಾಗ ನಮ್ಮಲ್ಲಿ ಒಂದು ಹುಮ್ಮಸ್ಸು ಇತ್ತು. ಹೊಸ ಸರ್ಕಾರ ಒಂದು ಹೊಸ ನೀತಿಯನ್ನು ಪ್ರಕಟನೆ ಮಾಡುತ್ತದೆ ಎನ್ನುವಂಥ ನಮ್ಮ ಅಪೇಕ್ಷೆ ಕೇವಲ ಉಪೇಕ್ಷೆಯಾಗಿಯೇ ಉಳಿಯಿತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಪ್ರಥಮ ಅಧಿವೇಶನದಲ್ಲೇ ನಾನು ಹೇಳಿದ್ದೆ. ಹಿಂದಿನ ಸರ್ಕಾರದವರು ಮಾಡಿದ ತಪ್ಪುಗಳನ್ನು ದಯವಿಟ್ಟು ನೀವು ಮಾಡಬೇಡಿ. ನೀವು ಅದನ್ನು ಮುಂದುವರಿಸಬೇಡಿ ಎಂದು ನಾನೂ ಕೂಡ ಹೇಳಿದ್ದೆ. ಆದರೆ ಹಿಂದಿನ ಸರ್ಕಾರ ನಡೆದುಹೋದ ದಾರಿಯ ತಪ್ಪು ದಾರಿಗಳು ಏನಿವೆ, ಅದೇ ಹಾದಿಯಲ್ಲಿ ತಾವು ಹೋಗುವುದಿದ್ದರೆ ರಾಜ್ಯದ ಜನತೆ ನಿಮ್ಮಲ್ಲಿ ಬಯಸುವುದಾದರೂ ಏನು? ಒಂದು ಹೊಸ ನೀತಿ ಬೇಕು. ಹೊಸ ಸರ್ಕಾರದ ಹೊಸ ಧೋರಣೆ ಬೇಕು. ಈ ಧೋರಣೆಯನ್ನು ಜನರಿಗೆ ಮೂಡಿಸುವಲ್ಲಿ ವಿಫಲರಾಗಿದ್ದೀರಿ ಎಂದು ಹೇಳಬೇಕಾಗುತ್ತದೆ. ರಾಜ್ಯಪಾಲರು " ಪ್ರಪ್ರಥಮವಾಗಿ ಸರ್ಕಾರದ ಜನತಾದರ್ಶನ ಕಾರ್ಯಕ್ರಮದ ಬಗ್ಗೆ ಹೇಳಿದ್ದಾರೆ. ಅನೇಕ ಸದಸ್ಯರು ಈ ಬಗ್ಗೆ ಮಾತನಾಡಿದ್ದಾರೆ. ನಾನು ಹೆಚ್ಚು ಇದರ ಬಗ್ಗೆ ಮಾತನಾಡುವುದಿಲ್ಲ. ಆದರೆ ಈ ಜನತಾದರ್ಶನದಿಂದಾಗಿ ಎಷ್ಟು ಜನರಿಗೆ ಪ್ರಯೋಜನವಾಗಿದೆ, ಇವತ್ತು ಜನತಾದರ್ಶನದಲ್ಲಿ ಮುಖ್ಯಮಂತ್ರಿಗಳಿಂದಾಗಲಿ, ಉಳಿಯ ಯಾವುದೇ ಮಂತ್ರಿಗಳಿಂದ ಸ್ವೀಕಾರವಾದ ಅರ್ಜಿಗಳ ಪರಿಶೀಲನೆ, ಅದರ ಪರಿಹಾರ ಎಷ್ಟರವರೆಗೆ ಯಶಸ್ವಿಯಾಗಿದೆ ಎಂದು ನೋಡುವುದಿದ್ದರೆ ಪ್ರಾಯಶಃ ಶೇಕಡ 10 ಕೂಡ ಅದರಲ್ಲಿ ಪ್ರಯೋಜನವಾಗಿಲ್ಲ ಎನ್ನುವುದು ನಮ್ಮ ಅನುಭವದಲ್ಲಿ ಹೇಳುವಂಥ ಮಾತು. ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಈ ಅರ್ಜಿಗಳೆಲ್ಲಾ

ತಾಲ್ಲೂಕು ಕಛೇರಿಗಳಲ್ಲಿ ಬಿದ್ದು ಕೊಂಡಿವೆ. ಇದರ ಬಗ್ಗೆ ಸ್ಪಷ್ಟವಾದ ಪರಿಹಾರ ಸಿಕ್ಕಿಲ್ಲ ಎನ್ನುವುದನ್ನು ನಾನು ಹೇಳಬಯುಸುತ್ತೇನೆ.

ಇನ್ನು ತಮ್ಮ ಭಾಷಣದಲ್ಲಿ ಅವರು ಆರ್ಥಿಕ ಉದಾರೀಕರಣದ ಬಗ್ಗೆ ಮಾತನಾಡಿದ್ದಾರೆ. ಹೊಸ ರಾಷ್ಟ್ರೀಯ ನೀತಿಯ ಅನುಗುಣವಾಗಿ ಹೂಡಿಕೆದಾರರಿಗೆ ಅನುಕೂಲವಾದಂಥ ವಾತಾವರಣವನ್ನು ಕಲ್ಪಿಸುವಲ್ಲಿ ಹಾಗೂ ಅರ್ಥಿಕ ಅಭಿವೃದ್ಧಿ ಸುಧಾರಿತ ಮೂಲಭೂತ ಸೌಲಭ್ಯವನ್ನು ದೊರಕಿಸುವ ಹೆಸರಿನಲ್ಲಿ ಉದ್ಯೋಗವಕಾಶವನ್ನು ಕೊಡುವಂಥಹೆಸರಿನಲ್ಲಿ, ಉದ್ಯೋಗದಲ್ಲಿ ಇರತಕ್ಕಂಥ ಜನರನ್ನು ನಿರುದ್ಯೋಗ ಮಾಡುವಂಥ ಕೆಲಸಕ್ಕೆ ನೀವು ಹೊರಟಿದ್ದೀರಿ ಎಂದರೆ ಖಂಡಿತಾ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ ಎಂದು ಹೇಳುವಂಥ ಮಾತನ್ನು ನಾನು ಹೇಳುತ್ತೇನೆ. ಒಂದು ಕಡೆಯಿಂದ ನೀವು ಕೃಷಿ ನೀತಿಯನ್ನು ತಂದಿದ್ದೀರಿ. ಕೃಷಿಕರಿಗೆ ಕೃಷಿ ಉತ್ಪನ್ನ ಮಾಡುವಲ್ಲಿ ಹೆಚ್ಚಿನ ಸೌಲಭ್ಯ ಕೊಡಬೇಕು ಎನ್ನುವ ಮಾತನ್ನೂ ಆಡುತ್ತೀರಿ. ಮತ್ತೊಂದು ಕಡೆಯಿಂದ ಸನ್ಮಾನ್ಯ ಕಂದಾಯ ಸಚಿವರು ಹೇಳುತ್ತಾರೆ, ನಮ್ಮ ರೈತರಿಗೆ ಅವನ ಭೂಮಿಗೆ ಎಕರೆಗೆ ಎರಡು ಸಾವಿರ ರೂಪಾಯಿ ಸಿಗುವಲ್ಲಿ ಎರಡು ಲಕ್ಷ ರೂಪಾಯಿ ಸಿಗುತ್ತದೆ ಎಂದು. ಅಂದರೆ ರೈತ ತನ್ನ ಫಲವತ್ತಾದ ಭೂಮಿಯನ್ನು ಈ ಹೂಡಿಕೆದಾರರಿಗೆ ಕೊಟ್ಟು ಮಾರಾಟ ಮಾಡಿ ಆ ಹಣವನ್ನು ಎಲ್ಲಿ ಹೂಡಬೇಕು ಎಂದು ನಾನು ಕೇಳುತ್ತಿದ್ದೇನೆ. ರೈತರು ಪಂಚೆ ಉಡುತ್ತಾರೆ, ಅವರು ಅದನ್ನೇ ಉಟ್ಟುಕೊಂಡು ಹೋಗಬೇಕೇ, ನೇಗಿಲು ಹೊತ್ತುಕೊಂಡೇ ಹೋಗಬೇಕಾ ಎನ್ನುವ ಮಾತಲ್ಲ. ಇಲ್ಲಿ ಪ್ರಶ್ನೆ ಏನು ಎಂದು ಹೇಳಿದರೆ ಒಬ್ಬ ಕೃಷಿಕನಾದವನಿಗೆ ಹೆಚ್ಚು ಕೃಷಿ ಉತ್ಪನ್ನ ಮಾಡುವಲ್ಲಿ ನಿಮ್ಮ ಸರ್ಕಾರ ಕೊಡುವಂಥ ಕಾರ್ಯಕ್ರಮಗಳೇನು? ದಕ್ಷಿಣ ಕನ್ನಡ ಜಿಲ್ಲೆಯನ್ನೇ ನಾವು ನೋಡುವುದಿದ್ದರೆ, ನಮ್ಮ ಮೀನುಗಾರರ ಸಮಾಜ, ನಮ್ಮ ರೈತ ಸಮಾಜ ಒಂದು ಕಡೆಯಿಂದ ಕೇಂದ್ರದ ವಿದೇಶಿ ಮೀನುಗಾರಿಕಾ ನೀತಿ, ಒಂದು ಕಡೆಯಿಂದ ನಿಮ್ಮ ಕೈಗಾರಿಕಾ ನೀತಿಯಿಂದ ನಾವು ಭಿಕ್ಷೆ ಬೇಡುವಂಥ ಪರಿಸ್ಥಿತಿಯನ್ನು ನೀವು ತರುತ್ತಿದ್ದೀರಿ ಎಂದು ನಾನು ಹೇಳಬಯುಸುತ್ತೇನೆ. ಒಂದು ಕಡೆಯಿಂದ ಕೇಂದ್ರಸರ್ಕಾರ ವಿದೇಶಿ ಮೀನುಗಾರಿಕಾ ನೀತಿಯನ್ನು ತಂದುಕೊಟ್ಟು ಯಾರ್‍ಯಾರು ವಿದೇಶಿಯರು ಬಂದು ಸಮುದ್ರಸುಲಿಗೆ ಮಾಡುವಾಗ ಇನ್ನೊಂದು ಕಡೆಯಿಂದ ರಾಜ್ಯಸರ್ಕಾರ ಫಲವತ್ತಾದ ಕೃಷಿ ಭೂಮಿ ಇರುವ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಭೂಮಿಯನ್ನು ಕೈಗಾರಿಕಾ ಉದಾರೀಕರಣದ ನೆಪದಲ್ಲಿ ನೀವು ಕೊಡುತ್ತಿದ್ದೀರಿ. ಜನರು ಅದನ್ನು ವಿರೋಧ ಮಾಡುತ್ತಿದ್ದಾರೆ. ಇಷ್ಟು ವಿರೋಧ ಮಾಡಿದರೂ ಕೂಡ ನೀವು ಅದಕ್ಕೆ ತಲೆಬಗ್ಗಲಿಲ್ಲ. ನಿನ್ನೆ ಒಂದು ಭೂಸುಧಾರಣಾ ತಿದ್ದುಪಡಿಯ ಕಾಯ್ದೆಯನ್ನು ನೀವು ಇಲ್ಲಿ ತಂದಿರಿ. ನಮ್ಮ ಅಪೇಕ್ಷೆ ಇಷ್ಟೆ. ನಮ್ಮ ಮಾನ್ಯ ನಾಗೇಗೌಡರು ಹೇಳಿದರು, ಶಿವರಾಮೇಗೌಡರು ಹೇಳಿದರು, ಕೃಷಿಕನಾಡನ್ನು ಮೇಲೆ ತರಬೇಕು ಎಂದು. ಮೇಲೆ ತರಬೇಕು ಎಂದರೆ ಏನು? ಕೆಲಸ ಕಳೆದುಕೊಂಡವರಿಗೆ, ಭೂಮಿ ಕಳೆದುಕೊಂಡವರಿಗೆ ಅವರು ಉದ್ಯೋಗವನ್ನು ಕೊಟ್ಟಿಲ್ಲ.

ಅದಕ್ಕಾಗಿ ನಾವು ಹೋರಾಟ ಮಾಡಿದ್ದೇವೆ ಆಗಲೇ. ನೀವು ಹೇಳುವ ಪ್ರಕಾರ ನಾನು

ಒಪ್ಪಿಕೊಳ್ಳುತ್ತೇನೆ. ಅದು ಏನೇ ಇರಲಿ. ಅದರ ಬಗ್ಗೆ ಇನ್ನೊಮ್ಮೆ ಬರುತ್ತೇನೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸಮಾಲೋಚನೆ, ಹೇಳುವುದಕ್ಕೆ ನಾನು ಒಪ್ಪುವುದಿಲ್ಲ. ಇವತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎನ್ನುವುದಕ್ಕೆ ನಮ್ಮ ಜಿಲ್ಲೆಯಲ್ಲಿ ಡಿಸೆಂಬರ್ ತಿಂಗಳ 20,21,22 ರಲ್ಲಿ ನಡೆದಂಥ ಗಲಭೆಯಲ್ಲಿ ನಿಮ್ಮ ಸರ್ಕಾರದ ಪಾತ್ರದ ಬಗ್ಗೆ ನಾನು ಹೇಳಬೇಕಾಗಿದೆ. ಜಿಲ್ಲೆಯ ಮೀನುಗಾರರು, ಪರಿಸರವಾದಿಗಳು, ರೈತರು, ಬೃಹತ್ ಕೈಗಾರಿಕೆಗಳ ಏಕಾಏಕಿ ಸ್ಥಾಪನೆ. ಒಂದು ಕೈಗಾರಿಕೆ, ಎರಡು ಕೈಗಾರಿಕೆ ಬಂದರೆ ಇರಲಿ. ಧಾರಣಶಕ್ತಿ, ಕ್ಯಾರಿಯಿಂಗ್ ಕೆಪ್ಯಾಸಿಟಿ, ದಕ್ಷಿಣ ಕನ್ನಡ ಜಿಲ್ಲೆಯ ಕ್ಯಾರಿಯಿಂಗೆ ಕೆಪ್ಯಾಸಿಟಿಯ ಅರಿವಿಲ್ಲದೆ ಮೂರು ಉಕ್ಕುಸ್ಥಾವರ ಎಂದು ಹೇಳಿ ಹಾಕುವುದಾದರೆ, ಎರಡು ವಿದ್ಯುತ್ ಸ್ಥಾವರಗಳನ್ನು ಹಾಕುವುದು ಎಂದು ಹೇಳಿದರೆ ಒಂದು ಜಿಲ್ಲೆಯಲ್ಲಿ ಧಾರಣಶಕ್ತಿ ಎಂದು ಹೇಳಿ ಎಲ್ಲಿ ಬರಬೇಕು? ಕಳೆದ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದಮೇಲೆ ನಾನು ಮಾತನಾಡುವಾಗ ಸ್ಪಷ್ಟವಾಗಿ ಹಾಗೂ ಕೈಗಾರಿಕಾ ನೀತಿಯ ಬಗ್ಗೆ ಮಾತನಾಡುವಾಗಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ಕೈಗಾರಿಕೆಯನ್ನು ಸ್ಥಾಪಿಸಲಿಕ್ಕೆ ಹೋಗಬೇಡಿ, ಎಕಲಾಜಿಕಲಿ ಸೆನ್ಸಿಟೀವ್ ಏರಿಯಾ ಎಂದು ಹೇಳಿ ಜಗತ್ತಿನ 18 ಪ್ರದೇಶಗಳಲ್ಲಿ ನಮ್ಮ ಜಿಲ್ಲೆ ಕೂಡ ಒಂದು ಎನ್ನುವುದನ್ನು ಸ್ಪಷ್ಟವಾಗಿ ನಾನು ಹೇಳಿದ್ದೇನೆ. ಆಮೇಲೆ ಎಂ.ಆರ್.ಪಿ.ಎಲ್.ನ ಚಳುವಳಿಯಾಯಿತು. ಅಲ್ಲೊಂದು ಗೊಂದಲಮಯ ವಾತಾವರಣ ಆಯಿತು. ಅಲ್ಲಿ ಏನಾಯಿತು, ಶಾಸಕರಿಗೆ ಪೋಲೀಸರಿಂದ ಹಿಂದಿನಿಂದ ಲಾಟಿ ಏಟು ಮಾಡುವುದು. ಆಮೇಲೆ ಪೋಲೀಸ್ ಗೋಲಿಬಾರನಿಂದ ಏಳು ಜನರು ಅಲ್ಲಿ ಗಾಯಗೊಂಡರು. ಅವರಿಗೆ ಜುಜುಬಿ ಮೊತ್ತದ ಒಂದು ಪರಿಹಾರವನ್ನು ಕೊಟ್ಟರು. ಇಷ್ಟೆಲ್ಲಾ ಆದಮೇಲೆ ಕೊನೆಗೆ ಮುಖ್ಯಮಂತ್ರಿಗಳು ಶಾಸಕರ ಸಭೆಯನ್ನೂ ಕೂಡ ಕರೆದರು. ಸಭೆಯನ್ನು ಕರೆದಾದಮೇಲೆ 22ನೇ ತಾರೀಖಿಗೆ ಒಂದು ಸರ್ಕಾರಿ ಆದೇಶ ಕೂಡ ಆಯಿತು. ಸರ್ಕಾರಿ ಆದೇಶದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ ಎಂದರೆ ಇನ್ನು ಮುಂದಿನ ಯಾವುದೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಯನ್ನು ಸ್ಥಾಪಿಸುವಾಗ ದಕ್ಷಿಣ ಕನ್ನಡ ಜಿಲ್ಲೆಯ ಪರಿಸರದ ಧಾರಣಶಕ್ತಿ ಏನಿದೆ, ಅದನ್ನು ಅಧ್ಯಯನ ಮಾಡಿ ಆ ಅಧ್ಯಯನದ ಮೇಲೆ ನಾವು ಬೃಹತ್ ಕೈಗಾರಿಕೆಗಳಿಗೆ ಪರವಾನಿಗೆಯನ್ನು ಕೊಡುತ್ತೇವೆ. ಎನ್ನುವ ಮಾತನ್ನು ಹೇಳಿ ಆದೇಶ ಹೊರಟಾದ ಮೇಲೆ ಮೊನ್ನೆ 8-2-96ಕ್ಕೆ ಪುನಃ ನಾಗಾರ್ಜುನ ಕಂಪನಿ ಮತ್ತು ಬ್ರಹ್ಮಾವರದಲ್ಲಿ ಉಷಾ ಇಸ್ಪಾಟಗೆ ಪರವಾನಿಗೆಯನ್ನು ಕೊಡುವುದಾದರೆ ಇವತ್ತು ಮುಖ್ಯಮಂತ್ರಿಗಳು ಶಾಸಕರನ್ನು ಕೂರಿಸಿಕೊಂಡು ನಿರ್ಧಾರ ಮಾಡಿದಂಥ ನಿರ್ಣಯಕ್ಕೆ ಏನು ಬೆಲೆ ಬಂತು? ಸರ್ಕಾರಿ ಆದೇಶ ಮಾಡಿದ್ದಾಗಲೂ ಅದಕ್ಕೆ ಏನು ಬೆಲೆ ಬಂತು? ಇದನ್ನು ನಾನು ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ. ನಾನು ಬಹಳ ದಿನದಿಂದ ಈ ವಿಚಾರವನ್ನು ಆಡಬೇಕೆಂದು ಇಚ್ಛೆ ಇತ್ತು ಈಗ ಹೇಳಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಜನಾಂಧೋಳನ ಆಗುವಾಗ ಒಂದು ವ್ಯವಸ್ಥಿತವಾದ ಕೆಲಸ ನಡೆಯುತ್ತಿತ್ತು. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮೂರು ದಿವಸ ಗಲಾಟೆ ಆಯಿತು, ಜಿಲ್ಲೆ ಬಂದ್ ಆಯಿತು. ಪೋಲೀಸ್ ಲಾಠಿ ಛಾರ್ಜ ಆಯಿತು. ಗೋಲೀಬಾರ್ ಆಯಿತು. ಮೂರು ದಿವಸ ಹೆದ್ದಾರಿ ಬಂದ್ ಆಯಿತು. ಮುಖ್ಯಮಂತ್ರಿಗಳನ್ನು ಬಿಡಿ, ಗೃಹ ಸಚಿವರಾದರೂ ಇಲ್ಲಿಗೆ

ಬರಬೇಕಾಗಿತ್ತು. ಅದನ್ನು ಬಿಟ್ಟು ಒಬ್ಬರು ಉಸ್ತುವಾರಿ ಸಚಿವರು ಒಂದು ಜಿಲ್ಲೆಗೆ ಎಂದು ಇರುತ್ತಾರೆ. ಇಲ್ಲಿ ಏನಾದರೂ ಗಲಭೆ ಗೊಂದಲ ಆದರೆ ಅದನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಉಸ್ತುವಾರಿ ಸಚಿವರನ್ನು ನೀವು ಮಾಡಿದ್ದೀರಿ. ಮೂರು ನಾಲ್ಕು ದಿವಸ ಅಷ್ಟೊಂದು ಗಲಭೆ ಗೊಂದಲ ಆಗುವಾಗ ನಮ್ಮ ಉಸ್ತುವಾರಿ ಮಂತ್ರಿ ಸಚಿವರು ಎಲ್ಲಿದ್ದರು? ಅವರು ಬೆಂಗಳೂರಿನಲ್ಲಿದ್ದುಕೊಂಡು ಸಭೆ ಸಮಾರಂಭಗಳಲ್ಲಿ ಭಾಗವಹಿಸಿದ್ದರು. ನಮ್ಮನ್ನು ಯಾರೂ ಹೇಳುವವರು ಕೇಳುವವರು ಇಲ್ಲದೇ ಇದ್ದಹಾಗೆ ಆಯಿತು. ನಾವು ಪ್ರತಿಭಟನೆ ಮಾಡಿದಾಗ ಯಾವುದೋ ಫಂಕ್ಷನಗೆ ಹೋಗುತ್ತೇವೆಂದು ಹೇಳಿ ನಮ್ಮ ಮೇಲೆ ಆರೋಪ ಹೊರಿಸಿ ಆಯಿತು. ಈ ಜನಾಂಧೋಳವನ್ನು ಎದುರಿಸಿಕೊಂಡು ನೀವು ಯಾವತ್ತೂ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಿಮಗೆ ಬಹುಮತ ಉಂಟೆಂದು ಹೇಳಿ ನೀವು ಖುಷಿ ಬಂದಂತಹ ಕಾನೂನನ್ನು ಇಲ್ಲಿ ತರಲಿಕ್ಕೂ ಆಗುವುದಿಲ್ಲ. ಭೂ ಸುಧಾರಣಾ ಕಾಯಿದೆ ತಂದದ್ದು ಇದ್ದರೆ, ಈ ಕೈಗಾರಿಕೋದ್ಯಮಿಗಳಿಗೆ ಒಂದು ಬೆಂಬಲವನ್ನು ಕೊಡಬೇಕೆಂದು ಹೇಳಿ ಆ ಒಂದು ಉದ್ದೇಶದಿಂದ ತಂದಿದ್ದಾರೆಯೇ ವಿನಹ ರೈತರಿಗೆ ಇದರಿಂದ ಯಾವುದೇ ರೀತಿಯ ಪ್ರಯೋಜನ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಒಬ್ಬ ರೈತ ಒಂದು ಎಕರೆ, ಎರಡು ಎಕರೆ ಮೂರು ಎಕರೆ ಜಮೀನು ಇರುತ್ತದೆ, ಅವನು ಅಲ್ಲಿ ಹೊಲದಲ್ಲಿ ಉಳುತ್ತಾನೆ, ಅವನು ಉಳುವಂತಹ ಕೆಲಸ ಮಾಡಿದರೆ ಅವನಿಗೆ ಲಾಭದಾಯಕ ಇಲ್ಲದೇ ಇದ್ದರೂ ಕೂಡ ಅವನು ವರ್ಷವಿಡೀ ಅವನ ಜೀವನಕ್ಕೆ ಅನ್ನಕ್ಕೋಸ್ಕರವಾಗಿ ಉಳುತ್ತಿರುತ್ತಾನೆ. ಅಂತಹ ಭೂಮಿಯನ್ನು ಏಕಾಏಕಿ ಮಾರಾಟ ಮಾಡಿದರೆ ಅವನು ಎಲ್ಲಿಗೆ ಹೋಗಬೇಕು? ಇನ್ನು ಕೃಷಿ ಉತ್ಪನ್ನ ಹೇಗೆ ಆಗುತ್ತದೆ? ಸುಮಾರು ಐದು ಕೋಟಿ ರೂಪಾಯಿ ಕೃಷಿ ಉತ್ಪನ್ನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಷ್ಟಆಗುತ್ತಿದೆ. ಆ ಕೃಷಿ ಉತ್ಪನ್ನವನ್ನು ಮತ್ತೊಮ್ಮೆ ತರುತ್ತೀರೋ? ನೀವು ಅಕ್ಕಿಯನ್ನು ಹೊರದೇಶದಿಂದ ತರುತ್ತೀರಿ? ಮಾನ್ಯ ಸಭಾಧ್ಯಕ್ಷರೇ, ನಿಮ್ಮ ತಲೆಯ ಮೇಲೆ ಗಾಂಧೀಜಿಯವರ ಚಿತ್ರ ಇದೆ. ಬದಿಯಲ್ಲಿ ಜವಾಹರಲಾಲ್ ನೆಹರೂ ಆಚೆಯಲ್ಲಿ ಡಾ|| ರಾಜೇಂದ್ರ ಪ್ರಸಾದ್‌ರವರ ಚಿತ್ರ ಇದೆ. ಈ ದೇಶದಲ್ಲಿ ಸ್ವದೇಶಿಕರಣಕ್ಕಾಗಿ ನಾಂದಿ ಹಾಡಿದವರು. ನನ್ನಲ್ಲಿದ್ದ ಎಲ್ಲಾ ಬಟ್ಟೆಯನ್ನು ತೆಗೆದು ಅವರು ಕೇವಲ ಎರಡು ತುಂಡು ಉಟ್ಟು ಸ್ವದೇಶಿ ಚಳುವಳಿ ಮಾಡಿದರು. ಇವತ್ತು ಸ್ವದೇಶಿ ಚಳುವಳಿಯಲ್ಲಿ ನಮ್ಮ ಅನೇಕ ಹಿರಿಯರು ಭಾಗವಹಿಸಿದರು. ಇವತ್ತು ಸ್ವದೇಶೀ ಚಳವಳಿಯನ್ನೆಲ್ಲಾ ಬಿಟ್ಟು, ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರನ್ನು ನಾಶ ಮಾಡಿ, ಹೊರ ರಾಜ್ಯದಲ್ಲಿರತಕ್ಕಂಥ ಹೂಡಿಕೆದಾರರಿಗೆ ನಮ್ಮ ರಾಜ್ಯದಲ್ಲಿ ಅನುಕೂಲ ಕಲ್ಪಿಸುವುದಾದರೆ ನಮ್ಮ ಈ ಹಿಂದೆ ಚಳುವಳಿಯ ನಾಯಕತ್ವವನ್ನು ವಹಿಸಿದಂತಹ ಜನರಿಗೆ ನಾವು ದ್ರೋಹ ಮಾಡಿದಂತೆ ಆಗುವುದಿಲ್ಲವೇ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : ಪಾರ್ಲಿಮೆಂಟ್ ಎಲೆಕ್ಷನ್‌ಗೆ ನಿಲ್ಲುವ ಆಲೋಚನೆ ಇದೆಯೇ?

ಶ್ರೀ ಯು. ಆರ್. ಸಭಾಪತಿ : ಇಲ್ಲ ಸಾರ್. ದೇವರ ದಯದಲ್ಲಿ ನಾನು ನಿಲ್ಲುವುದಿಲ್ಲ.

ಅಧ್ಯಕ್ಷರು : ಇದು ಪಾರ್ಲಿಮೆಂಟ್ ಸ್ಪೀಚ್.

ಶ್ರೀ ಯು.ಆರ್. ಸಭಾಪತಿ : ನಾನು ಹೆಚ್ಚು ಮಾತನಾಡಿದರೆ ಬಹುಶಃ ಅದಕ್ಕೆ ನೀವು ಮನ್ನಣೆ ಕೊಡಲಿಕ್ಕಿಲ್ಲ. ಏಕೆಂದರೆ ನಾನು ಸರ್ಕಾರದ ವಿರೋಧಿ ನೀತಿಯನ್ನು ಮಾತನಾಡುತ್ತಿದ್ದೇನೆ. ಇನ್ನು ವಿವಿಧ ಇಲಾಖೆಗಳ ಬಗ್ಗೆ ಹೇಳಬಯಸುತ್ತೇನೆ. ಕಂದಾಯ ಇಲಾಖೆಯನ್ನು ತೆಗೆದುಕೊಳ್ಳೋಣ. ಕಂದಾಯ ಇಲಾಖೆಯ ಮಂತ್ರಿಗಳಾದ ಮಾನ್ಯ ಜಾಲಪ್ಪನವರು ಬಹಳ ಕ್ರಾಂತಿಕಾರಿ ಮಂತ್ರಿಗಳು ಹೌದು. ಆದರೆ ಇವತ್ತು ಅವರು ಕಂದಾಯ ಇಲಾಖೆಯ ನೌಕರರ ಬಗ್ಗೆ ಕೆಲವೊಂದು ಮಾತನಾಡಿದ್ದಾರೆ. ನನಗೆ ಬಹಳ ಸಂತೋಷವಾಯಿತು. ಕಂದಾಯ ಇಲಾಖೆಯ ನೌಕರರು ನಮ್ಮ ಮೇಲೆ ದಬ್ಬಾಳಿಕೆ ಮಾಡಿ ಶಾಸಕರಿಬ್ಬರೂ ಕೂಡಿ ಹಾಕಿ ಅಸಿಸ್ಟೆಂಟ್ ಕಮೀಷನರ್ ಬರುತ್ತಾರೆಂದು ಹೇಳಿದಾಗ, ಕುಂದಾಪುರ ತಾಲ್ಲೂಕಿನ ಕಕ್ಕುಂಜಿ ಪ್ರಕರಣದಲ್ಲಿ ಕೂಡಿ ಹಾಕಿದಾಗ, ಕಂದಾಯ ಇಲಾಖೆಯ ನೌಕರರು ಪೆನ್ ಡೌನ್ ಸ್ಟ್ರೈಕ್ ಮಾಡಿದರು. ಆದರೆ ಅದರ ಬಗ್ಗೆ ನಾವು ನಿಮ್ಮ ರಕ್ಷಣೆ ಕೇಳಿದೆವು. ನಿಮ್ಮ ರಕ್ಷಣೆ ಕೇಳಿದ್ದಕ್ಕೆ ಮಾನ್ಯ ಕಂದಾಯ ಸಚಿವರು ಡಿವಿಜನಲ್ ಕಮೀಷನರ್ ಅವರಿಂದ ತನಿಕೆ ಮಾಡಿಸುತ್ತೇನೆಂದು ಕಳೆದ ಅಧಿವೇಶನದಲ್ಲಿ ಹೇಳಿದ್ದರು. ಆದರೆ ಇವತ್ತೂ ಆ ತನಿಖೆ ಆಗಿದೆಯೋ ಇಲ್ಲವೋ ಎನ್ನುವುದು ಇನ್ನೂ ನಮ್ಮ ಗಮನಕ್ಕೆ ಬರಲಿಲ್ಲ. ಒಂದು ವೇಲೆ ತನಿಖೆ ಆಗಿದ್ದರೆ ನಮ್ಮನ್ನೂ ಎನಕ್ವೈರಿ ಮಾಡಲಿಕ್ಕೆ ಇಲ್ಲವೋ? ಒನ ಸೈಡೆಡ್ ಆಗಿ ಅವರು ಎನಕ್ವೈರಿ ಮಾಡಿ ಅವರು ನಿಮಗೆ ರಿಪೋರ್ಟ ಕಳುಹಿಸಿದ್ದಾರೋ? ಇದರ ಬಗ್ಗೆ ನೀವು ಸ್ಪಷ್ಟೀಕರಣ ಕೊಡಬೇಕು. ಕಂದಾಯ ಇಲಾಖೆಯ ನೌಕರರ ವಿಚಾರ ಹೇಳುವಾಗ ನಮ್ಮ ತಾಲ್ಲೂಕು ಕಛೇರಿಯಲ್ಲಿ ನಡೆಯುವಂತಹ ವಿಚಾರಗಳನ್ನು ಹೇಳಬೇಕಾಗಿದೆ. ಒಬ್ಬ ವಿಲೇಜ್ ಅಕೌಂಟೆಂಟ್ ಗ್ರಾಮೀಣ ಪ್ರದೇಶದಿಂದ ಬರುವಂತಹ ವ್ಯಕ್ತಿ ಒಂದು ಪಟ್ಟಾ, ಆರ್ ಟಿಸಿಯನ್ನು ಪಡೆಯಬೇಕಾದರೆ ಅವನಿಂದ ಐದು ಸಾವಿರ ಆರು ಸಾವಿರ ಹಣ ತೆಗೆದುಕೊಂಡು ಬರಲು ಹೇಳುವಂತಹ ಪ್ರಶ್ನೆಗಳು ಬಂದಿವೆ. ಎಷ್ಟೋ ಸಂದರ್ಭದಲ್ಲಿ ಕನ್ವರ್ಷನ್ ಮಾಡುವಾಗ ಯಾವ ಒಬ್ಬ ಅಧಿಕಾರಿ ತಾಲ್ಲೂಕು ಕಛೇರಿಯಲ್ಲಿರುತ್ತಾನೆ. ಅಲ್ಲಿರತಕ್ಕ ಅಧಿಕಾರಿಗೆ ಹಣದ ಸುಗ್ಗಿಯೇ. ಅವರ ಒಂದೊಂದು ಕನ್ವರ್ಷನ್ ಫೈಲಿಗೆ 5 ರಿಂದ 20 ಸಾವಿರ ರೂಪಾಯಿವರೆಗೆ ಹಣ ತೆಗೆದುಕೊಂಡಂತಹ ಉದಾಹರಣೆಗಳು ಇವೆ. ಇಷ್ಟೆಲ್ಲಾ ಇದ್ದು ಅವರನ್ನು ಎಲ್ಲಿಯಾದರೂ ನಿಗ್ರಹಿಸಬೇಕೆಂದು ಹೇಳಿದರೆ ಅವರು ಕೂಡಲೇ ಕಂದಾಯ ಇಲಾಖೆಯ ನೌಕರರ ಸಂಘಟನೆ ಇದೆ, ಅದರ ಮೂಲಕ ನಮ್ಮನ್ನು ಹೆದರಿಸುತ್ತಾರೆ ಎಂದು ಹೇಳುತ್ತಾರೆ. ನಾನು ಇಷ್ಟು ಹೇಳುತ್ತೇನೆ. ನಾನು ಬೇರೇನೂ ಹೇಳುವುದಿಲ್ಲ. ಇವತ್ತು ರೌಡಿ ನಿಗ್ರಹ ದಳ ಎಂದು ಏನು ಇದೆ, ಅದೇ ರೀತಿ ಭ್ರಷ್ಟಾಚಾರ ನಿಗ್ರಹ ದಳದಂತಹ ಒಂದು ದಳವನ್ನು ನೀವು ನೇಮಕ ಮಾಡಿ. ತಾಲ್ಲೂಕು ಕಛೇರಿ, ತಹಶೀಲ್ದಾರ್ ಕಛೇರಿಯಲ್ಲಿ ಆಗತಕ್ಕ ಭ್ರಷ್ಟಾಚಾರವನ್ನು ನಿಗ್ರಹ ಮಾಡುವಲ್ಲಿ ನೀವು ಯಶಸ್ವಿ ಆಗಬೇಕು ಎಂದು ಹೇಳಬಯುಸುತ್ತೇನೆ. ಇನ್ನು ತಾಲ್ಲೂಕು ಕಛೇರಿಯಲ್ಲಿರತಕ್ಕ ಕಡತಗಳು. ನಿಮ್ಮ ಜನ ಸಂದರ್ಶನ ಕಾರ್ಯಕ್ರಮದಿಂದ ಕಡತ ವಿಲೇವಾರಿ ಆಗುವುದಿಲ್ಲ. ಯಾವ ರೀತಿಯಲ್ಲೂ ಅವರದ್ದೇ ಧೋರಣೆ. ರಾಜ್ಯದ ಮುಖ್ಯಮಂತ್ರಿಗಳು, ಮಂತ್ರಿಗಳು ಬರುವಾಗ ಎಲ್ಲಾ ಅಧಿಕಾರಿಗಳೂ ಹಿಂದೆ ಮುಂದೆ ಓಡಾಡಿ ಬಂದು ಜನಗಳನ್ನು ವ್ಯವಸ್ಥಿತವಾಗಿ ಸೇರಿಸಿ ಕಾರ್ಯಕ್ರಮ ಮಾಡಬಹುದು. ಅದು ಬೇರೆ ಪ್ರಶ್ನೆ ಆದರ ಪ್ರಾಕ್ಟಿಕಲ್ ಆಗಿ

ಯಶಸ್ವಿಯಾಗಿದಾರಾ? ಪರಿಣಾಮಕಾರಿಯಾಗಿ ನೀವು ಮಾಡಬೇಕಾದರೆ ಕನಿಷ್ಟ15 ದಿವಸಗಳಿಗೊಮ್ಮೆಯಾದರೂ ತಾಲ್ಲೂಕು ಕಛೇರಿಯಲ್ಲಿ ಕಡತ ವಿಲೇವಾರಿ ಯಜ್ಞವನ್ನು ನೀವು ಮಾಡಬೇಕು. ಕಡೆಗೆ 15 ದಿವಸಕ್ಕೆ ಒಮ್ಮೆ ಒಂದು ದಿವಸ ಕುಳಿತುಕೊಂಡು ಆ 15 ದಿವಸದ ಹಿಂದಿನ ಕಡತಗಳು ಏನು ಇವೆ, ಅದನ್ನು ವಿಲೇವಾರಿ ಮಾಡುವಂತಹ ಕ್ರಮವನ್ನು ನೀವು ಜರುಗಿಸಿದರೆ, ಪ್ರಾಯಶಃ ನಿಮ್ಮ ಸಾಧನೆಗೆ ಒಂದು ಯಶಸ್ಸು ಸ್ವಲ್ಪಮಟ್ಟಿಗಾದರೂ ಕಾಣಬಹುದೇನೋ ಎಂದು ನನ್ನ ಆಸೆ ಇದೆ. ಇನ್ನು ಬಡವನಿಗೆ ನಿವೇಶನ ಬದಲಾವಣೆ ಮಾಡುವಂತಹ ಹಕ್ಕು ಪತ್ರ. ಆ ಹಕ್ಕು ಪತ್ರಕೆಲವೊಮ್ಮೆ ತಪ್ಪಿ ಹೋಗಿರುತ್ತದೆ. ಹೆಸರು ಬದಲಾವಣೆ ಮಾಡಬೇಕಾದರೆ ಗ್ರಾಮಾಂತರ ಪ್ರದೇಶದ ಆ ಬಡವ ತಾಲ್ಲೂಕು ಕಛೇರಿಗೆ ಎಷ್ಟು ಸಾರಿ ಅಲೆದಾಡುತ್ತಾನೆಂದು ಪ್ರಾಕ್ಟಿಕಲ್ ಆಗಿ ನಮಗೆ ಬಹಳ ಅನುಭವ ಇದೆ. ಇದನ್ನೆಲ್ಲಾ ನಿವಾರಿಸುವಲ್ಲಿ ಕಂದಾಯ ಸಚಿವರು ಒಂದು ಸಾಧನೆ ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ಒಂದು ಬಹಳ ಪ್ರಾಮುಖ್ಯವಾದಂತಹ ವಿಚಾರವನ್ನು ವಿದ್ಯಾ ಇಲಾಖೆಗೆ ಕೊಡಬಯಸುತ್ತೇನೆ. ನಮ್ಮ ವಿದ್ಯಾ ಇಲಾಖೆಗೆ ಬಹಳ ಒಳ್ಳೆಯ ಒಬ್ಬರು ಮಂತ್ರಿಗಳು ಬಂದಿದ್ದಾರೆ. ಪ್ರೌಢ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಇಲಾಖಾ ಮಂತ್ರಿಗಳು ಶಿಕ್ಷಕರನ್ನು ನೇಮಕಾತಿ ಮಾಡುವಲ್ಲಿ ಅವರು ಯಶಸ್ವಿ ಆಗಿರಬಹುದು. ಆದರೆ ನನ್ನ ಪ್ರಶ್ನೆ ಏನು ಅಂದರೆ ಕೇವಲ ಶಿಕ್ಷಕರನ್ನು ನೇಮಕಾತಿ ಮಾಡಿದ್ದರಿಂದ ಶಿಕ್ಷಣದಲ್ಲಿ ಕ್ರಾಂತಿಕಾರಕ ಕ್ರಮ ಆಗುತ್ತದೆ ಎಂದಲ್ಲ. ಅದರ ಒಟ್ಟಿಗೆ ಶಿಕ್ಷಕೇತರ ಸಿಬ್ಬಂದಿಗಳನ್ನು ಕೂಡ ಹಲವಾರು ವರ್ಷದಿಂದ ನೀವು ಮಾಡಿಲ್ಲ.

ಆ ಶಾಲೆಗಳಲ್ಲಿ ಪ್ರಾಧ್ಯಾಪಕರೇ ಕಸ ಗುಡಿಸುವಂತಹ ಒಂದು ಪರಿಸ್ಥಿತಿ ಇದೆ. ವಿದ್ಯಾರ್ಥಿಗಳೇ ಕಸ ಗುಡಿಸುವಂತಹ ಪರಿಸ್ಥಿತಿ ಇದೆ. ಇದರಿಂದಾಗಿ ತಾವು ದಯವಿಟ್ಟು ಶಿಕ್ಷಕೇತರ ಸಿಬ್ಬಂದಿಗಳನ್ನೂ ನೇಮಕಾತಿ ಮಾಡಬೇಕು. ಜೊತೆಗೆ ನಾನು ಕಳೆದ ಬಾರಿ ಎಸ್ಎಸ್ಎಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಪರೀಕ್ಷೆಯ ಮೌಲ್ಯ ಮಾಪನದ ಬಗ್ಗೆ ಸ್ವಲ್ಪ ಬದಲಾವಣೆ ತರಬೇಕೆಂದು ನಾನು ಹೇಳಿದ್ದೆ. ಏಕೆಂದು ಹೇಳಿದರೆ ಉತ್ತರ ಪತ್ರಿಕೆಗೆ ಅಂಕ ಕೊಡುವಾಗ, ಪರಿಶೀಲನೆ ಮಾಡುವಾಗ ಅನೇಕ ಅಧ್ಯಾಪಕರು ಮಾಡಿದಂತಹ ತಪ್ಪಿನಿಂದ ಅನೇಕ ವಿದ್ಯಾರ್ಥಿಗಳು ತಮ್ಮ ಜೀವವನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಇವತ್ತು ಉದ್ಭವ ಆಗಿದೆ. ಅದರಿಂದಾಗಿ ಮೂಲಭೂತವಾಗಿ ನಾನು ಪುನಃ ಅದನ್ನು ಹೇಳಬಯಸುವುದಿಲ್ಲ. ನಾನು ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ದಯವಿಟ್ಟು ಈ ಬಾರಿ ಕೂಡ ನೀವು ಮೌಲ್ಯಮಾಪನ ಮಾಡುವಾಗ ಅದರ ಮೂಲಭೂತ ಬದಲಾವಣೆಯನ್ನು ಮಾಡಬೇಕೆಂದು ಹೇಳುತ್ತೇನೆ. ಯಾವುದೇ ಒಬ್ಬ ವಿದ್ಯಾರ್ಥಿ ಅಂಕ ನೀಡಿಕೆಯಲ್ಲಿ ಪ್ರಮಾದಆಗಿದೆ ಎಂದು ಹೇಳಿ ಗೊತ್ತಾದರೆ ಅದನ್ನು ಮತ್ತೆ ಮೌಲ್ಯ ಮಾಪನ ಮಾಡುವಂತಹ ವಿಚಾರವನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಏಕೆಂದರೆ ಸಮಯ ಇಲ್ಲ. ಇಲ್ಲದಿದ್ದರೆ ನಾನು ಅದನ್ನು ಓದಿ ಹೇಳುತ್ತಿದ್ದೆ. ಅದನ್ನು ತಾವು ಮಾಡಬೇಕೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಕಳೆದ ವರ್ಷ ಸೀಮಿತವಾಗಿ ಡಾ|| ಶಿವರಾಮ ಕಾರಂತರ ಓದುವ ಆಟ ಬಗ್ಗೆ ದೊಡ್ಡ ಚಳುವಳಿ ಆಗಿತ್ತು. ಅಂತಿಮವಾಗಿ ಹೈಕೋರ್ಟ್ ಅದೇ ಪುಸ್ತಕವನ್ನು 95-96ಕ್ಕೆ ಮುಂದುವರಿಸಬಹುದೆಂದು ಹೇಳಿದರು. 96-97ನೆಯ ಸಾಲಿಗೆ ಆ ಪುಸ್ತಕವನ್ನು ಅಧ್ಯಯನ ಮಾಡುವ ಬಗ್ಗೆ ಶಿಕ್ಷಣ ತಜ್ಞರು,

ಪುಸ್ತಕ ಸಮಿತಿಯ ಒಂದು ಅಭಿಪ್ರಾಯ ಪಡೆದು ನಿರ್ಧರಿಸಬೇಕು ಎಂದು ಆದೇಶ ಕೊಟ್ಟಿದ್ದರು. ಅದು ಏನಾಗಿದೆಯೋ ನನಗೆ ಗೊತ್ತಿಲ್ಲ. ಆದ್ದರಿಂದ ಮುಂದಿನ ಅಕಾಡೆಮಿಕ್ ಇಯರ್ ಪ್ರಾರಂಭ ಆಗುವಾಗ ದಯವಿಟ್ಟು ಈ ಪಠ್ಯ ಪುಸ್ತಕದ ಸಮಸ್ಯೆ ಬರಬಾರದು. ಒಂದು ಸಾರಿ ಶಾಲೆ ಶುರು ಆದಮೇಲೆ, ವಿದ್ಯಾರ್ಥಿಗಳು ಅಧ್ಯಯನ ಪ್ರಾರಂಭ ಮಾಡಿದ ಮೇಲೆ ಮತ್ತೇ ಈ ಚಳುವಳಿಯ ಮರುಕಳಿಕೆ ಆಗಬಾರದು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ದಯವಿಟ್ಟು ಮುಂದಿನ ಅಕಾಡೆಮಿಕ್ ಇಯರ್ ಪ್ರಾರಂಭ ಆಗುವಾಗ ಈ ಸಮಸ್ಯೆಯನ್ನು ಬಗೆಹರಿಸುತ್ತೀರಿ ಎನ್ನುವ ನಂಬಿಕೆ ನನಗೆ ಇದೆ. ಇನ್ನು ಕಾಲೇಜು ಶಿಕ್ಷಕರು ನಮ್ಮ ಸರ್ಕಾರದ ಮುಂದೆ ಕಳೆದ ವರ್ಷ ಮಾರ್ಚ 17ಕ್ಕೆ ಉನ್ನತ ಶಿಕ್ಷಣ ಸಚಿವರ ಮುಂದೆ ಇಟ್ಟ ಬೇಡಿಕೆ ಅದು ಆಶ್ವಾಸನೆಯಾಗಿಯೇ ಉಳಿದಿದೆ. ಬೇಡಿಕೆ ಬಂದಾಗ ನೀವು ಆಶ್ವಾಸನೆ ಕೊಡುತ್ತೀರಿ.

ಅಲ್ಲಿ ಆ ಮರಣಾಂತ ಉಪವಾಸ ಕುಳಿತಿದ್ದಾರೆ. ವೃತ್ತಿ ಶಿಕ್ಷಣ ಶಿಕ್ಷಕರು ಒಂದು ಆ ಮರಣಾಂತ ಉಪವಾಸ ಕಡೆ, ಇನ್ನೊಂದು ಕಡೆ ಗ್ರಂಥಾಲಯ ಮೇಲ್ವಿಚಾರಕರ ಅನಿರ್ಧಿಷ್ಟ ಧರಣಿ. ಹೀಗೆ ಅನೇಕ ಸಮಸ್ಯೆಗಳು. ಕಳೆದ ಸಾರಿ ಈ ಧರಣಿ ಪ್ರಾರಂಭ ಆದಾಗ ನೀವು ಅಲ್ಲಿಗೆ ಹೋಗಿದ್ದೀರಿ. ಅಲ್ಲಿ ಹೋಗಿ ಭರವಸೆ ಕೊಟ್ಟಿದ್ದೀರಿ. ನೀವು ಅದನ್ನು ಏಕೆ ಈಡೇರಿಸಲಿಲ್ಲ? ಈಡೇರಿಸಲು ನಿಮಗೆ ಆಗುವುದಿಲ್ಲ ಎಂದರೆ ಸ್ಪಷ್ಟವಾಗಿ ಹೇಳಿ. ಏಕೆಂದರೆ ನಾವು ಹಿಂದಿನ ಸರ್ಕಾರಕ್ಕೆ ಸುಳ್ಳಿನ ಸರ್ಕಾರ ಎಂದು ನಾವೇ ಹೇಳಿದ್ದೇವೆ. ಆ ಹೆಸರಿಗೆ ನೀವು ಪಾತ್ರರಾಗಬಾರದು ಎನ್ನುವುದು ನನ್ನ ಅನಿಸಿಕೆ. ಅದರಿಂದಾಗಿ ದಯವಿಟ್ಟು ರಚನಾತ್ಮಕವಾಗಿರತಕ್ಕ ಬೇಡಿಕೆಯನ್ನು ನೀವು ಈಡೇರಿಸಬೇಕು ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಬಗ್ಗೆ ಕೂಡ ಸಾಕಷ್ಟು ಕೆಲಸವನ್ನು ಮಾಡಿದ್ದೀರಿ ಎನ್ನುವಂತಹ ಮಾತನ್ನು ಹೇಳುತ್ತೇನೆ. ಇನ್ನು ನಮ್ಮ ರಾಜ್ಯದ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಒಂದು ಗ್ರಾಹಕ ರಕ್ಷಣಾಕಾಯಿದೆಯನ್ನು ರಚಿಸಿರತಕ್ಕಂತಹ ಜಿಲ್ಲಾ ವೇದಿಕೆಗಳು ಇವೆ. ಈ ಗ್ರಾಹಕ ರಕ್ಷಣಾ ಕಾಯಿದೆಯಿಂದ ಅನೇಕ ಗ್ರಾಹಕರಿಗೆ ಬಹಳಷ್ಟು ಅನುಕೂಲ ಆಗಿದೆ. ಇದರಿಂದಾಗಿ ನ್ಯಾಯ ಬಹಳ ತ್ವರಿತವಾಗಿ ಸಿಗುವಂತಹ ಪರಿಸ್ಥಿತಿ ಇದೆ. ಆಸಂದರ್ಭದಲ್ಲಿ ನೀವು ದಯವಿಟ್ಟು ಗ್ರಾಹಕ ರಕ್ಷಣೆ ಕಾಯಿದೆ ಅನ್ವಯ ಡಿಸ್ಟ್ರಿಕ್ಟ ಕನ್ಸೂಮರ್ಸ್ ಫೋರಂ ಏನು ಮಂಜೂರು ಮಾಡಿದ್ದೀರಿ. ಅದಕ್ಕೆ ಶೀಘ್ರಲಿಪಿಗಾರರು ಇಲ್ಲ, ಬೆರಳಚ್ಚುಗಾರರು ಇಲ್ಲ. ಪ್ರಥಮ ಹಾಗೂ ದ್ವಿತೀಯ ದರ್ಜೆಯ ಗುಮಾಸ್ತರು ಇಲ್ಲ. ಈ ಸಿಬ್ಬಂದಿಯನ್ನು ಆಹಾರಖಾತೆಯ ಇಲಾಖೆಯಿಂದ ನೀವು ಡೆಪ್ಯುಟೇಷನ್ ಮಾಡಿಸುತ್ತಿದ್ದೀರಿ.

2.00 ಪಿ.ಎಂ

ಇದನ್ನು ನೀವು ಮಾಡಬಾರದು. ನಾನು ಸನ್ಮಾನ್ಯ ಸಭಾಧ್ಯಕ್ಷರ ಮೂಲಕ ಸರ್ಕಾರದ ವರಿಷ್ಠರಲ್ಲಿ ಕೇಳಿಕೊಳ್ಳುವುದೇನೆಂದರೆ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡಲು ಒಂದು ಪ್ರತ್ಯೇಕ ಇಲಾಖೆಯನ್ನು ತೆರೆದರೆ ಖಂಡಿತವಾಗಿಯೂ ರಾಜ್ಯದಲ್ಲಿ ಗ್ರಾಹಕರ ಚಳುವಳಿ ಮುಂಚೂಣಿಯಲ್ಲಿ ಇರುವಂತಾಗುತ್ತದೆಂದು ತಮ್ಮ ಮೂಲಕ ಹೇಳಬಯುಸುತ್ತೇನೆ. ಮಾನ್ಯ ಅಧ್ಯಕ್ಷರೆ, 'ನಮ್ಮದು

ಹಗರಣರಹಿತ ಸರ್ಕಾರ' ಎಂದು ತಾವು ಹೇಳಿದ್ದೀರಿ. ಇವೊತ್ತು ನಾನು ಕೇಳುತ್ತಿದ್ದೇನೆ, ತಮ್ಮದು ಖಂಡಿತವಾಗಿಯೂ ಹಗರಣರಹಿತ ಸರ್ಕಾರವಲ್ಲ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. 'ದಿ ಹಿಂದೂ' ಪತ್ರಿಕೆಯಲ್ಲಿ ದಿನಾಂಕ 5.2.1996 ರಂದು "Arrears Scandal in Horticulture Directorate" ಎನ್ನುವ ಶೀರ್ಷಿಕೆಯಡಿ ಒಂದು ಸುದ್ಧಿ ಪ್ರಕಟವಾಗಿದೆ. ಇದರ ಹಿನ್ನೆಲೆ ನೋಡುವಾಗ ಬಹಳ ದೊಡ್ಡ ಹಗರಣ ನಡೆದಿದೆಯೆಂದೂ ಅನೇಕ ರಾಜಕಾರಣಿಗಳು ಹಣ ಮಾಡುತ್ತಾರೆನ್ನುವ ಭಾವನೆ ಜನಸಾಮಾನ್ಯರಲ್ಲಿದೆ. ಆದರೆ, ಕೆಲವು ಅಧಿಕಾರಿಗಳು ಕೂಡ ಹಣ ಮಾಡುವುದು ಹೇಗೆ ಎನ್ನುವುದರ ಸಂಶಯದಲ್ಲಿ ತೊಡಗಿದ್ದಾರೆಂದು ಹೇಳಿದರೆ ತೋಟಗಾರಿಕೆ ನಿರ್ದೇಶನಾಲಯದ ಹಗರಣವೇನಿದೆ, ಈ ವಿಷಯ ಸದನದಲ್ಲಿ ಪ್ರಸ್ತಾಪವಾಗಿಲ್ಲ. ನಾನು ವಿಚಾರವನ್ನು ಅವಲೋಕಿಸಿ ನೋಡಿದಾಗ ಬಹಳ ಆಶ್ಚರ್ಯಕರವಾಗಿ ತಿಳಿದು ಬಂದ ಸಂಗತಿಯನ್ನು ಸದನಕ್ಕೆ ತಿಳಿಸುತ್ತಿದ್ದೇನೆ. ತೋಟಗಾರಿಕೆ ನಿರ್ದೇಶನಾಲಯದಲ್ಲಿ ಅತ್ಯಂತ ಕಿರಿಯ ಸಿಬ್ಬಂದಿಗಳಿಗೆ ಪೂರ್ವಾನ್ವಯವಾಗುವಂತೆ 1964-65 ರಿಂದಲೇ ಬಡ್ತಿ ನೀಡಿ ಬಾಕಿ ಹಣವನ್ನು ಪಾವತಿಸುವಂಥ ವ್ಯವಸ್ಥಿತವಾದ ಒಂದು ಯೋಜನೆ ಇಲ್ಲಿ ನಡೆದಿದೆ. ಉದಾಹರಣೆಗೆ, ಒಬ್ಬ ಅಧಿಕಾರಿಗೆ 1974ನೇ ಇಸವಿಯಿಂದಲೇ ಸಹಾಯಕ ತೋಟಗಾರಿಕಾ ಅಧಿಕಾರಿಯಾಗಿ ಅಂದರೆ ಗೆಜೆಟೆಡ್ ಆಫೀಸರ್ ಆಗಿ ಬಡ್ತಿ ನೀಡುವುದಕ್ಕೆ ಒಂದು ಲಕ್ಷದ ತೊಂಭತ್ತೂರು ಸಾವಿರ ರೂಪಾಯಿಗಳ ಬಾಕಿ ಹಣ ಕೊಟ್ಟಿದ್ದಾರೆ. ಈ ಅಧಿಕಾರಿಯ ಮೂಲ ವೇತನ ಎರಡು ಸಾವಿರ ರೂಪಾಯಿಗಳಾಗಿದ್ದು ಏರಿದ ವೇತನ ಏಳು ಸಾವಿರ ರೂಪಾಯಿಗಳು. ಅಂದರೆ, ಐದು ಸಾವಿರ ರೂಪಾಯಿಗಳನ್ನು ಒಮ್ಮಿಂದೊಮ್ಮೆಲೇ ಏರಿಸಿ ಪೂರ್ವಾನ್ವಯಾಗುವಂತೆ ಅವರಿಗೆ ಕೊಡುವುದಾದರೆ ಬಡ್ತಿಗೆ ಏನು ಬೆಲೆ ಬಂತು? ಇಂತಹ ಅನೇಕ ಉದಾಹರಣೆಗಳನ್ನು ನಾನು ಹೇಳುತ್ತೇನೆ. ಅದೇ ರೀತಿ ಇನ್ನೊಬ್ಬರಿಗೆ 1965 ರಿಂದ ಪೂರ್ವಾನ್ವಯವಾಗುವಂತೆ ತೋಟಗಾರಿಕೆ ಸಹಾಯಕ ಶ್ರೇಣಿಗೆ ಬಡ್ತಿ ನೀಡಿ ಒಂದು ಲಕ್ಷದ ತೊಂಭತ್ತು ಸಾವಿರ ರೂಪಾಯಿಗಳ ಬಾಕಿ ಹಣ ಪಾವತಿಸಲಾಗಿದೆ. ಮತ್ತೊಬ್ಬರ ಹೆಸರನ್ನು ನಾನು ಹೇಳಲು ಬಯಸುವುದಿಲ್ಲ. ಆದರೆ, ವಿಷಯ ಹೇಳುತ್ತೇನೆ. ನನ್ನ ಹತ್ತಿರ ಅದಕ್ಕೆ ಸಂಬಂಧಿಸಿದಂತೆ ಬೇಕಾದಷ್ಟು ಪುರಾವೆಗಳಿವೆ. ಮತ್ತೊಬ್ಬರನ್ನು ಸಹಾಯಕ ತೋಟಗಾರಿಕೆ ಅಧಿಕಾರಿಯಾಗಿ 1974 ರಿಂದಲೇ ಪೂರ್ವಾನ್ವಯಗೊಳಿಸಿ ಎರಡು ಲಕ್ಷ ನಲವತ್ತೆಂಟು ಸಾವಿರದ ಮುನ್ನೂರು ಐವತ್ತೇಳು ರೂಪಾಯಿಗಳ ಬಾಕಿ ಹಣವನ್ನು ದಿನಾಂಕ 31.5.95 ರಂದು ಪಾವತಿಸಿದ್ದಾರೆ. ಅದೇ ರೀತಿ ಇನ್ನೊಬ್ಬ ಸಹಾಯಕ ತೋಟಗಾರಿಕೆ ಅಧಿಕಾರಿಯಾಗಿ 1974 ರಿಂದ ಪೂರ್ವಾನ್ವಯಗೊಳಿಸಿ ದಿನಾಂಕ 31.5.95 ರಲ್ಲಿ ಒಂದು ಲಕ್ಷದ ನಲವತ್ತ ಆರು ಸಾವಿರ ರೂಪಾಯಿಗಳನ್ನು ಪಾವತಿಸಿದ್ದಾರೆ. ಇಲ್ಲಿ ಬಡ್ತಿಗೆ ಅರ್ಹತೆ ಅಳತೆಗೋಲಲ್ಲ ಬಡ್ತಿಗೆ ಇವರ ಅರ್ಹತೆ ಏನೆಂದರೆ 'ಪೂರ್ವಾನ್ವಯ' ಪೂರ್ವಾನ್ವಯ ನಮಗೆ ಚಾಲ್ತಿ ನಿಮಗೆ! ರೆಟ್ರಾಸ್ಪೆಕ್ಟಿವ್ ನಮಗೆ ಕೊಟ್ಟರೆ ಪ್ರಾಸ್ಪೆಕ್ಟಿವ್ ನಿಮಗೆ ಕೊಡುತ್ತೇವೆ ಎನ್ನುವಂಥ ಹೊಂದಾಣಿಕೆ ಇವರಲ್ಲಿ ಆಗಿರಬೇಕು! ಈ ತರಹ ಹೊಂದಾಣಿಕೆಯಿಂದ ನಡೆದಂಥ ದೊಡ್ಡ ಹಗರಣವನ್ನು ನಿಮ್ಮ ಮುಂದಿಡುತ್ತಿದ್ದೇನೆ. ಪ್ರಾಯಶಃ ಸದನದಲ್ಲಿ ಅರ್ಥ ಸಚಿವರು ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಅದರ ಬಗ್ಗೆ ಟ್ರಿಬ್ಯೂನಲ್ ಆರ್ಡರ್ ಏನಾದರೂ ಇದೆಯೇ?

ಶ್ರೀ ಯು.ಆರ್. ಸಭಾಪತಿ : ಟ್ರಿಬ್ಯೂನಲ್ ಆರ್ಡರ್ ಇಲ್ಲ, ಏನೂ ಇಲ್ಲ. ಇದರ ಜೊತೆಗೆ ಇನ್ನೂ ಹೇಳುತ್ತೇನೆ, ನನಗೆ ಇನ್ನು ಸ್ವಲ್ಪ ಸಮಯ ಬೇಕು. ಪ್ರಾಯಶಃ ಮುಂದಿನ ಸಾಲಿನ ವರ್ಷದ ಮುಂಗಡ ಪತ್ರದಲ್ಲಿ ಅರ್ಥ ಸಚಿವರು ತೋಟಗಾರಿಕೆ ಇಲಾಖೆಗೆ ಹಣ ಕೊಡುವುದಕ್ಕೆ ಹತ್ತು ಕೋಟಿ ರೂಪಾಯಿಗಳು ಬೇಕಾದೀತು. ಅವರು ಎಷ್ಟು ಚೆನ್ನಾಗಿ ಮಾಡಿದ್ದಾರೆಂದು ಹೇಳುತ್ತೇನೆ! ಸರಾಸರಿ ಒಬ್ಬರಿಗೆ ಎರಡು ಲಕ್ಷ ರೂಪಾಯಿಗಳ ಬಾಕಿ ಹಣದಂತೆ ಲೆಕ್ಕ ಹಾಕಿದರೂ ನೂರು ಜನರಿಗೆ ಎರಡು ಕೋಟಿ ರೂಪಾಯಿಗಳು ಬೇಕಾದೀತು. ಇದೇ ರೀತಿ ಈಗಾಗಲೇ ಬಡ್ತಿ ಹೊಂದಿರುವ ಅಧಿಕಾರಿ ನೇರವಾಗಿ ನ್ಯಾಯ ಮಂಡಳಿ ಮುಂದೆ ಹೋಗಿ ಮತ್ತೊಂದು ಬಡ್ತಿ ದೊರಕಿಸಿಕೊಳ್ಳಲು ಅರ್ಜಿ ಹಾಕಿದ್ದು ಬಡ್ತಿ ಕೊಡಬೇಕೆಂದು ನ್ಯಾಯ ಮಂಡಳಿ ಆದೇಶ ಕೊಟ್ಟಿದೆ. ಇದರ ಬಗ್ಗೆ ಒಂದು ವಾರದ ಹಿಂದೆ ಸರ್ಕಾರ ಮರುಪರಿಶೀಲನೆ ಮಾಡಿದಾಗ ಅದು ಬಿದ್ದುಹೋಯಿತು. ಈಗ ಆ ಅಧಿಕಾರಿಗೆ ಬಡ್ತಿ ಕೊಡುವುದಾದರೆ ಆ ಅಧಿಕಾರಿ ಮೇಲಿರತಕ್ಕ 120 ಜನರಿಗೆ ನೀವು ಬಡ್ತಿ ಕೊಡಲೇಬೇಕಾಗುತ್ತದೆ. ಆಗ ನಿಮಗೆ ಪುನಃ ಐದು ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಇನ್ನೊಂದು ಬಹಳ ಆಸಕ್ತಿಕರವಾದ ವಿಷಯ ಹೇಳುತ್ತೇನೆ. ಸದನದಲ್ಲಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿದ್ದಾರೆ. ತೋಟಗಾರಿಕೆ ಇಲಾಖೆಯಲ್ಲಿ ಗಾರ್ಡನರ್ ಮತ್ತು ಲ್ಯಾಬ್ ಅಟೆಂಡರ್ ಎಂದು ಎರಡು ವರ್ಗದ ಶ್ರೇಣಿಗಳಿವೆ.

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಗಹನವಾದ ವಿಚಾರವನ್ನು ಪ್ರಸ್ತಾಪಿಸುತ್ತಿದ್ದು, ದಯವಿಟ್ಟು ಆ ಕುರಿತ ವಿವರಗಳನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಅದನ್ನು ವಿಚಾರಣೆ ಮಾಡಿಸುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಖಂಡಿತವಾಗಿಯೂ ವಿವರಗಳನ್ನು ಕಳುಹಿಸಿಕೊಡುತ್ತೇನೆ. ಆದರೆ, ಅದಕ್ಕಿಂತ ಮೊದಲು ಸದನಕ್ಕೆ ಈ ವಿಷಯ ತಿಳಿಯಬೇಕು. ತೋಟಗಾರಿಕೆ ಇಲಾಖೆಯಲ್ಲಿ ಗಾರ್ಡನರ್ ಮತ್ತು ಲ್ಯಾಬ್ ಅಟೆಂಡರ್ ವರ್ಗದ ಹುದ್ದೆಗಳಿದ್ದು, ಸದರಿ ಹುದ್ದೆಗಳ ಶ್ರೇಣಿ ಬೇರೆ ಬೇರೆಯದಾಗಿದ್ದು ವೇತನ ಶ್ರೇಣಿಯಲ್ಲಿ ನೂರು ರೂಪಾಯಿಗಳ ವ್ಯತ್ಯಾಸವಿದೆ. ಇವರು ಏನೋ ಹೊಸ ಸಂಶೋಧನೆ ಮಾಡಿದರು! ಏನೆಂದರೆ, ಲ್ಯಾಬ್ ಅಟೆಂಡರ್ ಮತ್ತು ಗಾರ್ಡನರ್ ಈ ಎರಡೂ ಹುದ್ದೆಗಳಲ್ಲಿರುವವರನ್ನು ಒಂದೇ ಶ್ರೇಣಿ ಎಂದು ಪೂರ್ವಾನ್ವಯ ಗೊಳಿಸಿ 1965 ರಿಂದಲೇ ಅದು ಅವರಿಗೆ ಅನ್ವಯವಾಗುವಂತೆ ಅವರಿಗೆ ಬಾಕಿ ಹಣ ಕೊಟ್ಟಿದ್ದಾರೆ. ಇದಕ್ಕಿಂತ ದೊಡ್ಡ ಹಗರಣ ಇನ್ನೇನು ಬೇಕು? ಬಾಕಿ ಹಣ ಕೊಡುವುದಕ್ಕೆ ಕನಿಷ್ಟ ಎರಡು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಅವ್ಯವಹಾರ ಕುರಿತ ಅನೇಕ ಪುರಾವೆಗಳು ನನ್ನ ಹತ್ತಿರವಿದೆ. ಆದರೆ, ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ: ಪ್ರಾಯಶಃ ಮೊನ್ನೆ ಸದನ ಪ್ರಾರಂಭವಾಗುತ್ತದೆಂದು ತಿಳಿದು ಮತ್ತು ಆ ವಿಷಯದ ಕುರಿತು ಪತ್ರಿಕೆಗಳಲ್ಲಿ ಪ್ರಕಟವಾದಾಗ ಸದನದಲ್ಲಿ ಪ್ರಸ್ತಾಪಿಸಲು ಯಾರೋ ನೋಟೀಸ್ ಕೊಟ್ಟಿದ್ದಾರೆಂದು ಗಮನಕ್ಕೆ ತಂದುಕೊಂಡು ಏನು ಮಾಡಿದ್ದಾರೆಂದರೆ, ಮೊನ್ನೆ ಶನಿವಾರ ತೋಟಗಾರಿಕೆ ಅಧಿಕಾರಿಗಳು ರಾತ್ರಿ 12 ಗಂಟೆಗಳ ತನಕ ಮತ್ತು ಆದಿತ್ಯವಾರವೂ ಸಹ ಕುಳಿತುಕೊಂಡು ಸುಮಾರು 70-75

ವಿಥಡ್ರಾಯಲ್ ಆರ್ಡರ್ ಮಾಡಿದ್ದಾರೆಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಯಾರ ಹತ್ತಿರ ಕೇಳಿ ಮಾಡಿದರು? ಆರ್ಥಿಕ ಇಲಾಖೆ ಮಂಜೂರಾತಿ ಕೊಡದೇ ಇವರು ಆದೇಶ ಮಾಡಿದರೇ? ಇದಕ್ಕೆ ಯಾರು ಹೊಣೆಗಾರರು? ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಿರುವ ಇಂತಹ ಅಧಿಕಾರಿಗಳನ್ನು ಕಿತ್ತುಹಾಕಿ. ಆ ಕುರಿತು ನಡೆದಿರುವ ಹಗರಣದ ಬಗ್ಗೆ ಸಮಗ್ರ ತನಿಖೆ ಮಾಡಿ. ಆ ಸಂಬಂಧಿತ ಕಡತಗಳು ನಿಮಗೆ ಸಿಗಲಿಕ್ಕಿಲ್ಲ. ಈ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ಸಿಗಬಹುದೆಂದು ಸೋಮವಾರದಿಂದಲೂ ಕಾಯುತ್ತಿದ್ದೇನೆ. ಗಮನ ಸೆಳೆಯುವ ಸೂಚನೆ ಮೂಲಕ ಪ್ರಸ್ತಾಪಿಸಲು ನೋಟೀಸ್ ಕಳುಹಿಸಿಕೊಟ್ಟರೆ ಕೂಡಲೇ ತೋಟಗಾರಿಕೆ ನಿರ್ದೇಶನಾಲಯ ನಿರ್ದೇಶನ ಹೋಗುತ್ತದೆಂದು ನನಗೆ ಗೊತ್ತಿತ್ತು. ಆದುದರಿಂದ, ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಕಳುಹಿಸದೆ ಇಷ್ಟು ದಿವಸ ಕುಳಿತುಕೊಂಡಿದ್ದೆ. ಕಡತಗಳನ್ನು ಎಲ್ಲೆಲ್ಲಿ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ಅದು ತಾಲ್ಲೂಕು ಮಟ್ಟದ ಕಛೇರಿಯಲ್ಲಿರಬಹುದು. ಆದುದರಿಂದ, ಈ ಬಗ್ಗೆ ಸಮಗ್ರವಾದ ತನಿಕೆ ನಡೆಸಬೇಕೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ದಯವಿಟ್ಟು ಈ ಕೂಡಲೇ ತಾವು ತೋಟಗಾರಿಕೆ ಇಲಾಖೆಯಲ್ಲಿ ಆ ಸಂಬಂಧಿತ ಕಡತಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು. ಅಷ್ಟೇ ಅಲ್ಲದೆ ಈ ಹಗರಣದ ತನಿಖೆಗಾಗಿ ಬೇಕಾದರೆ ಸದನ ಸಮಿತಿ ಮಾಡಿ, ಇದಕ್ಕೆ ಸಂಬಂಧಿಸಿದ ಪುರಾವೆ ನನ್ನ ಬಳಿ ಬೇಕಾದಷ್ಟಿವೆ. ಯಾರ್‍ಯಾರಿಗೆ ಎಷ್ಟೆಷ್ಟು ಬಡ್ತಿ ಸಿಕ್ಕಿವೆಯೆಂಬ ಬೆರಳಚ್ಚು ಮಾಡಿದ ಆದೇಶದ ಪತ್ರಗಳಿವೆ. ಇದು ಕನಿಷ್ಟ ಪಕ್ಷ ಇವತ್ತು ಕೋಟಿ ರೂಪಾಯಿಗಳ ಹಗರಣವೆಂದು ನಾನು ಹೇಳಬಯಸುತ್ತೇನೆ. ಇದಲ್ಲದೆ, ಇವರ ಗ್ರಾಚ್ಯುಟಿ, ಪೆನಷನ್, ಪ್ರತಿಯೊಂದಕ್ಕೂ ಅನ್ವಯವಾಗುವಂತೆ, ತಲಾ ತಲಾಂತರ ಇವರ ತಂದೆ-ಮಕ್ಕಳ ಕಾಲಕ್ಕೆ ಈ ರಾಜ್ಯದ ಸರ್ಕಾರದ ಬೊಕ್ಕಸಕ್ಕೆ ಬೀಳದಂಥ ಈ ಹಣದ ಹೊಣೆಗಾರಿಕೆಯನ್ನು ಯಾರು ವಹಿಸಬೇಕು? ಇವೊತ್ತು ಒಬ್ಬ ಎಂಎಲ್ಎ ಹಣ ಮಾಡಿದ, ಮಂತ್ರಿ ಹಣ ಮಾಡಿದ, ಹೋಟೆಲಿನಸಲ್ಲಿ ಮೆರೆದಾಡಿದ ಎಂದು ಹೇಳುತ್ತೀರಿ. ಆದರೆ, ನಮ್ಮ ಅಧಿಕಾರಿಗಳು ಸ್ವಾರ್ಥಕೋಸ್ಕರ ಮಾಡಿದಂಥ ಇಂತಹ ಹೊಣೆಗೇಡಿತನದ ಕೆಲಸಕ್ಕೆ ಜವಾಬ್ದಾರರು ಯಾರು? ಇವೊತ್ತು ನಮ್ಮನ್ನು ಎಲ್ಲರೂ ಕೈ ಮಾಡಿ ತೋರಿಸುತ್ತಾರೆ. ಅಧಿಕಾರಿಗಳು ತಪ್ಪಿಸಿಕೊಳ್ಳುವಂಥ ಅವಕಾಶವಿದೆ, ಆದರೆ, ನಾವು ತಪ್ಪಿಸಿಕೊಳ್ಳುವಂತಿಲ್ಲ. ಒಂದು ದಿವಸ ಎಲ್ಲಿಯಾದರೂ ನಾವು ಕಾಲು ಜಾರಿ ಬಿದ್ದರೆ ಅದು ಪತ್ರಿಕೆಗಳಲ್ಲಿ ವರದಿಯಾದರೆ ನಮ್ಮ ಚಾರಿತ್ರ್ಯಕ್ಕೆ ಹಾನಿಯಾಗುವುದಲ್ಲದೆ ನಮಗೆ ಭವಿಷ್ಯವೇ ಇರುವುದಿಲ್ಲ ಆದರೆ, ಅಧಿಕಾರಿಗಳು ಹಾಗಲ್ಲ. ಆತ ಅತಕ್ರಮವೆಸಗಿದರೆ ನೀವು ಒಂದು ಅಮಾನತು ಆದೇಶ ಹೊರಡಿಸುತ್ತೀರಿ. ನಂತರ ಆತ ರಾಜಕಾರಣಿಗಳನ್ನು ಹಿಡಿದು ಶಿಫಾರಸ್ಸು ಮಾಡಿಸಿದರೆ ಮತ್ತೆ ಆತನನ್ನು ನೇಮಕಾತಿಗೊಳಿಸುತ್ತೀರಿ. ಇದು ನಡೆಯುವಂಥ ಘಟನೆ. ಹಾಗಾದರೆ, 'ಹಗರಣರಹಿತ ಸರ್ಕಾರ' ವೆಂದು ಹೇಗೆ ಪ್ರತಿಪಾದಿಸುತ್ತೀರಿ? ಇವರ ಬಗ್ಗೆ ನಾನು ತಮಗೆ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನೊಂದು ಸ್ವಾರಸ್ಯಕರವಾದ ವಿಚಾರವನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳಬಯಸುತ್ತೇನೆ. ನಮ್ಮ ಬೆಂಗಳೂರು ಜಿಲ್ಲೆಯಲ್ಲಿರುವ ಇಡೀ ಏಷ್ಯಾದಲ್ಲೇ ಪ್ರಪ್ರಥಮವಾಗಿರುವ ಸಂಜಯಗಾಂಧಿ ಸ್ಮಾರಕ ಅಪಘಾತ ಆಸ್ಪತ್ರೆ ಮತ್ತು ಕೃತಕ ಅಂಗ ಪುನರ್ವಸತಿ ಕೇಂದ್ರವಿದೆ. ಇದು 1984 ರಲ್ಲಿ ಪ್ರಾರಂಭವಾಯಿತು. ಅಪಘಾತದಲ್ಲಿ ಏನಾದರೂ ಕೈ-ಕಾಲುಗಳು ತುಂಡಾದರ ಸದರಿ

ಆಸ್ಪತ್ರೆಯಲ್ಲಿ ಶುಶ್ರೂಷೆ ಮಾಡಿ ಅವರಿಗೆ ಅನಂತರ ಕೃತಕ ಅಂಗವನ್ನು ಜೋಡಿಸುವಂಥ ಕೆಲಸ ನಡೆದಿದೆ. ಸಾರ್ವಜನಿಕರ ದೇಣಿಗೆಯಿಂದ ಖರೀದಿಸಿದ ನಾನು ತರಹದ ಚಿಕಿತ್ಸೆಯನ್ನು ಅತ್ಯಂತ ಯಶಸ್ವಿಯಾಗಿ ಮಾಡತಕ್ಕಂಥ ಅನೇಕ ಯಂತ್ರೋಪಕರಣಗಳೂ ಕೂಡ ಬಂದಿದೆ. ಈ ಆಸ್ಪತ್ರೆ 1984 ರಿಂದ 1992 ರವರೆಗೆ ಬಹಳ ಚೆನ್ನಾಗಿ ನಡೆಯುತ್ತಿತ್ತು. ಹಿಂದೆ ಅಲ್ಲಿ ಪ್ರೊಫೆಸರ್ ನಾಗರಾಜರಾವ್ ಎಂಬುವವರು ಸುಮಾರು ಹದಿನೈದು ವರ್ಷಗಳ ಕಾಲ ಅಮೇರಿಕಾದಲ್ಲಿದ್ದು ದುಡಿದು ಅನುಭವ ಪಡೆದುಕೊಂಡು ಆಸ್ಪತ್ರೆಯ ಮುಖ್ಯಸ್ಥರಾಗಿ ಬಂದಿದ್ದರು. ಆದರೆ, 1992 ರಲ್ಲಿ ಏಕಾಏಕಿ ಡಾ|| ಪರಂಗುದಾಸ್ ಎನ್ನುವ ಒಬ್ಬರು ಅಲ್ಲಿಗೆ ನಿರ್ದೇಶಕರಾಗಿ ನೇಮಕರಾದರು. ಅವರು ನಿರ್ದೇಶಕರಾಗಿ ಬಂದ ನಂತರ ಪ್ರಥಮವಾಗಿ ಕೇಂದ್ರಕ್ಕೆ ವಿದ್ಯುತ್, ನೀರು ಸರಬರಾಜು ಮಾಡದೆ ಸಂಪೂರ್ಣವಾಗಿ ಕೇಂದ್ರವನ್ನು ಮುಚ್ಚಿದರು. ಇದು ದೊಡ್ಡ ಸಾಧನೆ! ನಾನು ಕಳೆದ ಬಾರಿಯೂ ಕೂಡ ಇದರ ಬಗ್ಗೆ ಹೇಳಿದ್ದೆ. ಇದೊಂದು ಹಗರಣವಲ್ಲವೇ? ಇದನ್ನು ರಿಪೇರಿ ಮಾಡಬೇಕೆಂದು ಪ್ರಶ್ನಿಸಿದಾಗ ಇದಕ್ಕೆ ಏನೋ ಒಂದು ಹಾರಿಕೆ ಉತ್ತರ ಬಂತು. ಅನಂತರ ಅಲ್ಲಿ ಮೂರೂವರೆ ಕೋಟಿ ರೂಪಾಯಿಗಳ ಯಂತ್ರೋಪಕರಣಕ್ಕೆ...

ಡಾ|| ಯು. ಚಿತ್ರರಂಜನ್ : ನಾನೂ ಕೂಡ ಆ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದೇನೆ. ಕೃತಕ ಅಂಗಗಳ ಪುನರ್ವಸತಿ ಕೇಂದ್ರದಲ್ಲಿ ಒಂದು ವರ್ಷಕ್ಕೆ ಅರವತ್ತು ಸಾವಿರ ರೂಪಾಯಿಗಳಂತೆ ಕಳೆದ ಮೂರು ವರ್ಷಗಳಿಂದ ಸರ್ಕಾರ ಇಪ್ಪತ್ತೊಂದು ಲಕ್ಷದ ಅರವತ್ತು ಸಾವಿರ ರೂಪಾಯಿಗಳಷ್ಟು ಹಣ ಸುರಿಸುತ್ತಿದೆ. ಆದರೆ, ಒಂದು ಪೈಸೆಯಷ್ಟೂ ಕೆಲಸ ಅಲ್ಲಿ ಆಗುತ್ತಿಲ್ಲ.

ಶ್ರೀ ಯು.ಆರ್. ಸಭಾಪತಿ : 75 ಹಾಸಿಗೆಗಳ ಈ ಆಸ್ಪತ್ರೆಗೆ ಖಾಯಂ ಸಿಬ್ಬಂದಿಗಳು 126, 23 ವೈದ್ಯರಿದ್ದು, 30 ದಾದಿಯರಿದ್ದಾರಲ್ಲದೆ 50 ವಾರ್ಡ ಬಾಯಗಳಿದ್ದಾರೆ. ಅಲ್ಲಿರುವ ವೈದ್ಯರುಗಳಿಗೆ ಕೆಲಸವೇ ಇಲ್ಲ, ಸುಮ್ಮನೆ ಕುಳಿತುಕೊಳ್ಳುವುದು. ಇದರಿಂದ ವರ್ಷಕ್ಕೆ ನಾವು ಎಷ್ಟು ಲಕ್ಷ ರೂಪಾಯಿಗಳನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕು. ಇಡೀ ಏಷ್ಯಾದಲ್ಲಿಯೇ, ಇಡೀ ಕರ್ನಾಟಕಕ್ಕೆ ಹೆಸರು ಬರುವಂಥ 'ಕೃತಕ ಅಂಗ ಪುನರ್ವಸತಿ ಕೇಂದ್ರ' ದ ಪರಿಸ್ಥಿತಿ ಆ ರೀತಿಯಾದರೆ ಇಲ್ಲಿ ಎಂಥ ಹಗರಣ ನಡೆಯುತ್ತಿರಬೇಕು ಎಂಬ ಬಗ್ಗೆ ಗಮನಹರಿಸಬೇಕಾಗಿದೆ. ಅಲ್ಲಿನ ನಿರ್ದೇಶಕರಾದ ಪರಂಗುದಾಸ್ ರವರು ಮುಖ್ಯಮಂತ್ರಿಗಳ ಹೆಸರಿನಲ್ಲಿ ಆಶ್ರಯವನ್ನು ಪಡೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳ ಹೆಸರಿಗೆ ಅನ್ಯಾಯ ಮಾಡತಕ್ಕ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಬಹುಶಃ ಈ ವಿಚಾರ ಮುಖ್ಯಮಂತ್ರಿಯವರಿಗೆ ಗೊತ್ತಿಲ್ಲ, ಇವತ್ತು ಅಲ್ಲಿ ಒಂದಲ್ಲ ಎರಡಲ್ಲ ಹಲವಾರು ಹಗರಣಗಳು ಅಲ್ಲಿ ನಡೆಯುತ್ತಿದೆ. ಅಲ್ಲಿ ಕಟ್ಟಡವನ್ನು ಕಟ್ಟಿದರು, ಯಂತ್ರೋಪಕರಣಗಳನ್ನು ತಂದಿದ್ದಾರೆ. ಆದರೆ ಅದರಲ್ಲಿ ವಾಸ್ತವಿಕವಾದ ಅಂಶ ಎಷ್ಟು ಇದೆ ಎಂಬ ಬಗ್ಗೆ ಮಾನ್ಯ ಆರೋಗ್ಯ ಸಚಿವರು ಹೇಳಬೇಕು. ಒಂದು ವೇಳೆ ಈ ಸಂಸ್ಥೆ ಮುಖ್ಯಮಂತ್ರಿಗಳ ನೇರ ಅಧಿಕಾರದಲ್ಲಿ ಇದ್ದರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ದಯವಿಟ್ಟು ತನಿಖೆ ಮಾಡಬೇಕು. ಇಂತಹ ಹಗರಣಕ್ಕೆ ಕಾರಣರಾದಂಥವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅಲ್ಲಿನ ನಿರ್ದೇಶಕರಿಗೂ ಮುಖ್ಯಮಂತ್ರಿಗಳಿಗೂ ಏನಾದರೂ ಸಂಬಂಧವಿದೆಯೇ? ಮುಖ್ಯಮಂತ್ರಿಗಳ ಊರಿನ ಇಲ್ಲವೇ ಜಾತಿಯ ಸಂಬಂಧವೇನಾದರೂ ಇದೆಯೇ?

ಶ್ರೀ ಯು. ಆರ್. ಸಭಾಪತಿ : ಇವರಿಗೂ ಮುಖ್ಯಮಂತ್ರಿಗಳಿಗೂ ಸಂಬಂಧವಿರುವ ಬಗ್ಗೆ ನನಗೆ ಗೊತ್ತಿಲ್ಲ. ಪರಂಗು ದಾಸರವರು ಮುಖ್ಯಮಂತ್ರಿಗಳಾದ ದೇವೇಗೌಡರು ಇದುವವರೆಗೆ ನನ್ನನ್ನು ಯಾರೂ ಕದಡಿಸುವವರು ಇಲ್ಲವೆಂದು ಘಂಟಾಘೋಷವಾಗಿ ಹೇಳುತ್ತಿದ್ದಾರೆ. ಅದಕ್ಕೆ ಕಾರಣವೇನು ಎಂಬ ಬಗ್ಗೆ ನನ್ನನ್ನು ಕೇಳಬೇಡಿ. ಅದರ ಬಗ್ಗೆ ಅವರೇ ಪರಿಶೀಲನೆ ಮಾಡಿ ತಿಳಿದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಹಲವಾರು ಸಂದರ್ಭಗಳಲ್ಲಿ ಅಧಿಕಾರಿಗಳನ್ನು ಏನಾದರೂ ಕೇಳಿದರೆ ಮುಖ್ಯಮಂತ್ರಿಗಳ ಹೇಳಿದರೂ ಮಾಡಲಾಗುವುದಿಲ್ಲವೆಂದು ಹೇಳುತ್ತಾರೆ. ಆ ರೀತಿ ಎಲ್ಲಾದರೂ ಹೇಳಿರಬಹುದು. ಆದ್ದರಿಂದ ಅದನ್ನೇ ದೊಡ್ಡ ವಿಷಯವನ್ನಾಗಿ ಪರಿಗಣಿಸಬಾರದು.

ಶ್ರೀ ಯು.ಆರ್. ಸಭಾಪತಿ : ಅಧ್ಯಕ್ಷರೆ, ಇಂತಹ ಮಾತುಗಳನ್ನು ಅನೇಕ ಕಡೆಗಳಲ್ಲಿ ಬಳಸಬಹುದು, ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಕಳೆದ ಮೂರುನಾಲ್ಕು ವರ್ಷಗಳಿಂದ ಇಲ್ಲಿ ಆಗುತ್ತಿರತಕ್ಕ ಹಗರಣಕ್ಕೆ ನೇರವಾದ ಆಶ್ರಯ ಮುಖ್ಯಮಂತ್ರಿಗಳಾದ ದೇವೇಗೌಡರದ್ದು ಇದೆಯೆಂದು ಈಗ ಹೇಳುತ್ತಿದ್ದಾರೆ. ಆ ಮನುಷ್ಯನೇ ಆ ರೀತಿ ಹೇಳಿಕೊಂಡು ಬರುತ್ತಿದ್ದಾರೆ. ಇನ್ನೂ ಎಂದು ಮೂರು ವಿಚಾರಗಳನ್ನು ನಾನು ಹೇಳಬೇಕಾಗಿದೆ. ತಾವು ಸಮಯವನ್ನು ಹೆಚ್ಚಾಗಿ ಕೊಡದಿದ್ದರೂ ನನ್ನ ಅನಿಸಿಕೆಗಳನ್ನು ನಾನು ಹೇಳಬೇಬೇಕಾಗಿದೆ. ನಮ್ಮ ರಾಜ್ಯಪಾಲರ ಭಾಷಣದಲ್ಲಿನ ಮಟ್ಟ ಹನ್ನೊಂದರ ಇಪ್ಪತ್ತಮೂರನೇ ಕಂಡಿಕೆಯಲ್ಲಿ " ನನ್ನ ಸರ್ಕಾರವು, ಕೈಗಾರಿಕಾ ಅಭಿವೃದ್ಧಿಯಲ್ಲಿ ವಿಶೇಷವಾಗಿ ರಾಜ್ಯದ ಕರಾವಳಿ ಪ್ರದೇಶದಲ್ಲಿನ ಕೈಗಾರಿಕಾ ಅಭಿವೃದ್ಧಿಯಲ್ಲಿ ಒಳಗೊಂಡಿರುವ ಜೀವಿ-ಪರಿಸ್ಥಿತಿ ವಿಷಯಗಳಿಗೆ ಸೂಕ್ಷ್ಮ ಗಮನ ನೀಡುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಡ್ಯಾನಿಡಾ ನೆರವಿನ ಪರಿಸರ ಸಂಬಂಧ ಬೃಹತ್ ಯೋಜನೆಯ ಅಧ್ಯಯನವು ಪೂರ್ಣಗೊಂಡಿದೆಯೆಂದೂ ಮತ್ತು ಅದು ಮಾಡಿದರೂ ಶಿಫಾರಸ್ಸುಗಳನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ ಯೆಂದು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತದೆ" ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನನಗೆ ಆಶ್ಚರ್ಯವಾಗುತ್ತಿದೆ, ತೊಟ್ಟಿಲಿನಲ್ಲಿ ಮಗುವನ್ನಿಟ್ಟು ಒಂದು ಕೈಯಲ್ಲಿ ಜೋಗುಳವನ್ನಾಗಿ ಮತ್ತೊಂದು ಕೈಯಿಂದ ಆ ಮಗುವಿನ ಕುತ್ತಿಗೆಯನ್ನು ಹಿಚುಕತಕ್ಕ ಕೆಲಸವನ್ನು ನೀವು ಮಾಡುತ್ತಿದ್ದೀರಿ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಡ್ಯಾನಿಡಾ ನೆರವಿನ ಪರಿಸರ ಸಂಬಂಧ ಬೃಹತ್ ಯೋಜನೆಯ ಅಧ್ಯಯನವು ಯಾವಾಗ ಆಗಬೇಕಾಗಿತ್ತು? ಈ ಜಿಲ್ಲೆಗೆ ಕೈಗಾರಿಕೆಗಳು ಬರುವುದು ಸೂಕ್ತವೋ, ಇಲ್ಲವೋ ಎಂಬುದನ್ನು ಆಲೋಚನೆ ಮಾಡಿ ಅವುಗಳಿಗೆ ಪರವಾನಗಿಯನ್ನು ಕೊಡುವ ಮೊದಲೇ ಆಗಬೇಕಾಗಿತ್ತು. ರೋಗವು ಬರುವ ಮೊದಲೇ ನಾವು ಯೋಚನೆ ಮಾಡಬೇಕೇ ವಿನಹ ರೋಗ ಬಂದವರನ್ನು ನಮ್ಮ ಜಿಲ್ಲೆಗೆ ತಂದುಹಾಕಿ ಅನಂತರ ನಿಮಗೆ ಮದ್ದನ್ನು ಕೊಡಲು ಅಧ್ಯಯನ

ಮಾಡುತ್ತೇವೆಂದು ಹೇಳಿದಂತಾಗಿದೆ. ನಾನು ತಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ ತಾವು ಉದಾರೀಕರಣದ ನೀತಿಯಲ್ಲಿ, ಉದ್ಯೋಗಾವಕಾಶದ ನೀತಿಯಲ್ಲಿ ಮತ್ತೆ ಮತ್ತೆ ನಮ್ಮ ಜಿಲ್ಲೆಯಲ್ಲಿ ಅಶಾಂತಿಯನ್ನು ತರಬೇಡಿ. ನಾವುಗಳು ಕಳೆದುಕೊಂಡಿರುವ ಭೂಮಿಯ ಬಗ್ಗೆ ತಮಗೆ ಮಾಹಿತಿಯನ್ನು ನೀಡುತ್ತೇವೆ. ನಾವು ಆರ್ಥಿಕಾಭಿವೃದ್ಧಿಗೆ ಏನೇನು ಮಾಡಿದ್ದೇವೆ ಎಂಬ ಬಗ್ಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ನಮ್ಮಲ್ಲಿ ನವ ಮಂಗಳೂರು ಬಂದರು ಆಯಿತು, ಅದಕ್ಕೆ 2600 ಎಕರೆ ಭೂಮಿಯನ್ನು ಕಳೆದುಕೊಂಡೆವು, ಅನಂತರ ಕುದುರೆಮುಖ ಕಬ್ಬಿಣದ ಅದಿರಿನ ಯೋಜನೆಯ ಘಟಕಕ್ಕೆ 300 ಎಕರೆ, ಎಂ.ಸಿ.ಎಫ್.ಗೆ 300, ಮಂಗಳೂರು ಹಾಸನ ರೈಲ್ವೆಗೆ 950 ಎಕರೆ, ಕೆ.ಆರ್.ಇ.ಸಿ.ಗೆ 500 ಎಕರೆ, ಕೊಂಕಣ ರೈಲ್ವೆಗೆ 1600 ಎಕರೆ, ಎಂ.ಆರ್.ಪಿ.ಎಲ್. ನವರಿಗೆ 2600 ಎಕರೆ ಕೈಗಾರಿಕಾ ಎಸಸ್ಟೇಟಗಳಿಗೆ ಒಟ್ಟು 3,000 ಎಕರೆ. ಬಿ.ಎ.ಎಸ್.ಎಫ್. ಗೆ 200 ಎಕರೆ, ಇತ್ತೀಚೆಗೆ ನಾಗಾರ್ಜುನ ಉಕ್ಕು ಸ್ಥಾವರಕ್ಕೆ 1,800 ಎಕರೆ, ನಾಗಾರ್ಜುನ ವಿದ್ಯುತ್ ಸ್ಥಾವರಕ್ಕೆ 1600 ಎಕರೆ, ಕೊಜೆಂಟ್ರಿಕ್ಸ್‌ಗೆ 1350 ಎಕರೆ, ಉಶಾ ಸಂಸ್ಥೆಯವರಿಗೆ 1300 ಎಕರೆ, ಯಾಸೀನ್ ಸಂಸ್ಥೆಗೆ 500 ಎಕರೆ, ಕೆನರಾ ಸ್ಟೀಲ್‌ಗೆ 200 ಎಕರೆ ಏಶಿಯನ್ ಪೈಂಟ್ಸ್‌ಗೆ 30 ಎಕರೆ, ಭಾರತ್ ಪೆಟ್ರೋಲಿಯಂಗೆ• 70 ಎಕರೆ, ಹಿಂದೂಸ್ಥಾನ ಪೆಟ್ರೋಲಿಯಂಗೆ 35 ಎಕರೆ ಇನ್ನುಳಿದ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗೆ 500 ಎಕರೆ, ವಿಶ್ವವಿದ್ಯಾನಿಲಯಕ್ಕೆ 500 ಎಕರೆ ಕೊಡಲಾಗಿದೆ. ವಿದ್ಯಾಸಂಸ್ಥೆಗಳಿಗೆ ಕೊಟ್ಟಿರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ, ಒಟ್ಟು ಇವೆಲ್ಲವನ್ನು ಲೆಕ್ಕ ಮಾಡಿದರೆ ನಾವು 20,500 ಎಕರೆ ಭೂಮಿಯನ್ನು ಕಳೆದುಕೊಂಡೂ ನೀವು ಮತ್ತೆ ಮತ್ತೆ ನಮ್ಮಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಹೊರಟಿದ್ದೀರಿ, ಈ ರೀತಿಯಾದರೆ ನಾವು ಎಲ್ಲಿಗೆ ಹೋಗಬೇಕು? ಈಗಾಗಲೆಲ್ಲ ಭೂಮಿಯನ್ನು ಕಳೆದುಕೊಂಡಿರುವವರಿಗೆ ಬೇರೆಕಡೆಗೆ ಸ್ಥಳಾಂತರ ಮಾಡಿದಿರಿ, ಈಗ ಅಲ್ಲಿಂದ ಪುನಃ ಅವರುಗಳನ್ನು ಮತ್ತೊಂದು ಕಡೆಗೆ ಸ್ಥಳಾಂತರ ಮಾಡುತ್ತಿದ್ದೀರಿ. ಇಲ್ಲಿ ಭೂಮಿಯನ್ನು ಕಳೆದುಕೊಂಡಿರುವವರಿಗೆ ಬೇರೆಕಡೆಗೆ ಸ್ಥಳಾಂತರ ಮಾಡಿದಿರಿ, ಇಲ್ಲಿ ಭೂಮಿಯನ್ನು ಕಳೆದುಕೊಂಡಿರುವ ಅನೇಕ ತೋಟಗಾರರು, ಕೃಷಿಗಾರರಿದ್ದಾರೆ, ಅವರುಗಳಿಗೆ ತಾವು ಉದ್ಯೋಗವನ್ನು ಕೊಡುತ್ತೀರೋ? ಒಬ್ಬ ಕೃಷಿಕ, ತೋಟಗಾರಿಕೆ ಮಾಡುವವ ಅವನ ಸಂಪತ್ತನ್ನು ಅವರಿಗಿರುವ ಭೂಮಿಯಿಂದ ಪಡೆಯಬೇಕು, ಭೂಮಿಯನ್ನು ಬದಲಾವಣೆ ಮಾಡುವುದಕ್ಕೆ ಖಂಡಿತವಾಗಿ ಆಗುವುದಿಲ್ಲ. ಒಬ್ಬ ವ್ಯಕ್ತಿಗೆ ಒಂದು ಉದ್ಯೋಗವೆಂದು ಹೇಳಿಕೊಂಡು ನಾವು ರೈತರನ್ನು ಈ ವ್ಯವಸ್ಥೆಗೆ ತರಲು ಹೋದರೆ ಆ ಎಲ್ಲಾ ರೈತರಿಗೆ ತಾವು ಯಾವ ರೀತಿಯಲ್ಲಿ ಕೆಲಸವನ್ನು ಕೊಡುತ್ತೀರಿ? ತಾವು ಉದ್ಯೋಗವನ್ನು ಕೊಡುವ ಬಗ್ಗೆ ಹೇಳುತ್ತೀರಿ, ಆದರೆ ನಮ್ಮಲ್ಲಿ ಈಗಾಗಲೇ ಬಂದಿರುವ ನವ ಮಂಗಳೂರು ಬಂದರಿನಲ್ಲಾಗಲಿ, ಎಂ.ಸಿ.ಎಫ್ ಗಳಾಗಿರುವ ನಮ್ಮ ಜಿಲ್ಲೆಯಲ್ಲಿ ಭೂಮಿಯನ್ನು ಕಳೆಮುಕೊಂಡವರಿಗೆ ಯಾರಿಗೂ ಕೆಲಸವನ್ನು ಕೊಟ್ಟಿಲ್ಲ.

ಅಧ್ಯಕ್ಷರು : ತಮ್ಮ ಭಾಷಣವೇನೋ ನಿರಂತರವಾಗಿ ಸಾಗುತ್ತಿದೆ, ನಾವುಗಳೆಲ್ಲರೂ ಬೆಳಿಗ್ಗೆಯಿಂದಲೂ ಇಲ್ಲಿ ಕುಳಿತಿದ್ದೇವೆ, ಕೆಲವರಿಗೆ ಡಯಾಬಿಟಿಕ್ ಇದೆ, ಹೊಸ ಸದಸ್ಯರುಗಳು ಮಾತನಾಡುತ್ತಾರೆ, ಯಾರೂ ಹೋಗಬಾರದೆಂದು ಎಲ್ಲಾರಿಗೂ ಸಹಕಾರವನ್ನು ಕೊಡುವಂತೆ

ಇಲ್ಲಿರಲು ಹೇಳಿರುತ್ತೇನೆ. ವಿರಾಮವನ್ನು ಕೊಟ್ಟರೆ ಎಲ್ಲರೂ ವಾಪಸ್ ಬರುತ್ತಾರೆಂದು ನನಗೆ ನಂಬಿಕೆ ಇಲ್ಲ. ವಿರಾಮ ಕೊಟ್ಟರೆ ಮತ್ತೆ ವಿರಾಮವೇ ಆಗುತ್ತದೆ. ಇಲ್ಲಿಗೇ ಸದನವನ್ನು ಮುಂದೂಡಿದರೆ ಸುಮಾರು ಜನ ಸದಸ್ಯರಿಗೆ ಮಾತನಾಡುವ ಅವಕಾಶ ದೊರೆಯುವುದಿಲ್ಲ. ಈಗ ಸದನವನ್ನು ಮುಂದೂಡಿ ಪುನಃ ಮೂರು ಘಂಟೆಗೆ ಸೇರೋಣವೆಂದರೆ ನಾನು ತಯಾರಾಗಿದ್ದೇನೆ, ಅಥವಾ ಯಾರ್ಯಾರಿಗೆ ಸ್ವಲ್ಪ ತೊಂದರೆಯಾಗಿದೆ ಅವರುಗಳು ಹೋಗಿ ಹತ್ತು ನಿಮಿಷವಿದ್ದು ವಾಪಸ್ ಬರಲಿ, ನಾವುಗಳು ಹೀಗೆ ಚರ್ಚೆ ಮಾಡೋಣವೆಂದು ಹೇಳುವುದಾಗಿದ್ದರೆ ಅದಕ್ಕೂ ನಾನು ತಯಾರಾಗಿದ್ದೇನೆ, ಆದ್ದರಿಂದ ಯಾವ ರೀತಿ ಮಾಡೋಣ ಹೇಳಿ?

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೆ, ಇಲ್ಲಿಗೆ ಸದನವನ್ನು ಮುಂದೂಡಿ ಸೋಮವಾರ ಬೆಳಿಗ್ಗೆ 9 ಗಂಟೆಗೆ ಸೇರೋಣ. ಇವತ್ತು ನಾವೆಲ್ಲರೂ ಊರಿಗೆ ಹೋಗಬೇಕು.

ಅಧ್ಯಕ್ಷರು : ಸುಮಾರು ಜನ ಸದಸ್ಯರುಗಳು ಮಾತನಾಡಲು ಹೆಸರನ್ನು ಕೊಟ್ಟಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಬಹಳ ಜನರು ಮಾತನಾಡಲು ಹೆಸರನ್ನು ಕೊಟ್ಟಿದ್ದರೆ ಮಧ್ಯಾಹ್ನ ಬಂದೇ ಬರುತ್ತಾರೆ!

ಅಧ್ಯಕ್ಷರು : ತಾವೆಲ್ಲರೂ ಒಪ್ಪಿಕೊಂಡರೆ ಈಗ ಸದನವನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರೋಣ. ಅನಂತರ ಒಂದೆರಡು ಗಂಟೆಗಳ ಕಾಲ ಚರ್ಚೆ ಮಾಡಿದರೆ ಪಟ್ಟಿಯಲ್ಲಿರುವ ಹೆಸರುಗಳು ಕಡಿಮೆಯಾಗುತ್ತದೆ. ಉಳಿದವರು ಸೋಮವಾರ ಮಾತನಾಡಲು ಅನುಕೂಲವಾಗುತ್ತದೆ. ಸಭಾಪತಿಯವರದ್ದು ಇನ್ನು ಐದು ನಿಮಿಷ ಮಾತನಾಡುವುದಿದೆ. ಅವರು ಮಾತನಾಡಲು ಪ್ರಾರಂಭ ಮಾಡಿ ಈಗಾಗಲೇ ಅರ್ಧ ಗಂಟೆಯಾಗಿದೆ, ಅವುರ ಶೀಘ್ರವಾಗಿ ಮುಗಿಸಬೇಕು.

ಶ್ರೀ ಯು.ಆರ್. ಸಭಾಪತಿ : ಅಧ್ಯಕ್ಷರೆ, ನಮ್ಮ ಮನಸ್ಸಿನ ನೋವನ್ನು ಈ ಸದನದಲ್ಲಿ ಹೇಳದೆ ಬೇರೆ ಮಾರ್ಗವಿಲ್ಲ, ತಾವು ಐದು ನಿಮಿಷವಾಗಲಿ ಹತ್ತು ನಿಮಿಷವಾಗಲಿ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು : ನಾವು ಪುನಃ ಮೂರು ಗಂಟೆಗೆ ಸೇರೋಣ, ಉಪಮುಖ್ಯಮಂತ್ರಿಯವರೇ ತಾವೇನು ಹೇಳುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್ : ಆಗಬಹುದು.

ಅಧ್ಯಕ್ಷರು : ಮಾನ್ಯ ವಾಟಾಳ್ ರವರೆ, ತಾವು ವೈ. ರಾಮಕೃಷ್ಣರವರು, ಜಾಲಪ್ಪನವರು ಪಟೇಲರು ಎಲ್ಲರೂ ಹಿರಿಯರಾಗಿದ್ದೀರಿ, ಹೊಸಬರಿಗೆ ಉತ್ತೇಜನ ಕೊಡತಕ್ಕ ಜವಾಬ್ದಾರಿ ತಮ್ಮ ಮೇಲಿದೆ, ತಾವೇನು ಇದರ ಬಗ್ಗೆ ಹೇಳುತ್ತೀರಿ?

ಶ್ರೀ ವಾಟಾಳ್‌ನಾಗರಾಜ್ : ತಾವು ರಾತ್ರಿ ಹನ್ನೆರಡು ಗಂಟೆಯವರೆಗೆ ಇಲ್ಲಿ ಚರ್ಚೆ ಮಾಡೋಣವೆಂದರೆ ನಾನು ಸಿದ್ದನಿದ್ದೇನೆ. ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ದಯಮಾಡಿ ನಾನು ಎಲ್ಲರಲ್ಲೂ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಈಗ ಸದನವನ್ನು ಮುಂದೂಡಿ ಪುನಃ ಮೂರುಗಂಟೆಗೆ ಸೇರೋಣ. ಸಭಾಪತಿಯವರು ಇನ್ನು ಐದು ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು. ಇನ್ನೂ ಹಲವಾರು ಸದಸ್ಯರುಗಳು ಮಾತನಾಡಬೇಕಾಗಿದೆ. ತಾವು ಮುಗಿಸುವ ಹೊತ್ತಿಗೆ ಎರಡೂವರೆಯಾಗುತ್ತದೆ. ಅನಂತರ ಮತ್ತೆ ಮೂರೂವರೆಗೆ ಸೇರೋಣ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೇ, ಇವತ್ತು ಸುಮಾರು 20 ಸಾವಿರ ಎಕರೆಯಲ್ಲಿ, ಮಧ್ಯದಲ್ಲಿ ಪುನಃ ರಸ್ತೆಗಳ ತೋಡುಗಳ ಲೆಕ್ಕಾಚಾರ ಹಾಕಲಿಲ್ಲ. ಅದು ಸುಮಾರು 2 ಸಾವಿರ ಎಕರೆ ಬೇರೆ ಹೋಗುತ್ತಿದೆ. ಇದರ ಜೊತೆಗೆ ನಮ್ಮ ಜಿಲ್ಲೆಯಲ್ಲಿ ನೀರಿನ ಒಂದು ಅವಕಾಶ ವಿಫಲವಾಗಿದೆ ಎನ್ನುವಂತಹ ಮಾತನ್ನು ಸರ್ಕಾರವು ಆಗ್ಗಿಂದಾಗ್ಗೆ ಹೇಳಿಕೊಂಡು ಬಂದಿದೆ. ಇದು ಸುಳ್ಳು. ನಮ್ಮ ಜಿಲ್ಲೆಯಲ್ಲಿ ನೀರಿನ ಒಂದು ಅವಕಾಶ ವಿಫಲವಾಗಿಲ್ಲ. ನಮ್ಮಲ್ಲಿ, ನಮ್ಮ ಇಡೀ ಜಿಲ್ಲೆಯಲ್ಲಿ 22 ನದಿಗಳು ಹರಿಯುತ್ತಿವೆ. ಅದರಲ್ಲಿ ನೇತ್ರಾವತಿ ಒಂದೇ ದೊಡ್ಡ ನದಿ. ಈ ನೇತ್ರಾವತಿ ನದಿ ಸುಮಾರು 65 ಕಿ.ಮೀ. ಇದ್ದರೂ ಕೂಡ ಸುಮಾರು 17 ಕಿ.ಮೀ. ತನಕ ಈ ಸಮುದ್ರದ ನೀರು ಹಿನ್ನೀರು ಬರುತ್ತದೆ. ಅದೇ ರೀತಿ ಉಳಿದಿರತಕ್ಕಂತಹ 21 ನದಿಗಳಲ್ಲಿ ಮುಕ್ಕಾಲು ಅಂಶ ನದಿಗಳೆಲ್ಲಾ ಬಾಕ್ ವಾಟರನಲ್ಲಿ ಇರತಕ್ಕಾಂಥ ನದಿಗಳೇ ಆಗಿವೆ. ಇವತ್ತು ಆ ನದಿಗಳಿಗೆ ಮಳೆ ಬಂದಾಗ ಅದೆಲ್ಲಾ ಹರಿದು ಹೋಗುವಂತಹ ನೀರನ್ನು ನೋಡಿಕೊಂಡು, ನಮ್ಮಲ್ಲಿ ಹೆಚ್ಚು ನೀರು ಇದೆ ಎಂದರೆ ಹೇಗೆ? ನಮ್ಮಲ್ಲಿ ಮೂರು ತಿಂಗಳು ಅವಿರತವಾದ ಮಳೆ ಬರುತ್ತದೆ. ಈ ಅವಿರತವಾದಂತಹ ಮಳೆ ಬರುವಾಗ ವಿದ್ಯುತ್ ಸ್ಥಾವರಗಳು ತರತಕ್ಕಂಥ ಬೂದಿಯನ್ನು ನೀವು ಯಾವ ರೀತಿ ಸಮುದ್ರಕ್ಕೆ ಬಿಡುತ್ತೀರೋ ಅದನ್ನು ಎಲ್ಲೂ ಹೂಳುತ್ತೀರೋ ನನಗೆ ಅರ್ಥವೇ ಆಗುವುದಿಲ್ಲ. ಇದನ್ನು ಕೊಜೆಂಟ್ರಿಕ್ಸನವರು, ನಾರ್ಗಾಜುನ ಕಂಪನಿಯವರು ಸ್ಪಷ್ಟನೆ ಮಾಡಿ ಎಂದು ನಾವು ಕೇಳಿದ್ದೇವೆ. ಮೊನ್ನೆ ಉಡುಪಿಯಲ್ಲಿ ಪೇಜಾವರದ ಮಠಾದೀಶರು ಒಂದು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ಎಲ್ಲರೂ ಬರಬೇಕೆಂದು ನಿರ್ಧರಿಸಲಾಗಿತ್ತು. ಎಲ್ಲಾ ಪರಿಸರವಾದಿಗಳು, ವಿಜ್ಞಾನಿಗಳು, ನಾರ್ಗಾಜುನದವರು ಎಲ್ಲರೂ ಆ ಸಭೆಗೆ ಬಂದರು. ನಾವು ಕೇಳಿದ ಒಂದು ಪ್ರಶ್ನೆಗೆ ಅವರಿಗೆ ಉತ್ತರ ಕೊಡಲಿಕ್ಕಾಗಲಿಲ್ಲ. ನಮ್ಮ ಪ್ರಶ್ನೆಗೆ ಸೂಕ್ತ ಸ್ಪಷ್ಟೀಕರಣ ನೀಡಿ ನಮ್ಮನ್ನು ತೃಪ್ತಿ ಪಡಿಸಲಿಕ್ಕೆ ಅವರಿಗೆ ಆಗಲಿಲ್ಲ. ನಾವು ರಾಜಕಾರಣಿಗಳು ಏನೋ ನಿಮ್ಮ ಮೇಲೆ ದ್ವೇಷ ಇಟ್ಟುಕೊಂಡು ಇದನ್ನೆಲ್ಲಾ ಹೇಳುತ್ತಿದ್ದೇವೆ ಎಂದು ನೀವು ಭಾವಿಸಬಾರದು. ನಮಗೆ ಯಾರ ಮೇಲೂ ದ್ವೇಷ ಇಲ್ಲ. ನಮಗೆ ಉದಾರೀಕರಣ ಬೇಕು ನಿಜ. ಆದರೆ ಯಾವ ರೀತಿಯ ಉದಾರೀಕರಣ? ನಮ್ಮನ್ನು ನಾವು ಸೂರೆ ಮಾಡಿಕೊಂಡು, ನಮ್ಮನ್ನು ನಾವು ನಾಶ ಮಾಡಿಕೊಂಡು ನಮ್ಮ ಕೈಗಾರಿಕೆಯನ್ನು ನಾವು ಅಭಿವೃದ್ಧಿಪಡಿಸಬೇಕೇ? ಮೊನ್ನೆ ಕೈಗಾರಿಕಾ ಮಂತ್ರಿಗಳಿಗೆ ನಾನು ಪ್ರಶ್ನೆ ಕೇಳಿದಾಗ ಅವರು ನನಗೆ ಒಂದು ಉತ್ತರ ಕೊಟ್ಟಿದ್ದಾರೆ. ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾದ ಸಹಾಯಧನ 17 ಕೋಟಿ ರೂಪಾಯಿಗಳು ಬಾಕಿ ಇವೆ ಎಂದು ಸಚಿವರು ತಿಳಿಸಿದ್ದಾರೆ. ನಾವು ಎರಡು ಸಾವಿರ, ಮೂರು ಸಾವಿರ ಎಕರೆ ಎಂದು ಇಲ್ಲಿ ಮಾತನಾಡುತ್ತೇವೆ. ಸಣ್ಣ ಕೈಗಾರಿಕೆಗಳಿಗೆ

17 ಕೋಟಿ ರೂಪಾಯಿಗಳ ಸಹಾಯಧನ ಕೊಡಲಿಕ್ಕೆ ಇವರು ಮೀನ ಮೇಷ ಎಣಿಸುತ್ತಾರೆ. ಇಲ್ಲದಿದ್ದರೆ 'ಪರಿಶೀಲಿಸಲಾಗುವುದು' ಮುಂದಿನ ವರ್ಷ ಒದಗಿಸಲಾಗುವುದು. ಈ ರೀತಿಯ ಉತ್ತರ ಕೊಡುತ್ತಾರೆ. ನನಗೆ ಗೊತ್ತಿದೆ, ಆ ಅಕಡೆಮಿಕ್ ಇಯರನಲ್ಲಿ ನಿಮಗೆ ಕೊಡಲಿಕ್ಕಾಗುವುದಿಲ್ಲ. ಆ ಸಹಾಯಧನವನ್ನೇ ನಂಬಿಕೊಂಡು ಇರತಕ್ಕಂತಹ ಎಷ್ಟು ಸಣ್ಣ ಕೈಗಾರಿಕೆಗಳು ಲಾಸ್ ಕಂಪನಿ ಆಗಿ ಉಳಿಯುತ್ತವೆ. ಅವರಿಗೆ ಎಲ್ಲಿ ನೀವು ಉದ್ಯೋಗ ಕೊಡುತ್ತೀರಿ? ಹಾಗಿರುವಾಗ ದಯವಿಟ್ಟು ನಿಮಗೆ ನಾನು ಕೈ ಜೋಡಿಸಿ ಕೇಳುತ್ತೇನೆ. ದಯವಿಟ್ಟು ಕೈಗಾರಿಕೆ ಹೆಸರಿನಲ್ಲಿ ನಮ್ಮ ಜಿಲ್ಲೆಯನ್ನು ಸರ್ವನಾಶ ಮಾಡಲಿಕ್ಕೆ ಹೋಗಬೇಡಿ. ನಮ್ಮ ಜಿಲ್ಲೆಯ ಸಂಪೂರ್ಣ ಅಧ್ಯಯನ ಮಾಡಿ. ನನ್ನಿಂದ ಅದಕ್ಕೆ ಏನೂ ಆಕ್ಷೇಪಣೆ ಇಲ್ಲ. ನಮಗೆ ಏನೂ ದ್ವೇಷ ಇಲ್ಲ. ನಾಗಾರ್ಜುನದವರ ಮೇಲೂ ದ್ವೇಷ ಇಲ್ಲ; ಎಷ್ಟೋ ಮಂದಿ ಹೇಳಿದರು ಸಭಾಪತಿಯವರಿಗೆ ಸ್ವಲ್ಪ ಹಣದ ತಾಪತ್ರಯ ಇದೆ, ಆದ್ದರಿಂದ ನಾಗಾರ್ಜುನದವರಿಂದಲೋ ಅಥವಾ ಎಂ.ಆರ್.ಪಿ.ಎಲ್. ದವರ ಹತ್ತಿರನೋ ಲಕ್ಷಗಟ್ಟಲೆ ಹಣ ಕೇಳುತ್ತಿದ್ದಾರೆ ಎಂದು ನನ್ನ ಕೆಲವು ರಾಜಕೀಯ ವಿರೋಧಿಗಳು ಪತ್ರಿಕೆಯಲ್ಲಿ ಹಾಕಿಸಿದ್ದಾರೆ. ಆ ಹಣದಿಂದಾಗಿ ನನಗೇನೂ ಆಗಬೇಕಾಗಿಲ್ಲ. ನನಗೆ ಬೇಕಾದುದು ಜನರು ನನ್ನ ಮೇಲಿಟ್ಟ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ನಡೆಮುಕೊಳ್ಳವುದು. ಈ ಸದನದ ಮೇಲೆ ಗೌರವ ಇಟ್ಟು ನಾನು ಹೇಳುತ್ತೇನೆ, ಒಂದು ಯಕಃ ಶ್ಚಿತ್ ಹಣಕ್ಕಾಗಿ ನಾವು ಈ ಹೋರಾಟ ಖಂಡಿತ ಮಾಡುತ್ತಿಲ್ಲ. ನಮ್ಮ ಜಿಲ್ಲೆಯ ಸರ್ವಾಂಗೀಣ ಪ್ರಗತಿಗಾಗಿ ನಮ್ಮ 3 ಲಕ್ಷ ಮೀನುಗಾರರ ಸಮಾಧಿ ಮಾಡಲಿಕ್ಕೆ ಹೋಗಬೇಡಿ. ನಮ್ಮ ಜಿಲ್ಲೆಯ ರೈತರನ್ನು ಸಮಗ್ರವಾಗಿ ಸಮಾಧಿ ಮಾಡಲಿಕ್ಕೆ ಹೋಗಬೇಡಿ. ಒಂದು ಉಕ್ಕು ಸ್ಥಾವರವೇ, ಎರಡು ಉಕ್ಕು ಸ್ಥಾವರವೇ ಒಟ್ಟು 3-4 ಉಕ್ಕು ಸ್ಥಾವರಗಳು ನಮ್ಮ ಜಿಲ್ಲೆಗೆ ಬಂದಿವೆ. ಒಂದು ಕಡೆ ಕುದುರೆಮುಖ ಪ್ರಾಜೆಕ್ಟ ಉಂಟು. 3 ಸಾವಿರ ಜನರಿಗೆ ಅಲ್ಲಿ ಕೆಲಸ ಕೊಟ್ಟಿದ್ದೀರಿ. ಎಷ್ಟು ಜನ ನಮ್ಮ ಜಿಲ್ಲೆಯವರಿದ್ದಾರೆ ಅವರಲ್ಲಿ ಎಂಬುದನ್ನು ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ಸನ್ಮಾನ್ಯ ಸದಸ್ಯರು ಪ್ರಮುಖವಾಗಿ ಎರಡು ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದರು. ಒಂದು ಕಡೆ ಜಮೀನನ್ನು ತೆಗೆದುಕೊಂಡು ಎಲ್ಲಾ ಹುಡುಗರು ನಿರುದ್ಯೋಗಿಗಳಾಗಿದ್ದಾರೆ, ಅವರಿಗೆ ಕೊಡುವುದಕ್ಕೆ ಏನೂ ಉದ್ಯೋಗ ಇಲ್ಲ ಎಂದು ಹೇಳಿದ್ದಾರೆ. ಇನ್ನು ಅದೇ ಮುಖದಲ್ಲಿ ತಾವು ಹೇಳುತ್ತೀರಿ. ಇಂಥಿಂಥ ಉದ್ಯೋಗಕ್ಕೆ ಎಷ್ಟೆಷ್ಟು ಎಕರೆ ಜಮೀನನ್ನು ನೀವು ಕೊಟ್ಟುಕೊಂಡು ಬಂದಿದ್ದೀರಿ ಎಂದು. ಎಲ್ಲರಿಗೂ ಕೆಲಸ ಕೊಡುವುದಕ್ಕಾಗುವುದಿಲ್ಲ ಎಂಬುದು ಅವರಿಗೂ ಗೊತ್ತು. ಉದ್ಯಮಗಳೂ ಬೆಳೆಯಬೇಕಾದರೆ ವಿದ್ಯುಚ್ಛಕ್ತಿ ಅತ್ಯಂತ ಅವಶ್ಯಕ. ವಿದ್ಯುಚ್ಛಕ್ತಿ ಇಲ್ಲದೇ ಯಾವುದೇ ಉದ್ಯೋಗ ಬೆಳೆಯುವುದಿಲ್ಲ, ಒಟ್ಟಾರೆಯಾಗಿ ರಾಜ್ಯದ ಆರ್ಥಿಕ ಪ್ರಗತಿಯೇ ಆಗುವುದಿಲ್ಲ. ತಾವು ಆ ಪ್ರದೇಶದಲ್ಲಿ ಇರತಕ್ಕವರು, ಈ ವಿಷಯವನ್ನು ಚೆನ್ನಾಗಿ ಅರಿತಿರತಕ್ಕವರಾಗಿದ್ದೀರಿ. ಅಲ್ಲಿನ ಮಠಾಧಿಪತಿಗಳಿಗೆ ನಾನು ವಿನಂತಿಮಾಡಿಕೊಳ್ಳುತ್ತೇನೆ, ಈ ಸಂದರ್ಭದಲ್ಲಿ ಈ ವಿದ್ಯುಚ್ಛಕ್ತಿ ಯೋಜನೆಗಳಿಗೆ ನೀವು ಅಡ್ಡಿಮಾಡಬಾರದು. ಈ ಯೋಜನೆಗಳಿಂದ ಪರಿಸರ ಮಾಲಿನ್ಯ ಆಗುವುದಿಲ್ಲ ಎಂದು ತಾಂತ್ರಿಕವಾಗಿ ತೋರಿಸಿದರೂ ಕೂಡ, 'ಅವರೂ, ಬರಬಾರದು," ಇವರು ಬರಬಾರದು' ಎಂದು ತಾವು ಪ್ರತಿಭಟನೆ ಮಾಡಿದರೆ ಹೇಗೆ?

ಶ್ರೀ ಯು.ಆರ್. ಸಭಾಪತಿ : ತಾವು ಹೇಳಿದ್ದಕ್ಕೆ ನಾನು ಒಪ್ಪುವುದಿಲ್ಲ. ನೀವು ಹೇಳಿ ಅವರು ತೋರಿಸುವುದಿಲ್ಲ.

ಅಧ್ಯಕ್ಷರು : ಮಠಾಧಿಪತಿಗಳು ಎಂದರೆ ಬೆಂಗಳೂರಿನಲ್ಲಿ......

ಶ್ರೀ ಜೆ.ಹೆಚ್. ಪಟೇಲ್ : ಆ ಮಠಾಧಿಪತಿಗಳನ್ನು ಕರೆದುಕೊಂಡು......

ಶ್ರೀ ಯು.ಆರ್. ಸಭಾಪತಿ : ಅವರೇ ಸಭೆ ಕರೆದಿದ್ದು. ಅದಕ್ಕೆ ನಾನು ತಮಗೆ ಸಲಹೆ ಕೊಡುತ್ತೇನೆ. ಈಗ ಅವರೊಡನೆ ಮಾತುಕತೆ ಆಡಿ ಅವರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ. ತಾವು ಆ ಪ್ರದೇಶದಿಂದ ಬಂದಂತಹ ಶಾಸಕರು, ನೀವು ಅವರ ಪ್ರತಿನಿಧಿ. ನೀವು ಸಮಗ್ರವಾಗಿ ಯೋಚನೆ ಮಾಡದೇ, ಅಲ್ಲಿ ಯಾರೋ ಬೇರೆ ಊರಿನಿಂದ ಕೈಗಾರಿಕೆ ಸ್ಥಾಪಿಸಲು ಅಲ್ಲಿಗೆ ಬಂದಿದ್ದಾರೆ ಎಂಬುದು ಇಲ್ಲಿ ಮುಖ್ಯವಲ್ಲ. ವಿದ್ಯುತ್ ಯೋಜನೆಗಳಿಗೆ ಅಡ್ಡಿ ತರಬಾರದು. ಬೇರೆ ಯಾವುದಾದರೂ 'ಪರಿಸರ ಮಾಲಿನ್ಯ ಆಗಿಯೇ ಆಗುತ್ತದೆ, ಆದರಿಂದ ಬಹಳ ಹಾನಿಯಾಗುತ್ತದೆ' ಎಂಬಂತಹ ಕೈಗಾರಿಕೆಗಳಿಗೆ ನಾವು ಒಪ್ಪುವುದೇ ಇಲ್ಲ. ಈಗ ಉದಾಹರಣೆಗೆ ಭೂಪಾಲನಲ್ಲಿ ಆದಂತಹ ದುರಂತ ಆಗುತ್ತದೆ ಅಂದರೆ ನಾವು ಅದಕ್ಕೆ ಒಪ್ಪುವುದಿಲ್ಲ. ಆದರೆ ವಿದ್ಯುತ್ ಯೋಜನೆಗಳಿಗೆ ಮಾತ್ರ ತಾವು ಅಡ್ಡಿ ಬರಬಾರದು.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪಿಸಿದ್ದು ಒಳ್ಳೆಯದೇ ಆಯಿತು. ಅವರು ಹೇಳುವುದು ಏನೆಂದರೆ, ವಿದ್ಯುತ್ ಅಭಾವ ಇದೆ, ವಿದ್ಯುತ್ ಸ್ಥಾವರಗಳು ಬರಬೇಕು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ 500 ಮೆಗಾವ್ಯಾಟ್ ವಿದ್ಯುತ್ ಸ್ಥಾವರ ಹಾಕಿ, ಯಾರೂ ಬೇಡ ಎಂದು ಹೇಳುವುದಿಲ್ಲ. 3000 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರವನ್ನು ಹಾಕಿದರೆ ಹೇಗೆ? ಎಲ್ಲಾ ವಿದ್ಯುತ್ ಸ್ಥಾವರಗಳನ್ನು ನಮ್ಮ ಜಿಲ್ಲೆಗೇ ಹಾಕಬೇಕೇ? ನಿಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ವಿದ್ಯುತ್ ಸ್ಥಾವರ ಹಾಕಿಕೊಳ್ಳಿ, ಹಾಸನ ಜಿಲ್ಲೆಗೆ ಒಂದು ಹಾಕಿಕೊಳ್ಳಿ, ನಾನು ಬೇಡ ಎನ್ನುವುದಿಲ್ಲ. ಎಲ್ಲಾ ತಂದು ನಮ್ಮ ಜಿಲ್ಲೆಯಲ್ಲೇ ಸ್ಥಾಪಿಸಿದರೆ ಹೇಗೆ? ವಿದ್ಯುತ್ ಸ್ಥಾವರವೇ ಇರಲಿ, ಉಕ್ಕು ಸ್ಥಾವರವೇ ಇರಲಿ. ಚರ್ಮ ಹದ ಮಾಡುವಂತಹ ಹಾಗೂ ಕೆಮಿಕಲ್ ತಯಾರುವಂತಹ ಕಾರ್ಖಾನೆ ಇರಲಿ, ಏನೆಲ್ಲಾ ಕೊಳಚೆ ನಿರ್ಮಾಣ ಮಾಡುವಂತಹ ಕೈಗಾರಿಕೆಗಳು ಇವೆಯೋ ಅವನ್ನೆಲ್ಲಾ ನಮ್ಮ ಜಿಲ್ಲೆಯಲ್ಲೇ ಸ್ಥಾಪಿಸಬೇಕೇ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಅವರು ಅವರ ಜಿಲ್ಲೆಯಲ್ಲಿರುವ ಸಮುದ್ರವನ್ನೇ ನಮ್ಮ ಕಡೆಗೆ ಕಳುಹಿಸಿಬಿಡಲಿ, ನಾವು ಇಲ್ಲೇ ಅಡ್ಜೆಸ್ಟ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಸಭಾಪತಿಯವರೇ, ತಮ್ಮ ಜಿಲ್ಲೆಯಲ್ಲಿರುವ ಅರಬ್ಬಿ ಸಮುದ್ರವನ್ನು ದೊಡ್ಡಬಳ್ಳಾಪುರ ತಾಲ್ಲೂಕಿಗೆ ಕಳುಹಿಸಿಬಿಡಿ ಎಂದು ಮಾನ್ಯ ಸಚಿವರಾದ ಜಾಲಪ್ಪನವರು ಹೇಳುತ್ತಿದ್ದಾರೆ.

ಶ್ರೀ ಯು.ಆರ್. ಸಭಾಪತಿ : ನಾನು ಹೇಳುತ್ತಿರುವುದು ಮಾನ್ಯ ಸಚಿವರಿಗೆ ಬಹಳ ಹಾಸ್ಯಾಸ್ಪದವಾಗಿ ಕಾಣುತ್ತಿದೆ. ನೀವು ಪ್ರಾಯಶಃ ನಮ್ಮ ಜಿಲ್ಲೆಯವರೇ ಆಗಿದ್ದರೆ, ಹೋರಾಟದ ಮುಂಚೂಣಿಯಲ್ಲಿ ನೀವೇ ಇರುತ್ತಿದ್ದಿರಿ.

ಶ್ರೀ ಆರ್.ಎಲ್. ಜಾಲಪ್ಪ : ಡೆವಲಪಮೆಂಟೂ ಆಗಬೇಕು, ವಿದ್ಯುತ್ತೂ ಬರಬೇಕು ಎಂದರೆ ಅದು ಹೇಗೆ ಆಗಬೇಕು?

ಶ್ರೀ ಯು.ಆರ್. ಸಭಾಪತಿ : ನಮ್ಮನ್ನು ಸಮಾಧಿ ಮಾಡಿ ನೀವು ಡೆವಲಪಮೆಂಟ್ ಮಾಡಬೇಕೇ? ಮೂರು ಲಕ್ಷ ಮೀನುಗಾರರನ್ನು ಸಮುದ್ರಕ್ಕೆ ತಳ್ಳಿ ನೀವು ಡೆವಲಪಮೆಂಟ್ ಮಾಡಬೇಕೇ? ನೀವು ಈ ಪ್ರಶ್ನೆಗೆ ಉತ್ತರ ಕೊಡಿ. ನೀವು ಡೆವಲಪಮೆಂಟ್ ಮಾಡಬೇಕಾಗಿಲ್ಲ. ಬೇಕಾದರೆ ನಿಮ್ಮ ಜಿಲ್ಲೆಯಲ್ಲೇ ಮಾಡಿಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ : ಹಾಗಾದರೆ ಕೈಗಾರಿಕೆಗಳನ್ನು ನಂದಿ ಬೆಟ್ಟದ ಮೇಲೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅಭಿವೃದ್ಧಿ ಹೆಸರಿನಲ್ಲಿ ವಿಷ ಕುಡಿಯತಕ್ಕಂತಹ ಕೆಲಸ ಆಗಬಾರದು. ಎರಡೂ ಆಗಬೇಕಲ್ಲಾ, ಎಲ್ಲಿಗೆ ಹೋಗೋಣ? ಎಂದು ಅವರು ಕೇಳಿದರೆ, ಮಂಗಳೂರಿನವರನ್ನು, ಉತ್ತರ ಕನ್ನಡ ಜಿಲ್ಲೆಯವರನ್ನು ಜಲ ಸಮಾದಿ ಮಾಡುತ್ತೀರೋ? ಇದರ ಬಗ್ಗೆ ನಾವೂ ಸ್ವಲ್ಪ ಚಿಂತನೆ ಮಾಡಬೇಕು.

ಶ್ರೀ ಆರ್. ಎಲ್. ಜಾಲಪ್ಪ : ಇವೆಲ್ಲಾ ಭಾಷಣ ಮಾಡಲಿಕ್ಕೆ ಚೆನ್ನಾಗಿ ಇದೆ. ಆದರೆ ರಾಜ್ಯದ ಹಿತದೃಷ್ಟಿಯನ್ನೂ ನಾವು ನೋಡಬೇಕಾಗುತ್ತದಲ್ಲ!

ಶ್ರೀ ಜೆ.ಹೆಚ್. ಪಟೇಲ್ : ನಿಮ್ಮ ಜಿಲ್ಲೆಯಲ್ಲಿ ಹಾಕಿಕೊಳ್ಳಿ ಎಂದರು, ಏಕೆ? ನಮ್ಮ ಜಿಲ್ಲೆಯವರೇನೂ ಜನ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಇರಲಿ, ಹಿರಿಯರು ಅದೆಲ್ಲಾ ಆಮೇಲೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ, ಕೃಷ್ಣಾದಲ್ಲಿ ಮೀಟಿಂಗ್ ಕರೆದಾಗ ಎಲ್ಲಾ ವಿರೋಧಪಕ್ಷಗಳ ನಾಯಕರುಗಳೂ ಸಹಿತ ಕೇಂದ್ರ ಸರ್ಕಾರದ ಸೌಹಾರ್ದಕ್ಕಾಗಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಹೇಳಿ, ನೀರು ಬಿಡಬೇಕಾದ ಸಂದರ್ಭ ಬಂದರೆ ಒಂದೊಂದು ತರಹ ಹೇಳಿಕೆ ಕೊಟ್ಟರು. ನಾವು ಒಪ್ಪಿಲ್ಲವೆಂದು ಹೇಳಿ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇದು ರೆಕಾರ್ಡ್ ಆಗಲಿಯೆಂದು ಹೇಳಿ ವಿಶೇಷ ಅಧಿವೇಶನ ಕರೆದದ್ದನ್ನು ತಮಗೆ ಜ್ಞಾಪಕ ಮಾಡಿಕೊಡುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಹಾಗಾದರೆ ನೀವು ಬದುಕಬೇಕು, ನಾವು ಸಾಯಬೇಕಾ?

ಶ್ರೀ ಜೆ.ಹೆಚ್. ಪಟೇಲ್ : ಅದಕ್ಕೇ ನಾನೇನು ಹೇಳುತ್ತಿದ್ದೇನೆ ಎಂದರೆ..

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳುತ್ತಿರುವುದು, ಒಂದೇ ಜಿಲ್ಲೆಗೆ ಬೇಡ. ಎಲ್ಲಾ ಜಿಲ್ಲೆಗೂ ಸಮಾನವಾಗಿ ಹಂಚಿ ಎಂದು ಹೇಳತಕ್ಕಂಥದ್ದು ಅವರ ವಾದ, ಆದರೆ ನೀರಿಲ್ಲ ಎಂದು ಹೇಳತಕ್ಕಾಂಥದ್ದು ನಿಮ್ಮ ವಾದ. ಆದ್ದರಿಂದ ಈ ಕಡೆ ಸ್ವಲ್ಪ ನೋಡಿ. ಇಡೀ ಮಂಗಳೂರೇ ಇವತ್ತಿನ ಪರಿಸ್ಥಿತಿಯಲ್ಲಿ ವಿಷವಾಗುತ್ತಿದೆ. ಇದು ಆಗಬಾರದು ಎನ್ನುವುದು ಅವರ ವಾದ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ, ಸಮುದ್ರ ಇರುವ ಕಡೆ ಕೆಲವು ಸವಲತ್ತುಗಳೂ ಇರುತ್ತವೆ, ಕೆಲವು ಪರಿಸರದ ಅಡ್ವಾಂಟೇಜಸ್ ಕೂಡ ಇವೆ, ಡಿಸಡ್ವಾಟೇಜಸ್ ಕೂಡ ಇವೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಮೀನುಗಾರರ ಸಮಸ್ಯೆಯನ್ನು ನೀರು ಔಟ್‌ಆಫ್ ಪ್ರಮೋಷನ್ ಮಾಡಬೇಡಿ ಎಂದು ನಾನು ಸಭಾಪತಿಯನ್ನು ಕೇಳಿದೆ. ಈಗ ನಿಜವಾಗಿ ಮೀನುಗಾರರ ಜೀವನಕ್ಕೆ ಅಡ್ಡಿ ಬಂದಿರುವುದು, ಬಹಳ ಹೈ ಪವರ್ ಬೋಟ್ಸ್ ಏನು ಬರುತ್ತಿವೆ ಅವುಗಳಿಂದ ಹಾಗೂ ಡೀಪ್ ಸೀ ಬೋಟಗಳಿಂದ. ಅವುಗಳಿಂದಲೇ ಇವರ ಜೀವನ ಹೆಚ್ಚು ಹಾಳಾಗಿದೆಯೇ ಹೊರತು ಅಲ್ಲಿ ಯಾವುದೋ ಒಂದು ಸಣ್ಣ ಫ್ಯಾಕ್ಟರಿ ಮಾಡಿದ್ದರಿಂದ ಅಲ್ಲ. ಅದಕ್ಕೆ ನೀವು ಯಾವುದನ್ನು ಸ್ವಲ್ಪ ಯೋಚನೆ ಮಾಡಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪರಿಸರದ ಪರಿಸ್ಥಿತಿಯನ್ನು ಅಧ್ಯಯನ ಮಾಡಿದಂತಹ ಒಬ್ಬ ಕಾರ್ಯದರ್ಶಿಯವರಾದ ಯಲ್ಲಪ್ಪರೆಡ್ಡಿಯವರು, ನಮ್ಮ ಜಿಲ್ಲೆ ಬಗ್ಗೆ ಡಿಸೆಂಟ್ ನೋಟ್ ಹಾಕಿದಿರಲ್ಲಾ, ನೀವು ಅವರನ್ನು ಏನು ಮಾಡಿದಿರಿ ಸ್ವಾಮಿ? ನೀವು ಯಲ್ಲಪ್ಪರೆಡ್ಡಿಯವರನ್ನು ಏಕೆ ಮನೆಗೆ ಕಳುಹಿಸಿದಿರಿ? ದಯವಿಟ್ಟು ಉತ್ತರ ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ಈಗ ಈ ಸದನದಲ್ಲಿ ಸದಸ್ಯರಲ್ಲದೇ ಇರತಕ್ಕವರು ಮತ್ತು ಈಗ ಸರ್ವೀಸನಲ್ಲಿ ಇಲ್ಲದೇ ಇರತಕ್ಕಂತಹವರ ಬಗ್ಗೆ ಮಾತನಾಡಲಿಕ್ಕೆ ನನಗೆ ಇಚ್ಛೆಯಿಲ್ಲ.

ಶ್ರೀ ಯು.ಆರ್. ಸಭಾಪತಿ : ಹಾಗಾದರೆ ಬಿಡಿ. ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ಮಾತ್ರ ನಾನು ಹೇಳುತ್ತೇನೆ, ಹೆಚ್ಚಿಗೆ ನಾನು ಹೇಳಬಯಸುವುದಿಲ್ಲ. ಏಕೆಂದರೆ ಸರ್ಕಾರದ ನಿಲುವನ್ನೇ ಅವರು ಸಮರ್ಥಿಸುವುದಿದ್ದರೆ ಅವರು ಮಾಡಿಕೊಳ್ಳಲಿ. ನಮಗೆ ಅನೇಕ ವೇದಿಕೆಗಳಿವೆ, ಯಾವ ರೀತಿಯಲ್ಲಿ ನಾವು ಅದನ್ನು ಪ್ರತಿಪಾದನೆ ಮಾಡಿ ಕೊಳ್ಳಬೇಕೋ ನಮಗೆ ಗೊತ್ತು. ನಮಗೂ ಸಹ ಅನುಭವ ಇದೆ. ನಾವೂ ಸಹಾ ರಾಜಕೀಯದಲ್ಲಿ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಅದರಲ್ಲೇನೂ ಅನುಮಾನವಿಲ್ಲ. ಜನಾಂದೋಳನದ ಒಟ್ಟಿಗೇ ಹೋಗುವವರು ನಾವು. ನೀವು ಹೇಳಿದ್ದೇ ಸರಿ ಎಂದು ಹೇಳಿ, ಅದನ್ನು ನಾವು ಒಪ್ಪಿಕೊಳ್ಳಬೇಕು ಎಂಬ ವಾದವನ್ನು ನೀವು ನಮ್ಮ ಮೇಲೆ ಹೇಳುವುದಾದರೆ, ನಾವು ನಮ್ಮ ದಾರಿ ಹಿಡಿಯಲೇಬೇಕಾಗುತ್ತದೆ, ನಮಗೆ ಏನೂ ಮಾಡಲಿಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೇ ನಾನು ಇಷ್ಟು ಮಾತ್ರ ನಾನು ಹೇಳಬಯಸುತ್ತೇನೆ. ಈ ದೃಷ್ಟಿಯಲ್ಲಿ ನೋಡುವುದಾದರೆ, ಕಳೆದ ಒಂದೂವರೆ ವರ್ಷದಲ್ಲಿ ಮಾಡಿದಂತಹ ಕಾರ್ಯಸಾಧನೆ ಅಷ್ಟೇನೂ ಅನುಕೂಲಕರವಾದಂತಹ ವಾತಾವರಣವನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿಲ್ಲ. ಹಗರಣರಹಿತವಾಗಿಲ್ಲ ಎನ್ನುವುದನ್ನು ನಾನು ದಾಖಲೆ ಸಹಿತ ಪ್ರತಿಪಾದಿಸಿದ್ದೇನೆ. ಅಷ್ಟೇ ಅಲ್ಲ,

ನೀವು ಕಣ್ಣು ತೆರೆಯಲಿಕ್ಕೆ ಇನ್ನೂ ಸಮಯ ಇದೆ. ಅದಿನ್ನೂ ಮೀರಿ ಹೋಗಿಲ್ಲ. ನಿಮ್ಮ ಅಧಿಕಾರ ಅವಧಿಯ ಐದು ವರ್ಷದಲ್ಲಿ ಕೇವಲ ಒಂದು ವರ್ಷ, ಮೂರು ತಿಂಗಳು ಮಾತ್ರ ಕಳೆದು ಹೋಗಿದೆ. ಇನ್ನಷ್ಟು ಮರು ಪರಿಶೀಲಿನ ಮಾಡಿ, ಇನ್ನಷ್ಟು ಚಿಂತನೆ ಮಾಡಿ, ಎಲ್ಲಿ ನಾವು ಹಾದಿ ತಪ್ಪಿದ್ದೇವೆ ಎನ್ನುವುದನ್ನು ತಿಳಿದುಕೊಂಡು ಆ ಮೂಲಕ ತಮ್ಮ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಬೇಕು ಎಂದು ಹೇಳುವುದು ಮಾತ್ರವಲ್ಲ, ನಿಮ್ಮ ಸರ್ಕಾರ ಒಂದು ಒಳ್ಳೆಯ ಆಡಳಿತ, ಒಂದು ಹೊಸ ರೀತಿಯ ಆಡಳಿತ ಕೊಟ್ಟಿದೆ ಎನ್ನುರ ಕೀರ್ತಿಗೆ ಪಾತ್ರರಾಗಬೇಕು ಎನ್ನುವಂತಹ ಒಂದು ವಿಚಾರಧಾರೆಯಿಂದಲೇ ನಾನು ಈ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ತಮಗೆ ಕೃತಜ್ಞತೆಗಳು.

ಅಧ್ಯಕ್ಷರು : ದಯಮಾಡಿ ಎಲ್ಲರಿಗೂ ಮನವಿ ಮಾಡಿಕೊಳ್ಳುತ್ತಿದ್ದೇನೆ. ಭೋಜನ ವಿರಾಮದ ನಂತರ ಮಾನ್ಯ ಸದಸ್ಯರೆಲ್ಲರೂ ಪುನಃ ಸದನಕ್ಕೆ ತಪ್ಪದೇ ಬರಬೇಕು. ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನ ಪುನಃ 3.30 ಗಂಟೆಗೆ ಸಮಾವೇಶ ಗೊಳ್ಳುತ್ತದೆ.

(ಸದನವು 2.28ಕ್ಕೆ ಮುಕ್ತಾಯಗೊಂಡು ಮತ್ತೆ 3.30ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆಯು ಸಂಜೆ 4.10 ಗಂಟೆಗೆ ಪುನಃ ಸಮಾವೇಶಗೊಂಡಿತು.)

(ರಮೇಶ್ ಕುಮಾರ್)ರವರು ಪೀಠವನ್ನು ಅಲಂಕರಿಸಿದ್ದರು)

ಮಂತ್ರಿಗಳ ಹೇಳಿಕೆ

ವೃತ್ತಿ ಶಿಕ್ಷಣ ಹೆಚ್ಚುವರಿ ವಿಭಾಗ ಹಾಗೂ ಬೋಧಕೇತರ ಸಿಬ್ಬಂದಿಗಳ ಬೇಡಿಕೆ ಬಗ್ಗೆ ಸರ್ಕಾರದ ಘೋಷಣೆ.

ಶ್ರೀ ಹೆಚ್. ಜೆ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ವೃತ್ತಿಶಿಕ್ಷಣ, ಹೆಚ್ಚುವರಿ ವಿಭಾಗ ಹಾಗೂ ಬೋಧಕೇತರ ಸಿಬ್ಬಂದಿಗಳ ಬೇಡಿಕೆಗೆ ಸಂಬಂಧಪಟ್ಟಂತೆ ಈ ಹೇಳಿಕೆಯನ್ನು ಸಭೆಯು ಮುಂದೆ ಮಂಡಿಸಬಯಸುತ್ತೇನೆ.

1. ವೃತ್ತಿ ಶಿಕ್ಷಣ : ರಾಜ್ಯದಲ್ಲಿ ವೃತ್ತಿ ಶಿಕ್ಷಣವನ್ನು ಕೇಂದ್ರ ಸರ್ಕಾರದ ಧನ ಸಹಾಯದಿಂದ ನಡೆಸಲಾಗುತ್ತಿದೆ. ಈ ವೃತ್ತಿ ಶಿಕ್ಷಣದ ನೌಕರರು ಪೂರ್ಣವಾಗಿ ಹಂಗಾಮಿ ನೌಕರರಾಗಿದ್ದು ಇವರನ್ನು ಖಾಯಂಗೊಳಿಸುವಂತೆ ಬೇಡಿಕೆ ಇಡಲಾಗಿದೆ. ಇತ್ತೀಚೆಗೆ ಸರ್ವೋಚ್ಛ ನ್ಯಾಯಾಲಯ 10 ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸುವಂತೆ ತೀರ್ಪಿತ್ತಿದೆ. ರಾಜ್ಯ ಸರ್ಕಾರ ಈ ನೌಕರರ ಮನವಿಯನ್ನು ಪರಿಗಣಿಸಿ 7 ವರ್ಷ ಸೇವೆ ಸಲ್ಲಿಸಿದ ಎಲ್ಲಾ ನೌಕರರನ್ನು ಖಾಯಂಗೊಳಿಸಲು ಕ್ರಮ ಕೈಗೊಳ್ಳಲಿದೆ. ಇದರಿಂದಾಗಿ ಇಲಾಖೆಯ ಸುಮಾರು 1200 ನೌಕರರಿಗೆ ತಕ್ಷಣ ಅನುಕೂಲವಾಗುತ್ತದೆ; ಉಳಿದವರು ಕ್ರಮೇಣ ಈ ಸೌಲಭ್ಯ ಪಡೆಯುತ್ತಾರೆ. ಸರ್ಕಾರಕ್ಕೆ ಅಂದಾಜು ರೂ ಒಂದು ಕೋಟಿ ಹೆಚ್ಚುವರಿ ಖರ್ಚು ಬೀಳಲಿದೆ.